ಹೊಸತು

ನಿಮ್ಮದಿಯ ನಾಳೆ ನಮ್ಮದು

ಆಗಸ್ಟ್ ೧೯೯೯

ಬೆಲೆ ರೂ. ೧೦

ಬಾಬಾಬುಡನ್ - ದತ್ತಾತ್ರೇಯ : ಎತ್ತಣ ಸಂಬಂಧ ?
-ಡಾ॥ ರಹಮತ್ ತರೀಕೆರೆ

ಕೋಡಗನ ಕೋಳಿ ನುಂಗಿತ್ತ
- ವಿ. ಚಂದ್ರಶೇಖರ ನಂಗಲಿ

ಪಾಕಿಸ್ತಾನದ ಅಣುಬಾಂಬ್ ಬೆದರಿಕೆ : ಹುಸಿಗುಂಡು!
- ಕೋ. ಚೆನ್ನಬಸಪ್ಪ

ಹಿಂಸೆ - ಒಂದು ಟಿಪ್ಪಣಿ
-ವ್ಯಾಸರಾಯ ಬಲ್ಲಾಳ

ವಿಶ್ವ ವ್ಯಾಪಾರ ಸಂಘಟನೆ ಯಾರ ಪ್ರಯೋಜನಕ್ಕೆ ?
- ಡಾ॥ ಕೆ. ಎಸ್. ಕೃಷ್ಣಸ್ವಾಮಿ


ರಾಜಕೀಯ, ಕತೆ, ಕವನ, ನಗೆಬರಹ, ಇನ್ನೂ ಹಲವಾರು ಶೀರ್ಷಿಕೆಗಳು



ಹೊಸತು

ಒಳಗೇನಿದೆ.....

ಚಿತ್ರಗಳು: ಗುಜ್ಜಾರ್, ರೋಹಿಣಿ, ಮೋಹನ, ರವಿಕುಮಾರ್ ಅಜ್ಜೀಪುರ
ಮುಖಪುಟ ವಿನ್ಯಾಸ: ನವಕರ್ನಾಟಕ ವಿನ್ಯಾಸ
ಕಚೇರಿ ಸಹಕಾರ: ಜಿ. ವಿ. ತೇಜೋವತಿ



ನಾನೂರಕ್ಕೂ ಹೆಚ್ಚು ಮಂದಿ ಭಾರತೀಯ ಯೋಧರು ರಾಷ್ಟ್ರರಕ್ಷಣೆಗಾಗಿ ಪ್ರಾಣಾರ್ಪಣೆ ಮಾಡಿ ಪಾಕಿಸ್ತಾನಿ ಅತಿಕ್ರಮಣಕಾರರನ್ನು ಹೊಡೆದೋಡಿಸಿದ್ದಾರೆ. ಕೀರ್ತಿಶೇಷರಾದ ಇವರಿಗೆಲ್ಲಾ ಕೃತಜ್ಞತೆಯ ನಮನ ಸಲ್ಲುತ್ತದೆ. ಸೈನಿಕರಾಗಿ ಭರ್ತಿಯಾದಾಗಲೇ ಯುದ್ಧಭೂಮಿಯಲ್ಲಿ ಪ್ರಾಣ ತೆರಬೇಕಾಗಬಹುದೆಂಬ ಸಾಧ್ಯತೆಯ ಅರಿವು ಅವರಿಗಿದ್ದಿತು. ಅದಕ್ಕೆ ಅವರು ಸಿದ್ಧರಾಗಿಯೂ ಇದ್ದರು. ಅವರ ಕುಟುಂಬಗಳವರು ವ್ಯಕ್ತಪಡಿಸಿರುವ ದೃಢಮನಸ್ಸಿನ ಚಿತ್ರ ಈಗ ಇಡೀ ರಾಷ್ಟ್ರದ ಮುಂದಿದೆ. ಯಾರೂ ಕೋಪಗೊಂಡಿಲ್ಲ, ಅನ್ಯಮನಸ್ಕರಾಗಿಲ್ಲ ಮತ್ತು ಪರಿತಪಿಸಿಲ್ಲ. ಅಂದರೆ ಅವರು ದುಃಖಿತರಾಗಿಲ್ಲವೆಂದರ್ಥವಲ್ಲ. ದುಃಖದ ಕಟ್ಟೆಯೊಡೆದು ಎಷ್ಟೋ ಕುಟುಂಬಗಳಲ್ಲಿ ಕಣ್ಣೀರು ಹರಿದಿದೆ. ಅವರಿಗೆ ಎಷ್ಟು ಸಾಂತ್ವನ ಹೇಳಿದರೂ, ಎಷ್ಟು 'ಪರಿಹಾರ' ದೊರಕಿಸಿಕೊಟ್ಟರೂ, ಕಳೆದುಹೋಗಿರುವ ಜೀವಸಂಪತ್ತು ಮತ್ತೆ ಹಿಂದಿರುಗುವುದಿಲ್ಲ. ಅವರ ಒಳಮನಸ್ಸಿನ ಭಾವನೆಗಳನ್ನು ಕೊಂಚಮಟ್ಟಿಗಾದರೂ ನಾವು ಮೈಗೂಡಿಸಿಕೊಂಡರೆ ಅವರಿಗೆ ಸ್ವಲ್ಪಮಟ್ಟಿನ ಗೌರವ ಸೂಚಿಸಿದಂತಾಗುತ್ತದೆ ಮತ್ತು ರಾಷ್ಟ್ರದ ಹಿತಕ್ಕೆ ಪೂರಕವಾಗುತ್ತದೆ.

ರಾಜ್ಯಬೊಕ್ಕಸದಿಂದ ಮತ್ತು ಖಾಸಗಿಯಾಗಿ ಹುತಾತ್ಮರ ಕುಟುಂಬಗಳಿಗೆ ನೆರವು ನೀಡುವ ಪ್ರಕಟಣೆಗಳು ಬೇಕಾದಷ್ಟು ಬಂದಿವೆ. ಅದೆಲ್ಲಾ ಆಯಾ ಕುಟುಂಬಗಳಿಗೆ ತಲುಪುತ್ತವೆಯೇ ಮತ್ತು ಯಾವಾಗ ತಲುಪುತ್ತವೆ ಎಂಬ ಪ್ರಶ್ನೆಗಳು ಮಾತ್ರ ಆತಂಕಕ್ಕೆ ಕಾರಣವಾಗುತ್ತವೆ. 1971ರ ಯುದ್ಧದಲ್ಲಿ ಅಸುನೀಗಿದ ಸೈನಿಕರ ಕೆಲ ಕುಟುಂಬಗಳವರು ಕಾರ್ಗಿಲ್ ಯುದ್ಧ ಜಾರಿಯಲ್ಲಿದ್ದಾಗಲೇ ದೆಹಲಿಯಲ್ಲಿ ಒಂದು ಮೆರವಣಿಗೆ ತೆಗೆದು ಅಂದಿನ ಸರ್ಕಾರಿ ಆಶ್ವಾಸನೆಗಳು ಇನ್ನೂ ಈಡೇರಿಲ್ಲದಿರುವುದನ್ನು ಸಾರ್ವಜನಿಕರಿಗೆ ತಿಳಿಯಪಡಿಸಿದರು. ಗಡಿಯಲ್ಲಿ ಕಾಳಗ ನಡೆಯುತ್ತಿರುವಾಗ ಸೈನಿಕರ ಬಗ್ಗೆ ಸಹಾನುಭೂತಿ, ಮಡಿದವರ ಕುಟುಂಬಗಳಿಗೆ ಆಶ್ವಾಸನೆ ; ಆಮೇಲೆ ಯಥಾಪ್ರಕಾರ ಮರೆವು, ಭ್ರಷ್ಟತನ ಮತ್ತು ಬೇಜವಾಬ್ದಾರಿ ವರ್ತನೆ. ಸರ್ಕಾರಗಳ ಈ ಪ್ರವೃತ್ತಿಯು ಪುನರಾವೃತ್ತಿ ಆಗದಂತೆ ನೋಡಿಕೊಳ್ಳಬೇಕಾದ ಕರ್ತವ್ಯ ನಮ್ಮೆಲ್ಲರದೂ ಆಗಿದೆ. ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ನಿನ ಕರ್ನಾಟಕ ಶಾಖೆಯವರು ಸಾರ್ವಜನಿಕರಿಂದ ಸ್ವಲ್ಪ ಹಣ ಸಂಗ್ರಹಿಸಿ ಅಸುನೀಗಿದ ಇಬ್ಬರು ಸೈನಿಕರ ಕುಟುಂಬಗಳಿಗೆ ಅದನ್ನು ನೇರವಾಗಿ ತಲುಪಿಸಿದ್ದಾರೆ. ಅದು ಸ್ವಾಗತಾರ್ಹವೇನೋ ಹೌದು, ಆದರೆ ಎಲ್ಲ ಪ್ರಯತ್ನಗಳೂ ಆ ಸ್ವರೂಪದಲ್ಲೇ ಇರಲಾರವು. ಪ್ರಧಾನಿಯವರ ರಕ್ಷಣಾ ನಿಧಿಗೆ ಹಣವನ್ನು ಕಾಣಿಕೆಯಾಗಿ ನೀಡುವುದು ಸಾರ್ವಜನಿಕರು ಸಾಮಾನ್ಯವಾಗಿ ಅನುಸರಿಸುವ ವಿಧಾನ. ಹಲವು ಪತ್ರಿಕೆಗಳು ಹಣ ಸಂಗ್ರಹಿಸುವ ಕೆಲಸದಲ್ಲಿ ನಿರತವಾಗಿವೆ. ಇದೆಲ್ಲವೂ ಕಡೆಗೆ ಮುಟ್ಟಬೇಕಾದ್ದು ಹುತಾತ್ಮರಾದ ಸೈನಿಕರ ಕುಟುಂಬಗಳಿಗೆ. ನಿಧಾನವಾಗಿ ಎಂದೋ ಮಾಡಬಹುದಾದ ಕೆಲಸ ಇದಲ್ಲ. ಆದ್ದರಿಂದಲೇ ಸರ್ಕಾರಿ ಯಂತ್ರವು ಇದೊಂದರಲ್ಲಿಯಾದರೂ ತನ್ನ ಧಾನಸ ಪ್ರವೃತ್ತಿ ಮತ್ತು ಭ್ರಷ್ಟಾಚಾರಗಳನ್ನು ಬದಿಗೊತ್ತಿ ಮಾನವೀಯ ನೆಲೆಯಲ್ಲಿ ನಿಂತು ವ್ಯವಹರಿಸಬೇಕು. ಅದನ್ನು ಆಗುಮಾಡುವ ಜವಾಬ್ದಾರಿ ಸಾರ್ವಜನಿಕರದ್ದಾಗಿದೆ.

ಸೈನ್ಯವನ್ನು ಸೇರುವವರೆಲ್ಲಾ ಹುತಾತ್ಮರಾಗಬೇಕೆಂಬ ಬಯಕೆಯನ್ನೇನೂ ಹೊಂದಿರುವುದಿಲ್ಲ, ಹೊಂದಿರಬೇಕಾಗಿಲ್ಲ. ಜೀವಂತವಾಗಿದ್ದುಕೊಂಡು ಸಾಹಸಿಗಳಾಗಿ ಶ್ರೇಯಸ್ಸನ್ನು ತಮ್ಮದನ್ನಾಗಿಸಿಕೊಳ್ಳುವುದು ಅವರಿಗೆ ಹುತಾತ್ಮನ ಪಟ್ಟಕ್ಕಿಂತ ಹೆಚ್ಚು ರಮಣೀಯವಾದುದು. ಆದ್ದರಿಂದ ರಕ್ಷಣಾ ಖಾತೆಯ ಅಥವಾ ಕೇಂದ್ರ ಸರ್ಕಾರದ ತಪ್ಪು ಲೆಕ್ಕಾಚಾರಗಳಿಂದ ನಮ್ಮ ಸೈನಿಕರನ್ನು ಹುತಾತ್ಮರಾಗಲು ಬಲವಂತವಾಗಿ ತಳ್ಳುವುದು ಅಕ್ಷಮ್ಯ ಅಪರಾಧ. ಈ ಬಾರಿ ಇಂತಹ ಅಪಚಾರ ನಡೆದಿದೆಯೆಂಬುದು ಅಪವಾದ ಹೊರಿಸುವ ಮಾತಲ್ಲ, ಇಂತಹ ಶೋಚನೀಯ ಪರಿಸ್ಥಿತಿಯನ್ನು ಉಂಟುಮಾಡಿಕೊಂಡೆವಲ್ಲಾ ಎಂದು ಆತ್ಮಾವಲೋಕನ ಮಾಡಿಕೊಳ್ಳುವ ಮಾತು.

- ಜಿ. ಆರ್.

ಸಂಪಾದಕೀಯ

ತಿಂಗಳ ಪತ್ರಿಕೆ

ಹೊಸತು

ನಮ್ಮದಿಯ ನಾಳೆ ನಮ್ಮದು

ನವಕರ್ನಾಟಕ ಪ್ರಕಾಶನ

ಸಂಪುಟ - 1 ಸಂಚಿಕೆ - 1 ಆಗಸ್ಟ್ 1999

ಪ್ರಧಾನ ಸಂಪಾದಕ

ಜಿ. ರಾಮಕೃಷ್ಣ

ಸಂಪಾದಕ ಮಂಡಲಿ

ಸಿ. ಆರ್. ಕೃಷ್ಣರಾವ್
ಎನ್. ಗಾಯತ್ರಿ
ಬಿ. ಜಿ. ಗುಜ್ಜಾರಪ್ಪ
ಎಸ್. ಗುರುದತ್
ಮಲ್ಲೇಪುರಂ ಜಿ. ವೆಂಕಟೇಶ್
ರಹಮತ್ ತರೀಕೆರೆ
ಬಿ. ವಿ. ವೀರಭದ್ರಪ್ಪ
ಕೆ. ಪಿ. ಸ್ವಾಮಿ

ವ್ಯವಸ್ಥಾಪಕರು

ಎಸ್. ಸುರೇಂದ್ರ
ಎ. ಆರ್. ಉಡುಪ

ಮುದ್ರಕ - ಪ್ರಕಾಶಕ

ಆರ್. ಎಸ್. ರಾಜಾರಾಮ್
ವ್ಯವಸ್ಥಾಪಕ ನಿರ್ದೇಶಕ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿ.

ಮುದ್ರಣ

ನವಕರ್ನಾಟಕ ಪ್ರಿಂಟರ್ಸ್
167 & 168, 10ನೇ ಮುಖ್ಯ ರಸ್ತೆ,
3ನೇ ಘಟ್ಟ, ಪೀಣ್ಯ ಕೈಗಾರಿಕಾ ಪ್ರದೇಶ,
ಬೆಂಗಳೂರು - 560058
ದೂರವಾಣಿ : 8397426

ಹೊಸತು ಕಚೇರಿಯ ವಿಳಾಸ

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್
15, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಅಂ.ಪೆ. 5159
ಕುಮಾರ ಪಾರ್ಕ್ ಪೂರ್ವ, ಬೆಂಗಳೂರು - 560 001
ದೂರವಾಣಿ/ಫ್ಯಾಕ್ಸ್ : 2203580/81/82
e-mail:nkp@bgl.vsnl.net.in

''ಹೊಸತು''

ಪುಸ್ತಕ ಪ್ರಕಾಶನದಲ್ಲಿ ಅಪೂರ್ವವಾದ ಖ್ಯಾತಿ ಗಳಿಸಿರುವ ನವಕರ್ನಾಟಕ ಪ್ರಕಾಶನ ಸಂಸ್ಥೆ ಕರ್ನಾಟಕದ ಜನತೆಗೆ ಸಾಕಷ್ಟು ಪರಿಚಯವಿರುವ ಸಂಸ್ಥೆ. ಸಂಖ್ಯೆ ಮತ್ತು ಗುಣಗಳೆರಡರಿಂದಲೂ ಜನಮನದಲ್ಲಿ ನೆಲೆಸಿರುವ ಇವರು ಪತ್ರಿಕಾರಂಗವನ್ನು ''ಹೊಸತು'' ತಿಂಗಳ ಪತ್ರಿಕೆಯ ಮೂಲಕ ಪ್ರವೇಶಿಸುತ್ತಿದ್ದಾರೆ. ಪುಸ್ತಕಗಳ ಪ್ರಕಟಣೆಯಲ್ಲಿ ಯಾವ ಶಿಸ್ತು ಮತ್ತು ಮೌಲ್ಯಗಳನ್ನು ಸಂಸ್ಥೆ ತನ್ನದಾಗಿಸಿಕೊಂಡಿದೆಯೋ ಅವನ್ನೇ ಪತ್ರಿಕೆಯ ಪ್ರಕಾಶನದಲ್ಲೂ ಇರಿಸಿಕೊಳ್ಳುವ ಆಶಯ ಹೊಂದಿದೆ. ಕನ್ನಡದ ಜನತೆಯ ಸಹಕಾರ, ಸಲಹೆ, ಸೂಚನೆಗಳನ್ನು ಸ್ವಾಗತಿಸುತ್ತಾ ''ಹೊಸತು'' ತನ್ನ ಪ್ರಥಮ ಸಂಚಿಕೆಯನ್ನು ಅವರ ಕೈಯ್ಯಲ್ಲಿಡುತ್ತಿದೆ. ಅವರ ಸಹಾನುಭೂತಿ ಮತ್ತು ಬೆಂಬಲ ಎಂದಿನಂತೆ ದೊರೆಯುತ್ತದೆಂಬ ಭರವಸೆ ನಮಗಿದೆ.

ಸಮಕಾಲೀನ ಪರಿಸ್ಥಿತಿ, ಆಶಯ ಮತ್ತು ಪ್ರತೀಕ್ಷೆಗಳನ್ನು ಗಮನದಲ್ಲಿರಿಸಿಕೊಂಡು ನಮ್ಮ ಹಾದಿಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲು ''ಹೊಸತು'' ಉದ್ದೇಶಿಸಿದೆ. ರೋಚಕ-ಮಾದಕ ಸಾಮಗ್ರಿಯನ್ನು ಓದುಗರಿಗೆ ತಲುಪಿಸುವುದು ಈ ಪತ್ರಿಕೆಯ ವ್ಯಾಪ್ತಿಗೆ ಸೇರುವುದಿಲ್ಲ. ವರ್ತಮಾನದ ತುಮುಲಗಳನ್ನು ಅರ್ಥಮಾಡಿಕೊಂಡು ಹಸನಾದ ನಾಳೆಯ ಸೃಷ್ಟಿಗೆ ಪರಿಕರವನ್ನು ಸಮಗ್ರವಾಗಿ ರೂಪಿಸುವ ತಿಳುವಳಿಕೆ, ಕೌಶಲ್ಯ ಈ ಪತ್ರಿಕೆಗೆ ಸಿದ್ಧಿಸಿದೆಯೆಂಬ ಅಹಮಿಕೆಯೂ ಇಲ್ಲ. ಸಾಮೂಹಿಕ ಕಾರ್ಯಾಚರಣೆಗಳಿಗೆ, ಕ್ರಿಯಾಶೀಲ ಮಧ್ಯಪ್ರವೇಶಕ್ಕೆ ಅಗತ್ಯವಾದ ಚಿಂತನೆ ಮತ್ತು ಚರ್ಚೆಯನ್ನು ತನ್ನ ಮಿತಿಯಲ್ಲೇ ಎಲ್ಲ ಜನವಿಭಾಗಗಳೊಂದಿಗೆ ಹಂಚಿಕೊಳ್ಳುವುದು ''ಹೊಸತು'' ಹಮ್ಮಿಕೊಳ್ಳುವ ಅಪೇಕ್ಷೆ. ಸಾಮುದಾಯಿಕ ಮುನ್ನಡೆಗೆ ಆದ್ಯತೆ ನೀಡುತ್ತಾ ನಮ್ಮ ವಿದ್ಯಮಾನಗಳನ್ನು ಪರೀಕ್ಷಿಸುವುದು ಮತ್ತು ಆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಕರ್ನಾಟಕದ ಜನತೆಗೆ ಒಂದು ವಿಷಯ ವಿನಿಮಯ ರಂಗವನ್ನು ಒದಗಿಸುವುದು ಸಾಧ್ಯವಾದೀತೆಂಬ ಭಾವನೆ ''ಹೊಸತು'' ಪತ್ರಿಕೆಗೆ ಇದೆ. ನಮ್ಮ ಸಾಂಸ್ಕೃತಿಕ ಜೀವನದ ವಿಭಿನ್ನ ಆಯಾಮಗಳನ್ನು ಗುರುತಿಸಿಕೊಳ್ಳುತ್ತಾ ಮುಂದಿನ ಹಾದಿಯನ್ನು ಸುಗಮಗೊಳಿಸಿಕೊಳ್ಳಲು ಇದರಿಂದ ಸಾಧ್ಯವಾಗಬಹುದೆಂಬ ಆಸೆ ನಮ್ಮದು.

ಇದಕ್ಕೆ ಪೂರಕವಾಗಿ ಸಹಜವಾಗಿಯೇ ನಮ್ಮ ಆರ್ಥಿಕ-ರಾಜಕೀಯ ಸನ್ನಿವೇಶಗಳನ್ನು ಪಕ್ವವಾದ ವಿಶ್ಲೇಷಣೆಗೆ ಗುರಿಮಾಡಬೇಕಾದ ಅಗತ್ಯವಿದೆ. ವಸಾಹತು ಆಡಳಿತದಲ್ಲಿ ಪರತಂತ್ರದ ಬವಣೆಯನ್ನು ಅನುಭವಿಸಿದ್ದ ಭಾರತ ಮುಂದೇನಾಗಬೇಕು ಎಂಬುದು ಸಾರ್ವತ್ರಿಕವಾಗಿ ಜಿಜ್ಞಾಸೆಗೆ ವಿಷಯವಾಗಿದೆ. ಸ್ವಾತಂತ್ರ್ಯ ಪಡೆದುಕೊಂಡ ಐವತ್ತು ವರ್ಷಗಳಲ್ಲಿ ಇದಿನ್ನೂ ಇತ್ಯರ್ಥವಾಗಿಲ್ಲ. ಸದ್ಯದಲ್ಲಿ 'ಕಟ್ಟಕಡೆಯ ವ್ಯಕ್ತಿ' ಎಂಬ ಶಿರೋನಾಮೆಯನ್ನು ಮೆತ್ತಿಸಿಕೊಂಡಿರುವ ನಾಗರಿಕ ಸಹ ಇದಕ್ಕೆ ತನ್ನದೇ ಆದ ಉತ್ತರ ಕೊಡಬೇಕಾಗಿದೆ, ಆಕಾಂಕ್ಷೆ ಪ್ರಕಟಿಸಬೇಕಾಗಿದೆ, ಸಕ್ರಿಯವಾಗಿ ಪಾಲ್ಗೊಳ್ಳಬೇಕಾಗಿದೆ.

'ಹೊಸತು' ಸೀಮಿತವಾಗಿಯಾದರೂ ಇದಕ್ಕೆಲ್ಲಾ ಒಂದು ಮಾಧ್ಯಮವಾಗಲೆಂಬ ಇಚ್ಛೆ ನಮ್ಮದು.

ಕಾರ್ಗಿಲ್‌ನ ವೀರೋಚಿತ ಸೆಣಸಾಟದ ಸುತ್ತಮುತ್ತ

ಮಾತಿನಲ್ಲಿ ಜೇನು ಸುರಿಸುತ್ತಾ ಭಾರತದ ಪ್ರಧಾನಿಯನ್ನು ಲಾಹೋರಿಗೆ ಬರಮಾಡಿಕೊಂಡ ಪಾಕಿಸ್ತಾನದ ಪ್ರಧಾನಿಯು ಜೇಬಿನಲ್ಲಿ ಪಿಸ್ತೂಲನ್ನು ಇಟ್ಟುಕೊಂಡಿದ್ದುದು ಅಸಂಭವನೀಯವಲ್ಲವೆಂಬುದು ಈಗ ಸಾಬೀತಾಗಿದೆ. ನೆರೆರಾಷ್ಟ್ರಗಳೊಡನೆ ಬಾಂಧವ್ಯವನ್ನು ಉತ್ತಮಗೊಳಿಸಿಕೊಳ್ಳುವ ಯಾವುದೇ ಪ್ರಯತ್ನವೂ ಸ್ವಾಗತಾರ್ಹ. ಆದ್ದರಿಂದ ವಾಘಾ ಮೂಲಕ ಪಾಕಿಸ್ತಾನಕ್ಕೆ ತೆರಳಿ ಮಾತುಕತೆ ನಡೆಸಿದ ವಾಜಪೇಯಿಯವರನ್ನು ತರಾಟೆಗೆ ತೆಗೆದುಕೊಳ್ಳುವುದು ತಪ್ಪು. ಆದರೆ ಆ ಘಟನೆಯ ಮುಂಚೆ ಮತ್ತು ಆಮೇಲೆ ನಡೆಸಿದ ಅಬ್ಬರದ ಪ್ರಚಾರ ಅರ್ಥಹೀನವಾಗಿತ್ತು. ಏನು ಮಾಡಿದರೂ ಅದನ್ನು ಮುಂದಿನ ಚುನಾವಣೆಗೆ ಬಂಡವಾಳವನ್ನಾಗಿ ಪರಿವರ್ತಿಸಿಕೊಳ್ಳಲು ಹಾತೊರೆಯುವ ವಾಜಪೇಯಿ ಹುನ್ನಾರ ಕೀಳುಮಟ್ಟದ ತಿಳಿವಳಿಕೆ ಮತ್ತು ತಂತ್ರದ ಸೂಚನೆ ಎನ್ನಬಹುದು. ಅಣ್ವಸ್ತ್ರವನ್ನು ಹೊರಿದಿದ್ದೇವೆಂಬ ಅಹಂಕಾರದಿಂದ ಪಾಕಿಸ್ತಾನವು ಎಲ್ಲಿ ಮತ್ತು ಯಾವಾಗ ಯುದ್ಧ ಮಾಡಲು ಬಯಸಿದರೂ ನಾವು ಸಿದ್ಧವೆಂದು ನುಡಿದ ಮುತ್ಸದ್ದಿ ಖುರಾನಾ ಮತ್ತು ಅಂಥದೇ ಅರ್ಥವನ್ನು ಪ್ರತಿಫಲಿಸಿದ ಅದ್ವಾನಿ ಒಂದು ಸಾರ್ವಭೌಮ ಪ್ರಜಾಪ್ರಭುತ್ವವಾದಿ ರಾಷ್ಟ್ರದ ಸಚಿವರೆಂದು ಊಹಿಸಿಕೊಳ್ಳುವುದು ಕಷ್ಟ

ತನ್ನ ಸ್ವಯಂಘೋಷಿತ ಸರ್ವಜ್ಞತ್ವಕ್ಕೆ ಬಲಿಯಾಗಿರುವ ರಾಷ್ಟ್ರದ ರಕ್ಷಣಾ ಸಚಿವ ಜಾರ್ಜ್ ಫರ್ನಾಂಡೀಸ್ ನಮ್ಮ ರಕ್ಷಣಾ ಪಡೆಗಳ ಮರ್ಯಾದೆಗೆ ಕಳಂಕ ತರುವಂತಹ ಕ್ಷುದ್ರ ರಾಜಕೀಯದಲ್ಲಿ ತೊಡಗಿ ಸೇನಾಬಲದ ಮನಸ್ಸಿನ ಸ್ಥೈರ್ಯಕ್ಕೆ ಪೆಟ್ಟುಕೊಟ್ಟಿರುವುದು ಅದರ ಸ್ವತಂತ್ರ ಕಾರ್ಯನಿರ್ವಹಣೆಗೆ ಅಡ್ಡಿಯಾಗಿದೆ. ಅಡ್ಮಿರಲ್ ಭಾಗವತರನ್ನು ನೌಕಾಸೇನಾನಿಯ ಸ್ಥಾನದಿಂದ ವಜಾ ಮಾಡಿದ್ದು ಸಾಲದೆಂಬಂತೆ ಪಾಕಿಸ್ತಾನದ ಅತಿಕ್ರಮಣವನ್ನು ರಾಷ್ಟ್ರಕ್ಕೆ ತಿಳಿಸುವಾಗ ತನ್ನದೇ ಅಪವ್ಯಾಖ್ಯಾನವನ್ನು ಈ ಸಚಿವರು ನೀಡಿರುವುದು ಆ ಸ್ಥಾನಕ್ಕೆ ಒಬ್ಬ ಅನರ್ಹ ವ್ಯಕ್ತಿ ಬಂದಿದ್ದಾನೆಂಬ ಭಾವನೆಯನ್ನು ಉಂಟುಮಾಡಿದೆ. ಪಾಕಿಸ್ತಾನದ ಅಧಿಕಾರಾರೂಢ ಜನರ ಪರಸ್ಪರ ಸಂಬಂಧಗಳು ಹೇಗೇ ಇರಲಿ ಭಾರತಕ್ಕೆ ಅದರಿಂದ ಯಾವ ವ್ಯತ್ಯಾಸವೂ ಇಲ್ಲವೆಂಬ ಪ್ರಾಥಮಿಕ ಪಾಠವನ್ನು ಫರ್ನಾಂಡೀಸ್ ಕಲಿತಂತಿಲ್ಲ. ಕಾರ್ಗಿಲ್ ಪ್ರದೇಶದೊಳಕ್ಕೆ ನುಗ್ಗಿದ್ದ ಪಾಕಿಸ್ತಾನಿಯರ ಸಂಖ್ಯೆಯನ್ನು ಇವರು ಮೊದಲು 380 ಎಂದರು. ಅದಕ್ಕೆ ಏನು ಆಧಾರವಿತ್ತೋ ಸ್ವತಃ ಅವರಿಗೇ ಗೊತ್ತಿಲ್ಲ. ಆಮೇಲೆ ಅದನ್ನು 600ಕ್ಕೆ ಏರಿಸಿದರು ; ನಂತರ ಅದು 1800 ಆಯಿತು. ಅವರನ್ನೆಲ್ಲಾ ಎರಡು ದಿನದಲ್ಲಿ ಅಲ್ಲಿಂದ ಓಡಿಸಿಬಿಡಿ ಎಂಬಾಜ್ಞೆಯನ್ನು ಸೈನ್ಯಕ್ಕೆ ನೀಡಿದಾಗ ಈ ಸಚಿವರಿಗೆ ಸಮಸ್ಯೆಯ ಗಹನತೆಯ ಅರಿವಿತ್ತೆಂದು ಯಾರೂ ಹೇಳಲಾರರು. ಹಲವು ತಿಂಗಳುಗಳ ಹಿಂದಿನಿಂದಲೇ ನಮ್ಮ ಗಡಿಯೊಳಕ್ಕೆ ನುಗ್ಗಿ ಶಸ್ತ್ರಾಸ್ತ್ರಗಳನ್ನು ದಾಸ್ತಾನು ಮಾಡಿಕೊಂಡು ಬಂಕರ್‌ಗಳನ್ನು ಸಹ ನಿರ್ಮಿಸಿಕೊಂಡಿದ್ದ ಪಾಕಿಸ್ತಾನಿಯರನ್ನು ಎರಡು ದಿನದಲ್ಲಿ ಓಡಿಸಲು ನಮ್ಮ ಸೈನ್ಯ ಮಾಯಾಮಂತ್ರ ಮಾಡುತ್ತದೆಂದು ಈತ ಬಗೆದಂತಿದೆ. ನಾಲ್ಕು ನೂರಕ್ಕೂ ಹೆಚ್ಚು ಸೈನಿಕರು ಈ ಯುದ್ಧದಲ್ಲಿ ಮಡಿದಿದ್ದರೆ ಅದಕ್ಕೆ ರಕ್ಷಣಾ ಖಾತೆ, ವಿದೇಶಿ ವ್ಯವಹಾರಗಳ ಸಚಿವಾಲಯ ಮತ್ತು ಪ್ರಧಾನ ಮಂತ್ರಿಯ ಸಲಹೆಗಾರರ ವರ್ಗಗಳದ್ದೂ ಜವಾಬ್ದಾರಿಯಿದೆ. ನಮ್ಮ ವೀರಯೋಧರಿಗೆ ಇಂತಹ ಮುಗ್ಗಟ್ಟಿನ, ಅನಾನುಕೂಲಕರ ಸನ್ನಿವೇಶವನ್ನೊಡ್ಡಿದ್ದುದರ ಬಗ್ಗೆ ಆಳವಾದ ಪರಿಶೀಲನೆಯ ಅಗತ್ಯವಿದೆ. ಯುದ್ಧ ಆರಂಭವಾದ ಮೇಲೆ ಐದು ಸಾವಿರ ಜೊತೆ ಹಿಮ ಪಾದರಕ್ಷೆಗಳಿಗೆ (ಸ್ನೋ ಬೂಟ್ಸ್) ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹುಡುಕಾಡುವ ಪರಿಸ್ಥಿತಿ ನಮ್ಮದಾಯಿತು. ''ಚೀಣಾ ನಮ್ಮ ದೊಡ್ಡ ಶತ್ರು, ಅವರಷ್ಟು ಘಾತುಕರು

ಬೇರೊಬ್ಬರಿಲ್ಲ'', ಎಂದು ಬಾಲಿಶವಾಗಿ ಮತ್ತು ಬೇಜವಾಬ್ದಾರಿಯಾಗಿ ಗುಡುಗಿದ ಫರ್ನಾಂಡೀಸ್- ವಾಜಪೇಯಿ ಕಡೆಗೆ ಸಾಧಿಸಿದ್ದು ಭಾರತವನ್ನು ಅಮೆರಿಕಾದ ಧೃತರಾಷ್ಟ್ರಾಲಿಂಗನಕ್ಕೆ ತಳ್ಳುವುದನ್ನಷ್ಟೆ! ಅಮೆರಿಕಾ ಅದಕ್ಕೇ ಕಾಯುತ್ತಿತ್ತು.

ಕಾಶ್ಮೀರದ ಪ್ರಶ್ನೆಯನ್ನು ಅಂತರರಾಷ್ಟ್ರೀಯಗೊಳಿಸಬೇಕೆಂಬ ಹಲವು ದಶಕಗಳ ಪಾಕಿಸ್ತಾನದ ಆಶಯವು ರಾಷ್ಟ್ರೀಯತೆಯ ಬಗ್ಗೆ ಭಾವನಾತ್ಮಕವಾಗಿ ಮಾತನಾಡುವ ವಾಜಪೇಯಿ ನೇತೃತ್ವದ ಸರ್ಕಾರವಿರುವಾಗ ಈಡೇರುತ್ತಿದೆಯೆಂಬುದು ಗಮನಾರ್ಹ. ಬಿ. ಜೆ. ಪಿ. ಕಾರ್ಯದರ್ಶಿ ಮೋದಿ ಇದನ್ನು ಅಂಗೀಕರಿಸುತ್ತಾ ಉದ್ಗರಿಸಿದ್ದಾರೆ: ''ಕಾಶ್ಮೀರದ ಪ್ರಶ್ನೆ ಅಂತರರಾಷ್ಟ್ರೀಯಗೊಳ್ಳುತ್ತಿದೆ, ಹೌದು; ಆದರೆ ಅದು ನಮ್ಮ ಪರವಾಗಿ ಆಗುತ್ತಿದೆ.'' ಕಾಶ್ಮೀರದ ಬಗ್ಗೆ ಅಮೆರಿಕಾದ ಕ್ಲಿಂಟನ್ ವೈಯಕ್ತಿಕವಾಗಿ ಆಸಕ್ತಿ ತೋರುವುದನ್ನೇ ಇವರು ''ನಮ್ಮ ಪರ'' ಎಂದು ಭ್ರಮಿಸಿದಂತಿದೆ. ಕಾಶ್ಮೀರ ಕುರಿತಂತೆ ಯಾವ ಹೊಸ ಮಾಹಿತಿಯು ಅಮೆರಿಕಾವನ್ನು ಭಾರತದ ಪರವಾಗಿಸಿತು ? ಈವರೆಗೆ ಅವರಿಗೆ ತಿಳಿಯದಿದ್ದ ಯಾವ ವಿಷಯ ಅವರಿಗೆ ಈಗ ಗೋಚರವಾಯಿತು ?

ಇರಾನಿನಲ್ಲಿ ಉಂಟಾದ ಬದಲಾವಣೆಗಳ ನಂತರ ಅಮೆರಿಕಾಕ್ಕೆ ಸುಭದ್ರವಾದ ನೆಲೆ ಈ ಪ್ರದೇಶದಲ್ಲಿ ಬೇಕಾಗಿದೆ. ಆಫ್‌ಘಾನಿಸ್ತಾನದಲ್ಲಿ ಉಂಟಾಗಿದ್ದ ಜನಪರ ಕ್ರಾಂತಿಯನ್ನು ಬಗ್ಗುಬಡಿಯಲು ತಾನೇ ಬಂಡುಕೋರರನ್ನು ಸೃಷ್ಟಿಸಿ ಅವರಿಗೆ ಶಸ್ತ್ರಾಸ್ತ್ರಗಳನ್ನು ನೀಡಿ ಅಮೆರಿಕಾ ಮೆರೆದಿತ್ತೆಂಬುದನ್ನು ಮರೆಯುವಂತಿಲ್ಲ. ಅದೇ ಇಂದು ಉಗ್ರ ತಾಲಿಬಾನ್ ಆಗಿ ಬೆಳೆದುನಿಂತಿದೆ. ಆ ತಾಲಿಬಾನ್ ಅಮೆರಿಕಾದ ಯೋಜನೆಗಳನ್ನು ತಲೆಕೆಳಗು ಮಾಡುತ್ತದೆಯಷ್ಟೇ ಅಲ್ಲ; ಭಾರತಕ್ಕೆ ತೀವ್ರವಾಗಿ ಪಿಡುಗುಂಟುಮಾಡುತ್ತದೆ. ತಾಲಿಬಾನನ್ನು ಹಿಮ್ಮೆಟ್ಟಿಸಿ ಭಾರತವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಕಾದುನಿಂತಿರುವ ಅಮೆರಿಕಾಕ್ಕೆ ದಾರಿಯನ್ನು ಸುಗಮಗೊಳಿಸುತ್ತಿರುವ ಇಂದಿನ ಕೇಂದ್ರ ಸರ್ಕಾರದ ನೀತಿಯು ರಾಷ್ಟ್ರವಿರೋಧಿಯಾದುದು. ಉದಾರೀಕರಣದ ಹೆಸರಿನಲ್ಲಿ ಬಹುಮಟ್ಟಿಗೆ ಅಮೆರಿಕಾದ ಕಬಂಧಬಾಹುಗಳಲ್ಲಿ ಸಿಲುಕಿಕೊಂಡಿರುವ ಭಾರತಕ್ಕೆ ಈಗ ಕ್ಲಿಂಟನ್ ಆಸಕ್ತಿಯು ವಿಷಪ್ರಾಶನವಾಗದಿರದು. ಈ ಬಗ್ಗೆ ನಾವು ಕಟ್ಟೆಚ್ಚರದಿಂದಿರಬೇಕಾಗಿದೆ. ವಾಜಪೇಯಿ-ಫರ್ನಾಂಡೀಸ್- ಜಸವಂತ ಸಿಂಗ್ ತ್ರಿಕೂಟದ ಬಲಿಪಶುವಾಗಿ ಭಾರತವು ಅಮೆರಿಕಾಕ್ಕೆ ಶರಣಾಗಿ ತನ್ನ ರಾಜಕೀಯ ಸಾರ್ವಭೌಮತ್ವವನ್ನು ಕಳೆದುಕೊಳ್ಳಕೂಡದು. ನಮ್ಮ ಯೋಧರು ಶತ್ರುಸೈನ್ಯವನ್ನು ಹಿಮ್ಮೆಟ್ಟಿಸಿರುವ ಹೆಮ್ಮೆಯ ಹಿನ್ನೆಲೆಯಲ್ಲಿ ಇಂತಹ ಕರಾಳ ಪರಿಣಾಮಕ್ಕೆ ಎಡೆಕೊಡುವಂತಿಲ್ಲ. ಸೈನ್ಯದ ದಂಡನಾಯಕರನ್ನು ತನ್ನ ಪಕ್ಷದ ಕಾರ್ಯಕಾರಿ ಸಮಿತಿಯ ಮುಂದೆ ವರದಿ ಸಲ್ಲಿಸುವಂತಹ ಅನೂಹ್ಯ ಇಕ್ಕಟ್ಟಿಗೆ ಸಿಲುಕಿಸಿದ ಭಾರತೀಯ ಜನತಾ ಪಕ್ಷ ರಾಷ್ಟ್ರವನ್ನು ಘೋರ ಇಕ್ಕಟ್ಟುಗಳಿಗೆ ಸಿಲುಕಿಸುವ ಮುನ್ನ ಅದನ್ನು ಸರಕಾರದಿಂದ ಹೊರಹಾಕುವುದು ಅನಿವಾರ್ಯ. ಕಾರ್ಗಿಲ್ ಪ್ರಕರಣವು ನಮಗೆ ಕಲಿಸುವ ಮಹತ್ವದ ಪಾಠ ಇದು.

ಕೋಟಿಗಟ್ಟಲೆ ಅವ್ಯವಹಾರ

ಬಫೋರ್ಸ್ ಫಿರಂಗಿಯು ಕಾರ್ಗಿಲ್ ಕಾರ್ಯಾಚರಣೆಯಲ್ಲಿ ಉಪಯುಕ್ತವಾಗಿ ಕೆಲಸ ಮಾಡಿದ್ದರಿಂದ ಹಿಂದಿನ ಹಗರಣದ ಬಗ್ಗೆ ಏನೂ ಹೇಳಬಾರದೆಂದು ಕೆಲವು ರಾಜಕೀಯ ನಿಪುಣರು ಅಭಿಪ್ರಾಯಪಟ್ಟಿದ್ದಾರೆ. ಆ ತರ್ಕದಂತೆ 4500 ಕೋಟಿ ರೂಪಾಯಿಗಳ ಟೆಲಿಕಾಂ ಹಗರಣದ ಬಗೆಗೂ ಚಕಾರವೆತ್ತುವಂತಿಲ್ಲ; ಏಕೆಂದರೆ ಖಾಸಗಿ ಕಂಪೆನಿಗಳು ನಡೆಸುತ್ತಿರುವ ಸಂಪರ್ಕ ಸಾಧನಗಳು ಸಕ್ರಮವಾಗಿ ಕೆಲಸ ಮಾಡುತ್ತಿವೆ. ಬಫೋರ್ಸ್ ಹಗರಣದಲ್ಲಿ ನುಂಗಿಹಾಕಿದ ಹಣದ ಐದುಪಟ್ಟು ಹಣ ಟೆಲಿಕಾಂ ಹಗರಣದಲ್ಲಿ ಗುಳುಂ ಆಗಿದೆ. ಅದರ ಸಿಂಹಪಾಲು ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಪ್ರಮುಖ ಪಕ್ಷದ ಚುನಾವಣಾ ನಿಧಿಗೂ ಸೇರಿಹೋಗಿದ್ದರೆ ಆಶ್ಚರ್ಯವಿಲ್ಲ.

ಖಾಸಗೀಕರಣವು ನಮ್ಮೆಲ್ಲ ಆರ್ಥಿಕ ಸಮಸ್ಯೆಗಳಿಗೂ ಪರಿಹಾರವೆಂಬ ಐತಿಹ್ಯ ಪ್ರಬಲವಾಗಿ ಹರಡುತ್ತಿರುವ ಕಾಲದಲ್ಲಿ ಟೆಲಿಕಾಂ ಅವ್ಯವಹಾರವು ನಮ್ಮ ಕಣ್ಣುಗಳನ್ನು ಸ್ವಲ್ಪ ತೆಗೆಸುತ್ತದೆ. ಮಾರುಕಟ್ಟೆಯಲ್ಲಿ ಬೇಡಿಕೆ ಎಷ್ಟಿರುತ್ತದೆಯೆಂದು ನಿಖರವಾಗಿ ತಿಳಿದುಕೊಳ್ಳದೆ ಲಾಭದ ಗಳಿಕೆಯ ಹೆಮ್ಮರವನ್ನು ಹತ್ತಲು ಮತ್ತು ಇತರರನ್ನು ಕೆಡವಲು ಕೆಲವು ಕಂಪೆನಿಗಳು ಟೆಂಡರುಗಳನ್ನು ಸಲ್ಲಿಸಿದುವು. ಬಂಡವಾಳವನ್ನು ಹೂಡಿ ಲಾಭ ಮಾಡಹೊರಡುವವರು ಯಾವಾಗಲೂ ಸ್ಪರ್ಧೆ ಮತ್ತು ನಷ್ಟ ಸಂಭವವನ್ನು ಎದುರಿಸಲು ಸಿದ್ಧರಿರಬೇಕು. ಖಾಸಗೀಕರಣದಲ್ಲಿ ಇದು ಸ್ವಾಭಾವಿಕ ಪ್ರಕ್ರಿಯೆ. ಟೆಂಡರುಗಳನ್ನು ಸಲ್ಲಿಸಿ ಇತರ ಸ್ಪರ್ಧಾಳುಗಳನ್ನು ಹೊರದೂಡಿದ ಕಂಪೆನಿಗಳು ಈಗ ಲೈಸೆನ್ಸ್ ಶುಲ್ಕವನ್ನು ಕೊಡಲು ತಾವು ಅಸಮರ್ಥರೆಂದೂ, ಅದನ್ನು ಮನ್ನಾ ಮಾಡಬೇಕೆಂದೂ ಆಟ ಹೂಡಿವೆ. ಅದಕ್ಕೆ ಒಪ್ಪದ ಸಚಿವರನ್ನು ಪಲ್ಲಟಗೊಳಿಸುವುದರಲ್ಲಿ ಯಶಸ್ಸು ಪಡೆದ ಕಂಪೆನಿಗಳು ಈಗ ಪ್ರಧಾನಿಗಳ ನೆಚ್ಚಿನ ವಲಯದಲ್ಲಿವೆ. ಟೆಂಡರುಗಳಲ್ಲಿ ಒಪ್ಪಿದ ಕರಾರನ್ನು ಬದಲಿಸಿ ಪ್ರಧಾನಿಯವರ ಅಧಿಕಾರವರ್ಗವು ಸರ್ಕಾರಕ್ಕೆ ಕೋಟಿಗಟ್ಟಲೆ ಹಣವನ್ನು ನಷ್ಟಗೊಳಿಸಿದೆ. ಭ್ರಷ್ಟಾಚಾರದ ವಿರುದ್ಧ ಆರ್ಭಟ ನಡೆಸಿ ಜೆ.ಪಿ. ಚಳುವಳಿಯಲ್ಲೂ ಭಾಗವಹಿಸಿದ್ದ ವಾಜಪೇಯಿ ಮತ್ತು ಅವರ ಮಿತ್ರಕೂಟ ಈಗ ಮೌನವ್ರತದಲ್ಲಿ ತೊಡಗಿರುವುದು ಸ್ವಾರಸ್ಯಕರವಾಗಿದೆ.

ಬಹುರಾಷ್ಟ್ರೀಯ ಕಂಪೆನಿಗಳು ತಾಂತ್ರಿಕ ಕೌಶಲ್ಯವನ್ನು ಈ ದೇಶಕ್ಕೆ ತಂದು ನಮ್ಮ ಅಭಿವೃದ್ಧಿಗಾಗಿ ಶ್ರಮಿಸುತ್ತವೆ ಎಂದು ಘೋಷಿಸುತ್ತಿದ್ದವರೆಲ್ಲಾ ಆ ಕಂಪೆನಿಗಳ ನೀಚ ಅನೈತಿಕತೆಯ ಬಗ್ಗೆ ಒಂದು ಮಾತನ್ನೂ ಹೇಳುತ್ತಿಲ್ಲ. ಈ ದೇಶದ ಜನ ಮತ್ತು ಸಂಪತ್ತು ಇರುವುದೇ ಈ ಕಂಪೆನಿಗಳು ಲೂಟಿ ಮಾಡುವುದಕ್ಕಾಗಿ ಎಂಬ ಆರ್ಥಿಕ ನೀತಿ ಅವರದಾಗಿರಬೇಕು. ರಾಷ್ಟ್ರಪತಿಗಳೇ ಈ ಅವ್ಯವಹಾರದ ಬಗ್ಗೆ ತನಿಖೆ ನಡೆಸಬೇಕಾದ ಸನ್ನಿವೇಶ ಬಂದಿದೆ. ಒಂದು ಸಂದರ್ಭವನ್ನು ಊಹಿಸಿಕೊಳ್ಳೋಣ : ಯಾವುದೋ ಉದ್ದಿಮೆಗಾರ ಇಂತಿಷ್ಟು ಶುಲ್ಕವೆಂದು ಕೊಟ್ಟು ಎಂಥದೋ ಸರಕು ಉತ್ಪಾದಿಸಹೊರಡುತ್ತಾನೆ. ಅವನಿಗೆ ಮಾರುಕಟ್ಟೆಯಿಲ್ಲ. ಅವನ ಬಂಡವಾಳವು ನಷ್ಟದ ಹೊರೆ ಹೊರಬೇಕಾಗಿದೆ. ವಾಜಪೇಯಿ- ಯಶವಂತ ಸಿನ್ಹಾ ಬಳಿ ಹೋಗಿ ಅಂಗಲಾಚುತ್ತಾನೆ, ನನ್ನನ್ನು ರಕ್ಷಿಸಿ ಎಂದು. ವಾಜಪೇಯಿ ಸರ್ಕಾರ ಅವನ ಸರಕುಗಳನ್ನೆಲ್ಲಾ ಕೊಂಡು ಅವನನ್ನು ದಡ ಮುಟ್ಟಿಸುತ್ತದೆ ! ಅಂತೆಯೇ ಕಂಗಾಲಾದ ರೈತರ ಸಂಕಷ್ಟವನ್ನೂ ಪರಿಹರಿಸುತ್ತದೆ !

– ಇದು ಅಸಂಭವ. ಆದರೆ ಬಹುರಾಷ್ಟ್ರೀಯ ಕಂಪೆನಿಗಳ ಜೊತೆ ಸೇರಿ ಟೆಲಿಕಾಂ ಟೆಂಡರುಗಳನ್ನು ಸಲ್ಲಿಸಿದ ಮಹಾನುಭಾವರಿಗೆ ಮಾತ್ರ ವಾಜಪೇಯಿ ಅಭಯಹಸ್ತ ತೋರಿಸುತ್ತಾರೆ. ಇನ್ನೊಂದು ಹಸ್ತದಿಂದ ಅವರು ಏನೇನು, ಎಷ್ಟೆಷ್ಟು ಸ್ವೀಕರಿಸಬಹುದು ಎಂಬುದನ್ನು ಲೆಕ್ಕಾಚಾರ ಮಾಡಬೇಕು. ಐದಾರು ವರ್ಷಗಳ ನಂತರ ಈ ಭ್ರಷ್ಟ ವ್ಯವಹಾರದ ಬಗ್ಗೆ ಚರ್ಚೆ ಮಾಡುವುದು ನಿರರ್ಥಕ. ಈಗಲೇ ಇದನ್ನು ಬಯಲಿಗೆಳೆದು ರಾಜ್ಯದ ಬೊಕ್ಕಸಕ್ಕೆ ಉಂಟಾಗಲಿರುವ ನಷ್ಟವನ್ನು ತಪ್ಪಿಸಬೇಕು. ಈ ಕಂಪೆನಿಗಳನ್ನು ಕಪ್ಪುಪಟ್ಟಿಗೆ ಸೇರಿಸಿ ದೇಶದಿಂದ ತೊಲಗಿಸಬೇಕು.

ತಿಂಗಳ ಪತ್ರಿಕೆ
ಹೊಸತು
ನೆಮ್ಮದಿಯ ನಾಳೆ ನಮ್ಮದು
ನವಕರ್ನಾಟಕ ಪ್ರಕಾಶನ

ಚಂದಾ ವಿವರಗಳು

ಬಿಡಿ ಸಂಚಿಕೆ	ರೂ. 10/-
ವಾರ್ಷಿಕ ಚಂದಾ	ರೂ. 100/-
ಎರಡು ವರ್ಷಗಳಿಗೆ	ರೂ. 180/-
ಮೂರು ವರ್ಷಗಳಿಗೆ	ರೂ. 250/-

ನವಕರ್ನಾಟಕ ಶಾಖೆಗಳು

5ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು- 560 009 ☎ 2251382
ಕೆಂಪೇಗೌಡ ವೃತ್ತದ ಬಳಿ
ಬೆಂಗಳೂರು- 560 009 ☎ 2872385
ಕೆ.ಎಸ್.ಆರ್. ರಸ್ತೆ
ಮಂಗಳೂರು - 575 001 ☎ 441016
ರಾಮಸ್ವಾಮಿ ವೃತ್ತ
ಮೈಸೂರು - 570 024 ☎ 444094
ಸ್ಟೇಷನ್ ರಸ್ತೆ
ಗುಲ್ಬರ್ಗಾ - 585 102 ☎ 24302

ನೀವು ಕನ್ನಡಿಗರಿಗಾಗಿ ಹೊರತರಲಿರುವ 'ಹೊಸತು' ಮಾಸಪತ್ರಿಕೆ ಕಲೆ - ಕಲಾವಿದರು - ಸಾಹಿತ್ಯ - ಸಂಸ್ಕೃತಿ - ರಾಜಕೀಯ - ಸಾಮಾಜಿಕ ವಿಷಯಗಳನ್ನು ನೀಡುವುದರ ಜೊತೆಗೆ ಪಟ್ಟಭದ್ರ ಭ್ರಷ್ಟರಿಂದ ತುಳಿತಕ್ಕೊಳಗಾದ ದುರ್ಬಲರ ಧ್ವನಿಯಾಗುವಲ್ಲಿ ಹೆಚ್ಚಿನ ಜನಪರ ಸೇವೆ ಮಾಡುವುದೆಂಬ ನಂಬಿಕೆ ನನಗಿದೆ. ಪತ್ರಿಕೆಗೆ ಬೆಂಬಲವಾಗಿ ಜನಪ್ರಿಯ ನವಕರ್ನಾಟಕ ಸಂಸ್ಥೆ ಇರುವಾಗ 'ಹೊಸತು' ನಿರಂತರವಾಗಿ ಹೊರಹೊಮ್ಮುವುದರಲ್ಲಿ ಅನುಮಾನವಿಲ್ಲ.

ಈ ವೇಳೆಯಲ್ಲಿ ನಿಮ್ಮ, ನಮ್ಮೆಲ್ಲರ ಅಭಿಮಾನಿ ಕಲಾವಿದರಾಗಿದ್ದ ಆರ್. ಎಸ್. ನಾಯ್ಡು ಹಾಗೂ ಎಂ. ಟಿ. ವಿ. ಆಚಾರ್ಯರು ಇದ್ದಿದ್ದರೆ ಅದೆಷ್ಟು ಸಂತೋಷಪಡುತ್ತಿದ್ದರೋ!

ಮೈಸೂರು **ಪಿ. ಆರ್. ತಿಪ್ಪೇಸ್ವಾಮಿ**

ನಿಮ್ಮ ಮತ್ತೊಂದು ಸಾಹಸ 'ಹೊಸತು' ವಿಷಯ ತಿಳಿಯಿತು. ನಿಮಗೆ ಇದೋ ಅಭಿನಂದನೆ. ಮೊದಲ ಸಂಚಿಕೆ ಕಳಿಸಿಕೊಡಿ. ನೋಡಿ, ಮುಂದಿನ ಸಂಚಿಕೆಗೆ ನಾನೂ ಬರೆಯುತ್ತೇನೆ.

ಧಾರವಾಡ **ಡಾ॥ ಪಂಚಾಕ್ಷರಿ ಹಿರೇಮಠ**

ಪತ್ರಿಕೆ ತುಂಬಾ ಗಂಭೀರವಾಗದಂತೆ ನೋಡಿಕೊಳ್ಳಿ, ಹಾಗೆಯೇ ತುಂಬಾ ಟ್ಯಾಬ್ಲಾಯ್ಡ್ ಕೂಡಾ ಆಗಕೂಡದು. ಇವತ್ತಿನ ಕನ್ನಡದ ಎಲ್ಲಾ ಪತ್ರಿಕೆಗಳೂ ಅತಿರಂಜಕತೆಯಿಂದ ವಾಸ್ತವಕ್ಕೆ ದೂರವಾಗುತ್ತಿವೆ. ಅತಿಗಂಭೀರತೆ, ಅತಿರಂಜಕತೆ ಎರಡೂ ಇಂದಿನ ಕನ್ನಡ ಪತ್ರಿಕಾರಂಗಕ್ಕೆ ಒಗ್ಗುವುದಿಲ್ಲ ಎಂಬುದು ನನ್ನ ಅನಿಸಿಕೆ. ಒಂದು 'ಸಮಾನದೂರ' ಉಳಿಸಿಕೊಂಡೇ ಪತ್ರಿಕೆ ಮುಂದುವರೆಯಲಿ.

ಮೈಸೂರು **ಲಿಂಗದೇವರು ಹಳೆಮನೆ**

'ಹೊಸತು' ನಮಗೆ ಹೊಸದನ್ನು ನೀಡಲಿ, ಪಕ್ಷಾತೀತ, ಧರ್ಮಾತೀತವಾಗಿದ್ದು ಉಳಿದೆಲ್ಲ ಪತ್ರಿಕೆಗಳಿಗಿಂತ ವಿಶಿಷ್ಟವಾದ ವಿಚಾರವನ್ನು ಕಳಿಸಿರಿ. 'ಹೊಸತ'ನ್ನು ಸಂತೋಷದಿಂದ ನಾವು ಕೈಗೆತ್ತಿಕೊಳ್ಳುತ್ತೇವೆ.

ಹೊಸಂಗಡಿ (ದ.ಕ.) **ಅಂಬ್ರಯ್ಯ ಮಠ**

ಜನರಲ್ಲಿ ಹೊಸಬಗೆಯ ಆಲೋಚನೆ, ಜೀವನ ಶೈಲಿ, ದೃಷ್ಟಿಕೋನಗಳನ್ನು ಮೂಡಿಸುವಲ್ಲಿ ಈ ಪತ್ರಿಕೆ ಕೆಲಸ ಮಾಡುವಂತಾಗಲಿ ಎಂದು ಹಾರೈಸುತ್ತೇನೆ.

ಬೆಂಗಳೂರು **ಡಾ॥ ಸಿ. ಆರ್. ಚಂದ್ರಶೇಖರ್**

ಪತ್ರಿಕೆ ಇತರೇ ಪತ್ರಿಕೆಗಳಿಗಿಂತ ಭಿನ್ನವಾಗಿ ಯಶಸ್ಸನ್ನು ಸಾಧಿಸುತ್ತದೆ ಎನ್ನುವ ನಂಬಿಕೆ ನಮಗಿದೆ. ಹಾಗಾಗಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಬೆಂಗಳೂರು **ಶೇಷನಾರಾಯಣ**

ನವಕರ್ನಾಟಕ ಪ್ರಕಾಶನದವರು 'ಹೊಸತು' ತಿಂಗಳ ಪತ್ರಿಕೆಯನ್ನು ಡಾ॥ ಜಿ. ರಾಮಕೃಷ್ಣರ ಸಂಪಾದಕತ್ವದ ಕೆಳಗೆ ಹೊರತರುವುದು ಬಹಳ ಸಂತೋಷದ ವಿಷಯ. ಈ ಪತ್ರಿಕೆಗೆ ಒಳ್ಳೆಯ ಯಶಸ್ಸು ಸಿಗಲೆಂದು ಹಾರೈಸುತ್ತೇನೆ.

ಗುಲಬರ್ಗಾ **ಡಾ॥ ಎಂ. ವಿ. ನಾಡಕರ್ಣಿ**
ಕುಲಪತಿಗಳು, ಗುಲಬರ್ಗಾ ವಿಶ್ವವಿದ್ಯಾಲಯ

ಸಮರ್ಥ ಸಂಪಾದಕರು ಮತ್ತು ಅತ್ಯುತ್ತಮ ಸಲಹಾ ಮಂಡಳಿಯ ಮಾರ್ಗದರ್ಶನದಲ್ಲಿ ಪತ್ರಿಕೆ ಉನ್ನತ ಗುಣಮಟ್ಟವನ್ನು ಹೊಂದುವುದರಲ್ಲಿ ಯಾವ ಸಂದೇಹವೂ ಇಲ್ಲ. ಪತ್ರಿಕೆಗೆ ನನ್ನ ಹೃತ್ಪೂರ್ವಕ ಶುಭಾಶಯಗಳನ್ನು ಈ ಮೂಲಕ ಕಳುಹಿಸಿದ್ದೇನೆ.

ಎ. ಈಶ್ವರಯ್ಯ, ಸಂಪಾದಕ,
ಉದಯವಾಣಿ, ಸಾಪ್ತಾಹಿಕ ಪುರವಣಿ, ಮಣಿಪಾಲ

'ಹೊಸತು' ಮಾಸಪತ್ರಿಕೆಯ ಪ್ರಕಟಣೆ ವಿವರಣಾತ್ಮಕ ವಿಷಯಗಳನ್ನೊಳಗೊಂಡ ಮುದ್ರಿತ ಕರಪತ್ರ ಕೈಸೇರಿತು; ಕೃತಜ್ಞನು.

ನವಕರ್ನಾಟಕ ಪಬ್ಲಿಕೇಷನ್ಸ್ ಕರ್ನಾಟಕದ ಒಂದು ಉತ್ತಮ ಪ್ರಗತಿಪರ ಪ್ರಕಟಣೆಯ ಸಂಸ್ಥೆ. ಆ ಸಂಸ್ಥೆ ಒಳ್ಳೆಯ ಕಾರ್ಯಕರ್ತರ ಶ್ರದ್ಧಾಪೂರ್ವಕವಾದ ಸಾಹಸೋದ್ಯಮದಿಂದ ನಾಡಿನಲ್ಲಿ ಬಹೂಪಯುಕ್ತ ಗ್ರಂಥಗಳನ್ನು ಹಲವನ್ನು ಪ್ರಕಟಿಸಿ ಹೆಸರು ಮಾಡಿದೆ. ಇದೀಗ ನೀವು ಹೊರತರುವ ಈ ನವನೂತನ 'ಹೊಸತು' ತಿಂಗಳು ಪತ್ರಿಕೆ ನಿಮ್ಮ ಸಂಸ್ಥೆಗೆ ಇನ್ನಷ್ಟು ಕೀರ್ತಿ ತರಲಿ, ನಿಮ್ಮ ಪರಿಶ್ರಮ ಸಾರ್ಥಕವಾಗಲಿ.

ಪೆರಡಾಲ **ಕಯ್ಯಾರ ಕಿಞ್ಞಣ್ಣರೈ**

ವಿದೇಶಿ-ಸ್ವದೇಶಿ

ಯಾರು ಪ್ರಧಾನಿಯಾಗಬೇಕೆಂದು ಏನೇನೋ ಚರ್ಚೆಗಳು ನಡೆಯುತ್ತಿವೆ. ನೇರವಾಗಿ, ಸ್ಪಷ್ಟವಾಗಿ ''ಈ'' ಕಾಂಗ್ರೆಸ್ ಅಧ್ಯಕ್ಷೆ ನಮ್ಮ ದೇಶದ ಪ್ರಧಾನಿಯಾಗಲು ಅನರ್ಹಳು ಎಂದು ಹೇಳುವ ವಿವೇಚನೆ ಬೇಕಾಗಿದೆ. ಈಕೆ ದೇಶಕ್ಕೆ ಯಾವುದೇ ರೀತಿಯ ಸೇವೆ ಮಾಡಿಲ್ಲ, ಉಪಕಾರವೂ ಮಾಡಿಲ್ಲ. ಯೋಗ್ಯತೆ ಇಲ್ಲ, ಆದ್ದರಿಂದ ಬೇಡ, ಅಷ್ಟೇ. ಇಷ್ಟು ಹೇಳಲು ದ್ರಾವಿಡ ಪ್ರಾಣಾಯಾಮ ಮಾಡುವ ಅವಶ್ಯಕತೆ ಇಲ್ಲ. ನಮ್ಮ ದೇಶದಲ್ಲಿ ಹುಟ್ಟಲಿಲ್ಲ ಎನ್ನುವ ಕಾರಣಕ್ಕಿಂತ ಆಕೆ ಅನರ್ಹಳು ಎಂಬುದು ಮುಖ್ಯ.

ಆಕೆ ಅಧಿಕಾರಕ್ಕೆ ಬರುತ್ತಾಳೋ ಇಲ್ಲವೋ ಅದು ಬೇರೆ ಪ್ರಶ್ನೆ. ಆದರೆ ಆಕೆ ಅಧಿಕಾರಕ್ಕೆ ಬರುವ ಪರಿಸ್ಥಿತಿ ಬಂದಿದೆಯಲ್ಲ ಅದನ್ನು ಯಾರೂ ಯೋಚಿಸುವುದಿಲ್ಲವೇಕೆ? 'ವಿದೇಶಿ ಹೆಣ್ಣಿನ' ಬಗ್ಗೆ ಮಾತನಾಡುವ ಮಂದಿ ಈಗ ನಮ್ಮನ್ನು ದೂರದಿಂದಲೇ ಆಳುತ್ತಿರುವ ವಿಶ್ವ ಬ್ಯಾಂಕ್, ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ, ವಿಶ್ವ ವ್ಯಾಪಾರಿ ಸಂಘಟನೆ ಮುಂತಾದುವನ್ನು 'ಸ್ವದೇಶಿ' ಎಂದು ಭಾವಿಸಿದ್ದಾರೇನೋ ! ತಮ್ಮ ಮಿದುಳನ್ನು ವಿದೇಶಕ್ಕೆ ಒತ್ತೆಯಿಟ್ಟಿರುವ ಎಷ್ಟು ಜನ ಈವರೆಗೆ ನಮ್ಮ ಅರ್ಥ ಮಂತ್ರಿಗಳು, ವಿದ್ಯಾಮಂತ್ರಿಗಳು ಆಗಿ ಹೋಗಿದ್ದಾರೆ ? ಅವರೆಲ್ಲಾ ಹುಟ್ಟಿದ್ದು ಪುಣ್ಯಭೂಮಿ ಭಾರತದಲ್ಲಿ, ಆದರೆ ಅದೇ ಭಾರತವನ್ನು ವಿದೇಶಗಳ ಅಡಿಯಾಳಾಗಿ ಮಾಡಿದವರ ಪೈಕಿ ಇವರೆಲ್ಲಾ ಸೇರಿಲ್ಲವೆ?

ಹೀಗಿರುವಾಗ ಎ. ಓ. ಹ್ಯೂಮ್, ನಿವೇದಿತಾ, ಅನಿ ಬೆಸೆಂಟ್ ಎಂದೆಲ್ಲಾ ಹೇಳುತ್ತಾರೆ. ಮೀರಾ ಬೆನ್ ಸೇರಿದಂತೆ ಇವರಾರೂ ಏನೂ ಆಸೆಪಟ್ಟು ಬಂದವರಲ್ಲ. ಚರ್ಚೆಯ ಹೆಸರಿನಲ್ಲಿ ಅಸಂಬದ್ಧ ಮಾತುಗಳನ್ನು ನಿಲ್ಲಿಸಬೇಕು. ''ಎಲ್ಲಾದರೂ ಇರು, ಎಂತಾದರೂ ಇರು, ಅಂತೂ ಎಂದೆಂದಿಗೂ ನೀನು ದಡ್ಡನಾಗಿರು'', ಎಂದು ಯಾರೋ ಉಪದೇಶಿಸಿರಬೇಕು. ಮೊದಲು ಆ ಉಪದೇಶವನ್ನು ನಿರಾಕರಿಸುವುದು ಆರೋಗ್ಯಕರ.

ಬೆಂಗಳೂರು **ಯು. ಎಸ್. ಶ್ರೀನಿವಾಸನ್**


''ಹೊಸತು'' ವೈಜ್ಞಾನಿಕ ದೃಷ್ಟಿಕೋನಕ್ಕೆ ಪುಷ್ಟಿ ನೀಡಲಿ. ಮಾನವೀಯತೆಯ ಹೊರತಾದ ಎಲ್ಲ ಸಂಕುಚಿತ, ಪ್ರತ್ಯೇಕತಾವಾದಿ ಧರ್ಮಗಳು ಅದಕ್ಕೆ ನಿರಪೇಕ್ಷಿತವಾಗಲಿ. ಮೂಢನಂಬಿಕೆಗಳು ಮತ್ತು ಸಂಪ್ರದಾಯಬದ್ಧತೆಗಳನ್ನದು ತೊಲಗಿಸಲಿ. ನಾಡಿನ ಜನಪರ, ಕ್ರಾಂತಿಕಾರಿ ಶಕ್ತಿಗಳನ್ನದು ಕಾರ್ಯೋನ್ಮುಖಗೊಳಿಸಲಿ. ವಸ್ತುನಿಷ್ಠ ಚಿಂತನೆಯನ್ನು ಪ್ರಚೋದಿಸುವುದರ ಜೊತೆಗೆ ಶೋಷಣೆ, ಮರ್ದನೆ, ತಾರತಮ್ಯ, ಭೇದಭಾವಗಳನ್ನು ಅಳಿಸುವ ಕಾರ್ಯಾಚರಣೆಗಳಿಗೆ ಅದು ಪ್ರೇರಣೆ ನೀಡಲಿ. ಇದು ನನ್ನ ಆಶೆ.

ಮಂಗಳೂರು **ಬಿ. ವಿ. ಕಕ್ಕಿಲ್ಲಾಯ**

ತೀವ್ರ ಪೈಪೋಟಿ ಇರುವ ಈ ದಿನಗಳಲ್ಲಿ ಪತ್ರಿಕೆ ನಡೆಸುವುದು ಸುಲಭದ ಕೆಲಸವಲ್ಲ. ಆದರೆ ತಮ್ಮ ಹಿಂದೆ ಅನುಭವಿ, ತಜ್ಞ, ಕ್ರಿಯಾಶೀಲ ವ್ಯಕ್ತಿಗಳಿರುವುದರಿಂದ ಪತ್ರಿಕೆ ಜನಪ್ರಿಯವಾಗುವುದರಲ್ಲಿ ಸಂದೇಹವಿಲ್ಲ. 'ನಮ್ಮ ದಿಯ ನಾಳೆಯ' ಆಶಾಕಿರಣ ಹೊತ್ತು ಮುನ್ನಡೆಯುವ ನಿಮ್ಮ 'ಹೊಸತು' ಸದಾ ಹೊಸತಾಗಿಯೇ ಉಳಿಯಲಿ ಎಂದು ಹಾರೈಸುತ್ತಾ,

ಉಡುಪಿ **ಡಾ॥ ಎನ್. ಎ. ಮಧ್ಯಸ್ಥ**

ಅಭಿವ್ಯಕ್ತಿ ಸ್ವಾತಂತ್ರ್ಯ



ಡಾ॥ ಜಿ. ರಾಮಕೃಷ್ಣ ಅವರಲ್ಲಿ ವಿಜ್ಞಪ್ತಿ.

ಸಾಮಾಜಿಕ ಹಿತವನ್ನೇ ಗಮನದಲ್ಲಿರಿಸಿಕೊಳ್ಳುವ ವೈಚಾರಿಕ ಚಿಂತನೆಗೆ ಮೀಸಲಾದ 'ಹೊಸತು' ಎಂಬ ಪತ್ರಿಕೆಯ ಸಂಪಾದಕತ್ವವನ್ನು ನೀವು ವಹಿಸಲಿದ್ದೀರಿ ಎಂದು ತಿಳಿದು ನನಗೆ ತುಂಬ ಸಂತೋಷವಾಗಿದೆ. ಈ ಪತ್ರಿಕೆಯು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೂ ಒಂದು ವೇದಿಕೆಯಾಗುವುದೆಂದು ನಾನು ನಂಬಿದ್ದೇನೆ.

ಒಂದು ಲೋಕಸತ್ತಾತ್ಮಕ ರಾಜ್ಯ ವ್ಯವಸ್ಥೆಯಲ್ಲಿ ಸ್ವಾತಂತ್ರ್ಯಕ್ಕೆ ಅರ್ಥ ಬರುವುದು ಬರೇ ವಯಸ್ಕ ಮತದಾನ ಪದ್ಧತಿಯಿಂದಲ್ಲ; ಅಭಿವ್ಯಕ್ತಿ ಸ್ವಾತಂತ್ರ್ಯ ದಿಂದ. ಈ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಉಂಟು ಮಾಡುವ ಹಾಗೂ ಪೋಷಿಸುವ ಒಂದು ಮುಖ್ಯ ಸಂಸ್ಕಾರ ಶಿಕ್ಷಣಕ್ಕೆ ಸಂಬಂಧಿಸಿದ್ದು. ನಮಗೆ ಸ್ವಾತಂತ್ರ್ಯ ಬಂದು 50 ವರ್ಷಗಳಾದರೂ ಅಭಿವ್ಯಕ್ತಿ ಸ್ವಾತಂತ್ರ್ಯ ವನ್ನು ವಯಸ್ಕ ಮತದಾನ ಪದ್ಧತಿಗೆ ಹೊಂದಿಸಲು ನಾವು ಅಸಮರ್ಥರಾಗಿರುವುದಕ್ಕೆ ಮುಖ್ಯ ಕಾರಣಗಳು ಎರಡು : ಒಂದು ಶಿಕ್ಷಣದ ದಾರಿದ್ರ್ಯ; ಎರಡನೆಯದು ಪಿತೃ ಹಾಗೂ ಪುರುಷ ಪ್ರಧಾನ ಸಮಾಜ ವ್ಯವಸ್ಥೆ. ಮೊದಲನೆಯದು ಅಶಿಕ್ಷಿತ ಜನರ ಅಜ್ಞಾನದ ಲಾಭ ಪಡೆದು ಅಧಿಕಾರಗಳಿಸುವ ಹಾಗೂ ಅದಕ್ಕೆ ಅಂಟಿಕೊಳ್ಳುವ ರಾಜಕೀಯ ಸ್ವಾರ್ಥವನ್ನು ಪೋಷಿಸುತ್ತದೆ. ಎರಡನೆಯದು ಪುರುಷ ಪ್ರಧಾನ ವೆನಿಸುವ ವ್ಯವಹಾರದ ಜಗತ್ತಿನಲ್ಲಿ ಸರಿಯಾದ ಆಸ್ಪದ ಇಲ್ಲದೇ ಇರುವುದು. ಇವೆರಡೂ ವಯಸ್ಕ ಮತದಾನ ಪದ್ಧತಿಯನ್ನು, ಅಷ್ಟೇ ಏಕೆ ನಮ್ಮ ಸ್ವಾತಂತ್ರ್ಯವನ್ನೇ ಅಣಕಿಸುವಂಥವು. ಈ ಕಾರಣಗಳಿಂದಾಗಿ, ಸಾಕ್ಷರತೆ ಪ್ರತಿಶತ ಐವತ್ತಕ್ಕೂ ಕಡಿಮೆಯಿರುವ ಭಾರತದಲ್ಲಿ - ಅದೂ ಉತ್ತರ ಭಾರತದಲ್ಲಿ - ವಯಸ್ಕ ಮತದಾನ ಪದ್ಧತಿಯ ಅಭಿವ್ಯಕ್ತಿಯೂ, ತಿಳುವಳಿಕೆಯನ್ನು ದೂರವಿರಿಸಿ ಜಾತಿ, ಉಪಜಾತಿ, ಗುಂಪು, ಪಂಗಡ, ಇವೆಲ್ಲವುಗಳ ಸ್ವಾರ್ಥವನ್ನು ಪೋಷಿಸಬಹುದಾದ ಆಮಿಷಗಳು, ಇವುಗಳಿಗೆ ಹೊಂದಿಕೊಂಡೆ ಪ್ರಕಟವಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇನ್ನು ಸಾಮಾಜಿಕ ಕಟ್ಟುಪಾಡುಗಳಲ್ಲೆ, ಕೌಟುಂಬಿಕ ಸ್ವಾರ್ಥವನ್ನು ಗಮನದಲ್ಲಿರಿಸಿಯೇ ಪ್ರಕಟವಾಗ ಬೇಕಾದ ಸ್ತ್ರೀಯ ಅಭಿವ್ಯಕ್ತಿ ಸ್ವಾತಂತ್ರ್ಯ ವೈಚಾರಿಕ ಪ್ರತಿರೋಧಕ್ಕೆ ಇಳಿಯುವ ಸಂದರ್ಭಗಳನ್ನೆ ಸಮಷ್ಟಿಯ ಹಿತದ ನೆಪದ ಸಮಾಜ ಆಗಗೊಡು ವುದಿಲ್ಲ. ಇಲ್ಲಿ ಇನ್ನೊಂದು ಮುಖ್ಯ ಸಮಸ್ಯೆಯೂ ಇದೆ. ಇಂದಿನ ಸಾಮಾಜಿಕ ಪರಿಸರದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಪ್ರಕಟವಾಗಬೇಕಾಗಿರುವುದು ವೈಚಾರಿಕತೆ ಯನ್ನು ಆಶ್ರಯಿಸುವ ಮಧ್ಯಮ ವರ್ಗದ ಬುದ್ಧಿಜೀವಿಗಳಿಂದ ಅಥವಾ ಸಾಮಾಜಿಕ ಕಾಳಜಿ ಗಳುಳ್ಳ ಮಾಧ್ಯಮಗಳಿಂದ. ಮಧ್ಯಮ ವರ್ಗವೂ ಚಿಂತನೆ ಹಾಗೂ ವ್ಯವಹಾರದಲ್ಲಿ ಪುರುಷ ಪ್ರಧಾನವೇ ಆಗಿರುವುದರಿಂದ ಸ್ತ್ರೀ ಸಹಜ ಸಂವೇದನೆಗಳ ಅಭಿವ್ಯಕ್ತಿ ಎಷ್ಟರಮಟ್ಟಿಗೆ ಸರಿಯಾಗಿ ಆಗಬಹುದು ಎಂದು ಹೇಳುವುದು ಕಷ್ಟ; ಇನ್ನು ಮಾಧ್ಯಮಗಳು ಸ್ಥಾಪಿತ ಹಿತಾಸಕ್ತಿಗಳ ಕೈಗೂಸುಗಳಾಗಿದ್ದಾಗ ವೈಚಾರಿಕತೆ ವಿಕೃತ ರೂಪ ಧರಿಸುವ ಸಾಧ್ಯತೆಯನ್ನೂ ಅಲ್ಲಗಳೆಯಲಾಗುವುದಿಲ್ಲ.

ಬ್ರಿಟಿಷರು ಬಿಟ್ಟುಹೋದ ಅಧಿಕಾರಕೇಂದ್ರಿತ ಶಾಸನಗಳೇ ಆಡಳಿತೆಯ ದೃಷ್ಟಿಯಿಂದ ನಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯದ ಇತಿ ಮಿತಿಗಳನ್ನು ನಿರ್ಧರಿಸ ಬೇಕಾಗಿರುವುದರಿಂದಲೂ, ಅಭಿವ್ಯಕ್ತಿ ಸ್ವಾತಂತ್ರ್ಯ ಅಧಿಕಾರದ ದಂಡಶಕ್ತಿಯಿಂದಲೂ, ಸಾಮಾಜಿಕ ಸಂಸ್ಕಾರಗಳ ನೆಪದಿಂದಲೂ ಹಲವಾರು ನಿರ್ಬಂಧ ಗಳನ್ನೂ, ಕೋರ್ಟು ಕಛೇರಿಗಳ ಉಪಟಳವನ್ನೂ ಸಹಿಸಬೇಕಾಗಿದೆ. ನಮ್ಮ ಕೆಲವು ಸಾಹಿತ್ಯ ಹಾಗೂ ಕಲಾ ಕೃತಿಗಳು, ಚಲಚ್ಚಿತ್ರಗಳು ಸ್ಥಾಪಿತ ಹಿತಗಳ ಆಕ್ಷೇಪಣೆಗೆ ಗುರಿಯಾಗಿ, ಈ ಹಿತಗಳ ರಕ್ಷಣೆ ಸಾಮಾಜಿಕ ನೆಮ್ಮದಿಯನ್ನು ಕಾಪಾಡಲು ಅಗತ್ಯ ಎಂಬ ತಿಳುವಳಿಕೆಯ ಅಧಿಕಾರಿಗಳ ದಂಡಶಕ್ತಿಗೆ ಮಣಿಯ ಬೇಕಾದ ನಿದರ್ಶನಗಳನ್ನೂ ನಾವು ನೋಡಿದ್ದೇವೆ.

ಸಂಯಮ ಹಾಗೂ ಸಂವಾದ ಲೋಕಸತ್ತಾತ್ಮಕ ರಾಜ್ಯ ವ್ಯವಸ್ಥೆಗೆ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅಗತ್ಯವೆಂಬುದನ್ನು ನೆನಪಿಸಿಕೊಂಡಾಗ, ಅಭಿವ್ಯಕ್ತಿ ಸ್ವಾತಂತ್ರ್ಯ ಜನಾಭಿಪ್ರಾಯವನ್ನು ತಿಳುವಳಿಕೆ ಹಾಗೂ ವೈಚಾರಿಕವೆನಿಸುವ ದಾರಿಯಲ್ಲಿ ಕೊಂಡೊಯ್ಯ ಬಹುದಾದ ಪ್ರಮುಖ ಸಾಧನ ಎಂದು ಮನವರಿಕೆ ಯಾಗದಿರದು. ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ವಿಚಾರವೊಂದಿದೆ. ನಮ್ಮ ಇಂದಿನ ಸಮಾಜ ಜೀವನ ವಿಶ್ವವ್ಯಾಪಿಯಾದ ಆಧುನಿಕ ಸಂಸ್ಕಾರಗಳಿಂದ ಪ್ರಭಾವಿತವಾಗುತ್ತಿದೆ. ಹಾಗೆಂದು, ನಾವು ನಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ಪಾಶ್ಚಿಮಾತ್ಯ ಪರಿಕಲ್ಪನೆಗಳನ್ನೇ ಆಶ್ರಯಿಸುವುದೂ ಸರಿಯೆಂದು ನನಗನಿಸುವುದಿಲ್ಲ. ನಮ್ಮ ಜಾನಪದ ಸಂಸ್ಕಾರಗಳಲ್ಲಿ ಅಡಗಿರುವ ಸೌಂದರ್ಯಪ್ರಜ್ಞೆ ಜೀವನ ಪ್ರೀತಿಯನ್ನು ಕುದುರಿಸುವಂಥದು; ಸೃಜನಶೀಲತೆ ಯನ್ನು ಪ್ರಚೋದಿಸುವಂಥದು. ಈ ಎಚ್ಚರದ ಹಿನ್ನೆಲೆಯಲ್ಲಿ ಪ್ರಕಟವಾಗಬೇಕಾದ ಅಭಿವ್ಯಕ್ತಿ ಸ್ವಾತಂತ್ರ್ಯ ಮಾನವೀಯವೆನಿಸುವ ಸಂಸ್ಕಾರಗಳಿಗೂ ದಾರಿ ಮಾಡಿಕೊಡುತ್ತದೆ, ಜೀವನ ಪ್ರೀತಿಯನ್ನೂ ಪ್ರಚೋದಿಸುತ್ತದೆ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ,

ಬೆಂಗಳೂರು **ವ್ಯಾಸರಾಯ ಬಲ್ಲಾಳ**

ರಂಗವಲ್ಲಿ



ಚಿಮುಕಿಸಿ
ಹನಿ
ಹನಿ
ಭೂ ಅಂಗಣದಲ್ಲಿ
ಬಿಡಿಸಿದಳು
ಅಂಬರೆ
ಚಿತ್ತ ಚಿತ್ತಾರದ
ರಂಗವಲ್ಲಿ.

- ಮ. ಶ್ರೀ. ಮುರಳಿಕೃಷ್ಣ

ಸ್ವಾತಂತ್ರ್ಯ ನಿರೀಕ್ಷೆ ಹುಸಿಯಾಯಿತು ಬೇರೆ ದಾರಿ ಏನು?

- ಸಿ. ವಿ. ಆನಂದ

1916ನೆಯ ವರ್ಷದ ಒಂದು ದಿನ. ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದ ಉದ್ಘಾಟನಾ ಸಮಾರಂಭ. ತಮ್ಮ ಅತ್ಯುತ್ತಮ ಉಡಿಗೆ, ಆಭರಣಗಳನ್ನು ಪ್ರದರ್ಶಿಸುತ್ತಾ ಹಲವಾರು ರಾಜಕುಮಾರರು ನೆರೆದಿದ್ದರು. ಗಾಂಧೀಜಿಯವರು ಭಾಷಣ ಮಾಡಲು ನಿಂತರು. ಅವರ ದೃಷ್ಟಿ ರಾಜಕುಮಾರರ ಶ್ರೀಮಂತ ಉಡಿಗೆ ತೊಡಿಗೆಗಳ ಮೇಲೆ ಬಿದ್ದಿತು. ಭಾರತದಲ್ಲಿ ಕೋಟ್ಯಾಂತರ ವೃದ್ಧರು, ಮಕ್ಕಳು, ಒಂದು ಹೊತ್ತು ಕೂಳಿಗೂ ಗತಿ ಇಲ್ಲದೆ ನರಳುತ್ತಿರುವಾಗ, ಅದೇ ಜನರನ್ನು ಹಿಂಡಿ ಆಭರಣ ಧರಿಸಿ ಮೆರೆಯುವ ರಾಜಕುಮಾರರ ವಿರುದ್ಧ ಗಾಂಧೀಜಿಯವರ ವಾಗ್ಬಾಣ ಹರಿಯಿತು. ಕೋಟ್ಯಾಂತರ ಜನರ ಜೀವನ ಸುಗಮಗೊಳಿಸಲು ರಾಜ ಮಹಾರಾಜರುಗಳು ತಮ್ಮ ಆಭರಣಗಳನ್ನು ತ್ಯಾಗ ಮಾಡಬೇಕೆಂದು ಅವರು ಆಗ್ರಹಿಸಿದರು.

ಕನ್ನಡದ ಸುಪ್ರಸಿದ್ಧ ಕವಿ ಎಂ. ಗೋಪಾಲಕೃಷ್ಣ ಅಡಿಗರು ದೇಶದ ಬಡಜನರ ಸ್ಥಿತಿಗತಿಗಳನ್ನು ನೆನೆದು ರೋಸಿ

''ನಾಡಗುಡಿಯ ಹಾರಾಟಕೆ ಬಾನೆ ಗಡಿಯು
ಬರಲು ಬಿಡೆವೆಂದೂ ಅದಕೆ ತಡೆಯು......,
ತಡೆವವರು ಬನ್ನಿರೋ, ಹೊಡೆವವರು ಬನ್ನಿರೋ...,
ನಿಮ್ಮೆಲ್ಲರನ್ನು ತೊಡೆದು ನಿಮ್ಮ ಮಸಣದ ಮೇಲೆ
ಕಟ್ಟುವೆವು ನಾವು ಹೊಸ ನಾಡೊಂದನು
ಸುಖದ ಬೀಡೊಂದನು''
ಎಂದು ವೀರಾವೇಶದಿಂದ ಬರೆದರು.

ಸುಪ್ರಸಿದ್ಧ ತಮಿಳು ಕವಿ ಸುಬ್ರಹ್ಮಣ್ಯ ಭಾರತಿ, ತಮ್ಮ ಹಲವಾರು ಕವಿತೆಗಳಲ್ಲಿ ತಮ್ಮ ಕನಸಿನ ಸ್ವತಂತ್ರ ಭಾರತದಲ್ಲಿ ಜನರು ಹೇಗೆ ಜೀವಿಸಿರುತ್ತಾರೆಂದು 30ರ ದಶಕದಲ್ಲಿಯೇ ಊಹಿಸಿ ಬರೆದರು :

''ಗುಲಾಮನೆಂದು ಬಡವನೆಂದು
ಯಾರೂ ಇಲ್ಲ. ಜಾತಿಯಲಿ
ಕೀಳು ಮನುಜರೆಂಬುವವರು
ಭಾರತದೊಳಿಲ್ಲವೋ,
ಸಿರಿಸಂಪದ ವಿದ್ಯೆಗಳಿಗೆ
ಹೃದಯ ತುಂಬಿಕೊಡುತಾ
ಮನುಜರಾದ ನಾವು ಸರಿ
ಸಮಾನರಾಗಿ ಬಾಳುವ

(ಅನುವಾದ : ಕೌಶಿಕ್)

''ಪ್ರಕೃತಿ ಸಂಪತ್ತಿನಿಂದ ತುಂಬಿ ತುಳುಕುತ್ತಿರುವ ಭಾರತವನ್ನು ಬ್ರಿಟಿಷರು ಶೋಷಿಸುತ್ತಿದ್ದಾರೆ; ಪರಿಣಾಮವಾಗಿ ಬಡಜನರು ದಟ್ಟ ದಾರಿದ್ರ್ಯದಲ್ಲಿ ನರಳುತ್ತಿದ್ದಾರೆ. ಒಮ್ಮೆ ಬ್ರಿಟಿಷರನ್ನು ಭಾರತದಿಂದ ಬಡಿದೋಡಿಸಿದರೆ ಭಾರತದಲ್ಲಿನ ಶ್ರಮಜೀವಿಗಳು, ಬುದ್ಧಿಜೀವಿಗಳು, ಸಮರ್ಥರು, ದೇಶದ ಪ್ರಕೃತಿ ಸಂಪತ್ತನ್ನು ದೇಶದ ಜನರ ಅಭ್ಯುದಯಕ್ಕೆ ಸದುಪಯೋಗ ಪಡಿಸಿಕೊಳ್ಳುತ್ತಾರೆ. ಭಾರತ ವೈಜ್ಞಾನಿಕ, ತಾಂತ್ರಿಕ ಕ್ಷೇತ್ರಗಳಲ್ಲಿ ಅದ್ಭುತ ಪ್ರಗತಿ ಸಾಧಿಸಿ, ಆರ್ಥಿಕವಾಗಿ ಬಲವಾದ ರಾಷ್ಟ್ರವಾಗುತ್ತದೆ. ದೇಶ ಆರ್ಥಿಕ ಪ್ರಗತಿ ಸಾಧಿಸಿದರೆ ಅದರ ಫಲ ಸಹಜವಾಗಿಯೇ ದೇಶದ ಎಲ್ಲ ಜನರನ್ನೂ ಮುಟ್ಟುತ್ತದೆ. ತತ್ಫಲವಾಗಿ ದೇಶದ ಬಾಲಕ ಬಾಲಕಿಯರು ವಿದ್ಯಾರ್ಜನೆಯಲ್ಲಿ ಯಾವ ಅಡ್ಡಿಗಳೂ ಇಲ್ಲದೆ ಮುಂದುವರೆಯುತ್ತಾರೆ. ಒಮ್ಮೆ ವಿದ್ಯೆ ಹಾಗೂ ಆರ್ಥಿಕ ಪ್ರಗತಿ ಸಾಧಿಸಿದರೆ, ಜನರಲ್ಲಿ ಕಂಡುಬರುವ ಜಾತಿ-ಮತೀಯ ದ್ವೇಷ, ಅಸೂಯೆ, ಮೇಲು-ಕೀಳೆಂಬ ತಾರತಮ್ಯ ಭಾವನೆ ತೊಲಗಿ, ಭಾರತ ಉತ್ತಮವಾದ ಸಾರ್ವಭೌಮ ರಾಷ್ಟ್ರವಾಗುತ್ತದೆ.'' - ಹೀಗಿತ್ತು ನಿರೀಕ್ಷೆ.

ಆದರೆ ಈ ನಿರೀಕ್ಷೆ ಕೇವಲ ಭ್ರಮೆ ಎಂಬ ತಿಳಿವಳಿಕೆ ಬರಲು ಬಹಳಕಾಲ ಬೇಕಾಗಲಿಲ್ಲ. ನಾಯಕತ್ವದಲ್ಲಿ ಬೇರೂರಿರುವ ಸಮರ್ಥರು ಸಮಾಜದ ಉನ್ನತಿಗೆ ತಮ್ಮನ್ನು ಅರ್ಪಿಸಿಕೊಂಡವರಾಗಿರದಿದ್ದರೆ ಅವರಿಂದ ಬಡಜನರು, ದುರ್ಬಲರು ಏನೂ ನಿರೀಕ್ಷಿಸಲಾಗದು. ಹಾಗೆ ಅರ್ಪಿಸಿಕೊಂಡವರ ಸಂಖ್ಯೆ ಅತ್ಯಲ್ಪ.

ಇಂದು ಪರಿಸ್ಥಿತಿ ಏನಾಗಿದೆ? ದೇಶ ಖಂಡಿತ ಅದ್ಭುತ ಪ್ರಗತಿ ಸಾಧಿಸಿದೆ. ಕೈಗಾರಿಕೆ, ವಿಜ್ಞಾನ, ತಂತ್ರಜ್ಞಾನ ಕ್ಷೇತ್ರಗಳಲ್ಲಿ ಭಾರತವು ಪ್ರಗತಿ ಹೊಂದಿರುವ ದೇಶಗಳಿಗೆ ಸರಿಸಮಾನವಾಗಿ ನಿಲ್ಲುವ ಸಾಮರ್ಥ್ಯ ಪಡೆದಿದೆ. ಆದರೆ ನಾವು ನಿರೀಕ್ಷಿಸಿದಂತೆ ಆರ್ಥಿಕ ಪ್ರಗತಿಯ ಫಲ ಸಮಾಜದ ಕೆಳಗಿನ ಪದರಗಳನ್ನೂ ತಲುಪಿಲ್ಲ. ವಿಜ್ಞಾನ-ತಂತ್ರಜ್ಞಾನಗಳ ಕ್ಷೇತ್ರಗಳಲ್ಲಿ ಪ್ರಗತಿ ಸಾಧನೆಗೆ ಅವಶ್ಯಕವಾದ ಸಾಮರ್ಥ್ಯ ಪಡೆದವರು ನಮ್ಮಲ್ಲಿ ಹೇರಳವಾಗಿದ್ದಾರೆ. ಅವರೇ ನಮ್ಮ ದೇಶದ ಆರ್ಥಿಕ ಪ್ರಗತಿಗೆ ಕಾರಣರೆಂದರೂ ತಪ್ಪಿಲ್ಲ. ಆದರೆ ಅಂತಹ ಸಮರ್ಥರಿಗೆ ಕೆಳಮಟ್ಟದ ಜನರ ಪ್ರಗತಿ ಸಾಧಿಸುವ ಬಗ್ಗೆ ಬದ್ಧತೆ ಇಲ್ಲ.

ಸಂಶೋಧನೆ, ಯೋಜನೆ ಮತ್ತು ಆಡಳಿತ ನಿರ್ವಹಣೆ ದೇಶದ ಆರ್ಥಿಕ ಪ್ರಗತಿಗೆ ಅನಿವಾರ್ಯವಾಗಿದೆ. ಸಾಮಾಜಿಕ ಪ್ರಗತಿಯಲ್ಲಿ ಪ್ರಧಾನ ಗುರಿ ಎಂದೆಣಿಸಿರುವ ಸಮಾಜವಾದಿ ಸಮಾಜದಲ್ಲಿ ಸಹ ಈ ರಂಗಗಳಲ್ಲಿ ಪ್ರಗತಿ ಅತ್ಯವಶ್ಯಕ. ಅದು ಸಾಧಿಸದೆ ಸಮಾಜವಾದಿ ಸಮಾಜ ಸಹ ಆರ್ಥಿಕ ಪ್ರಗತಿ ಸಾಧಿಸಲು ಸಾಧ್ಯವಿಲ್ಲ; ತತ್ಫಲವಾಗಿ ಸಮಾಜವಾದಿ ವ್ಯವಸ್ಥೆ ಅಸ್ಥಿರವಾಗುತ್ತದೆ. ಸಮರ್ಥರು ಹಿಂದುಳಿದವರ ಪ್ರಗತಿಗೆ ತಮ್ಮ ಸಾಮರ್ಥ್ಯವನ್ನು ವಿನಿಯೋಗಿಸಲು ಅವರ ಮನ ಒಲಿಸುವುದೇ ಇಂದಿನ ಸಮಾಜವಾದಿಗಳ ಮುಂದಿರುವ ಪ್ರಧಾನ ಸವಾಲಾಗಿದೆ. ಭಾರತ ಸಹ ಈ ಕ್ಲಿಷ್ಟ ಸಮಸ್ಯೆಗೆ ಹೊರತಾಗಿಲ್ಲ.

ವಿಶ್ವದ ಸಮಾಜವಾದಿಗಳು ಈ ಜವಾಬ್ದಾರಿಯನ್ನು ನಿರ್ವಹಿಸಲು ಸರ್ವಾಧಿಕಾರ ವ್ಯವಸ್ಥೆಗೆ ಮೊರೆಹೋಗದೆ, ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿಯೇ ಎಷ್ಟರ ಮಟ್ಟಿಗೆ ಯಶಸ್ವಿಯಾಗಬಲ್ಲರು ಎಂಬ ಅಂಶದ ಮೇಲೆ ಮುಂದಿನ ದಿನಗಳಲ್ಲಿ ಸಮಾಜವಾದದ ಭವಿಷ್ಯ ಅಡಗಿರುವಂತೆ ತೋರುತ್ತದೆ.

ಭಾರತದ ಜನರ ಕನಸು ಹೇಗೆ ಹುಸಿಯಾಗಿದೆ ಎಂಬುದು ಅನುಭವದ ವಿಷಯ. ಜನಸಾಮಾನ್ಯರಿಗೆ ಅವಶ್ಯಕವಾದ ಶಿಕ್ಷಣ, ವಾಸಗೃಹ ಸೌಲಭ್ಯ, ಆರೋಗ್ಯ ನಿರ್ವಹಣೆ, ಆಹಾರ ಸರಬರಾಜು ಇತ್ಯಾದಿ ಎಲ್ಲ ಕ್ಷೇತ್ರಗಳಲ್ಲಿಯೂ ಸೋಲು ಕಣ್ಣಿಗೆ ರಾಚಿದಂತಿದೆ. ಭಾರತ ಅನುಸರಿಸುತ್ತಿರುವ ಬಂಡವಾಳಶಾಹಿ ವ್ಯವಸ್ಥೆಯ ವೈಫಲ್ಯ ಇದು. ಇದಕ್ಕೆ ಪರ್ಯಾಯವಾದ ಸಮಾಜವಾದಿ ವ್ಯವಸ್ಥೆಯಲ್ಲಿ ಮಾತ್ರ ಬಡಜನರ ಯೋಗಕ್ಷೇಮಕ್ಕೆ ಗಮನ ಸಿಗುತ್ತದೆ.

ಆದ್ದರಿಂದಲೇ ಕಾರ್ಲ್ ಮಾರ್ಕ್ಸ್ ''ತತ್ವಜ್ಞಾನಿಗಳು ಸಮಾಜವನ್ನು ಅದು ಇಂದು ಇದ್ದಂತೆ ವಿಶ್ಲೇಷಿಸಿದ್ದಾರೆ; ಆದರೆ ಅದನ್ನು ಬದಲಿಸುವುದೇ ನಮ್ಮ ಮುಂದಿರುವ ಇಂದಿನ ಸವಾಲು'', ಎಂದು ಹೇಳಿರುವುದು ಇಂದು ಬಹು ಅರ್ಥವತ್ತಾಗಿದೆ. ○○

ಸಿ. ವಿ. ಆನಂದ, 1148, 22ನೇ ಕ್ರಾಸ್, 21ನೇ ಮೇನ್
ಬನಶಂಕರಿ 2ನೇ ಹಂತ, ಬೆಂಗಳೂರು - 70

ರಸಕಾವ್ಯ



ಹನಿ
ಹನಿಯಾಗಿ
ಮುಸಲ
ಧಾರೆಯಾಗಿ
ಇಳೆಯ
ಆವರಿಸಿ
ರಚಿಸಿದ
ಮಳೆರಾಯ
ಶೃಂಗಾರ
ರಸಕಾವ್ಯ.

- ಮ. ಶ್ರೀ. ಮುರಳಿಕೃಷ್ಣ

'ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು' ಎಂದು ಘೋಷಿಸಿದ ಲೋಕಮಾನ್ಯ ಬಾಲ ಗಂಗಾಧರ ತಿಲಕ್

ಆಗಸ್ಟ್ 1; ಸ್ವಾಭಿಮಾನೀ ಭಾರತೀಯರು ಮರೆಯದ ದಿನ. 1920ರ ಆಗಸ್ಟ್ 1ರಂದು ಲೋಕಮಾನ್ಯ ಬಾಲ ಗಂಗಾಧರ ತಿಲಕರು ತಮ್ಮ ಹೋರಾಟದ ಬದುಕಿಗೆ ವಿದಾಯ ಹೇಳಿ, ಭಾರತೀಯ ಮನದಾಳದಲ್ಲಿ ನೆನಪಾಗಿ ಮಾತ್ರ ಉಳಿದರು, 'ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು' ಎಂದು ಕೇಸರಿಯಂತೆ ಘರ್ಜಿಸಿದ ತಿಲಕರು ತಮ್ಮ 64 ವರ್ಷಗಳ ಬದುಕಿನಲ್ಲಿ ಕೇಸರಿಯಂತೆಯೇ ಬದುಕಿದರು ಎಂದು ಅವರ ಬಗೆಗೆ ತಿಳಿದ ಎಲ್ಲರೂ ಹೇಳುತ್ತಾರೆ.

23-7-1856ರಂದು ಕೊಂಕಣದ ರತ್ನಗಿರಿಯಲ್ಲಿ ಜನ್ಮತಳೆದ ಬಾಲ ಗಂಗಾಧರ ತಿಲಕರು ಬಾಲ್ಯದಿಂದಲೂ ಹೋರಾಟದ ಮತ್ತು ಸ್ವಾಭಿಮಾನದ ಬದುಕಿಗೇ ಬೆಲೆಕೊಟ್ಟವರು. ದಾಸ್ಯಪ್ರವೃತ್ತಿಯನ್ನು ಮನಸಾರೆ ನಿರಾಕರಿಸಿದ್ದ ತಿಲಕರು ತಮ್ಮ ಹದಿನಾರನೆಯ ವಯಸ್ಸಿಗೇ ತಂದೆಯನ್ನು ಕಳೆದುಕೊಂಡು ಸಂಸಾರದ ಎಲ್ಲಾ ಜವಾಬ್ದಾರಿಯನ್ನು ಹೊರಬೇಕಾಗಿ ಬಂದರೂ ಸಹ, ತಮ್ಮ ಗುರಿಯನ್ನು ಸಾಧಿಸುವಲ್ಲಿ ಎಂದೂ ವಿಮುಖರಾಗಲಿಲ್ಲ. ರತ್ನಗಿರಿಯಲ್ಲಿ ಮೊದಲು ಅಧ್ಯಾಪಕರಾಗಿ ಮತ್ತು ನಂತರ ಠಾಣಾ ಮತ್ತು ಪೂನಾಗಳಲ್ಲಿ ಸಹಾಯಕ ಉಪ ಶಿಕ್ಷಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದ ಗಂಗಾಧರ ರಾಮಚಂದ್ರ, ಗೋಖಲೆಯವರ ಮಗನಾಗಿ ಹುಟ್ಟಿದ ಬಾಲ ಗಂಗಾಧರ ತಿಲಕರು ಪುಣೆಯ ಡೆಕ್ಕನ್ ಕಾಲೇಜಿನ ಮೂಲಕ 1876 ರಲ್ಲಿ ಬಿ.ಎ. (ಆನರ್ಸ್) ಪದವಿ ಪಡೆದರು. ನಂತರ 1879ರಲ್ಲಿ ಬೊಂಬಾಯಿ ವಿಶ್ವವಿದ್ಯಾಲಯದಿಂದ ಎಲ್.ಎಲ್.ಬಿ. ಪದವಿ ಪಡೆದರು. ಗಣಿತಶಾಸ್ತ್ರದಲ್ಲಿ ವಿಶೇಷ ಜ್ಞಾನ ಪಡೆದಿದ್ದ ತಿಲಕರು ಬಾಲ್ಯದಲ್ಲೇ ಯಾವುದೇ ಸರ್ಕಾರೀ ಕೆಲಸಕ್ಕೆ ಸೇರದಿರಲು ನಿರ್ಧರಿಸಿದ್ದರು. ಜನತೆಯನ್ನು ವಿದ್ಯಾವಂತರನ್ನಾಗಿ ಮಾಡಿದರೆ ಅವರಲ್ಲಿ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆ ಮೊಳೆತು ಬೆಳೆಯುತ್ತದೆ ಎಂದು ಬಲವಾಗಿ ನಂಬಿದ್ದ ತಿಲಕರು ತಮ್ಮ ವಿದ್ಯಾಭ್ಯಾಸದ ನಂತರ, ಮಿಷನರಿ ಸಂಸ್ಥೆಗಳ ಮಾದರಿಯಲ್ಲಿ ಖಾಸಗಿ ಶಾಲೆಗಳನ್ನು ಆರಂಭಿಸುವ ಕಾರ್ಯಕ್ಕೆ ಸನ್ನದ್ಧರಾದರು. ಅವರಿಗೆ ಆಗ ಜೊತೆಯಾಗಿ ನಿಂತವರು ಸಹಪಾಠಿ ಗೆಳೆಯ ಅಗರ್‌ಕರ್ ಮತ್ತು ವಿಷ್ಣುಶಾಸ್ತ್ರಿ ಚಿಪಳೂಣಕರ್. 1880ರಲ್ಲಿ ಆರಂಭವಾದ 'ನ್ಯೂ ಇಂಗ್ಲಿಷ್ ಸ್ಕೂಲ್' ಬಹುಬೇಗ ಜನಪ್ರಿಯವಾಯಿತು ; ಜನಮನ್ನಣೆ ಪಡೆಯಿತು. ಬೋಧಕರಾಗಿ ಜನತೆಯನ್ನು ಪ್ರಜ್ಞಾವಂತರನ್ನಾಗಿ ಮಾಡುವ ಗುರುತರ ಹೊಣೆಗಾರಿಕೆಯೇ ಮುಖ್ಯವೆಂದು ನಂಬಿದ್ದ ತಿಲಕ್ ಮತ್ತು ಅವರ ಗೆಳೆಯರು ಹಣಕ್ಕೆ ಆಸೆ ಪಡದೆ ದುಡಿಯಲು ನಿರ್ಧರಿಸಿದ್ದರು. ಮೊದಲ ಹಲವು ವರ್ಷಗಳು ಹಾಗೆಯೇ ನಡೆಯಿತು. 1884ರಲ್ಲಿ ಡೆಕ್ಕನ್ ಎಜುಕೇಷನ್ ಸೊಸೈಟಿಯು ಆರಂಭವಾಗಿ, ಅದರ ಜೊತೆಗೆ ಫರ್ಗ್ಯುಸನ್ ಕಾಲೇಜ್ ಸೇರಿದ ನಂತರ ಸಹೋದ್ಯೋಗಿಗಳ ಹಣದಾಸೆಯನ್ನು ಗಮನಿಸಿ, ತಿಲಕರು ತಾವು ಸ್ಥಾಪಿಸಿದ ಸಂಸ್ಥೆಯಿಂದಲೇ ವಿರಮಿಸುವ ನಿರ್ಧಾರ ಮಾಡಿದರು.

ಜನರನ್ನು ವಿದ್ಯಾವಂತರನ್ನಾಗಿ ಮಾಡುವುದರ ಜೊತೆಗೆ ಅವರಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸಬೇಕು ಮತ್ತು ಅದಕ್ಕೆ ಅವರು ಸಮಾಜದ ಆಗುಹೋಗುಗಳನ್ನು ತಿಳಿದಿರಬೇಕು ಎಂಬ ಕಾರಣದಿಂದ ತಿಲಕ್ ಮತ್ತು ಅವರ



ಗೆಳೆಯರು ಎರಡು ಪತ್ರಿಕೆಗಳನ್ನು ಆರಂಭಿಸಿದರು. ಇಂಗ್ಲಿಷ್ ಭಾಷೆಯ 'ಮರಾಠಾ' ಪತ್ರಿಕೆಯ ಜವಾಬ್ದಾರಿಯನ್ನು ಅಗರ್‌ಕರ್ ಮತ್ತು ಮರಾಠೀ 'ಕೇಸರಿ' ಪತ್ರಿಕೆಯ ಜವಾಬ್ದಾರಿಯನ್ನು ತಿಲಕ್ ವಹಿಸಿಕೊಂಡರು. ತಿಲಕರ 'ಕೇಸರಿ' ಪತ್ರಿಕೆಯು ಕೇವಲ

ಡಾ|| ಎಚ್. ಎಸ್. ಗೋಪಾಲ ರಾವ್

ಮಹಾರಾಷ್ಟ್ರದಲ್ಲಿ ಮಾತ್ರವಲ್ಲದೆ, ಅದಕ್ಕೆ ಹೊಂದಿಕೊಂಡ ನೆರೆ ಪ್ರಾಂತಗಳ ಜನತೆಯಲ್ಲೂ ಅಪಾರ ಪ್ರಭಾವ ಬೀರಿತು. ಬ್ರಿಟಿಷರ ಆಳ್ವಿಕೆಯಲ್ಲಿನ ದೋಷಗಳನ್ನೆಲ್ಲಾ ಪತ್ರಿಕೆ ನಿರ್ಭಿಡೆಯಿಂದ ಪ್ರಕಟಿಸುತ್ತಿತ್ತು. ಸತ್ಯದ ಹರಿಕಾರರಾಗಿ ಜನತೆಯ ಮುಖವಾಣಿಯಾಗಿ ನಿಂತ ತಿಲಕರು ಕೇಸರಿಯಲ್ಲಿ ಪ್ರಕಟಿಸುತ್ತಿದ್ದ ಅನೇಕ ವಿಷಯಗಳು ಸರ್ಕಾರವನ್ನು ಕೆರಳಿಸುತ್ತಿದ್ದವು. ಕೊಲ್ಹಾಪುರದ ದಿವಾನ ಎಂ. ವಿ. ಬರ್ವೆ ಅವರ ಪ್ರಕರಣದಲ್ಲಿ ನಾಲ್ಕು ತಿಂಗಳ ಕಾಲ ಶಿಕ್ಷೆಗೆ ಗುರಿಯಾದ ತಿಲಕರು ಮತ್ತೆ ಮೂರು ಬಾರಿ ಅಂತಹುದೇ ಸ್ವರೂಪದ ಕಾರಣಗಳಿಂದ ಶಿಕ್ಷೆಯನ್ನು ಅನುಭವಿಸಬೇಕಾಯಿತು. ಸೆರೆಮನೆಯಲ್ಲಿದ್ದಾಗಲೂ ತಿಲಕರು ಕ್ರಿಯಾಶೀಲರಾಗಿದ್ದರು. 'ವೇದಗಳಲ್ಲಿ ಆರ್ಕ್‌ಟಿಕ್ ನೆಲೆ' ಹಾಗೂ 'ಗೀತಾರಹಸ್ಯ' ಕೃತಿಗಳನ್ನು ತಿಲಕರು ಸೆರೆವಾಸದಲ್ಲಿದ್ದಾಗಲೇ ರಚಿಸಿದರು.

ವಾಸ್ತವ ಸತ್ಯಕ್ಕೆ ಬೆಲೆಕೊಟ್ಟು, ತಮ್ಮ ಹಿತಸಾಧನೆಗಾಗಿ ಎಂದೂ ಅಪ್ರಮಾಣಿಕರಾಗದ ನಿಷ್ಠುರ ಜೀವಿ ತಿಲಕರನ್ನು ಕಾಂಗ್ರೆಸಿಗರು 'ತೀವ್ರವಾದಿ' ಎಂದೇ ಗುರುತಿಸಿದ್ದರು. 'ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು; ಅದನ್ನು ಪಡೆದೇ ತೀರುವೆ' ಎಂಬ ಘೋಷಣೆಯ ಮೂಲಕ ಆಳುವ ವರ್ಗಕ್ಕೆ ನಿದ್ದೆ ಕೆಡಿಸುತ್ತಿದ್ದ ತಿಲಕರು, ಶಿಕ್ಷೆಯನ್ನು ತಪ್ಪಿಸಿಕೊಳ್ಳಲು ಎಂದೂ ಅಂಗಲಾಚಲಿಲ್ಲ ಮತ್ತು ರಾಜಿ ಮಾಡಿಕೊಳ್ಳಲಿಲ್ಲ.

'ಕೇಸರಿ'ಯ ಮೂಲಕ ಮಾತ್ರವಲ್ಲದೆ ಗಣೇಶೋತ್ಸವ ಮತ್ತು ಶಿವಾಜಿ ಉತ್ಸವಗಳ ಮೂಲಕವೂ ತಿಲಕರು ಇತಿಹಾಸದ ಪುಟಗಳಲ್ಲಿ ಸೇರಿದ್ದಾರೆ. 'ಅಸ್ಪೃಶ್ಯತೆಯನ್ನು ಪೋಷಿಸುವ ದೇವರನ್ನು ಒಪ್ಪಲಾರೆ' ಎಂದು ಹೇಳುತ್ತಿದ್ದ ತಿಲಕರು ಬಂಗಾಳದಲ್ಲಿನ ದುರ್ಗಾಪೂಜೆ, ಉತ್ತರ ಭಾರತದ ರಾಮಲೀಲಾ ಉತ್ಸವಗಳಂತೆ ಮಹಾರಾಷ್ಟ್ರದಲ್ಲಿ ಗಣೇಶೋತ್ಸವಗಳನ್ನು ಆರಂಭಿಸಿ, ಆ ಧಾರ್ಮಿಕ ಉತ್ಸವ ಅಥವಾ ಸಮಾವೇಶಗಳಿಗೆ ಸಾಮಾಜಿಕ ಸ್ವರೂಪವನ್ನು ನೀಡಿದರು. ಹಾಗೆಯೇ ಶಿವಾಜಿ ಉತ್ಸವಕ್ಕೂ ಅಂತಹುದೇ ಹಿನ್ನೆಲೆಯನ್ನು ಒದಗಿಸಿದರು. 'ಒಬ್ಬ ಮತಾಂಧ ಹಿಂದೂ ಮುಸ್ಲಿಂ ಕೇರಿಗೆ ಹೋಗಿ ಗೋಹತ್ಯೆಯನ್ನು ತಡೆಯಲು ಪ್ರಯತ್ನಿಸುವುದು ಅಪರಾಧ ; ಅಂತೆಯೇ ಮಸೀದಿಯ ಮುಂದೆ ಹಿಂದೂಗಳ ಮೆರವಣಿಗೆ ಹೋಗಬಾರದು ಎಂದು ಹೇಳುವುದೂ ಅಪರಾಧ' ಎಂಬ ಮನೋಭಾವ ಹೊಂದಿದ್ದ ಬಾಲ ಗಂಗಾಧರ ತಿಲಕರು ತಾವು ನಂಬಿದ್ದ ವಿಷಯಗಳ ಪ್ರತಿಪಾದನೆ ಮತ್ತು ಆಚರಣೆಯಲ್ಲಿ ಎಂದೂ ರಾಜಿ ಮಾಡಿಕೊಳ್ಳುತ್ತಿರಲಿಲ್ಲವಾದ ಕಾರಣ ಅವರನ್ನು ತೀವ್ರವಾದಿ, ಛಲಗಾರ ಇತ್ಯಾದಿ ವಿಶೇಷಣಗಳಿಂದ ಗುರುತಿಸಬಹುದು. ಅನ್ಯಾಯ, ಅಪ್ರಾಮಾಣಿಕತೆ, ಗುಲಾಮಗಿರಿಗಳ ವಿರುದ್ಧ ತೀಕ್ಷ್ಣ ಹೋರಾಟ ನಡೆಸಿದ ತಿಲಕರು ಕರ್ನಾಟಕದ ಸಂಪರ್ಕವನ್ನೂ ಹೊಂದಿದ್ದರು. ತಾವೇ ಆರಂಭಿಸಿದ 'ಹೋಂ ರೂಲ್' ಚಳುವಳಿಯ ಸಲುವಾಗಿ ಕರ್ನಾಟಕದ ಅನೇಕ ಭಾಗಗಳಿಗೆ ಭೇಟಿ ನೀಡಿದ್ದ ತಿಲಕರು, 1915ರಲ್ಲಿ ಮುಂಬಯಿಯಲ್ಲಿ ನಡೆದ ಪ್ರಾಂತಿಕ ಸಮ್ಮೇಳನದಲ್ಲಿ ಗೋಪಾಲ ಕೃಷ್ಣ ಗೋಖಲೆಯವರ ನಿಧನಕ್ಕೆ ಆಲೂರು ವೆಂಕಟರಾಯರು ಇಂಗ್ಲಿಷಿನಲ್ಲಿ ಸಂತಾಪ ಸೂಚಿಸಿದಾಗ 'ಕನ್ನಡದಲ್ಲಿ ಮಾತನಾಡಿ ಕನ್ನಡ ಭಾಷೆಯ ಹಕ್ಕನ್ನು ಸ್ಥಾಪಿಸು' ಎಂದು ಸೂಚನೆ ನೀಡಿದ್ದು ಪ್ರಾಂತೀಯ ಭಾಷೆಗಳ ಬಗೆಗೆ ಅವರಿಗಿದ್ದ ಕಳಕಳಿಯನ್ನು ವ್ಯಕ್ತಗೊಳಿಸುತ್ತದೆ.

ಇತಿಹಾಸದಲ್ಲಿ ತಿಲಕರು ಎಂದ ತಕ್ಷಣ ನೆನಪಿಗೆ ಬರುವುದು 'ಕೇಸರಿ', 'ಗಣೇಶೋತ್ಸವ' ಮತ್ತು 'ಹೋಂ ರೂಲ್'. ಸಾಮಾಜಿಕ ಪ್ರಜ್ಞೆಯನ್ನು ಬೆಳೆಸಲು ಗಣೇಶ ಮತ್ತು ಶಿವಾಜಿಯರನ್ನು ಸದುಪಯೋಗ ಮಾಡಿಕೊಂಡ ಬಾಲಗಂಗಾಧರ ತಿಲಕರು ನಮಗೆಂದೂ 'ಲೋಕಮಾನ್ಯ'ರು.

○○

ಡಾ|| ಎಚ್. ಎಸ್. ಗೋಪಾಲ ರಾವ್, 'ಸ್ವಸ್ತಿಶ್ರೀ ಸ್ಕಂದ'
ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು - 562 123

ಪಾಕಿಸ್ತಾನದ ಅಣುಬಾಂಬ್ ಬೆದರಿಕೆ: ಹುಸಿಗುಂಡು!

ಕೋ. ಚೆನ್ನಬಸಪ್ಪ

ಕಾರ್ಗಿಲ್ ಯುದ್ಧ (ಸದ್ಯ ಅದನ್ನು ಯುದ್ಧವೆಂದು ಅಧಿಕೃತವಾಗಿ ಘೋಷಿಸದಿದ್ದರೂ) ಪ್ರಾರಂಭವಾದಾಗಿನಿಂದ ಪಾಕಿಸ್ತಾನ ಅಣ್ವಸ್ತ್ರ ಬಳಕೆಯ ಬೆದರಿಕೆಯನ್ನು ಮತ್ತೆ ಮತ್ತೆ ಹಾಕುತ್ತಲೇ ಇದೆ. ತಮ್ಮ ದೇಶದ ಭದ್ರತೆಗೆ ಅಪಾಯದ ಸನ್ನಿವೇಶವುಂಟಾದರೆ ಅಣ್ವಸ್ತ್ರವನ್ನು ಬಳಸಬೇಕಾದುದು ಪಾಕಿಸ್ತಾನದ ಹಕ್ಕು ಎಂದು ಧಾರ್ಮಿಕ ವ್ಯವಹಾರಗಳ ಸಚಿವ ರಾಜಾ ಜಫರುಲ್ ಹಕ್ ಜೂನ್ 30ರಂದು ಇಸ್ಲಾಮಾಬಾದಿನಲ್ಲಿ ಘೋಷಿಸಿದರು.

ಇತ್ತ ಭಾರತದಲ್ಲಿ, ನಮ್ಮ ಪ್ರಧಾನಿ- ಭಾರತ ಮೊದಲು ಅಣ್ವಸ್ತ್ರ ಬಳಸುವುದಿಲ್ಲ; ಪಾಕಿಸ್ತಾನವೇನಾದರೂ ಮೊದಲು ಅಣ್ವಸ್ತ್ರವನ್ನು ಭಾರತದ ಮೇಲೆ ಪ್ರಯೋಗಿಸಿದರೆ ನಮ್ಮ ದೇಶ ರಕ್ಷಣೆಗಾಗಿ ಯಾವ ಕ್ರಮವನ್ನಾದರೂ ಕೈಗೊಳ್ಳುತ್ತದೆ, ಎಂದು ಸ್ಪಷ್ಟವಾಗಿ ಸಾರಿದ್ದಾರೆ.

ಆದರೆ ಆರ್. ಎಸ್. ಎಸ್. ಮುಖವಾಣಿ 'ಆರ್ಗನೈಜರ್' ಪತ್ರಿಕೆ ಮಾತ್ರ ಪಾಕಿಸ್ತಾನಕ್ಕೆ ಬುದ್ಧಿ ಕಲಿಸಲು ಭಾರತ ಅಣ್ವಸ್ತ್ರವನ್ನು ಪ್ರಯೋಗಿಸಬೇಕೆಂದು ಪ್ರತಿಪಾದಿಸಿದೆ. ಅಲ್ಲಲ್ಲಿ ಕೆಲವರು ಈ ಮಾತಿಗೆ ಸಮರ್ಥನೆ ನೀಡಿದ್ದಾರೆ.

ಪಾಕಿಸ್ತಾನದ ಈ ಅಣ್ವಸ್ತ್ರದ ಬೆದರಿಕೆಯಿಂದ ಕೆಲಮಟ್ಟಿಗೆ ಭೀತಿ, ಗೊಂದಲ ಉಂಟಾಗಿರುವುದಂತೂ ನಿಜ. ಈ ಹಿನ್ನೆಲೆಯಲ್ಲಿ ಪಾಕಿಸ್ತಾನ ಅಣ್ವಸ್ತ್ರವನ್ನು ಪ್ರಯೋಗಿಸೀತೆ? ಒಂದು ವೇಳೆ ಅದನ್ನು ಪ್ರಯೋಗಿಸಿದರೆ ಅದರಿಂದ ಯುದ್ಧದಲ್ಲಿ ಅದು ಜಯಶಾಲಿಯಾಗಬಹುದೆ? ಭಾರತವಾದರೂ ಅಣ್ವಸ್ತ್ರವನ್ನು ಪ್ರಯೋಗಿಸುವುದು ಸೂಕ್ತವೇ? ಅದರಿಂದ ವಿಜಯಕ್ಕೆ ಪ್ರಯೋಜನ ಆದೀತೆ? ಈ ಪ್ರಶ್ನೆಗಳನ್ನು ಹಾಕಿಕೊಳ್ಳಬೇಕಾದದ್ದು ಸಹಜವಾಗಿದೆ.

ಅಣುಬಾಂಬನ್ನು ಹಾಕುವುದು ಹೇಳುವಷ್ಟು ಸುಲಭವೂ ಅಲ್ಲ, ವ್ಯಾವಹಾರಿಕವೂ ಅಲ್ಲ. ವಿಜಯದ ದೃಷ್ಟಿಯಿಂದ ಸಾಧ್ಯವೂ ಅಲ್ಲ, ಜಾಗತಿಕ ಶಾಂತಿ ಮತ್ತು ಸ್ನೇಹದ ದೃಷ್ಟಿಯಿಂದ ಸಾಧುವೂ ಅಲ್ಲ, ಎಂಬುದು ಬಹುಜನರಿಗೆ ತಿಳಿದಿಲ್ಲ. ಈ ಮಾತು ಸತ್ಯ ಎಂಬುದಕ್ಕೆ ಕೇವಲ ಒಂದೇ ಒಂದು ಅಲ್ಲಗಳೆಯಲಾಗದ ಸಂಗತಿಯನ್ನು ಗಮನಿಸಬಹುದು. ಅಣುಬಾಂಬು 1945ರ ಹೊತ್ತಿಗೆ ಪ್ರಯೋಗಕ್ಕೆ ಸಿದ್ಧವಾಗಿತ್ತು. ಅದನ್ನು ಪ್ರಯೋಗಿಸಬೇಕೆ, ಬಾರದೆ ಎಂದು ನಿರ್ಧರಿಸಲು ವ್ಯಾಪಕ ಚರ್ಚೆ ನಡೆಯಿತು. ಆ ಅಣುಬಾಂಬುಗಳನ್ನು 1945 ಆಗಸ್ಟ್ 6 ಮತ್ತು 9ರಂದು ಹಿರೋಷಿಮಾ, ನಾಗಸಾಕಿ ಎಂಬ ಜಪಾನ್ ನಗರಗಳ ಮೇಲೆ ಹಾಕಿದಾಗ, ಅವುಗಳನ್ನು ಹಾಕಬೇಕಾದ ಅಗತ್ಯವೂ ಇರಲಿಲ್ಲ. ಯಾಕೆಂದರೆ ಮೇ 1945ರಲ್ಲಿಯೇ ಜಪಾನಿನ ಸರ್ವೋಚ್ಚ ಯುದ್ಧ ನಿರ್ದೇಶನ ಸಮಿತಿ ಯುದ್ಧವನ್ನು ಕೊನೆಗಾಣಿಸುವ ಮಾರ್ಗೋಪಾಯಗಳನ್ನು ಕುರಿತು ತೀವ್ರವಾಗಿ ಚರ್ಚಿಸುತ್ತಿತ್ತು.[1] ಜುಲೈ ತಿಂಗಳಲ್ಲಿ ಜಪಾನ್ ಚಕ್ರವರ್ತಿ ಶರಣಾಗತನಾಗುವ ಸ್ಪಷ್ಟ ಸಂದೇಶ ಕಳುಹಿಸಿದ್ದೂ ಉಂಟು. ಬಾಂಬ್ ಹಾಕದೆ ಇದ್ದರೂ, ರಷ್ಯಾ ಯುದ್ಧದಲ್ಲಿ ಭಾಗಿಯಾಗದೆ ಹೋಗಿದ್ದರೂ, ಯಾವ ದಾಳಿಯನ್ನು ಮಾಡುವ ಆಲೋಚನೆ ಮಾಡದಿದ್ದರೂ ಜಪಾನ್ ಶರಣಾಗುತ್ತಿತ್ತು.[2] ಯಾಕೆ ಎಂಬುದು ಸದ್ಯ ಅಪ್ರಸ್ತುತವಾದ್ದರಿಂದ ಇಲ್ಲಿ ದೀರ್ಘವಾಗಿ ಪ್ರಸ್ತಾವಿಸಬೇಕಾಗಿಲ್ಲ.

ಇನ್ನೊಂದು ಅಲ್ಲಗಳೆಯಲಾಗದ ಸತ್ಯ : 1945ರಿಂದ ಇಲ್ಲಿಯವರೆಗೆ 55 ವರ್ಷಗಳ ದೀರ್ಘಕಾಲ ಅಣುಬಾಂಬುಗಳನ್ನು ತಯಾರಿಸಿದ ಯಾವ ದೇಶವೂ, ಯಾವ ಯುದ್ಧದಲ್ಲೂ ಯಾವ ದೇಶದ ಮೇಲೂ ಹಾಕಿಲ್ಲ. ಆಗ ಅಮೆರಿಕಾದೇಶ ಮಾತ್ರ ಅಣುಬಾಂಬಿನ ಸ್ವಾಮ್ಯ ಹೊಂದಿತ್ತು. ಬ್ರಿಟನ್ನಿಗೆ ಮಾತ್ರ ಈ ಸಂಗತಿ ಗೊತ್ತಿತ್ತು. ಆ ಬಾಂಬನ್ನು ಹಾಕುವುದಕ್ಕೆ ಬ್ರಿಟನ್ ಸಮ್ಮತಿಸಬೇಕಾಗಿತ್ತು. ಈ ಐವತ್ತು ವರ್ಷಗಳಲ್ಲಿ ಅಣುಬಾಂಬನ್ನು ಅಮೆರಿಕಾ, ಕೆನಡಾ, ಬ್ರಿಟನ್, ಫ್ರಾನ್ಸ್, ಚೈನಾ ತಯಾರಿಸಿ ಪ್ರಯೋಗಿಸುವ ಶಕ್ತಿ ಪಡೆದುಕೊಂಡವು. ಇತ್ತೀಚೆಗೆ ಭಾರತ, ಪಾಕಿಸ್ತಾನಗಳೂ ಸಿದ್ಧವಾದವು. ಇಸ್ರೇಲ್ ಮತ್ತು ದಕ್ಷಿಣ ಆಫ್ರಿಕಾಗಳಿಗೂ ಬಾಂಬ್ ತಯಾರಿಸುವ ತಂತ್ರಜ್ಞಾನ, ಸೌಕರ್ಯ ಎಲ್ಲಾ ಇವೆ; ಆದರೆ ಆ ರಾಷ್ಟ್ರಗಳು ಇನ್ನೂ ತಯಾರಿಸಿಲ್ಲ.

ಈ ದೀರ್ಘಕಾಲದಲ್ಲಿ ಅಮೆರಿಕಾ ಕೊರಿಯಾದಲ್ಲಿ, ವಿಯಟ್‌ನಾಮ್‌ನಲ್ಲಿ ಭೀಕರ ಕದನ ಹೂಡಿತ್ತು! ಎಂಥೆಂಥ ವಿಷವಾಯು ಅಸ್ತ್ರಗಳನ್ನು ಬಳಸಿ ಆ ದೇಶಗಳನ್ನು ಹಾಳುಮಾಡಿತು! ಇತ್ತೀಚೆಗಷ್ಟೇ ಇರಾಕಿನ ಸದ್ದಾಂ ಹುಸೇನನನ್ನು ಹಣಿಯಲು ಘೋರ ಕಾರ್ಯಾಚರಣೆ ಮಾಡಿತು. ಆದರೆ ಅಣುಬಾಂಬನ್ನು ಪ್ರಯೋಗಿಸಲಿಲ್ಲ. 1962ರಲ್ಲಿ ಸೋವಿಯತ್ ಒಕ್ಕೂಟ ಕ್ಯೂಬಾಕ್ಕೆ ಯುದ್ಧಾಸ್ತ್ರಗಳನ್ನು ಕಳಿಸಿದಾಗ, ಯುದ್ಧ ತಮ್ಮ ಹೊಸ್ತಿಲಿನಲ್ಲಿದ್ದಾಗಲೂ ಅಮೆರಿಕಾ ಅಣುಬಾಂಬನ್ನು ಕ್ಯೂಬಾದ ಮೇಲೆಯೂ ಪ್ರಯೋಗಿಸಲಿಲ್ಲ. ಹಾಗಾದರೆ ಯಾಕೆ ಹಾಕಲಿಲ್ಲ?

1940-44ರಲ್ಲಿ, ಎರಡು ಬಿಲಿಯನ್ ಡಾಲರ್[3] (ಸುಮಾರು 440 ಕೋಟಿ ರೂಪಾಯಿಗಳು) ಖರ್ಚು ಮಾಡಿ ತಯಾರಿಸಿದ ಅಣು ಬಾಂಬುಗಳನ್ನು ಉಪಯೋಗಿಸದಿದ್ದರೆ, ಅಷ್ಟೇಕೆ ಹಣ ವೆಚ್ಚ ಮಾಡಬೇಕಾಗಿತ್ತು ಎಂದು ಕಾಂಗ್ರೆಸಿನಲ್ಲಿ ತೀವ್ರ ಚರ್ಚೆ ನಡೆದಿತ್ತು. ರೂಜ್‌ವೆಲ್ಟ್‌ರ ಕಾಲದಲ್ಲಿಯೇ ಇದಕ್ಕಾಗಿ ಅಪಾರ ಹಣ ವೆಚ್ಚ ಮಾಡಲಾಗಿತ್ತು. ಟ್ರೂಮನ್ ಅಣುಬಾಂಬು ಉಪಯೋಗಿಸಿ, ಖರ್ಚಾದ ಹಣದ ಉಪಯುಕ್ತತೆಯನ್ನು ತೋರಿಸಿಕೊಟ್ಟರು! ಇತ್ತೀಚಿನ ಅಂದಾಜಿನ ಪ್ರಕಾರ ಅಣುಬಾಂಬುಗಳ ತಯಾರಿಕೆಗೆ 3.3 ಟ್ರಿಲಿಯನ್ ಡಾಲರ್‌ಗಳು ಖರ್ಚಾಗುವುದು (ಒಂದು ಟ್ರಿಲಿಯನ್ = ನೂರು ಬಿಲಿಯನ್). ಅಷ್ಟೊಂದು ಹಣ ಖರ್ಚು ಮಾಡಿ ತಯಾರಿಸಿದ ಬಾಂಬುಗಳನ್ನು ಅಮೆರಿಕಾ ಎಲ್ಲಿಯೂ ಪ್ರಯೋಗಿಸಿಲ್ಲ. ಯಾಕೆ?

ಶತ್ರುದೇಶದ ಪ್ರಜೆಗಳ ಪ್ರಾಣ ಮತ್ತು ಆಸ್ತಿಯ ಬಗ್ಗೆ ಕನಿಕರವೇ? ಅಥವಾ ಮಾನವೀಯ ದೃಷ್ಟಿಯೇ? ಒಂದು ಅಣುಬಾಂಬನ್ನು ಹಿರೋಷಿಮಾದ ಮೇಲೆ ಹಾಕಿದಾಗ 70ರಿಂದ 80 ಸಹಸ್ರ ಜನ ಸತ್ತರು/ಕಾಣೆಯಾದರು. ನಾಗಸಾಕಿಯ ಮೇಲೆ ಹಾಕಿದಾಗ 35-40 ಸಹಸ್ರಜನ ಸತ್ತರು/ಕಾಣೆಯಾದರು. ಹಿರೋಷಿಮಾದ 4.7 ಚದುರ ಮೈಲು, ನಾಗಸಾಕಿಯ 1.8 ಚದುರಮೈಲು ಧ್ವಂಸವಾಗಿ ಹೋಯಿತು.[4] ಈಗ ತಯಾರಾದ ಬಾಂಬುಗಳು ಅದಕ್ಕಿಂತಲೂ ಅಧಿಕ ಪ್ರಮಾಣದ ಪ್ರಾಣಹಾನಿ ಮಾಡಬಲ್ಲುವು. ಹಾಗಾದರೆ ಶತ್ರುಗಳ ಮೇಲೆ ಯುದ್ಧ ಹೂಡುವುದೇ ಆ ದೇಶ ಮತ್ತು ಆ ಜನರನ್ನು ಸಾಯಿಸಲಿಕ್ಕಾಗಿಯೇ? ಹಾಗಾದರೆ 1945ರ ತರುವಾಯ ಯಾವ ಯುದ್ಧದಲ್ಲೂ ಈ ಮಾರಕಾಸ್ತ್ರವನ್ನು ಉಪಯೋಗಿಸದಿರಲು ಏನು ಕಾರಣ? ಶತ್ರುಗಳ ಮೇಲಿನ ಕರುಣೆಯಿಂದಂತೂ ಅಲ್ಲ. ಮಾನವೀಯತೆ ದೃಷ್ಟಿಯೂ ಅಲ್ಲ. ಹಾಗೆ ಹೇಳಬೇಕೆಂದರೆ ಕೊರಿಯಾ ಮತ್ತು ವಿಯಟ್ನಾಂ ಯುದ್ಧಗಳಲ್ಲಿ ಸತ್ತವರ ಸಂಖ್ಯೆ ಎಷ್ಟೋ ಲಕ್ಷ ಲಕ್ಷ. ದ್ವಿತೀಯ ಮಹಾಯುದ್ಧದಲ್ಲಿ ಅಣುಬಾಂಬ್ ಹಾಕದ ದೇಶಗಳಲ್ಲಿ ಸತ್ತವರ ಸಂಖ್ಯೆಯೂ ಅಗಣಿತ. ರಷ್ಯಾ ದೇಶ ಒಂದರಲ್ಲೇ 14,19,000! ಕಾಣೆಯಾದವರು 9,07,000! ಒಟ್ಟು 23,26,000. ಜರ್ಮನಿಯಲ್ಲಿ ಸತ್ತವರು 64,000, ಇಟಲಿಯಲ್ಲಿ 48,000, ಬ್ರಿಟನ್‌ನಲ್ಲಿ 5,70,000, ಫ್ರಾನ್ಸ್‌ನಲ್ಲಿ 7,50,000![5].

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ: ಯುದ್ಧದಲ್ಲಿ ಶತ್ರುಗಳಿಗೆ ಪ್ರಾಣಹಾನಿಯ ಗಣನೆಯಿಲ್ಲ ಹಾಗೂ ಪ್ರಜೆಗಳನ್ನು ಕೊಲ್ಲುವುದು, ಆ ದೇಶದ ಭೂಮಿಯನ್ನು ಹಾಳುಮಾಡುವುದು ಯುದ್ಧದ ಉದ್ದೇಶವಲ್ಲ. ಜನಗಳನ್ನು ಕೊಂದು ಭೂಮಿಯನ್ನು ಹಾಳು ಮಾಡಿದರೆ, ಯುದ್ಧ ಮಾಡಿ ಪಡೆದ ಲಾಭವೇನು? ಪಾಕಿಸ್ತಾನಕ್ಕೆ ಬೇಕಾಗಿರುವುದು ಕಾಶ್ಮೀರ ರಾಜ್ಯದ ಭೂಭಾಗ! ಅದರ ಮೇಲೆ ಅಣುಬಾಂಬು ಹಾಕಿ, ಆ ಸುಂದರ ನಾಡನ್ನು ಸುಟ್ಟು ಭಸ್ಮ ಮಾಡಿ, ಜನರನ್ನು ಕೊಂದು ಅಲ್ಲಿ ಅವರೇನು ಸುರಿದುಕೊಂಡಾರು!

ಬಾಂಬ್ ದಾಳಿಯಿಂದ ಯುದ್ಧವನ್ನು ಗೆಲ್ಲುವುದು

ಸಾಧ್ಯವಿಲ್ಲ ಎಂಬುದು ಯುದ್ಧವಿದ್ಯಾ ವಿಶಾರದ ತಜ್ಞರ ನಿಶ್ಚಿತವಾದ ಅಭಿಪ್ರಾಯ. ಹಾಗೆ ಬಾಂಬ್ ಹಾಕಿ ಯುದ್ಧವನ್ನು ಗೆಲ್ಲಬಹುದಾಗಿದ್ದರೆ 1940ರ ಆಗಸ್ಟ್‌ನಿಂದ ಮೇ 1941ರ ವರೆಗೆ ಬ್ರಿಟನ್ ಮತ್ತು ಜರ್ಮನಿ ದೇಶಗಳ ನಡುವೆ ನಡೆದ ವಿಮಾನ ದಾಳಿ, ಬಾಂಬುಗಳ ಪ್ರಯೋಗದಿಂದ ಜರ್ಮನಿ ಇಂಗ್ಲೆಂಡನ್ನು ಗೆಲ್ಲಬಹುದಾಗಿತ್ತು. ಬ್ರಿಟನ್ ಸುರಿಸಿದ 20,000 ಟನ್ ಬಾಂಬುಗಳಿಂದ ಜರ್ಮನಿಯ 2000 ನಾಗರಿಕರನ್ನು ಕೊಲ್ಲಲಾಯಿತು. ಜರ್ಮನಿ ಅದೇ ಕಾಲಾವಧಿಯಲ್ಲಿ 50,000 ಟನ್ ಬಾಂಬುಗಳನ್ನು ಹಾಕಿ 40,000 ಜನರನ್ನು ಕೊಂದಿತು. ಆದರೂ ಬ್ಲಿಟ್ಜ್ ದಾಳಿಯಿಂದ ಬ್ರಿಟನನ್ನು ಗೆಲ್ಲುವುದಾಗಲಿಲ್ಲ !! ಅಂದರೆ ಇದರಿಂದ ತೋರುವ ಸತ್ಯ ಬಾಂಬ್ ದಾಳಿಯಿಂದ ಯುದ್ಧವನ್ನು ಗೆಲ್ಲುವುದೂ ಸಾಧ್ಯವಿಲ್ಲ. ಅಣುಬಾಂಬನ್ನು ಹಾಕುವುದರಿಂದಲೂ ಯುದ್ಧದಲ್ಲಿ ಜಯ ದೊರೆಯಲಾರದು. ಆದ್ದರಿಂದಲೇ ಯುದ್ಧ ವಿಶಾರದನೆಂದೇ ಪ್ರಖ್ಯಾತನಾದ ಚರ್ಚಿಲ್ ಕೂಡ ಬಹಿರಂಗವಾಗಿ 'ಜರ್ಮನಿ ಮತ್ತು ಇಟಲಿಯನ್ನು ಬಗ್ಗುಬಡಿಯಲು ವಾಯುಶಕ್ತಿಯೊಂದೇ ಸಾಕೆಂಬ ಬಗ್ಗೆ ಭಿನ್ನಾಭಿಪ್ರಾಯವಿದೆ. ಆದರೆ ಅನ್ಯ ಮಾರ್ಗಗಳನ್ನು ಕೈಬಿಡದೆ ಈ ಪ್ರಯೋಗವನ್ನು ಪ್ರಯತ್ನಿಸಬಹುದು', ಎಂದು ಹೇಳಿದರು.[1] ಇದೇ ಅಭಿಪ್ರಾಯ ಜನರಲ್ ಐಸನ್ ಹವರ್‌ಗೂ ಇತ್ತೆಂದು ದಾಖಲೆ ಇದೆ.[2]

ಯುದ್ಧ ಶಾಸ್ತ್ರ ವಿಶಾರದರ ಪ್ರಕಾರ ಬಾಂಬ್ ದಾಳಿಯಿಂದ ಯುದ್ಧವನ್ನು ಗೆಲ್ಲುವುದು ಸಂದೇಹ. ಯಾಕೆಂದರೆ ಆಕ್ರಮಿಸಬೇಕಾದದ್ದು ಶತ್ರುದೇಶವನ್ನು, ಆ ದೇಶದ ಮೇಲಿನ ಆಕಾಶವನ್ನಲ್ಲ ಅಥವಾ ಹಾಳಾದ ನಿರ್ಜನ ಪ್ರದೇಶವನ್ನಲ್ಲ. ಹಾಗಾದರೆ ವಿಮಾನ ದಾಳಿಯಿಂದ ಬಾಂಬ್ ಹಾಕುವುದರ ಉದ್ದೇಶವೇನು ? ಈ ಪ್ರಶ್ನೆ ಪ್ರಥಮ ಜಾಗತಿಕ ಯುದ್ಧದ ಕಾಲದಲ್ಲೆ ಬಂದಿತ್ತು. ವಿಮಾನ ದಾಳಿಯ ಉದ್ದೇಶ ಭೂಸೇನೆಗೆ ಬೆಂಬಲ ಕೊಡುವುದು ಒಂದು. ಇನ್ನೊಂದು ಶತ್ರುಗಳ ಶಸ್ತ್ರಾಸ್ತ್ರಗಳ ಉತ್ಪಾದನೆ ಮತ್ತು ಸಂಗ್ರಹಗಳನ್ನು ಧ್ವಂಸಮಾಡುವುದು. ಅಂದರೆ ಅವರ ಯುದ್ಧ ಶಕ್ತಿಯನ್ನು ಕುಂಠಿಸುವುದು, ಮುರಿದಿಕ್ಕಿ ಅಶಕ್ತರನ್ನಾಗಿ ಮಾಡುವುದು. ಆದ್ದರಿಂದಲೇ, ವಿಮಾನದಾಳಿ ಮಾಡುವಾಗ ನಾಗರಿಕ ನೆಲೆಗಳ ಮೇಲೆ ಬಾಂಬ್ ಹಾಕಬಾರದೆಂಬ ನೀತಿಯನ್ನು ಅಂತಾರಾಷ್ಟ್ರೀಯ ಯುದ್ಧನೀತಿ ಅಂಗೀಕರಿಸಿದೆ. ಈ ನೀತಿಯನ್ನು ಉಲ್ಲಂಘಿಸಿದಾಗ ನಾಗರಿಕ ಲೋಕ ಖಂಡಿಸುತ್ತದೆ. ಶಸ್ತ್ರಾಗಾರಗಳ ಮೇಲೆ ಧಾಳಿ ಮಾಡುವ ಉದ್ದೇಶದಿಂದ ಬಾಂಬುಗಳನ್ನು ಹಾಕಿದರೂ, ಬ್ರಿಟನ್ ಮತ್ತು ಜರ್ಮನಿಯಲ್ಲಿ ಆ ಫಲ ದೊರೆಯಲಿಲ್ಲ ಎಂದು ಬ್ಲಾಕೆಟ್ ತಮ್ಮ ವಿದ್ವತ್‌ಪೂರ್ಣ ಗ್ರಂಥದಲ್ಲಿ ಪ್ರತಿಪಾದಿಸಿದ್ದಾರೆ. ಅವರ ಆ ಗ್ರಂಥಕ್ಕೆ ನೊಬೆಲ್ ಪಾರಿತೋಷಕಕ್ಕೆ ಸಮನಾದ ಒಂದು ಪುರಸ್ಕಾರ ದೊರಕಿತ್ತು. ಆದರೆ ಆ ಗ್ರಂಥವನ್ನು, ಆ ಗ್ರಂಥಕರ್ತೃವನ್ನು ಐ. ಐ. ರಬಿ ಎಂಬಾತ ತುಚ್ಛೀಕರಿಸಿದ. ಬ್ಲಾಕೆಟ್ ಎಡಪಂಥೀಯನೆಂಬ ಅರ್ಥವಿಲ್ಲದ ನಿಂದೆ ಮಾಡಿದ. ಆದರೆ ಭಾರತ ದೇಶ ಅವರನ್ನು ಅಣು ಪರಿಣತಿ ತಜ್ಞರನ್ನಾಗಿ ಕೆಲಕಾಲ ನೇಮಿಸಿತ್ತು.

ಯಾವ ದೃಷ್ಟಿಯಿಂದ ನೋಡಿದರೂ ವಿಮಾನ ಬಾಂಬ್ ದಾಳಿ ಯುದ್ಧ ವಿಜಯ ದೃಷ್ಟಿಯಿಂದ ಏಕಮಾತ್ರ ಸಾಧನವಾಗಲಾರದು. ಚರ್ಚಿಲ್ ತಮ್ಮ 'ಯುದ್ಧ ವೃತ್ತಾಂತ' (War Memoirs)ದ ದ್ವಿತೀಯ ಸಂಪುಟ "The Finest Hour" (ಅತ್ಯಂತ ಸೊಬಗಿನ ಘಳಿಗೆ)ಯಲ್ಲಿ ಹೇಳುವಂತೆ, ಯಾವುದೇ ಯುದ್ಧದಲ್ಲಿ ಸೈನಿಕ (ಪದಾತಿ)ನೆ ಮೂಲ ವ್ಯಕ್ತಿ, ತುಬಾಕಿಯೇ ಮೂಲ ಆಯುಧ. ಎಂಥ ಯುದ್ಧ ಮಾಡಿದರೂ ಸೈನಿಕ ಮುಂದೆ ಮುಂದೆ ತನ್ನ ತುಬಾಕಿಯಿಂದಲೇ ಯುದ್ಧ ಮಾಡಬೇಕು. ಹಿಂದೆ ಹಿಂದೆ ಸೇವಾ ಸಿಬ್ಬಂದಿಯನ್ನು ಗೆದ್ದ ದೇಶದಲ್ಲಿ ಆಡಳಿತ ಸ್ಥಾಪಿಸಬೇಕು. ಹಾಗಾದರೇನೇ ಯುದ್ಧದಲ್ಲಿ ಗೆದ್ದಂತೆ.

ಈ ಹಿನ್ನೆಲೆಯಲ್ಲಿ ಪಾಕಿಸ್ತಾನದ ಬೆದರಿಕೆಯನ್ನು ಅರ್ಥ ಮಾಡಿಕೊಳ್ಳಬೇಕು. ನಮ್ಮ ಪ್ರತಿಕ್ರಿಯೆಯನ್ನು



ವ್ಯಕ್ತಪಡಿಸಬೇಕು. ಪಾಕಿಸ್ತಾನದಲ್ಲಿ ಯುದ್ಧಕಲೆಯ ಇತಿಹಾಸ ಗೊತ್ತಿದ್ದವರಿದ್ದರೆ ಅಣುಬಾಂಬಿನ ಸುದ್ದಿ ಎತ್ತಕೂಡದು. ಒಂದು ವೇಳೆ ಅಂಥ ಜಾಣರಿಲ್ಲದಿದ್ದರೆ ಅದರ ಪರಿಣಾಮ ಏನಾದೀತೆಂಬುದನ್ನು ಊಹಿಸುವುದು ಕಷ್ಟವೇನಲ್ಲ. ಪಾಕಿಸ್ತಾನ ಅಣುಬಾಂಬ್ ಹಾಕಿದರೆ, ನಾವು ಅಣುಬಾಂಬ್ ಹಾಕದೆಯೆ ಆ ದೇಶವನ್ನು ಆಕ್ರಮಿಸುವಷ್ಟು ಸೈನ್ಯ ಬಲ, ಜನ ಬಲ ನಮಗಿದೆ. ಕೇವಲ ಐದೇ ಐದು ಕೋಟಿ ಜನರಿದ್ದರೆ ಪಾಕಿಸ್ತಾನವನ್ನೆಲ್ಲ ಇರುವೆಯಂತೆ ಆಕ್ರಮಿಸಿಕೊಳ್ಳಬಹುದು ! ನಮ್ಮ ಸೈನಿಕರ ಸಂಖ್ಯೆ, ವಿಮಾನ ಬಲ, ಬಾಂಬ್ ಸಂಖ್ಯೆ, ಟ್ಯಾಂಕ್‌ಗಳು ಪಾಕಿಸ್ತಾನದಕ್ಕಿಂತ ಮೂರು ನಾಲ್ಕು ಪಟ್ಟು ಹೆಚ್ಚು !! ಅಷ್ಟೇ ಅಲ್ಲ, ನಮ್ಮಲ್ಲೂ ಅಣುಬಾಂಬಿದೆ ಎಂಬುದು ಪಾಕಿಸ್ತಾನಕ್ಕೆ ಗೊತ್ತು. ಪಾಕಿಸ್ತಾನ ನಮ್ಮ ದೆಹಲಿಯ ಮೇಲೆ ಅಣುಬಾಂಬ್ ಹಾಕಿದರೆ ನಾವು, ಆಗ್ರಾ, ಅಲಹಾಬಾದ್, ಕಸ್ವತ್ತಾದವರೆಗೂ ಒಂದು ಒಂದಕ್ಕೆ [illegible] ಮೇಲೆ ಹೋರಾಡಬೇಕಿತ್ತು. [illegible] ಪಾಕಿಸ್ತಾನದ ಲಾಹೋರ್. [illegible] ಸಾಧಾರಣ ಬಾಂಬ್ ಹಾಕಿದರೂ ಪಾಕಿಸ್ತಾನ ಎಷ್ಟು ದಿನ ಒಂದಕ್ಕೆ ಸರಿದೀತು ? ನಮ್ಮ ಗಡಿಗೆ ಕೇವಲ 24 ಕಿ.ಮೀ. ದೂರದ ಲಾಹೋರನ್ನು ನಮ್ಮ ಸೈನಿಕರು ಅವರ ಹಿಂದೆ ನುಗ್ಗುವ ನಾಗರಿಕರು ಕಣ್ಣುಬಿಟ್ಟು ತೆರೆಯುವುದರ ಒಳಗಾಗಿ ಆಕ್ರಮಿಸಿಕೊಂಡುಬಿಟ್ಟಾರು ! ಇದು ಪಾಕಿಸ್ತಾನಕ್ಕೆ ಗೊತ್ತಿದೆ.

ಮೇಲಾಗಿ ಪಾಕಿಸ್ತಾನದಲ್ಲಿ ಸಿಂಧ್ ರಾಜ್ಯ ಯಾವಾಗ ಪ್ರತ್ಯೇಕವಾದೇವು ಎಂದು ಕಾದಿದೆ. ಅವರೂ ಬಾಂಗ್ಲಾದೇಶದಂತೆ ಸ್ವತಂತ್ರವಾಗಲು ಹಾತೊರೆಯುತ್ತಿದ್ದಾರೆ. ಮೇಲಾಗಿ ಅಲ್ಲಿ ಶಿಯಾ-ಸುನ್ನಿ ದ್ವೇಷ ಉಲ್ಬಣವಾಗುತ್ತಿದೆ. ಒಸಾಮಾ ಬಿನ್ ಲೇಡನ್ ಉಗ್ರವಾದಿಗಳ ಉಪಟಳದಿಂದ ಮಧ್ಯ ಪ್ರಾಚ್ಯ ಬೇಸತ್ತಿದೆ. ಸೌದಿ ಅರೇಬಿಯಾ, ಇರಾನ್ ಲೇಡನ್ನನನ್ನು ಮುಗಿಸಲು ಹಾತೊರೆಯುತ್ತಿವೆ. ಅವನಿಗೆ ಆಶ್ರಯ ಕೊಟ್ಟು ಪಾಕಿಸ್ತಾನ ತನ್ನ ಸೆರಗಿನಲ್ಲಿ ಕೆಂಡ ಕಟ್ಟಿಕೊಂಡಿದೆ !! ಅಮೆರಿಕಾ ಸದ್ಯಕ್ಕೆ ನಮ್ಮ ಪರವಾಗಿರುವುದು ಲೇಡನ್ ಕೀನ್ಯಾದಲ್ಲಿ ಅಮೆರಿಕನ್ ರಾಯಭಾರಿ ಕಛೇರಿಯನ್ನು ಸ್ಫೋಟಿಸಿ ಅಮೆರಿಕನ್ನರ ಹತ್ಯೆ ಮಾಡಿದ್ದನ್ನು ನೆನಪಿಟ್ಟುಕೊಂಡು. ಬ್ರಿಟನ್ ಕೂಡ ಅಮೆರಿಕಾದ ಹಾದಿಯಲ್ಲೇ ನಡೆದಿದೆ. ಫ್ರಾನ್ಸ್, ಜರ್ಮನಿ, ಜಪಾನ್ ಕೂಡ ಭಾರತವನ್ನು ಬೆಂಬಲಿಸಿವೆ. ಅಂದ ಮೇಲೆ ಪಾಕಿಸ್ತಾನ ಇನ್ನೆಷ್ಟು ದಿನ ಯುದ್ಧ ಮಾಡೀತು ?

ಈಗ ಯೋಚನೆ ಮಾಡಿ : ಪಾಕಿಸ್ತಾನ ಅಣುಬಾಂಬ್ ಹಾಕೀತೆ ? ಹಾಕಿ ದಕ್ಕಿಸಿಕೊಂಡೀತೆ ? ಅವರು ಹುಡುಕಿದರೆ ಕೆಟ್ಟು ಹೋಗುತ್ತಾರೆ. ನಾವು ಸಂಯಮದಿಂದ ಮುನ್ನುಗ್ಗಬೇಕು ! ನಮ್ಮ ಕೈಲಿ 'ಪಾಂಚಜನ್ಯ'ವಿದೆಯೆಂದು ಹುಚ್ಚು ಹುಚ್ಚಾಗಿ ಶಂಖನಾದ ಮೊಳಗಿಸಿ ದೇಶದ ಜನಕ್ಕೆ ಕುತ್ತುಂಟುಮಾಡುವಂತಹ ಭಾವೋದ್ವೇಗಕ್ಕೆ ಎಡೆಕೊಡಬಾರದು.

1. Military and Political Consequences of Atomic Energy : P.M.S. Blackett. P. 121. pub: Turnstile Press. London W.C.I. 1948
2 ಅದೇ ಪುಟ 122.
3. War and Peace in the Nuclear Age. John Newhouse. Pub : Alfred A. Knopf, New York 1989 P 42
4. P. M. S. Blackett. P. 37.
5. ಅದೇ ಪುಟ 198- 199.
6. ಅದೇ ಪುಟ : 19.
7. Hiroshima in America : Fifty Years of Denial. Robert Jay Lifton and Greg Mitchell. Pub : G. P. Putnam's sons. New York. pp. 213-215

ಶ್ರೀಮತಿ ಸೋನಿಯಾ ಗಾಂಧಿಯವರಿಗೆ ಒಂದು ಬಹಿರಂಗ ಪತ್ರ

ಪ್ರಿಯ ಶ್ರೀಮತಿ ಸೋನಿಯಾ ಗಾಂಧಿಯವರಿಗೆ ನಮಸ್ಕಾರಗಳು.

ನೆಹರೂ ನಂತರದ ಕಾಂಗ್ರೆಸ್ ಚರಿತ್ರೆ ನೀವು ಚೆನ್ನಾಗಿ ಗಮನಿಸಿದ್ದೀರಿ ಎಂದು ನಾನು ನಂಬಿದ್ದೇನೆ. ಈ ದೇಶದ ಬೇರೆ ಯಾರಿಗಿಂತಲೂ ಚೆನ್ನಾಗಿಯೇ ಗಮನಿಸುವುದಕ್ಕೆ ನಿಮಗೆ ಅವಕಾಶವೂ ಇತ್ತು, ಅನುಕೂಲವೂ ಇತ್ತು. ಹೀಗಿದ್ದೂ ಕೂಡ ನೀವು ಈ ಪಕ್ಷದ ನೇತೃತ್ವ ವಹಿಸಿರುವುದು ನಿಜಕ್ಕೂ ಅಚ್ಚರಿಯ ಸಂಗತಿಯೇ ಸರಿ.

ನೆಹರೂ ನಂತರ ಬಂದವರಲ್ಲಿ ಇಂದಿರಾ ಅವರು ಪ್ರಧಾನಿಯಾಗಿ ಎಲ್ಲಕ್ಕಿಂತ ಮಿಗಿಲಾಗಿ ಸಾಧಿಸಿದ್ದು ಎಂದರೆ ಕಾಂಗ್ರೆಸ್ ಪಕ್ಷವನ್ನು ಸಂಪೂರ್ಣವಾಗಿ ನಿರ್ವೀರ್ಯಗೊಳಿಸಿದ್ದು. ಅಥವಾ ಬೇರೆ ಮಾತುಗಳಲ್ಲಿ ಹೇಳಬಹುದಾದರೆ ಕಾಂಗ್ರೆಸ್ ಪಕ್ಷವನ್ನು ಬಲಿಷ್ಠಗೊಳಿಸುವ ಹೆಸರಿನಲ್ಲಿ ಕಾಂಗ್ರೆಸಿಗರನ್ನು ನಿರ್ವೀರ್ಯಗೊಳಿಸಿದ್ದು ಎಂದೆನ್ನಬಹುದು. ಅಂದಿನ ಕಾಲದ ಒಂದು ಘೋಷಣೆ ನಿಮಗೆ ನೆನಪಿರಬಹುದು; 'ಇಂದಿರಾ ಅವರ ಕೈಗಳನ್ನು ಬಲಪಡಿಸಿ.' ಆಕೆಯ ಕೈ ಬಲಪಡಿಸುವ ಉತ್ಸಾಹದಲ್ಲಿ, ತಲ್ಲೀನತೆಯಲ್ಲಿ ತಮ್ಮ ವೈಯಕ್ತಿಕ ಘನತೆ, ಆತ್ಮಗೌರವ ಎಲ್ಲವನ್ನೂ ಬಲಿಕೊಟ್ಟದ್ದೇ ಕಾಂಗ್ರೆಸ್ ಧುರೀಣರ ಸಾಧನೆ. 'ತುರ್ತು ಪರಿಸ್ಥಿತಿ' ಹೇರುವಂಥ ಎದೆಗಾರಿಕೆ ತೋರುವುದಕ್ಕೆ ಇಂದಿರಾ ಅವರಿಗೆ ಧೈರ್ಯ ಬಂದದ್ದೇ ಇಂಥ ಬೆನ್ನೆಲುಬನ್ನು ಮುರಿದು ಅವರ ಪದತಲದಲ್ಲಿ ಅರ್ಪಿಸಿಬಿಟ್ಟ ಭಕ್ತ ಸಮುದಾಯದವರಿಂದ. ಸಂಜಯಗಾಂಧಿಯವರನ್ನು ಈಗ ದೂಷಿಸುವುದು ಸುಲಭ. ಆದರೆ ತುರ್ತುಪರಿಸ್ಥಿತಿಗೆ ಕಾರಣ ಕಾಂಗ್ರೆಸ್ ನಾಯಕ ಮಣಿಗಳು ಎಂಬುದನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ.


ಈಗ ನಿಮಗೆ ಈ ಪತ್ರ ಬರೆಯುವ ನಿಮಿತ್ತದಲ್ಲಿ ಈ ಮಾತುಗಳನ್ನು ಹೇಳುವುದಕ್ಕೆ ಕಾರಣವೇನು ಎಂದು ನೀವು ಕೇಳಬಹುದು. ಕಾರಣ ಇಷ್ಟೆ:

ಇಂದಿರಾ ನಂತರ ಕಾಂಗ್ರೆಸಿನಲ್ಲಿ, ನೆಹರೂ ಮನೆತನದಿಂದ ಆಚೆಗೆ ಯಾರಿಗೂ ಬಲಿಷ್ಠರಾಗುವುದಕ್ಕೆ, ನಾಯಕತ್ವದ ಲಕ್ಷಣಗಳನ್ನು ಬೆಳೆಸಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಸಾಧ್ಯವಾಗಲು ಬಿಟ್ಟೂ ಇಲ್ಲ. ಬಿಟ್ಟಿಲ್ಲದೆ ಇರುವುದು ಇಂದಿರಾ, ರಾಜೀವ, ಸಂಜಯರಲ್ಲ- ಅಥವಾ ಅವರಷ್ಟೇ ಅಲ್ಲ. ಅವರಿಗಿಂತ ಮುಖ್ಯವಾಗಿ ಮೂವತ್ತು ನಲವತ್ತು ವರ್ಷಗಳಿಂದ ಕಾಂಗ್ರೆಸಿನಲ್ಲೇ ತಮ್ಮ ಜೀವಮಾನವೆಲ್ಲ ಕಳೆದ ಹಿರಿಯ ಕಾಂಗ್ರೆಸಿಗರಿಂದ ಹಿಡಿದು ಇಂದಿನ [illegible] ಕಾಂಗ್ರೆಸ್ ನಾಯಕರು [illegible] ಎಲ್ಲರೂ ಹಾಗೆಯೇ ಅನಿವಾರ್ಯವಾಗಿ -ದುರದೃಷ್ಟದ ರಾಜೀವ್ ಹತ್ಯೆಯ ನಂತರ ದಿನಗಳಲ್ಲಿ ಮತ್ತೆ- ನೆಹರೂ ಮನೆತನದಿಂದ ಆಚೆಗೆ ಯಾರಾದರೂ ನಾಯಕರಾದರೆ [illegible] ಆಗುತ್ತದೆ, ಪಕ್ಷಕ್ಕೆ [illegible] [illegible] [illegible]

ಅಗತ್ಯವಿಲ್ಲ. ಪಕ್ಷ ಛಿದ್ರ ಛಿದ್ರವಾಗುತ್ತದೆ. ಹಠಾತ್ತಾಗಿ ಎಲ್ಲ ಹಿರಿ-ಮರಿ ನಾಯಕರಿಗೂ ಸ್ವಾಭಿಮಾನ, ಸ್ವಸಾಮರ್ಥ್ಯಗಳ ಅರಿವುಂಟಾಗಿಬಿಡುತ್ತದೆ. ಇದು ಡೆಲ್ಲಿಗೂ ಪ್ರತಿ ರಾಜ್ಯದ ರಾಜಧಾನಿಗೂ ಅನ್ವಯಿಸುವ ಮಾತು.

ಈ ಅಹೋರಾತ್ರಿಯ ರೂಪಾಂತರದಿಂದ ಸಹಜವಾಗಿ ಪಕ್ಷ ಅಧಿಕಾರ ಕಳೆದುಕೊಳ್ಳುತ್ತದೆ. ಮತ್ತೆ, ನಿಮ್ಮ ಗಮನಕ್ಕೆ ಬಂದಿರುವ ಹಾಗೆ ಕಾಂಗ್ರೆಸಿಗರಿಗೆ ಅಧಿಕಾರವಿಲ್ಲದೆ ಉಳಿಯುವುದು ಸಾಧ್ಯವೇ ಇಲ್ಲ. ತಾವು ಅಧಿಕಾರದ ಚುಕ್ಕಾಣಿ ಹಿಡಿಯಲಿಕ್ಕಾಗಿಯೇ ಜನ್ಮ ತಾಳಿದವರು ಎಂಬ ನಂಬಿಕೆ ಅವರ ಮೈಯಲ್ಲಿ ಹರಿಯುವ ನೆತ್ತರಿನ ಅಂಶವಾಗಿ ಹೋಗಿದೆ.

ಮತ್ತೆ ಅಧಿಕಾರಕ್ಕೆ ಬರಬೇಕೆಂದರೆ, ನೆಹರೂ ಮನೆಯ ಬಾಗಿಲು ಬಡಿಯುವುದಕ್ಕೆ ಶುರು ಎಂದರ್ಥ. ಹಾಗೆ ಬಾಗಿಲು ಬಡಿದಾಗ ಯಾರು ಬಾಗಿಲು ತೆರೆದರೂ



ಸರ್ವಗುಣ ಸಂಪನ್ನನೂ, ಸಮರ್ಥನೂ, ಏಕಮೇವಾದ್ವಿತೀಯ ನಾಯಕನೂ ಆಗಿ ಕಂಡು ಆತನ ಕಾಲಿಗೆರಗಿ ಹೊರಗೆಳೆದು ಕುರ್ಚಿಯ ಆಕರ್ಷಣೆಯನ್ನು ನರನಾಡಿಗಳಲ್ಲಿ ಚುಚ್ಚುಮದ್ದಿನ ಹಾಗೆ ಚುಚ್ಚಿ ಆತನನ್ನು ಅವನ ಎಲ್ಲ ಮಿತಿಗಳಿಗೂ ಮೀರಿದಂತೆ ಉಬ್ಬುವ ಹಾಗೆ ಮಾಡಿ ತಮ್ಮ ತಮ್ಮ ವ್ಯಕ್ತಿತ್ವವನ್ನು ಮತ್ತೆ ಅವರ ಕಾಲಕೆಳಗೆ ಹೊಸಕಿ ಹಾಕಿಕೊಂಡು ಬಿಡುವುದು. -ಇದನ್ನೇ ಕಾಂಗ್ರೆಸ್ ಪಕ್ಷ ಮಾಡುತ್ತ ಬಂದಿರುವುದು.

* * *

ಈ ಬಾರಿ ಹೀಗೆ ಅವರು ಬಾಗಿಲು ಬಡಿದಾಗ ದುರದೃಷ್ಟವಶಾತ್ ನೀವು ಬಾಗಿಲು ತೆರೆದಿರಿ. ಈ ದೇಶದ ದುರದೃಷ್ಟದ ಮಾತನಾಡುವುದಕ್ಕಿಂತ ಮುಂಚೆ ನಿಮ್ಮ ದುರದೃಷ್ಟದ ಮಾತನ್ನೇ ಹೇಳುತ್ತಿದ್ದೇನೆ ನಾನು. ಪಾಪ! ಒಬ್ಬ ಸುಂದರ ತರುಣನನ್ನು ಪ್ರೀತಿಸಿ ಲಗ್ನವಾಗಿ ಅತ್ತೆಯ ಮನೆಗೆ ಬಂದಿರಿ ನೀವು. ಇಬ್ಬರು ಮುದ್ದು ಮಕ್ಕಳ ತಾಯಿಯಾದಿರಿ. ಈಗ ಅಜ್ಜಿ ಕೂಡ. ಹೀಗೆ ನೀವು ಪ್ರೀತಿಸಿದ ಹುಡುಗ ಒಂದು ದೇಶದ ಪ್ರಧಾನಿಯ ಮಗನೂ ಆಗಿದ್ದುದು ಆಕಸ್ಮಿಕವಷ್ಟೆ. ಹೀಗೆ ನೀವು ಪ್ರೀತಿಸಿದ್ದು ಹುಡುಗನನ್ನು. ಈ ಜಗತ್ತಿನ ಯಾವ ಹುಡುಗಿ ಬೇಕಾದರೂ ಯಾವ ಹುಡುಗನನ್ನಾದರೂ ಪ್ರೀತಿಸಬಹುದು, ಮದುವೆಯಾಗಬಹುದು. ಆದರೆ ಅದನ್ನೇ ನೀವು ಮಾಡಿದ ತಪ್ಪು ಕೂಡ ಎಂಬಂತೆ ನಿಮ್ಮನ್ನು ದೇಶದ ಪ್ರಧಾನಿಯನ್ನು ಮಾಡುತ್ತೇವೆ ಎಂದು ಹೊರಟ ಈ ವೀರ ದೇಶಪ್ರೇಮಿಗಳ ಕುರಿತು ನೀವು ಕೊಂಚ ಎಚ್ಚರಿಕೆಯಿಂದ ಇರಬೇಕು ಎಂದು ನನ್ನ ವಿನಂತಿ.

ಒಬ್ಬ ಹುಡುಗನನ್ನು ಪ್ರೀತಿಸುವುದು, ಒಂದು ದೇಶದ ಪ್ರಜೆ ಎಂದು ಸಂವಿಧಾನಾತ್ಮಕವಾಗಿ ಕರೆಸಿಕೊಂಡರೂ ಆ ದೇಶವನ್ನು, ಅಲ್ಲೇ ಹುಟ್ಟಿ ಬೆಳೆದವನ ತರಹವೇ ಪ್ರೀತಿಸಲು ಸಾಧ್ಯ ಎಂದು ಭಾವಿಸುವುದು ಒಂದೇ ಆಗಲಾರವು. ಒಂದು ದೇಶದ ಕುರಿತಾದ ಭಾವನೆ, ಸ್ಪಂದನ, ಹೃದಯದ ಮಿಡಿತವಾಗಬೇಕೇ ಹೊರತು ಮಿದುಳಿನಲ್ಲಿ ಶೇಖರಿಸಿದ ಚರಿತ್ರೆ, ಭೂಗೋಳದ ವಿವರಗಳಷ್ಟೇ ಆದರೆ ಸಾಲದು. ಒಂದು ದೇಶವೆಂದರೆ ಅಂಕಿ ಅಂಶಗಳಲ್ಲ; ಹಾಳೆಗಳಿಗೆ ಇಳಿಸಿಬಿಡಬಹುದಾದ ಚರ್ಚೆ, ವಿವಾದಗಳಲ್ಲ. ಒಂದು ದೇಶವೆಂದರೆ ನಮ್ಮ ನರಮಂಡಲಗಳಲ್ಲಿ, ನಮ್ಮ ರಕ್ತದ ಧಮನಿಗಳಲ್ಲಿ ಹರಿಯುವ. – ಒಂದು ಕ್ಷಣ ಬೆಚ್ಚಿಸಿ, ಮತ್ತೊಂದು ಕ್ಷಣ ಬೆಳಗಿಸಿ, ಈಗ ನಡುಗಿಸಿ, ಮರುಗಳಿಗೆ ರೋಮಾಂಚನಗೊಳಿಸುವ – ಒಂದು ನಿರಂತರ ಅನುಭವ; ಈಗ ನಿಮ್ಮ ನಾಡನ್ನೇ – ಅಂದರೆ ನೀವು ಹುಟ್ಟಿಬೆಳೆದ ಇಟಲಿ ದೇಶ – ನೆನೆಸಿಕೊಂಡಾಗ ನಾನು ಹೇಳಲು ಯತ್ನಿಸುತ್ತಿರುವ ಬಗೆಯ ಅನುಭವ ನಿಮಗೆ ಆಗುವುದಿಲ್ಲವೆ? ನಿಮ್ಮ ಮಾತುಗಳು ಸಹಜವಾಗುವುದಿಲ್ಲವೆ? ನಿಮ್ಮ ಮೆದುಳು ಕೊನೆಯ ಸಾಲಿಗೆ ನೂಕಲ್ಪಟ್ಟು ನಿಮ್ಮ ಮನಸ್ಸು-ಹೃದಯಗಳು ಮಾತ್ರ ಸಂಕೀರ್ಣವಾಗಿ, ವಿಚಿತ್ರವಾಗಿ, ನಾಟಕೀಯವಾಗಿ ನಿಮ್ಮ ಚಲನವಲನ, ಮಾತುಕತೆ, ಮೌನಗಳಲ್ಲಿ ಪ್ರಕಟವಾಗುವುದಿಲ್ಲವೆ?

ಈ ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ನೀವು ಸ್ವೀಕರಿಸಿದಂದಿನಿಂದ ನೀವು ಗುಪ್ತವಾಗಿ, ಏಕಾಕಿಯಾಗಿ ಎಷ್ಟು ಹಿಂಸೆಪಟ್ಟುಕೊಂಡಿದ್ದೀರಿ ಎಂದು ಊಹಿಸಬಲ್ಲೆ. ನಿಮ್ಮ ಪತ್ರಿಕಾ ಸಂದರ್ಶನಗಳು ಸರಳವೂ ಅಲ್ಲ, ಸಹಜವೂ ಅಲ್ಲ. ನಿಮ್ಮ ಭಾಷಣಗಳಲ್ಲಿ ಸ್ವಚ್ಛಂದತೆ ಇಲ್ಲ, ಸಾಮಾನ್ಯ ಜನಗಳ ಜೊತೆ ನಿಮ್ಮ ಮಾತುಕತೆಯಲ್ಲಿ ನೈಜತೆಯಿಲ್ಲ. ಮೊನ್ನೆ ಬಿ.ಜೆ.ಪಿ ಸರ್ಕಾರ ಉರುಳಿದಾಗ ಇದ್ದಕ್ಕಿದ್ದ ಹಾಗೆ ಈಗಾಗಲೇ ನಾನು ಪ್ರಧಾನಿಯಾಗಿಬಿಟ್ಟೆ ಎಂದು ಭ್ರಮಿಸಿ ನೀವು ನಡೆದುಕೊಂಡ ರೀತಿ ಕಂಡು, ಮತ್ತು ಮಾಧ್ಯಮಗಳಲ್ಲಿ ಆಡಿದ ಮಾತುಗಳನ್ನು ಕೇಳಿ ನಾನಂತೂ ತೀರ ದಿಗಿಲಾಗಿಬಿಟ್ಟಿದ್ದೆ. ಎಂಟೇ ದಿವಸದ ಅಂತರದಲ್ಲಿ ಒಂದು ಮುಗ್ಧ ಹೆಣ್ಣುಮಗಳು ಇಷ್ಟು ಅಹಂಕಾರದ, ಠೇಂಕಾರದ ಮಾತುಗಳನ್ನು ಆಡುವಂತಾಯಿತೆ? ಒಂದು ಹುಡುಗನನ್ನು ಪ್ರೀತಿಸಿ ಬಂದ ಹೆಣ್ಣೇ ಇದು? ಒಬ್ಬ ತಾಯಿಯೆ? ಅಥವಾ ಹುಟ್ಟಾ ದುರಹಂಕಾರದ, ಅಧಿಕಾರದ ಮದದಲ್ಲಿ ಕೊಬ್ಬಿದ ರಾಜಕಾರಣಿ ಅಷ್ಟೆಯೇ? ಎಂದು. ಹೀಗೆ ನಡುಗಿದವರಲ್ಲಿ ಈ ದೇಶದಲ್ಲಿ ಇನ್ನೂ ಹಲವರಿದ್ದರು ಎಂದು ನಾನು ನಿಮಗೆ ಹೇಳಲೇಬೇಕಾಗಿಲ್ಲ. 'ನನ್ನಲ್ಲಿ ನಂಬಿಕೆ ಇಲ್ಲದಿರುವವರು ತಮ್ಮ ದಾರಿ ಹಿಡಿದು ನಡೆಯಲು ಸ್ವತಂತ್ರರಿದ್ದೀರಿ' ಎಂಬ ಮಾತು ನಿಮ್ಮ ಘನತೆಗೆ

ತಕ್ಕದ್ದಲ್ಲ ಬಿಡಿ. ಅದಕ್ಕಿಂತ ಹೆಚ್ಚಿಗೆ ಈ ದೇಶಕ್ಕೆ ಒದಗಬಹುದಾದ ಭವಿಷ್ಯದ ಕುರಿತಾದ ಆತಂಕದ ಸಂಗತಿ ಅದು.

* * *

ನಾನು ಹೀಗೆ ಮಾತನಾಡಿದ ಕೂಡಲೆ ನಾನೊಬ್ಬ ಶರದ್ ಪವಾರ್ ಪರನಾದ ವ್ಯಕ್ತಿ ಅಥವಾ ಒಬ್ಬ ಕೋಮುವಾದಿ, ಸಂಘ ಪರಿವಾರದ ಸದಸ್ಯ ಎಂದು ನಿಮಗಾಗಲಿ, ನಿಮ್ಮ ಭಕ್ತ ವೃಂದಕ್ಕಾಗಲಿ ಅನ್ನಿಸಿಬಿಡುವುದು ಸಹಜ. ಎಲ್ಲವನ್ನೂ ಸರಳೀಕರಿಸಿ ಮಾತನಾಡುವುದು ತಾನೆ ರಾಜಕಾರಣದ ಮೊದಲ ಪಾಠ.

ನೀವು ನಂಬಿ ಬಿಡಿ, ನಿಮಗೆ ಪತ್ರ ಬರೆಯುತ್ತಿರುವುದೇ ಈ ಸಂಘ ಪರಿವಾರದ, ಈ ಬಿಜೆಪಿಯ ಭಯದಿಂದಾಗಿ. ನೀವು, ನಿಮ್ಮ ಪಕ್ಷ ನಡೆದುಕೊಳ್ಳುತ್ತಿರುವ ರೀತಿಯಿಂದಾಗಿ ಅವರ ದಾರಿ ಸುಗಮ ಮಾಡುತ್ತಿಲ್ಲವೆ ಎಂಬ ಆತಂಕದಿಂದಾಗಿ.

ಈ ಸಂದರ್ಭದಲ್ಲಿ ಬಿ.ಜೆ.ಪಿ ಅಲ್ಲದ ಮಿಕ್ಕೆಲ್ಲ ಪಕ್ಷಗಳೂ ಒಂದಾಗಬೇಕಾದ ಅವಶ್ಯಕತೆ ಇದೆ. ಈ ದೇಶದ ಬಡತನ, ವರ್ಗ ಹೋರಾಟ, ವರ್ಣ, ಜಾತಿ, ಕೋಮು ಕಲಹಗಳು ಇವು ನಮ್ಮ ಕೇಂದ್ರ ಗಮನವಾಗಬೇಕು. ಇವುಗಳನ್ನು ಎದುರಿಸುವ ಸ್ಥೈರ್ಯ, ಧೀಮಂತಿಕೆ, ಕಲ್ಪನಾಶಕ್ತಿ ಇರುವಂಥ ಜನಗಳು ನಮಗೆ ಬೇಕು. ಆದರೆ ಕಾಂಗ್ರೆಸಿಗೆ ಬೇಕಿರುವುದು ಅಧಿಕಾರ; ಪ್ರಶ್ನಾತೀತ ಅಧಿಕಾರ; ಹೆಚ್ಚೂ ಕಡಿಮೆ ಸರ್ವಾಧಿಕಾರ. ಕಾಂಗ್ರೆಸ್ ಪಕ್ಷಕ್ಕೆ ಒಂದು ಜೀವಂತ ಭಾಷೆಯೇ ಇಲ್ಲ. ಅವರಾಡುವ ಭಾಷೆ ಕಮರು ತೇಗಿನಂಥ ಹೊಲಸಿನದು. ಹಳಸಲು.

ಜನಗಳ ಜೊತೆ ಏನೂ ಸಂಪರ್ಕವಿಲ್ಲದವರು ಮಾತ್ರ, ಶೂನ್ಯದಲ್ಲಿ ಬದುಕುವವರು ಮಾತ್ರ ಹೀಗೆ ನಡೆದುಕೊಳ್ಳಬಲ್ಲರು. ಉದಾಹರಣೆಗೆ- ನೆಹರೂ ಕಾಲದ ಸಮಾಜವಾದದ ಮಾತೆಲ್ಲಿ, ನಿಮ್ಮ ಯುಗದ ಮನಮೋಹನ ಸಿಂಗರ (ಮನಘಾತಕ) ಗ್ಲೋಬಲೈಸೇಷನ್ ಎಲ್ಲಿ? ನಿಮಗೂ, ಅಂದರೆ ನಿಮ್ಮ ಪಕ್ಷಕ್ಕೂ, ಬಿ.ಜೆ.ಪಿಗೂ ವ್ಯತ್ಯಾಸಗಳೆಲ್ಲಿ? ಉದಾರೀಕರಣವೇ ನಮಗೆ ಉರುಲಾಗಿ ಪರಿಣಮಿಸುವುದರಲ್ಲಿ ನಿಮ್ಮ ಪಾತ್ರವೂ ಇದೆ.

ಆದರೂ ಕೂಡ ಬಿ.ಜೆ.ಪಿ. ಕಾಂಗ್ರೆಸ್ ಮಧ್ಯೆ ಆಯ್ಕೆ ಇದ್ದರೆ ನಾವು ಕಾಂಗ್ರೆಸ್ ಆಯ್ದುಕೊಳ್ಳಬೇಕೆಂದು ನಿರ್ಧರಿಸುತ್ತಿರುವ ಸಮಯದಲ್ಲೇ ನಿಮ್ಮನ್ನು ನಮ್ಮ ಪ್ರಧಾನಿಯಾಗಿ ಮಾಡುತ್ತೇವೆಂದು ಕಾಂಗ್ರೆಸ್ ಹೇಳುತ್ತಿರುವುದು ನೋಡಿ ನಮಗೆ ವೇದನೆಯೂ, ಒಂದು ಬಗೆಯ ಅವಮಾನವೂ ಆಗುತ್ತಿದೆ. ಜನರ ನಡುವಿನಿಂದ ಬಂದವರು ಯಾರೂ ಅಲ್ಲಿ ಇಲ್ಲವೆ?

ಸಂವಿಧಾನಾತ್ಮಕವಾಗಿ ನೀವು ಅರ್ಹರು. ಆದರೆ ಬದುಕು, ಒಂದು ರಾಷ್ಟ್ರ ನಿರ್ಮಾಣ, ಕೇವಲ ಸಂವಿಧಾನಾತ್ಮಕವಾಗಿ, ಕಾನೂನು ಅನ್ವಯ ಸರಿಯಾಗಿದ್ದುಬಿಟ್ಟರೆ ಮಾತ್ರ ಸಾಧ್ಯವಿಲ್ಲ. ಅದಕ್ಕೆ ಜಾಣತನ ಬೇಕು; ರಾಷ್ಟ್ರದ ಬಗ್ಗೆ ಕಲ್ಪನೆ ಇರಬೇಕು. ಒಂದು ವಿಷನ್ ಇರಬೇಕು. ಸತ್ಯವಾಗಿ ಹೇಳುತ್ತೇನೆ. ಇದ್ಯಾವುದೂ ನಿಮ್ಮಲ್ಲಿಲ್ಲ. ನಿಮ್ಮಲ್ಲಿ ಇರಲೂಬೇಕಾಗಿಲ್ಲ. ಪಾಪ! ನೀವು ಈ ದೇಶಕ್ಕೆ ಬಾಡಿ ಪ್ರಧಾನಿಯಾಗಿ ಬಂದದ್ದಲ್ಲ. ಒಬ್ಬ ಹೆಂಡತಿಯಾಗಿ ಮಾತ್ರ. ಕಾಂಗ್ರೆಸಿಗರಿಗೆ ಇದು ಅರ್ಥವಾಗುವುದಿಲ್ಲ. ನೀವಾದರೂ ಅವರಿಗೆ ಅರ್ಥವಾಗುವ ಹಾಗೆ ಹೇಳಬೇಕು.

ಪತ್ರ ಮುಗಿಸುವುದಕ್ಕೆ ಮುಂಚೆ ಮತ್ತೆ ಹೇಳುತ್ತೇನೆ. ಈ ದೇಶ ಸದ್ಯ ಒಂದು ದೊಡ್ಡ ಗಂಡಾಂತರದಲ್ಲಿದೆ. ಕೋಮುವಾದಿಗಳ ಕಪಿಮುಷ್ಟಿಗೆ, ಎಂದೂ ಮುಕ್ತಿ ದೊರಕದ ಹಾಗೆ, ಸಿಲುಕಿಕೊಂಡುಬಿಡಬಹುದಾದ ಗಂಡಾಂತರ. ಪ್ರಜಾಪ್ರಭುತ್ವದ ಎಲ್ಲ ಕನಸುಗಳು ನುಚ್ಚುನೂರಾಗಿಬಿಡಬಹುದಾದ ಗಂಡಾಂತರ. ಇದನ್ನು ತಪ್ಪಿಸುವುದಕ್ಕೆ ನಾವೆಲ್ಲ -ನೀವು, ನಾವು- ಎಲ್ಲರೂ ಯತ್ನಿಸಬೇಕು. ಎಲ್ಲ ತರಹದ ಸಣ್ಣತನ, ಸಣ್ಣ ಯೋಚನೆಗಳು ಬಿಟ್ಟು ಈಗ ನಿಮ್ಮ ಮನೆಯಲ್ಲಿ ಕಣ್ಣು ಬಿಡುತ್ತಿರುವ ಮೊಮ್ಮಗನ ಭವಿಷ್ಯದ ಕುರಿತು ಯೋಚನೆ ಮಾಡೋಣ.

ಎಂಥ ದೇಶದ ಪ್ರಜೆಯನ್ನಾಗಿ ಮಾಡುತ್ತೇವೆ ಆ ಮಗನನ್ನು ನಾವು? ಏನು ಕನಸು ನೀಡುತ್ತೇವೆ? ಏನು ಸಂಭ್ರಮ ಒದಗಿಸುತ್ತೇವೆ? ಪ್ರಧಾನಿಯ ಕನಸು ಕೈಬಿಟ್ಟು ಈ ಬಗ್ಗೆ ಚಿಂತಿಸಿ. ದಯವಿಟ್ಟು.

ನಿಮ್ಮ ವಿಶ್ವಾಸಿ,

ಜಿ. ಕೆ. ಗೋವಿಂದ ರಾವ್

ನಂ. 161, 7ನೇ ಮಹಡಿ. 36ನೇ ಕ್ರಾಸ್. 7ನೇ ಬ್ಲಾಕ್
ಜಯನಗರ. ಬೆಂಗಳೂರು - 560 082

ಸಾರ್ಥಕತೆ



ಗೊಬ್ಬರವಾಗಿ
ಮಣ್ಣ
ಕಣ ಕಣ
ಜೀವಸತ್ವ
ಗುಣ
ದ್ವಿಗುಣಿಸುವ
ನನ್ನ
ತಿರಸ್ಕೃತ
ಕವನ
ಅಭಿನವ
ಪಲ್ಲವಕ್ಕೆ
ನಾಂದಿಯಾಗುವ
ಕ್ಷಣ
ಅಪ್ಯಾಯಮಾನ !!

- ಮ. ಶ್ರೀ. ಮುರಳಿಕೃಷ್ಣ

ಹಳ್ಳಿಗೊಂದು ಸ್ಮಶಾನ

ಕರ್ನಾಟಕದ ಕಂದಾಯ ಸಚಿವರು ಅನೇಕ ರೀತಿಗಳಲ್ಲಿ ದಾಖಲೆ ಸ್ಥಾಪಿಸಿರುವವರು. ಕೆಲವನ್ನು ಕಾಲಾನುಕ್ರಮದಲ್ಲಿ ಅವರೇ ನಿರಾಕರಿಸುತ್ತಾರೆಂಬುದು ಬೇರೆ ಮಾತು. ಇತ್ತೀಚಿಗಿನ ಅವರ ಆಶ್ವಾಸನೆ ಎಷ್ಟೋ ಮಂದಿಗೆ ಹಾಯೆನಿಸುವಂಥದೆಂದು ಸ್ವತಃ ಸಚಿವರೇ ಬಗೆದಿದ್ದಾರೆ. ರಾಜ್ಯದ ಪ್ರತಿಯೊಂದು ಹಳ್ಳಿಗೂ ಒಂದೊಂದು ಸ್ಮಶಾನವನ್ನು ನಿರ್ಮಿಸಿಕೊಡುವ ಯೋಜನೆಯೊಂದನ್ನು ಕೈಗೆತ್ತಿಕೊಳ್ಳುವ ಉತ್ಸಾಹ ತೋರಿ ತೀರ್ಮಾನ ಪ್ರಕಟಿಸಿದ್ದಾರೆ. ಈವರೆಗೆ ಸ್ಮಶಾನವಿಲ್ಲದೆ, ಸಾಯುವಾಗ ಮುಜುಗರಪಟ್ಟುಕೊಳ್ಳುತ್ತಿದ್ದವರು ಇನ್ನುಮೇಲೆ ನೆಮ್ಮದಿಯಿಂದ ಕೊನೆಯುಸಿರು ಎಳೆಯಬಹುದು.

ನಮ್ಮ ಬಹುತೇಕ ಹಳ್ಳಿಗಳಿಗೆ ಪ್ರತ್ಯೇಕವಾಗಿ ಸ್ಮಶಾನಗಳು ಬೇಕಿಲ್ಲವೆನ್ನುವುದು ಕುಹಕದ ಮಾತಲ್ಲ. ಯಾವ ಅಭಿವೃದ್ಧಿ ಕಾರ್ಯಗಳನ್ನೂ ಹಮ್ಮಿಕೊಳ್ಳದೆ ಹಳ್ಳಿಗಳು ಸೊರಗಿ ನಿಂತಿರುವಾಗ ಪೊಳ್ಳು ಆಶ್ವಾಸನೆಗಳ ಭೂರಿ ಸಂತರ್ಪಣೆ ಮಾಡಿಸುವುದು ನಮ್ಮ ಮಂತ್ರಿಗಳ ಸಂಪ್ರದಾಯ. ಈರುಳ್ಳಿ, ಕಬ್ಬು, ಮೆಣಸಿನಕಾಯಿ, ನವಿಲುಕೋಸು ಇತ್ಯಾದಿಗಳನ್ನು ಬೆಳೆದ ನೂರಾರು ರೈತರು ಹತ್ತಿ ಬೆಳೆಯಲು ಹೋಗಿ ಜೀವಕ್ಕೆ ಬತ್ತಿ ಇಟ್ಟುಕೊಂಡವರ ಸಾಲಿನಲ್ಲಿ ಈಗಾಗಲೆ ನಿಂತಿದ್ದಾರೆ. ಅದು ಸಾಲದಾಗ ಪೊಲೀಸರನ್ನು ನುಗ್ಗಿಸಿ ರೈತರನ್ನು ಹೊಡೆಸುವ ದೊಡ್ಡ ಸಂಪ್ರದಾಯವೂ ಇದೆ. ಹೀಗಾಗಿ ಇಡೀ ಹಳ್ಳಿಗಳೇ ಸ್ಮಶಾನಸದೃಶವಾಗಿರುವಾಗ ಇನ್ನು ಬೇರೆ ಸ್ಮಶಾನಗಳ ಅವಶ್ಯಕತೆ ಎಲ್ಲಿಯದು? ಆದರೂ ಎಲ್ಲ ಜಾತಿಯವರೂ ಒಂದೇ ಕಡೆ ಮಣ್ಣಾಗುವ ಸಾಧ್ಯತೆಯನ್ನು ಸಚಿವರು ಕಲ್ಪಿಸಿಕೊಡಲು ಹೊರಟಿದ್ದಾರೆ. ಅವರು ನಿರ್ಗಮಿಸುವ ಮೊದಲೇ ಈ ಕಾರ್ಯ ನೆರವೇರುತ್ತದೇನೋ ಕಾದು ನೋಡಬೇಕಾಗಿದೆ.

ಈ ಸಂದರ್ಭದಲ್ಲಿ ಪಶ್ಚಿಮ ಬಂಗಾಳದ ಶಾಂತಿನಿಕೇತನದಲ್ಲಿ ಜರುಗಿದ ಪ್ರಸಂಗವೊಂದು ನೆನಪಿಗೆ ಬಾರದಿರದು. ಟಾಗೋರರು ಸ್ಥಾಪಿಸಿದ ಶಾಲೆ ಅದು. ಈಗ ವಿಶ್ವಭಾರತಿ ವಿಶ್ವವಿದ್ಯಾನಿಲಯ. 70ರ ದಶಕದಲ್ಲಿ ಒಮ್ಮೆ ನಡೆದದ್ದಿದು: ಅಲ್ಲಿಯ ವೃಕ್ಷರಾಶಿಯ ನೆರಳಿನಲ್ಲಿ ಒಂದು ಮಧ್ಯಾಹ್ನ ಶಾಂತಿನಿಕೇತನದ ಉಪಕುಲಪತಿಗಳು ತತ್ತ್ವಶಾಸ್ತ್ರ ಪ್ರಾಧ್ಯಾಪಕ ದೇವಿಪ್ರಸಾದ್ ಚಟ್ಟೋಪಾಧ್ಯಾಯರೊಡನೆ ಏನನ್ನೋ ಮಾತನಾಡುತ್ತಾ ನಿಂತಿದ್ದರು. ಬಿಳಿಚರ್ಮದ ಒಬ್ಬ ವಿದೇಶಿ ವಿದ್ವಾಂಸ ಅಲ್ಲಿಲ್ಲಾ ಅಲೆದು ಸುಸ್ತಾಗಿದ್ದವನು ಇವರ ಬಳಿ ಬಂದು ಕೇಳಿದ, ರವೀಂದ್ರರ ಸಮಾಧಿ ಎಲ್ಲಿ, ಎಂದು. ಆತನೆದುರು ನಿಂತಿದ್ದವರು ಸ್ವತಃ ಉಪಕುಲಪತಿಗಳೆಂದು ಆತನಿಗೆ ತಿಳಿಯದು. ಉಪಕುಲಪತಿಗಳು ಆ ವಿದೇಶಿಗೆ ಮಾರ್ಗದರ್ಶನ ಮಾಡುವ ಮೊದಲೇ ದೇವಿಪ್ರಸಾದರು ಹೇಳಿದರು : "ಅಯ್ಯೋ, ರವೀಂದ್ರರ ಸಮಾಧಿಯನ್ನು ಹುಡುಕುತ್ತಿದ್ದೀರಾ? ಅದೇನೂ ಅಗತ್ಯವಿಲ್ಲ, ಬಿಡಿ. ನಾವು, ನೀವು ನಿಂತಿರುವ ಈ ಶಾಂತಿನಿಕೇತನವು ಇಡಿಯಾಗಿ ಅವರ ಸಮಾಧಿ ಎಂಬುದು ನಿಮಗೆ ತಿಳಿಯದೆ? ಅವರ ಎಲ್ಲ ಆಶಯಗಳನ್ನೂ ಇಲ್ಲಿ ಸಮಾಧಿ ಮಾಡಿ ಎಷ್ಟೋ ಕಾಲವಾಯಿತು."

ವಿದೇಶಿ ವಿದ್ವಾಂಸನು ನಾಚುತ್ತಿದ್ದಂತೆ ಕಂಡ. ಆದರೆ ಶ್ರೀಮದ್ಗಾಂಭೀರ್ಯದ ಉಪಕುಲಪತಿಗಳ ರಕ್ತದೊತ್ತಡ ಹಠಾತ್ತನೆ ದ್ವಿಗುಣಗೊಂಡಿತ್ತು! ಹಳ್ಳಿಗಳನ್ನೇ ಸ್ಮಶಾನವನ್ನಾಗಿಸುವ ತಂತ್ರವನ್ನು ಸಿದ್ಧಿಸಿಕೊಂಡಿರುವ ನಮ್ಮ ಸರ್ಕಾರಗಳು ಈಗ ಹಳ್ಳಿಗೊಂದು ಸ್ಮಶಾನ ನಿರ್ಮಿಸಿಕೊಡುತ್ತದಂತೆ. ವೈಕುಂಠ ಮತ್ತು ಕೈಲಾಸ ಯಾತ್ರಿಗಳಿಗೆ ಶುಭವಾಗಲಿ.

ಬಿಕ್ಕಳಿಕೆ



ಸಂತೆಯ ದಿನ [illegible] ಮಾದೇವನ ಮುಖ ಕಂಡು ಗಿರಿಜೆಗೆ [illegible] ಹಾಕತೊಡಗಿದಳು. [illegible] ಗಿರಿಜೆಗೆ [illegible] ಅವಕಾಶ ನೀಡದೆ ಆಕೆಯತ್ತ ಧಾವಿಸಿದ. ಒರಟಾಗಿ ಆಕೆಯ ಭುಜ ಹಿಡಿದು [illegible]. ಗಿರಿಜೆಗೆ ಭಯದಿಂದ ಉಸಿರುಗಟ್ಟಿದಂತಾಯಿತು. [illegible] ಅಸಹ್ಯವೆನಿಸುವಷ್ಟು [illegible]ರವಾದ ಮುಖ. ಅಂಗಿಯ ಮೇಲೆ ಇನ್ನೂ ಹಸಿಹಸಿ ರಕ್ತದ [illegible] ! ಗಿರಿಜೆ ಅತನಿಂದ [illegible] ಬಿಡಿಸಿಕೊಂಡು ಓಡತೊಡಗಿದಳು. [illegible] ಆಕೆಯನ್ನು ಹಿಂಬಾಲಿಸಿ [illegible]ತೊಡಗಿದಾಗ ಆಕೆ ಒಂದು ಕಡೆ ಮುಗ್ಗರಿಸಿ ಕೆಳಗೆ ಬಿದ್ದಳು. ಮಾದೇವ ಆಕೆಯ ಕಾಲುಗಳಿಗೆ ಹಗ್ಗ ಬಿಗಿದು ದರದರ ಎಳೆದೊಯ್ಯತೊಡಗಿದ. ಗಿರಿಜೆ ಪ್ರತಿಭಟಿಸುತ್ತ, ನೋವಿನಿಂದ, ಹತಾಶೆಯಿಂದ ಕಿರಿಚಾಡತೊಡಗಿದಳು. ವಿಚಿತ್ರವೆಂದರೆ, ಸಂತೆಗೆ ಬಂದಿದ್ದ ಜನರು ತಮಗೆ ಏನೂ ಕಾಣಿಸುತ್ತಿಲ್ಲವೆಂಬಂತೆ ತಮ್ಮಷ್ಟಕ್ಕೆ ನಡೆದು ಹೋಗುತ್ತಿದ್ದರು ! ಒಂದು ಕಡೆ, ಗಿರಿಜೆಯ ತಲೆ ಕಲ್ಲಿಗೆ ಬಡಿಯಿತು. ಅಸಾಧ್ಯ ನೋವಿನಿಂದ ನರಳುತ್ತ ಎಚ್ಚರಾದಳು.

ಅಬ್ಬಾ ಕೆಟ್ಟ ಕನಸು ! ಗಾಬರಿಯಿಂದ ಎದೆ ಜೋರಾಗಿ ಬಡಿದುಕೊಳ್ಳುತ್ತಿತ್ತು. ಮೈ ಬೆವರಿನಿಂದ ಒದ್ದೆಯಾಗಿತ್ತು. ನಡುಕ ನಿಲ್ಲಲಿಲ್ಲ. ಗಂಟಲು ಒಣಗಿತ್ತು. ಗೋಡೆಯ ಬಳಿ ಇರಿಸಿದ್ದ ಚೆಂಬಿನಿಂದ ಗಟಗಟ ನೀರು ಕುಡಿದಳು. ಬೀದಿಯ ನಾಯಿಯೊಂದು ನಿದ್ದೆಯಲ್ಲಿ ಬೆಚ್ಚಿಬಿದ್ದಂತೆ ಆಗಾಗ ಸಣ್ಣಗೆ ಬೊಗಳುತ್ತಿತ್ತು. ಹಜಾರದಾಚೆಯ ಕೋಣೆಯಿಂದ ಅಪ್ಪನ ಸಣ್ಣ ಗೊರಕೆಯ ಸದ್ದು.

ಅರ್ಧರಾತ್ರಿ ದಾಟಿರಬೇಕು. ಕನಸಿನಲ್ಲಿ ಕಲ್ಲಿಗೆ ಬಡಿದ ತಲೆ ನಿಜವಾಗಿ ನೋಯುತ್ತಿದೆ ಎನ್ನಿಸಿತು. ಮತ್ತೆ ಕಾಲುಚಾಚಿ ಮಲಗಿ ತಲೆಯನ್ನು ಮುಟ್ಟಿ ನೋಡಿಕೊಂಡಳು. ಮತ್ತೊಂದು ಕಡೆ ಹೊರಳಿದಳು. ಕಣ್ಣಿಗೆ ನಿದ್ದೆ ಹತ್ತಲಿಲ್ಲ. ಹೊಕ್ಕಳ ಕೆಳಗೆ ಚುಳ್ಳೆಂದಂತಾಯಿತು. ಗಾಳಿಯ ಸುಳಿವಿಲ್ಲವೆ ಉಸಿರು ಕಟ್ಟಿದಂತಾಯಿತು. ಅಂಗಾತ ಮಲಗಿದಳು. ಬಿಕ್ಕಳಿಕೆ ಬರಬಹುದೆನ್ನಿಸಿ ಭಯವಾಯಿತು. ಅದೇನೂ ಸಾಧಾರಣ ಬಿಕ್ಕಳಿಕೆಯಲ್ಲ. ಕೆಳಹೊಟ್ಟೆಯಲ್ಲಿ ಹುಟ್ಟಿ, ಎದೆಯನ್ನು ಒಮ್ಮೆ ಅದುಮಿ ಹಿಡಿದು, ಹೊರಕ್ಕೆ ಧಾವಿಸುವಾಗ ಇಡೀ ಮೈಯನ್ನು ಬಲವಾಗಿ ಕುಲುಕಾಡಿಸುವಂಥದ್ದು. ಅಲೆಗಳು ಉಕ್ಕಿ ಉಕ್ಕಿ ಬರುವಂತೆ ಮತ್ತೆ ಮತ್ತೆ ಬಂದು ಗಿರಿಜೆಯನ್ನು ಹಿಂಡಿ ಹಿಪ್ಪೆ ಮಾಡುವಂಥ ಬಿಕ್ಕಳಿಕೆ. ನರಗಳೆಲ್ಲ ಬಿಗಿದುಕೊಂಡಂತಾಗಿ, ಹೊಟ್ಟೆಯಲ್ಲಿರುವ ಕರುಳೋ ಮತ್ತೊಂದೋ ಬಾಯಿಗೆ ಬಂದಿತೆನ್ನುವಂತೆ. ಯಾವ ಮಗ್ಗುಲಿಗೆ ಹೊರಳಿದರೂ, ಮುಖ ಕೆಳಗೆ ಹಾಕಿ ಭೂಮಿಗೆ ಒತ್ತಿದರೂ ಬಿಡದೆ ಕಾಡಿಸುವ ಬಿಕ್ಕಳಿಕೆ. ಒಂದೆರಡು ಗಂಟೆವರೆಗೆ, ಕೆಲವೊಮ್ಮೆ ಇಡೀ ಹಗಲು-ರಾತ್ರಿ ಆಕೆಯನ್ನು ಪೀಡಿಸುತ್ತಿತ್ತು. ಬಿಕ್ಕಳಿಕೆ ನಿಂತಾಗ ಗಿರಿಜೆಯ ರಕ್ತವೆಲ್ಲ ಬಸಿದುಹೋದಂತೆ [illegible]. [illegible] ಹಿಂಡಿ ಹಾಕುತ್ತಿದ್ದ ಆ ಬಿಕ್ಕಳಿಕೆಯ ನಂತರ ಗಿರಿಜೆ ಮೂರು ನಾಲ್ಕು ದಿನ [illegible]. ತಾನು ಏನನ್ನು ಆಲೋಚಿಸುವಾಗ ತನ್ನ ಕೆಳಹೊಟ್ಟೆ ಚುಳ್ಳೆಂದು, ಹೀಗೆ ಬಿಕ್ಕಳಿಕೆ ಪ್ರಾರಂಭವಾಗುತ್ತದೆ ಎಂಬುದನ್ನು ಪತ್ತೆಹಚ್ಚಲು ಗಿರಿಜೆ ಪ್ರಯತ್ನಿಸುತ್ತಿದ್ದಳು.

*　　　　*　　　　*

[illegible] ಅಜ್ಜನಪುರದ ದೊಡ್ಡ ಕುಳ. ಊರಿನ ಅಂಚಿನ ತೋಟದಲ್ಲಿ ಹದಿನಾರು ಕಂಬದ ದೊಡ್ಡ ಮನೆ. ಹೊಲ-ಗದ್ದೆ, [illegible] ಭಾರಿ ಕಾರುಬಾರು. ದೇವರು ದಿಂಡಿರಲ್ಲಿ ಅಪಾರ ಭಕ್ತಿ. ಊರಿನವರ [illegible] ಗಿರಿಜೆ [illegible]. ಊರಿನಲ್ಲಿ ನಾಲ್ಕನೆ ತರಗತಿಯವರೆಗೆ [illegible] ಮದುವೆ ವಯಸ್ಸಿಗೆ ಬಂದ ಗಿರಿಜೆಗೆ [illegible].

[illegible] ಮಾದೇವನೊಂದಿಗೆ ಗಿರಿಜೆಯ ಮದುವೆ ನೆರವೇರಿತು. [illegible]

[illegible]

ದೇವಸ್ಥಾನ ಕಟ್ಟಿಸಿದ್ದರು. ದೇವಸ್ಥಾನದ ಉದ್ಘಾಟನೆಯ ಸಂಬಂಧದಲ್ಲಿ ಊರಿನವರ ಮನಸ್ಸಿನಲ್ಲಿ ಬಿರುಕು ಕಾಣಿಸಿಕೊಂಡಿತು. ಅದೇನೂ ಭಾರತ ದೇಶದ ಹಣೆಬರಹಕ್ಕೆ ಹೊರತಾದ ಘಟನೆಯಲ್ಲ ! ಪರಂಪರೆಯಿಂದ ತಲೆಬಾಗಿಸಿ ದೀನಸ್ಥಿತಿಯಲ್ಲಿ ಬದುಕುತ್ತಿದ್ದ ಹರಿಜನರು ಇತ್ತೀಚೆಗೆ ನಾಲ್ಕಕ್ಷರ ಕಲಿತು, ಮೀಸಲಾತಿಯ ಸೌಲಭ್ಯ ಗಳಿಸಿ, ಸ್ವಲ್ಪ ಮಾತಾಡುವುದನ್ನು ರೂಢಿಸಿಕೊಂಡಿದ್ದರು. ಇದು, ಮೇಲರಿಮೆಯ ಅಮಲಿನಲ್ಲಿ ಮೈಮರೆತಿದ್ದವರಿಗೆ ಸಹನೆಯಾಗಲಿಲ್ಲ. ದೇವರ ಅಗ್ರಪೂಜೆಯಲ್ಲಿ ಹರಿಜನರು ಸಮಪಾಲು ಕೇಳಿದಾಗ ಅಸಹನೆಯ ಕಟ್ಟೆಯೊಡೆದು ಜಾತಿ ಜಗಳಕ್ಕೆ ತಿರುಗಿತು. ಮಾತು ಕಲಿಯುತ್ತಿದ್ದವರ ಸೊಕ್ಕಡಗಿಸಲು, ಈ ಅಪಾಯವನ್ನು ಹತ್ತಿಕ್ಕಲು ಮೇಲ್ಜಾತಿಯವರು ಆರಿಸಿಕೊಂಡದ್ದು ದೌರ್ಜನ್ಯದ ಆಯುಧ. ಎರಡೂ ಕಡೆ ಆಸ್ತಿ-ಪಾಸ್ತಿಗೆ ಹಾನಿಯಾಯಿತಾದರೂ, ಬಲಿಷ್ಠರು ಬದುಕುಳಿಯುತ್ತಾರೆ ಎಂಬಂತೆ, ಮೊದಲೇ ಸಂಚು ಮಾಡಿದ್ದವರ ಕೈ ಮೇಲಾಯಿತು. ಹರಿಜನರ ಕಡೆ ಸಾವು ನೋವುಗಳಾದವು. ಪರಿಸ್ಥಿತಿ ಎಷ್ಟು ಗಂಭೀರವಾಯಿತೆಂದರೆ, ಸುತ್ತಮುತ್ತಲಿನ ಗ್ರಾಮಗಳ ಜನರು ವಿವೇಚನೆ ಮರೆತು ತಮ್ಮ ಜಾತಿಯವರ ದೌರ್ಜನ್ಯವನ್ನು ಸಮರ್ಥಿಸಿಕೊಳ್ಳುವ ಮಟ್ಟಕ್ಕಿಳಿದರು.

ಆಗ ಪತ್ರಿಕೆಗಳಲ್ಲಿ ಪ್ರಕಟವಾದ ವರದಿಯೊಂದು ಮನುಷ್ಯತ್ವವಿರುವ ಯಾರನ್ನೂ ಹಿಡಿದು ಅಲುಕುವಂತಿತ್ತು. ಆ ಊರಿನಲ್ಲಿ ಎಲ್ಲ ಜಾತಿಯ ಮಕ್ಕಳಿಗೂ ಅಕ್ಷರ ಕಲಿಸುತ್ತಿದ್ದ, ಪ್ರಾಥಮಿಕ ಶಾಲೆಯ ಮಾಸ್ತರರಿಗೆ ಊರಿನವರ ಸಂಚು ತಿಳಿದಿರಲಿಲ್ಲ. ಅಂದು, ಕಾಲೇಜು ಕಲಿಯುತ್ತಿದ್ದ ತನ್ನ ಮಗನನ್ನು ಸೈಕಲಿನಲ್ಲಿ ಕುಳ್ಳಿರಿಸಿಕೊಂಡು ಊರ ಕಡೆ ಬರುತ್ತಿದ್ದರು. ಓಣಿಯಲ್ಲಿ ಅಡಗಿ ಕುಳಿತಿದ್ದ ಹಂತಕರ ಗುಂಪು ದೊಣ್ಣೆ ಮಚ್ಚುಗಳಿಂದ ಅವರ ಮೇಲೆ ಹಲ್ಲೆ ಮಾಡಿತು. ಮಾಸ್ತರರ ಬಳಿ ಆಯುಧಗಳಿರಲಿಲ್ಲ. ತನ್ನ ಬಳಿ ಅಕ್ಷರ ಕಲಿತ ಹುಡುಗರೇ ಹೀಗೆ ಮಾಡಬಹುದೆಂಬ ಕಲ್ಪನೆಯೂ ಅವರಿಗಿರಲಿಲ್ಲ. ಏಟು ತಿಂದು ಅರೆಜೀವವಾದರು. ಮಾಸ್ತರರ ಮಗ ಸಹ ರಕ್ತದ ಮಡುವಿನಲ್ಲಿ ಬಿದ್ದಿದ್ದ. ಆಗ ಮಾಸ್ತರರು ಹಂತಕರತ್ತ ಕೈಮುಗಿದು, ತನ್ನ ಮಗನ ಜೀವ ಉಳಿಸುವಂತೆ ಬೇಡಿದರು. ಆದರೂ ಹಂತಕರಿಗೆ ದಯೆ ಬರಲಿಲ್ಲ. ವರದಿಗಾರರು ಆ ಊರಿಗೆ ಹೋಗಿದ್ದಾಗ ಮಾಸ್ತರರು ಹಾಗೂ ಅವರ ಮಗನ ಹೆಣಗಳು ಓಣಿಯಲ್ಲಿ ಬಿದ್ದಿದ್ದುವಂತೆ !

[illegible] ನಂತರ ಪೊಲೀಸರು ದೌರ್ಜನ್ಯಕ್ಕೆ ಒಳಗಾದವರ ರಕ್ಷಣೆಗೆ ಧಾವಿಸಿ ಬಂದರು. ಪತ್ರಿಕೆಗಳು ಈ ಹೇಯ ಕೃತ್ಯವನ್ನು ಖಂಡಿಸಿ ಬರೆದವು. ಪ್ರಗತಿಪರ ಸಂಘ ಸಂಸ್ಥೆಗಳು ದೌರ್ಜನ್ಯಕ್ಕೊಳಗಾದವರ ಪರವಾಗಿ ಸರ್ಕಾರಕ್ಕೆ ಪ್ರತಿಭಟನೆ ಸೂಚಿಸಿ, ಈ ಕೃತ್ಯಕ್ಕೆ ಕಾರಣರಾದವರನ್ನು ಬಂಧಿಸಬೇಕೆಂದು ಒತ್ತಾಯಿಸಿದವು. ಅನಂತರ ಪೊಲೀಸು ಕಾರ್ಯಾಚರಣೆ ಪ್ರಾರಂಭವಾಯಿತು. [illegible]

ದೊಂಬಿಗೆ ಕಾರಣರಾಗಿದ್ದ ಅನೇಕರನ್ನು ಬಂಧಿಸಲಾಯಿತು.

ಮಾಸ್ತರರ ಮತ್ತು ಅವರ ಮಗನ ಹತ್ಯೆಯಲ್ಲಿ ಮಾದೇವ ಪ್ರತ್ಯಕ್ಷ ಭಾಗವಹಿಸಿದ್ದುದು, ಬಂಧಿತರು ನೀಡಿದ ಸುಳಿವಿನಿಂದ ತಿಳಿಯಿತು. ಆದರೆ ಆತ ಪೋಲೀಸರ ಕೈಗೆ ಸಿಕ್ಕಲಿಲ್ಲ.

ಶಿವನಕೊಪ್ಪಲಿನಲ್ಲಿ ನಡೆದ ಘಟನೆಯ ಸುದ್ದಿ ಅಜ್ಜನಪುರಕ್ಕೆ ತಲುಪಿದಾಗ, ಗಿರಿಜೆ ಸೇರಿದಂತೆ ಬಸಪ್ಪನ ಮನೆಯವರಿಗಾದ ಆತಂಕ, ಭಯ ಅಷ್ಟಿಷ್ಟಲ್ಲ. ಗಂಡನೊಂದಿಗೆ ಆಗಲೇ ಐದು ವರ್ಷ ಸಂಸಾರ ಮಾಡಿದ್ದ ಗಿರಿಜೆಗೆ ಮಾದೇವನೊಳಗೆ ಇಂಥ ಹಂತಕನೊಬ್ಬನಿದ್ದುದನ್ನು ಕಲ್ಪಿಸಿಕೊಳ್ಳಲೂ ಆಗಲಿಲ್ಲ. ಬಸಿರ ಸುಖ ಅನುಭವಿಸುತ್ತ ಮೈಮರೆತಿದ್ದ ಆವಳನ್ನು ಕಾಣದ ಕೈಯೊಂದು ಸರಕ್ಕನೆ ಎಳೆದು ಗಿರಗಿರ ತಿರುಗಿಸಿ ದೂರಕ್ಕೆ ಎಸೆದುಬಿಟ್ಟಂತಾಯಿತು. ಅನಿರೀಕ್ಷಿತವಾಗಿ ತನ್ನ ಹೊಟ್ಟೆಗೆ ಏಟು ಬಿದ್ದವಳಂತೆ ತತ್ತರಿಸಿದಳು. ಅದು ಆಕೆಗಾದ ಮೊದಲನೇ ಆಘಾತ.

ಗಲಭೆಯಲ್ಲಿ ಭಾಗವಹಿಸಿ, ಪೋಲೀಸರ ಕೈಗೆ ಸಿಕ್ಕಿಬೀಳದೆ ತಪ್ಪಿಸಿಕೊಂಡಿದ್ದವರನ್ನು ಹುಡುಕುವ ಕಾರ್ಯ ಮುಂದುವರೆದಿತ್ತು. ಮಾದೇವ ಅಜ್ಜನಪುರದಲ್ಲಿ ಹೆಂಡತಿಯ ಮನೆಯಲ್ಲಿ ಅಡಗಿರಬಹುದಾದ ಸಾಧ್ಯತೆಯನ್ನು ಪೋಲೀಸರಿಗೆ ಯಾರೂ ಹೇಳಿಕೊಡಬೇಕಾಗಿರಲಿಲ್ಲ. ಆತನನ್ನು ಹುಡುಕುತ್ತ ಬಂದ ಪೋಲೀಸರು ಬಸಪ್ಪನನ್ನು ಸಾಕಷ್ಟು ಬೆದರಿಸಿದರು. ಆತನನ್ನು ಬಚ್ಚಿಟ್ಟರೆ ಪರಿಣಾಮ ನೆಟ್ಟಗಾಗಲಿಕ್ಕಿಲ್ಲವೆಂದು ಹೆದರಿಸಿದರು.

ಅನಂತರ, ಪೋಲೀಸರು ಆಗಾಗ ತನಿಖೆಗೆಂದು ಅಲ್ಲಿಗೆ ಬರತೊಡಗಿದರು. ಆತ ಬೇರೆಲ್ಲಿಗೆ ಹೋಗಿರಬಹುದು, ಬೇರೆ ಯಾವ

ಪರಂಜ್ಯೋತಿ

ಊರಿನಲ್ಲಿ ನಿಮ್ಮ ನೆಂಟರಿಷ್ಟರಿದ್ದಾರೆ ಎಂಬ ಮಾಹಿತಿ ನೀಡುವಂತೆ ಪೀಡಿಸತೊಡಗಿದರು. ಅವರ ಕಾಟ ತಪ್ಪಿಸಿಕೊಳ್ಳಲು ಬಸಪ್ಪ ಆಗಾಗ ನೋಟು ಬಿಚ್ಚಬೇಕಾಗುತ್ತಿತ್ತು.

ಗಿರಿಜೆಯ ಬಗ್ಗೆ ಎಲ್ಲರೂ ಅನುಕಂಪ ತೋರಿಸುವವರೇ. ಏನೋ ತಪ್ಪಾಗಿರಬಹುದು, ಆತ ಅಂಥ ಕೆಲಸ ಮಾಡಲು ಸಾಧ್ಯವೇ ಇಲ್ಲ ಎಂದು ಗಿರಿಜೆ ಕಳವಳ ಹೆಚ್ಚಿದಾಗ ಮನಸ್ಸಿಗೆ ಸಮಾಧಾನ ಹೇಳಿಕೊಳ್ಳುತ್ತಿದ್ದಳು. ಅವ್ವ ಯಾವಾಗಲೂ ಗಿರಿಜೆಯ ಸಮೀಪ ಸುಳಿದಾಡುತ್ತ ಆಕೆಯ ತಳಮಳವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತಿದ್ದಳು.

ಅಂದು ಇಡೀ ರಾತ್ರಿ ಗಿರಿಜೆ ನಿದ್ದೆ ಮಾಡಲಿಲ್ಲ. ಕೆಟ್ಟ ಕನಸುಗಳು. ಕೆಟ್ಟ ಮುಖದ ಪೋಲೀಸನೊಬ್ಬ ಮನೆಯೊಳಗೆ ಅಡಗಿ ಕುಳಿತಿದ್ದಾನೆ ಎನಿಸುತ್ತಿತ್ತು. ಕತ್ತಲೆಯ ಭಯ. ಕೆಲವು ದಿನಗಳಿಂದ ಅವ್ವ ಆಕೆಯ ಪಕ್ಕದಲ್ಲೇ ಮಲಗುತ್ತಿದ್ದಳು. ಆದರೂ ಎಂಥದೋ ಭಯ. ತನಗೆ ಅಕ್ಷರ ಕಲಿಸಿದ ಗುರುವನ್ನೇ ಕೊಂದ ಮಹಾಪಾತಕಿ ಮಾದೇವ ಎಂಬ ಭಾವನೆಯನ್ನು ಮನಸ್ಸಿನಿಂದ ಅಳಿಸಿಹಾಕಲು ಮಾಡಿದ ಪ್ರಯತ್ನ ಫಲಿಸಲಿಲ್ಲ. ಬದಲು ಹಸಿ ರಕ್ತದ ಕಲೆಗಳ ಸಹಿತ ಮಾದೇವನ ಕ್ರೂರ ಮುಖ ಮತ್ತೆ ಮತ್ತೆ ಕಣ್ಣುಮುಂದೆ ಸುಳಿಯತೊಡಗಿತು. ಮೈ ಬೆವರಿತು. ಸಣ್ಣ ನಡುಕ. ವಾಂತಿ ಉಮ್ಮಳಿಸಿ ಬಂದಿತು. ಅದೇನೂ ಬಸಿರ ವಾಂತಿಯಲ್ಲ. ಹಿಂದಿನಿಂದ ಬಿಕ್ಕಳಿಕೆ. ಅದೊಂದು ಹೊಸ ಅನುಭವ. [illegible] ಮತ್ತೆ ಮತ್ತೆ [illegible] ಕಾಡಿಸಿದ ಬಿಕ್ಕಳಿಕೆ, ಗಿರಿಜೆಯ ಮೂರು ತಿಂಗಳ ಬಸಿರು ಸಿಡಿದು ಚೂರಾಗಿ, ಆಕೆ ರಕ್ತದ ಮಡುವಿನಲ್ಲಿ ಮೂರ್ಛೆ ಹೋದನಂತರ ತಾನಾಗಿ ನಿಂತಿತು. ಆಕೆ ಮತ್ತೆ ತಿರುಗಾಡುವಂತಾಗಲು ನಾಲ್ಕೈದು ತಿಂಗಳೇ ಬೇಕಾಯಿತು. ಮುಂದೆ, ಅರ್ಧ ಸತ್ತಂತೆ ಆಕೆಯ ಲವಲವಿಕೆ ಬತ್ತಿಹೋಯಿತು.

* * *

ಸುಮಾರು ಒಂದು ವರ್ಷದವರೆಗೂ ಮಾದೇವ ಪೋಲೀಸರ ಕಣ್ಣಿಗೆ ಬೀಳಲಿಲ್ಲ. ಪೋಲೀಸರು ವೇಷ ಮರೆಸಿಕೊಂಡು, ಎರಡೂ ಕುಟುಂಬಗಳ ನೆಂಟರಿಷ್ಟರ ಮನೆಗಳಿರುವ ದೂರದ ಊರುಗಳಿಗೆಲ್ಲ ಹೋಗಿ ಬಂದರು. ಮಾದೇವನ ಸಾಹಸದ ಬಗ್ಗೆ ಕೆಲವು ಜಾತಿವಾದಿಗಳಿಗೆ ಒಳಗೊಳಗೇ ಸಂತೋಷ. ಪೋಲೀಸಿನವನೊಬ್ಬ ಮೂರು ನಾಲ್ಕು ದಿನಗಳಿಗೊಮ್ಮೆ ಅಜ್ಜನಪುರಕ್ಕೆ ಬಂದು ಪತ್ತೆ ಕಾರ್ಯ ನಡೆಸುತ್ತಿದ್ದ. ತನಿಖೆಗಾಗಿ ಯಾರು ಬಂದರೂ ಬಸಪ್ಪನ ಮನೆಯಲ್ಲಿ ಊಟ. ತೋಟದಿಂದ ತರಕಾರಿ ಸರಬರಾಜು. ಹೀಗೆ ಪರಿಚಿತನಾದ ಪೋಲೀಸಿನವನೊಬ್ಬ ಅಂದು ಹೊಟ್ಟೆ ಬಿರಿಯುವಂತೆ ಉಂಡು, ತರಕಾರಿ ಚೀಲ ಹೆಗಲಿಗೇರಿಸಿದ ನಂತರ, 'ಆಕಸ್ಮಾತ್ ಮಾದೇವನೇ ಎದುರಿಗೆ ಬಂದರೂ ಆತನತ್ತ ಕಣ್ಣೆತ್ತಿ ನೋಡುವುದಿಲ್ಲ'ವೆಂದು ಶಿವನ ಮೇಲೆ ಆಣೆ ಮಾಡಿದ. ಉಪ್ಪು ತಿಂದ ಮನೆಗೆ ದ್ರೋಹ ಬಗೆಯಬಾರದೆಂಬುದು ಪೋಲೀಸನಿಗೂ ತಿಳಿದಿತ್ತು !

ಮಾದೇವ ಹೀಗೆ ತಲೆ ಮರೆಸಿಕೊಂಡು, ಯಾವ ಊರಿನಲ್ಲಿ, ಎಷ್ಟು ಕಷ್ಟಪಡುತ್ತಿದ್ದಾನೋ ಎಂದು ಒಮ್ಮೊಮ್ಮೆ ಗಿರಿಜೆ ಕೊರಗುತ್ತಿದ್ದಳು. ಇನ್ನು ಪೋಲೀಸರ ಕೈಗೆ ಸಿಕ್ಕಿದರಂತೂ ಚಿತ್ರಹಿಂಸೆ ತಪ್ಪಿದ್ದಲ್ಲ ಎಂದೂ ಚಿಂತಿಸುತ್ತಿದ್ದಳು. ಆಗೆಲ್ಲ ತನ್ನಷ್ಟಕ್ಕೆ ಮೂಲೆ ಹಿಡಿದು ಕಣ್ಣೀರು ಹಾಕುತ್ತಿದ್ದಳು.

ಮತ್ತೆ, ಗಿರಿಜೆಯದೊಂದು ಸರಳ ತರ್ಕ. ಮಾದೇವ ಏನೂ ತಪ್ಪು ಮಾಡದಿದ್ದ ಪಕ್ಷದಲ್ಲಿ ಹೀಗೆ ತಲೆಮರೆಸಿಕೊಳ್ಳುವ ಅಗತ್ಯವೇನಿತ್ತು ? ಆದ್ದರಿಂದ, ಆತ ಹಂತಕನೇ ಹೌದು ! ಆಗ, ಮಗಳ ಮನಸ್ಸಿನ ತರ್ಕವನ್ನು ಸೂಕ್ಷ್ಮವಾಗಿ ಅರಿತು ತಾಯಿ ಆಕೆಗೆ ಸಾಂತ್ವನ ಹೇಳುತ್ತಿದ್ದಳು.

ಒಮ್ಮೆ, ಅಪ್ಪ ಅವ್ವರ ಗುಸುಗುಸು ಗಿರಿಜೆಯ ಕಿವಿಗೂ ಬಿದ್ದಿತು. ಅವರು ಇತ್ತೀಚೆಗೆ ಒಂದು ಬಗೆಯ ಸಮಾಧಾನದಿಂದಿರುವುದು ಈ ಕಾರಣಕ್ಕೇ ಇರಬೇಕು ಎಂದು ಆಕೆ ಊಹಿಸಿದಳು. ಮಾದೇವ, ಪಡುವಲಾಗಿ ದೂರದ ಊರಿನಲ್ಲಿರುವ ಸ್ವಾಮಿಗಳ ಮಠದಲ್ಲಿ ಕ್ಷೇಮವಾಗಿ ಅಡಗಿದ್ದಾನಂತೆ. ಮಠದ ಸ್ವಾಮಿಗಳೇ ಆತನಿಗೆ ಅಭಯ, ಆಶ್ರಯ ನೀಡಿದ್ದಾರಂತೆ. ಸ್ವಾಮಿಗಳ ಮಹಿಮೆಯಿಂದ ಆತನ ಅಡಗುದಾಣ ಪೋಲೀಸರ ಕಣ್ಣಿಗೆ ಬೀಳದಂತೆ ಮರೆಯಾಗಿದೆಯಂತೆ ! ಬಸಪ್ಪ ಸ್ವತಃ ಅಲ್ಲಿಗೆ ಹೋಗಿಬಂದು, ಗಿರಿಜೆಗೆ ಗುಟ್ಟಾಗಿ ಸಮಾಧಾನ ಹೇಳಿದ.

ಒಂದು ವರ್ಷದ ನಂತರ, ಶಿವನಕೊಪ್ಪಲಿನ ವಾತಾವರಣ ಸ್ವಲ್ಪ ಶಾಂತವಾಗಿತ್ತು. ತನ್ನ ನೆಚ್ಚಿನ ಜನರಿಂದ ಈ ವಿಷಯ ತಿಳಿದುಕೊಂಡು ಸ್ವಾಮಿಗಳು ಮುಂದಿನ ಏರ್ಪಾಡು ಮಾಡಿದರು. ವಕೀಲರ ನೆರವಿನಿಂದ ಮಾದೇವ ಪೋಲೀಸರಿಗೆ ಶರಣಾದ; ಜಾಮೀನಿನ ಮೇಲೆ ಬಿಡುಗಡೆ ಹೊಂದಿ ಊರಿಗೆ ಹಿಂದಿರುಗಿದ. ಸ್ವಾಮಿಗಳು ಉಪದೇಶ ಮಾಡಿ ಆತನ ಭಯವನ್ನು ಹೋಗಲಾಡಿಸಲು ಪ್ರಯತ್ನಿಸಿದ್ದರು. ಆತನ ಮಹತ್ಕಾರ್ಯಕ್ಕಾಗಿ ಊರಿನ ಕೆಲವು ಜಾತಿವಾದಿಗಳು ಅದ್ದೂರಿಯ ಸ್ವಾಗತ ನೀಡದಿದ್ದರೂ, ಕೆಲವರು ಪಿಸುಮಾತಿನಲ್ಲಿ ಆತನ ಕೃತ್ಯಕ್ಕೆ ನೈತಿಕ ಬೆಂಬಲ ನೀಡಿದರು. ಆದರೂ, ತಪ್ಪಿನ ಅರಿವಾಗಿದ್ದ ಮಾದೇವನ ಮನಸ್ಸಿಗೆ ಭಯವಾಗದೇ ಇರಲಿಲ್ಲ.

ಒಂದು ವರ್ಷ ತಲೆ ಮರೆಸಿಕೊಂಡಿದ್ದ ಮಾದೇವನಿಗೆ ಗಿರಿಜೆಯನ್ನು ಕಾಣಬೇಕೆಂಬ ಸಹಜವಾದ ತವಕವಿತ್ತು. ಬಸಿರು ಕಳೆದುಕೊಂಡಿದ್ದ ಆಕೆಯ ದುಃಖವನ್ನು ಮರೆಯುವಂತೆ ಸಾಂತ್ವನ ಹೇಳಬೇಕೆಂಬ ತವಕವಿತ್ತು. ಅದೇ ವೇಳೆಗೆ ಗಿರಿಜೆಯ ಮನಸ್ಸಿನಲ್ಲಿ ತನ್ನ ಈ ಕೃತ್ಯದ ಬಗ್ಗೆ ಯಾವ ಭಾವನೆಗಳಿರಬಹುದೋ ಎಂಬ ಅಂಜಿಕೆಯೂ ಇತ್ತು.

ಆತ ಶಿವನಕೊಪ್ಪಲಿನಲ್ಲಿದ್ದು ಎದುರಾಳಿಗಳ ದ್ವೇಷ ಕೆರಳಲು ಕಾರಣವಾಗುವ ಬದಲು, ಸ್ವಲ್ಪ ದಿನ ಅಜ್ಜನಪುರಕ್ಕೆ ಬಂದು ತಮ್ಮ ಮನೆಯಲ್ಲಿರಲೆಂಬುದು ಬಸಪ್ಪನ ಇಂಗಿತವೂ ಆಗಿತ್ತು.

[illegible]

[illegible] ಮಾದೇವ ನಿರೀಕ್ಷಿಸಿದ್ದ. ಇಡೀ ಹಗಲು ಗಿರಿಜೆಯೊಂದಿಗೆ [illegible] ಮಾತಾಡಲೂ ಸಾಧ್ಯವಾಗಿರಲಿಲ್ಲ. ಆದರೆ ಗಿರಿಜೆ ಮಾದೇವನ [illegible] ಹೋಗಲು ನಿರಾಕರಿಸಿದಳು. ಅಪ್ಪನ ಕಿವಿಮಾತು, ಅವ್ವನ [illegible] ವ್ಯರ್ಥವಾದವು. ಸಾಮಾನ್ಯ ಸಂದರ್ಭದಲ್ಲಾಗಿದ್ದರೆ, ಒಂದು ವರ್ಷದ ಅಗಲಿಕೆಯ ನಂತರ [illegible] ನಿಮಿಷಕ್ಕಾಗಿ ಮನಸ್ಸು ಕಾತುರಗೊಳ್ಳುತ್ತಿತ್ತೋ ಏನೋ ! ತೀರಾ ತಣ್ಣಗಾಗತೊಡಗಿದ್ದ ಆಕೆಯ ಮನಸ್ಸಿನಲ್ಲಿ ಗಂಡನ ಬಗ್ಗೆ ಅಂಥ ಭಾವನೆ ಹುಟ್ಟಲೇ ಇಲ್ಲ. ಮನಸ್ಸು ಕಠಿಣವಾಗತೊಡಗಿತ್ತು. ಇನ್ನು ಮುಂದೆ ಮಾದೇವ ತನ್ನ ಗಂಡನಲ್ಲ, ತಾನು ಆತನ ಹೆಂಡತಿಯಲ್ಲ. ತಾನು ಆತನೊಂದಿಗೆ ಬಾಳಲಾರೆ ಎಂಬ ದಿಟ್ಟ ಮಾತು ಗಿರಿಜೆಯ ಬಾಯಿಂದ ಬಂದಾಗ, ಆಕೆಯ ಅಪ್ಪ ಅವ್ವ ಸಿಡಿಲು ಬಡಿದವರಂತೆ ಥರಗುಟ್ಟಿದರು. ಇದನ್ನು ನಿರೀಕ್ಷಿಸದಿದ್ದ ಮಾದೇವ ಕತ್ತಲೆಯ ಕಡೆಗೆ ಮುಖ ಹೊರಳಿಸಿದ.

ಅವ್ವ ಗಿರಿಜೆಯನ್ನು ತಬ್ಬಿಕೊಂಡು ಸಮಾಧಾನಪಡಿಸುವ ಪ್ರಯತ್ನ ಮುಂದುವರಿಸಿದ್ದಳು. ಕಂಬಕ್ಕೆ ಒರಗಿ ಕುಳಿತ ಗಿರಿಜೆ ಅವ್ವನ ಮಡಿಲಿನಲ್ಲಿ ತಲೆ ಇರಿಸಿ ಜೋರಾಗಿ ಅಳತೊಡಗಿದಳು. ಹಿಂದಿನಿಂದ ಬಿಕ್ಕಳಿಕೆ ಬಂತು. ಮೊದಲು ಮೂರು ನಾಲ್ಕು ನಿಮಿಷಗಳಿಗೊಮ್ಮೆ, ಅನಂತರ ಪ್ರತಿ ನಿಮಿಷಕ್ಕೊಮ್ಮೆ ತೀವ್ರ ಬಿಕ್ಕಳಿಕೆ. ಹಾಗೇ ಬಿಕ್ಕಳಿಸುತ್ತ ಗಿರಿಜೆ ಬಿಳಚಿಕೊಳ್ಳತೊಡಗಿದಳು. ಆ ಬಿಕ್ಕಳಿಕೆ ಪ್ರತಿಭಟನೆಯೆಂಬುದು ಅರ್ಥವಾಗದೆ, ಅದನ್ನು ನಿಲ್ಲಿಸುವ ಔಷಧವಾಗಲೀ ಉಪಾಯವಾಗಲೀ ತಿಳಿಯದೆ ಮನೆಯವರು ಬಿಕ್ಕಳಿಕೆ ಗಿರಿಜೆಯ ಜೀವ ಹಿಂಡುವುದನ್ನು ಅಸಹಾಯಕರಾಗಿ ನೋಡತೊಡಗಿದರು. ಬಿಕ್ಕಳಿಕೆಯ ನಂತರ ಆಕೆ ಕೆಲವು ದಿನಗಳವರೆಗೆ ಬದುಕಿ ಸತ್ತವಳಂತಿರುತ್ತಾಳೆಂಬುದು ಈಗಾಗಲೇ ಅವರಿಗೆ ಅನುಭವವಾಗಿತ್ತಷ್ಟೆ.

* * *

ಗಿರಿಜೆ ಇತ್ತೀಚೆಗೆ ಹೊರಗೆಲ್ಲೂ ಹೋಗುತ್ತಿರಲಿಲ್ಲ. ಊರಿನವರ ಕನಿಕರದ ಚುಚ್ಚು ಮಾತುಗಳನ್ನು ಕೇಳಬೇಕಾಗುತ್ತದೆ ಎಂಬ ಭಯ. ಬೇಸರವಾದಾಗ ಹಿಂದಿನ ಬಾಗಿಲಿನಲ್ಲಿ ನಿಂತು ತೋಟ ನೋಡುತ್ತಿದ್ದಳು. ಗಿರಿಜೆಯ ಓರಗೆಯವರು ಸಹ ಮನೆಗೆ ಬರದಂತೆ ಬಸಪ್ಪ ಬೆದರಿಕೆ ಹಾಕಿದ್ದ. ಗಿರಿಜೆ ಗಂಡನನ್ನು ಬಿಟ್ಟಳಂತೆ ಎಂಬುದನ್ನು ನಂಬಲು ಅವರಿಗೂ ಕಷ್ಟವಾಗಿತ್ತು. ಆದರೆ, ಮನೆಗೆ ಯಾರು ಬಂದರೂ ಗಿರಿಜೆಗೆ ಉಪದೇಶ ಮಾಡದೇ ಹೋಗುತ್ತಿರಲಿಲ್ಲ. ಆದದ್ದಕ್ಕೆಲ್ಲಾ ಗಿರಿಜೆಯೇ ಕಾರಣ ಎಂಬಂತೆ ಅವರ ಮಾತಿನ ಇಂಗಿತವಾಗಿರುತ್ತಿತ್ತು. ಗಿರಿಜೆಯ ಅಪ್ಪ ಅವ್ವರಿಗೇ ಗಿರಿಜೆಯ ಮನಸ್ಸು ಅರ್ಥವಾಗಿರಲಿಲ್ಲ ಎಂದಮೇಲೆ ಉಳಿದವರಿಗೆ ಅರ್ಥವಾಗುವುದು ಹೇಗೆ ?

ಗಿರಿಜೆಗೆ ಅವ್ವನ ಬಗ್ಗೆ ಕನಿಕರವಿತ್ತು. ಈಗೀಗ ಗಿರಿಜೆಯೊಂದಿಗೆ ಮಾತಾಡಲೂ ಆಕೆ ಅಂಜುತ್ತಿದ್ದಳು. ತನ್ನಷ್ಟಕ್ಕೆ ಗೊಣಗಿಕೊಳ್ಳುವುದು ಹೆಚ್ಚಾಗಿತ್ತು. ಬಸಪ್ಪನಂತೂ ಎಲ್ಲರ ಮೇಲಿನ ಕೋಪವನ್ನು ಮನೆಗೆ ತಂದು, ಸಿಟ್ಟಿನಿಂದ ಎಗರಾಡುತ್ತ, ಅವ್ವನ ಮೇಲೆ ತೀರಿಸಿಕೊಳ್ಳುವುದು ರೂಢಿಯಾಗಿತ್ತು.

ಸಂಜೆಯ ವೇಳೆಗೆ ಮಳೆ ಪ್ರಾರಂಭವಾಯಿತು. [illegible] ಚುಳ್ಳೆನಿಸುವಷ್ಟು ತಣ್ಣಗಿನ ಗಾಳಿ. ಮಾದೇವ ಮತ್ತು ಅವನ ತಾಯಿ ಮಳೆಯಲ್ಲಿ ತೋಯಿಸಿಕೊಂಡು ಮನೆಗೆ ಬಂದಾಗ ಕತ್ತಲು [illegible] [illegible] ಮಾದೇವನ ಮುಖದಲ್ಲಿ ಹಸಿರಕ್ತದ ಹನಿಗಳು ಕಾಣಿಸಿದವು ! [illegible]

[illegible] ಸ್ವಾಮಿಗಳ ಜೊತೆಗೆ ಗಿರಿಜೆಯ [illegible] [illegible] ಗಿರಿಜೆಯನ್ನು ಆಕೆ [illegible] 'ಹೋಕ [illegible]' ಎಂದು ಅಕ್ಕರೆ [illegible] ಗಿರಿಜೆಯದು.

[illegible] ಆಪ್ತರಾದ ಇಬ್ಬರು ಹಿರಿಯರೂ ಬಂದು [illegible].

ಸ್ವಾಮಿಗಳು ಬಸಪ್ಪನ ಮನೆಗೆ ದಯಮಾಡಿಸಿರುವ ವಿಷಯ ಊರಿನ ಇತರರಿಗೆ ತಿಳಿಯದಂತೆ ಎಚ್ಚರ ವಹಿಸಿದ್ದರು. ಆಷ್ಟು ಹೊತ್ತಿಗೆ ಹನಿಯತೊಡಗಿದ ಮಳೆಯೂ ಅದಕ್ಕೆ ಸಹಾಯಕವಾಯಿತು. ಭಕ್ತರು ಸ್ವಾಮಿಗಳಿರುವಲ್ಲಿಗೆ ಹೋಗಿ ತಮ್ಮ ಕಷ್ಟಗಳಿಗೆ ಪರಿಹಾರ ಬೇಡುವುದಕ್ಕೆ ಬದಲು, ಸ್ವಾಮಿಗಳೇ ಭಕ್ತರಿರುವಲ್ಲಿಗೆ ಬರುವುದು ಭಾರಿ ವಿಶೇಷವಲ್ಲವೆ ? ಬಸಪ್ಪನ ಕುಟುಂಬದಲ್ಲಿ ತಲೆದೋರಿದ ಸಮಸ್ಯೆಯನ್ನು ಬಗೆಹರಿಸಲು ಸ್ವಾಮಿಗಳು ಬಂದಿರುವುದು ಸಾಮಾನ್ಯ ಪುಣ್ಯದ ಕೆಲಸವಲ್ಲ ! ನಂಜಿದ ಭಕ್ತರ ಮೇಲೆ ಸ್ವಾಮಿಗಳಿಗಿರುವ ಕಳಕಳಿಯ ಸಂಕೇತವಾಗಿದ್ದ ಅವರ ಬರವಿನಿಂದ ಬಸಪ್ಪನ ಮನೆಯ ಎಲ್ಲರಿಗೂ ತಮ್ಮ ಜೀವನ ಪಾವನವಾಯಿತು ಎಂಬ ಧನ್ಯತೆಯ ಭಾವನೆ ಉಂಟಾಯಿತು.

ಸ್ವಾಮಿಗಳು ಸ್ನಾನ ಮಾಡಿ, ಆದಷ್ಟು ಬೇಗನೆ ಪೂಜೆ ಮುಗಿಸಿದ ನಂತರ ಒಬ್ಬೊಬ್ಬರಾಗಿ ಬಂದು ಶ್ರೀಪಾದಗಳಿಗೆ ತಲೆಹಚ್ಚಿ ಅಡ್ಡಬಿದ್ದರು.

ಸ್ವಾಮಿಗಳು ಹಾಲು ಹಣ್ಣು ತೆಗೆದುಕೊಂಡರೆ, ಉಳಿದವರು ಪಾಯಸದೂಟ ಮಾಡಿದರು.

ತನಿಖೆ ಪ್ರಾರಂಭವಾಗುವ ಹೊತ್ತಿಗೆ ಹೊರಗೆ ಮಳೆಯ ಜೊತೆ ಮಿಂಚು-ಗುಡುಗು ಪ್ರಾರಂಭವಾದುವು.

ಎಲ್ಲರದೂ ಒಂದೇ ದನಿ. ಗಿರಿಜೆ ಅಪರಾಧಿಯ ಸ್ಥಾನದಲ್ಲಿ. ಮಾದೇವನೊಂದಿಗೆ ಬಾಳುವುದಿಲ್ಲ ಎಂದು ಗಿರಿಜೆ ಹಟ ಹಿಡಿಯುವುದು ಭಾರಿ ತಪ್ಪು. ಮಾದೇವ ಯಾರೂ ಮಾಡದಂಥ ತಪ್ಪನ್ನೇನೂ ಮಾಡಿಲ್ಲ. ಗಿರಿಜೆಯ ಹಟದಿಂದ ಮಾನವಂತ ಬಸಪ್ಪ ಊರಿನಲ್ಲಿ ತಲೆ ಎತ್ತಿ ತಿರುಗಾಡದಂತಾಗುತ್ತದೆ. ಮಗಳೇ ತಂದೆಯ ಮುಖಕ್ಕೆ ಮಸಿ ಬಳಿದಂತಾಗುತ್ತದೆ....

ಸ್ವಾಮಿಗಳು ಭಕ್ತರ ಮನಸ್ಸನ್ನು ಒಳಹೊಕ್ಕು ನೋಡಬಲ್ಲರು. ಅವರ ಮನಸ್ಸನ್ನು ಕರಗಿಸಬಲ್ಲಂಥ ವಾಕ್‌ಶಕ್ತಿ ಉಳ್ಳವರಲ್ಲವೆ ?

''ಅವ್ವಾ ಗಿರಿಜವ್ವ, ನಿನ್ನ ವಿಷಯ ಹೇಳಿಕೊಂಡು ನಿಮ್ಮಪ್ಪ ಹೆಂಗಸಿನಂತೆ ಕಣ್ಣೀರು ಹಾಕಿದರು. ಅದಕ್ಕೇ ನಾವು ಇಲ್ಲಿಯವರೆಗೆ ಬರಬೇಕಾಯಿತು. ಮಾದೇವ ಅಂಥ ಯಾವ ದೊಡ್ಡ ತಪ್ಪೂ ಮಾಡಿಲ್ಲ. ಅತನೇನೂ ಕಳ್ಳನಲ್ಲ, ಸುಳ್ಳನಲ್ಲ, ವ್ಯಭಿಚಾರಿಯಲ್ಲ. ಏನೋ ಕೆಟ್ಟ ಗಳಿಗೆ. ಇಷ್ಟಕ್ಕೂ ಆ ಜನರ ಸೊಕ್ಕೇನು ! ಶಿವ ಒಳ್ಳೆಯದು ಕೆಟ್ಟದ್ದು, ಮೇಲು ಕೀಳು ಯಾಕೆ ಮಾಡಿದ್ದಾನೆ ? ಎಲ್ಲ ಜಾತಿಯ ಜನರೂ ಒಂದಾಗಲು ಹೇಗೆ [illegible] ಕೀಳುಜಾತಿಯವರು [illegible] ನೋಡಿದಾಗ [illegible] ಮಾದೇವನಂಥ [illegible] ? [illegible]

[illegible]

ನಾಳೆಯೇ ಮಾದೇವನೊಂದಿಗೆ ಹೊರಟುಬಿಡು. ಶಿವ ಮೆಚ್ಚುತ್ತಾನೆ.''

ಮಳೆ ಬಿರುಸಾಯಿತು. ಗಾಳಿಯ ರಭಸವೂ ಹೆಚ್ಚಿತು.

ಗಿರಿಜೆ ಸ್ವಾಮಿಗಳಿಂದ ಇಂಥ ಮಾತು ನಿರೀಕ್ಷಿಸಿರಲಿಲ್ಲ. ಆಕೆ ತಲೆ ಎತ್ತಿ ಸ್ವಾಮಿಗಳ ಮುಖ ನೋಡಿದಳು.

''ಏನವ್ವಾ, ನೀನೇನೂ ಮೂಢಾತ್ಮಳಲ್ಲ. ಸ್ವಾಮಿಗಳು ಹೇಳಿದ್ದು ಕೇಳಿಸಿತಲ್ಲ, ನಿನ್ನ ಹಟ ಬಿಟ್ಟು ಗಂಡನ ಜೊತೆಗೆ ಹೋಗು. ಅಪ್ಪ ಅವ್ವರ ಹೆಸರಿಗೆ ಕಳಂಕ ಉಂಟುಮಾಡಬ್ಯಾಡ..'' ಹಿರಿಯರೊಬ್ಬರು ಹೇಳಿದರು.

ಗಿರಿಜೆ ಧೈರ್ಯವಾಗಿ ಒಮ್ಮೆ ಎಲ್ಲರ ಮುಖಗಳನ್ನೂ ದಿಟ್ಟಿಸಿದಳು. ''ನೀವು ಯಾರು ಏನು ಬೇಕಾದ್ರೂ ಹೇಳಿ. ನಾನಂತೂ ಅವನೊಂದಿಗೆ ಬಾಳೊಲ್ಲ.''

ತೋಟದಲ್ಲಿ ಗಾಳಿಯ ಬಿರುಸಿಗೆ ತೆಂಗಿನಮರವೊಂದು ಚಟಕ್ಕೆಂದು ಮುರಿದು ಉರುಳಿದ ಸದ್ದು ಕೇಳಿಸಿತು.

ಮುಂದೆ ಯಾರು ಏನು ಹೇಳಿದರೂ ಗಿರಿಜೆ ತನ್ನ ಹಟ ಬಿಡಲಿಲ್ಲ.

ಗಿರಿಜೆಯ ಮೊಂಡಾಟ ನೋಡಿ ಮಾದೇವನ ಅವ್ವನ ಸಿಟ್ಟು ನೆತ್ತಿಗೇರಿತು. ''ನನ್ ಮಗನೊಂದ್ಗೆ ಯಾಕೆ ಬಾಳೊಲ್ಲ ಅಂತೀಯೆ ? ನಮ್ಗೇನು ಹೊಲ ಮನೆ ಇಲ್ವ, ನಿಂಗೇನೇ ಕಡಮೆಯಾಗಿತ್ತು ಅಂತೀನಿ ? ನನ್ ಮಗ ಗಂಡ್ಸಲ್ವ . ನಿನ್ನ ಆಳೊಕೆ ಕೈಲಾಗೊಲ್ದು ಅಂದ್ನ ? ಗಂಡನ್ಜೊತೇಲಿ ಬಾಳುದಿಲ್ಲ ಅಂತ ಮಠಮಾನ್ಯರ ಮುಂದೇನೇ ಹೇಳ್ಬೇಕಾದ್ರೆ ಕಾರ್‍ಣ ಏನು ಅಂತೀನಿ ?'' ಎಂದು, ಮಾದೇವನ ಕಡೆಗೆ ತಿರುಗಿ ''ಲೋ ಮಾದೇವ ನೀನು ನಿಜವಾಗಿ ನಿಮ್ಮಪ್ಪನ್ಗೇ ಹುಟ್ಟೋನಾದ್ರ ಇವ್ಳ ಮುಂದಲೆ ಹಿಡದು ದರದರ ಅಂತ ಎಳ್ಕಂಡ್ ನಡಿ. ಎಂಗ್ ಬಾಳುದಿಲ್ವೊ ನಾನೂ ನೋಡ್ತೀನಿ,'' ಎಂದು ಮಾದೇವನನ್ನು ಹುರಿದುಂಬಿಸಿದಳು.

ಗಿರಿಜೆಯ ಸೋದರ ಮಾವ ಮೇಲೆದ್ದು, ''ಸ್ವಾಮಿಗಳ ಮುಂದೆ ಇಂಗೆಲ್ಲ ಮಾತಾಡೂದು ತರವಲ್ಲ. ಮಾತು ಆಡಿ ಕೆಡ್ತು, ಮುತ್ತು ಒಡ್ದು ಕೆಡ್ತು ಅಂತ ಗಾದೆ ಮಾತದೆ. ದಯವಿಟ್ಟು ಸುಮ್ನೆ ಕೂತ್ಕಂಡ್ರೆ ಸರಿ,'' ಎಂದು ಆಕೆಯ ಬಾಯಿ ಮುಚ್ಚಿಸಿದ.

ಗಿರಿಜೆಯ ದನಿ ಮತ್ತಷ್ಟು ದೃಢವಾಗಿತ್ತು. ''ನೀವೆಲ್ಲೂ ಸೇರಿ ನನ್ನ ನೇಣಾಕಿದ್ರೂ ಸರಿ. ಕೆರೆಗೋ ಬಾವಿಗೋ ನೂಕಿದ್ರೂ ಸರಿ. ನಾನು ಮಾತ್ರ ಇನ್ನೊಂದ್ಸಲ ಗಂಡನ್ ಮನೆಗೆ ಕಾಲಾಕೋಳಲ್ಲ, ಗಂಡನ್ ಜೊತೆ ಬಾಳೋಳೂ ಅಲ್ಲ.''

ಆಕೆಯ ಮಾತಿನಿಂದ ಬಸಪ್ಪನ ಪಿತ್ಥ ನೆತ್ತಿಗೇರಿತು. ಸರಕ್ಕನೆ ಮೇಲೆದ್ದು ಸೂರಿಗೆ ಸಿಕ್ಕಿಸಿದ್ದ ಕುಡುಗೋಲನ್ನು ಎಳೆದುಕೊಂಡು, ''ನಿನ್ನ ಇಲ್ಲೇ ಕೊಚ್ಚಾಕಿ ಈಗ್ಲೇ ಪೋಲೀಸ್ ಸ್ಟೇಷನ್ಗೋಗ್ತೀನಿ'' ಎಂದು ಆಕೆಯ ಮುಂದಲೆಗೆ ಕೈ ಹಾಕಿದ. ಬಸಪ್ಪನ ಆ ಅವತಾರ ನೋಡಿದ ಸ್ವಾಮಿಗಳೇ ಒಂದು ಕ್ಷಣ ಬೆಚ್ಚಿದರು. ಅವರ ಬಾಯಿಂದ ಮಾತೇ ಹೊರಡಲಿಲ್ಲ.

ಗಿರಿಜೆಯ ಸೋದರ ಮಾವ ಮಿಂಚಿನ ವೇಗದಲ್ಲಿ ಬಂದು ಬಸಪ್ಪನನ್ನು ಹಿಂದಿನಿಂದ ತಬ್ಬಿ ಹಿಡಿದು, ಕುಡುಗೋಲನ್ನು ಕಸಿದುಕೊಂಡ. ''ನಿಂಗೇನು ದೇವ್ರು ಬುದ್ಧಿ ಗಿದ್ಧಿ ಕೊಟ್ಟದ್ದಾನೋ ಇಲ್ವೋ ? ಅದೇನೋ ಕೊಚ್ಚಾಕ್ತಾನಂತೆ ! ಇತ್ಯರ್ಥ ಮಾಡೋಕಾಗೇ ಸ್ವಾಮಿಗಳು ದಯಮಾಡ್ಸಿರುವಾಗ ನೀನು ಬಾಯ್ ಮುಚ್ಗಂಡು ತೆಪ್ಪಗಿರಬೇಕು.'' ಎಂದು ದಬಾಯಿಸಿದ.

ಇದಕ್ಕಿಂತಲೂ ಗೋಜಲಾದ ಹಲವು ಪ್ರಕರಣಗಳನ್ನು ಸ್ವಾಮಿಗಳು ಬಗೆಹರಿಸಿದ್ದರಷ್ಟೆ ! ಈಗ ಗಿರಿಜೆಯ ಮುಂದೆ ಸೋಲೊಪ್ಪಿಕೊಳ್ಳಲು ತಯಾರಿರಲಿಲ್ಲ. ರಾಮಾಯಣ, ಮಹಾಭಾರತ ಪುರಾಣ ಕಥೆಗಳಿಂದ ಸೀತಾ, ಸಾವಿತ್ರಿ, ದ್ರೌಪದಿಯರೇ ಮುಂತಾದ ಆದರ್ಶ ಸ್ತ್ರೀಯರ ಉದಾಹರಣೆ ನೀಡಿ ಗಿರಿಜೆಯನ್ನು ಮಣಿಸಲು ಪ್ರಯತ್ನಿಸಿದರು.

ಇನ್ನೇನು ಗಿರಿಜೆ ತನ್ನ ಹಟ ಬಿಟ್ಟಂತೆಯೇ ಎಂದು ಎಲ್ಲರೂ ಭಾವಿಸಿದರು.

ಸೋದರ ಮಾವ ಗಿರಿಜೆ ಕುಳಿತಿದ್ದಲ್ಲಿಗೆ ಬಂದ. ಮಕ್ಕಳನ್ನು ರಮಿಸುವ ದನಿಯಲ್ಲಿ ಹೇಳಿದ: ''ಗಿರಿಜವ್ವ, ನನ್ನ ಮಾತು ಕೇಳು. ಏನೋ ಕೆಟ್ ಗಳಿಗೆ, ಆದದ್ದಾಯ್ತು. ನಿಂಗೆ ಬೇಜಾರಾಗಿದೆ. ಅದ್ಕೆ ಅಲ್ವೇ ಬುದ್ಧಿಯೋರು ದಯಮಾಡ್ಸಿರೂದು. ಅವ್ವ ದೊಡ್ ಮನಸ್ ಮಾಡು. ನಿಂಗ ಆ ಶಿವ ಒಳ್ಳೇದ್ ಮಾಡ್ತಾನೆ, ನಮ್ಮೆಲ್ರ ಮಾನ ಕಾಪಾಡವ್ವ'' ಎಂದವನೇ ಬಾಗಿ ಗಿರಿಜೆಯ ಕಾಲು ಹಿಡಿದುಕೊಂಡ.

ಆಕೆ ಕೊಸರಿ ಕಾಲುಗಳನ್ನು ಹಿಂದಕ್ಕೆಳೆದುಕೊಂಡಳು. ಸೋದರ ಮಾವನ ಈ ಕೃತ್ಯದಿಂದ ಆಕೆಗೆ ಬೇಸರವಾಯಿತು. ದುಃಖವೂ ಆಯಿತು. ಅದೇ ವೇಳೆ ತನ್ನ ನಿರ್ಧಾರವನ್ನು ಬದಲಿಸಲೂ ಸಾಧ್ಯವಾಗಲಿಲ್ಲ.

''ಮಾವ, ನನ್ನ ಬಾಳುಗೆಟ್ಟವಳು ಅಂದ್ರೂ ಸರಿ, ಗಂಡನ್ ಬಿಟ್ಟವಳು ಅಂದ್ರೂ ಸರಿ. ಇನ್ನೊಂದ್ಸಲ ಗಂಡನ್ ಮನೆಗೋಗು ಅಂತ ಮಾತ್ರ ಒತ್ತಾಯ ಮಾಡಬೇಡಿ. ಅದಕ್ಕೆ ಬದಲು ನೀವೆಲ್ಲೂ ಸೇರಿ ನಂಗೆ ವಿಷ ಕೊಟ್ಬಿಡಿ. ಸಂತೋಷ್ದಿಂದ ಸಾಯ್ತೀನಿ.''

ಮಿಂಚಿನ ಬೆಳಕಿನಲ್ಲಿ ಎಲ್ಲರ ಮುಖಗಳಲ್ಲೂ ಹಸಿರಕ್ತದ ಹನಿಗಳು ಕಾಣಿಸಿಕೊಂಡಂತೆ ಗಿರಿಜೆಗೆ ಮೈ ನಡುಕ ಪ್ರಾರಂಭವಾಯಿತು. ಹಿಂದಿನಿಂದ ಬಿಕ್ಕಳಿಕೆ. ಗಿರಿಜೆಯ ಅವ್ವ ಗಾಬರಿಯಿಂದ ಮಗಳ ಬಳಿಗೆ ಧಾವಿಸಿದಳು.

ಗಿರಿಜೆ ಹೀಗೆ ಬಿಕ್ಕಳಿಸುತ್ತಿರಬೇಕಾದರೆ, ಸ್ವಾಮಿಗಳು ಆಕೆಯ ಶನಿ ಏಳನೇ ಮನೆಯಲ್ಲಿರುವುದರಿಂದ ಈ ಪರಿಸ್ಥಿತಿ ಇನ್ನೂ ಆರು ತಿಂಗಳು ಮುಂದುವರೆಯುತ್ತದೆ. ಅನಂತರ ಆಕೆಯ ಮನಸ್ಸು ಬದಲಾಗುತ್ತದೆ- ಎಂದು ಹೇಳಿದರು.

ಸ್ವಾಮಿಗಳು ಅಪ್ಪಣೆ ಕೊಡಿಸಿದಂತೆ, ಗಿರಿಜೆಯ ಹಟಮಾರಿತನಕ್ಕೆ ಶನಿ ಕಾರಣವಾಗಿದ್ದುದರಿಂದ, ತನಿಖೆಯನ್ನು ಮುಕ್ತಾಯಗೊಳಿಸಲಾಯಿತು. ಸ್ವಾಮಿಗಳು ಮುಂಜಾವು ಹೊರಡುವವರಿದ್ದರು. ಎಲ್ಲರೂ ಒಂದೊಂದು ಕಡೆ ಉರುಳಿಕೊಂಡರು.

* * *

ಆ ಅಪಘಾತ ಹೇಗೆ ಸಂಭವಿಸಿತು ಎಂಬುದನ್ನು ಯಾರೂ ಕಂಡವರಿಲ್ಲ. ಗಿರಿಜೆಗೆ ಅಸ್ಪಷ್ಟವಾಗಿ ನೆನಪಿರುವಂತೆ, ಆಕೆ ಕತ್ತಲೆಯಲ್ಲಿ ತಡವರಿಸುತ್ತ ನಡೆಯುತ್ತಿರುವಾಗ ದಾರಿಗಡ್ಡವಾಗಿದ್ದ ಗುಂಡು ಕಲ್ಲಿಗೆ ಎಡವಿದಳು. ಸ್ವಲ್ಪ ಭಾರವೇ ಆಗಿದ್ದ ಅದನ್ನು ಎತ್ತಿ ದಾರಿಯ ಬದಿಗೆ ಎಸೆದಳು.

ರಾತ್ರೋರಾತ್ರಿ ಸ್ವಾಮಿಗಳನ್ನು ನಗರಕ್ಕೆ ಕಾರಿನಲ್ಲಿ ಒಯ್ಯಲಾಯಿತು. ಸ್ವಾಮಿಗಳ ಶಿಷ್ಯ ಡಾಕ್ಟರರೊಬ್ಬರು ದೊಡ್ಡ ಆಸ್ಪತ್ರೆ ನಡೆಸುತ್ತಿದ್ದರು. ಐದಾರು ಜನ ಡಾಕ್ಟರರ ತಂಡವೊಂದು ಸ್ವಾಮಿಗಳಿಗೆ ತುರ್ತು ಶಸ್ತ್ರಚಿಕಿತ್ಸೆ ನಡೆಸಿತು. ಹೇಗೆ ಮುಗ್ಗರಿಸಿ ಬಿದ್ದರೂ ಇಷ್ಟು [illegible] ಪೆಟ್ಟು ಮರ್ಮಸ್ಥಳಕ್ಕೆ ಬೀಳಲು ಸಾಧ್ಯವೇ ಇಲ್ಲ ಎಂಬ ಅನುಮಾನ ಡಾಕ್ಟರದು. ಸ್ವಾಮಿಗಳು ಅಪಾಯದಿಂದ ಪಾರಾದರು ಎಂಬುದನ್ನು ಕೇಳಿದ ನಂತರ ಬಸಪ್ಪ ಸೇರಿದಂತೆ ಜೊತೆಯಲ್ಲಿ ಬಂದಿದ್ದವರು ನೆಮ್ಮದಿಯ ನಿಟ್ಟುಸಿರುಬಿಟ್ಟರು.

ಡಾಕ್ಟರರು ತಮ್ಮ ವೈದ್ಯಕೀಯ ಪರಿಭಾಷೆಯಲ್ಲಿ ಜೊತೆಯ ವೈದ್ಯರಿಗೆ ಹೇಳಿದರು: ದೇವರು ದೊಡ್ಡವ. ಸ್ವಾಮಿಗಳನ್ನು ಕಾಪಾಡಲು [illegible]. ಆದರೆ, ಇನ್ನುಮುಂದೆ ಸ್ವಾಮಿಗಳು ಗಂಡಸುತನ ಕಳೆದುಕೊಳ್ಳಬಹುದು....

ಶ್ರೀ ಕೆ.ಪಿ. ಸ್ವಾಮಿ, ನಂ. 167, 10ನೇ ಮೈನ್, 3ನೇ ಘಟ್ಟ, ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು - 560 058

ಸಾಮಾನ್ಯನೊಳಗೊಬ್ಬ ಅಸಾಮಾನ್ಯ

ಧಾರವಾಡದ ರಸ್ತೆಗಳಲ್ಲಿ ರಿಕ್ಷಾ ಓಡಿಸುತ್ತಿದ್ದ ಒಬ್ಬ ಸಾಮಾನ್ಯ ವ್ಯಕ್ತಿಯ ಹಿಂದೆ ಅಸಾಮಾನ್ಯ ವ್ಯಕ್ತಿತ್ವ ಇದೆಯೆಂದು ಯಾರಿಗೂ ಅನಿಸಿದ್ದಿಲ್ಲ. ಧಾರವಾಡದಲ್ಲಿರುವ ನೂರಾರು ಆಟೋ ರಿಕ್ಷಾಗಳಲ್ಲಿ ಒಂದು ವಿಶೇಷ ಆಟೋರಿಕ್ಷಾ ಇತ್ತು. ಅದು ಸಾಧನಕೇರಿ, ಜರ್ಮನ್ ಆಸ್ಪತ್ರೆ, ಸಪ್ತಾಪೂರ, ಕರ್ನಾಟಕ ಕಾಲೇಜಿನ ಸುತ್ತ ಓಡಾಡುತ್ತಿತ್ತು. ಈ ಆಟೋರಿಕ್ಷಾಕ್ಕೆ ವಿಶೇಷ ಮಹತ್ವ ಬರಲು ಕಾರಣ ಎಂದರೆ ಇದರ ಚಾಲಕರು ನೇತಾಜಿ ಸುಭಾಷ್ ಚಂದ್ರ ಬೋಸ್ ಸ್ಥಾಪಿಸಿದ್ದ ಐ.ಎನ್.ಎ. (ಇಂಡಿಯನ್ ನ್ಯಾಶನಲ್ ಆರ್ಮಿ) ಯಲ್ಲಿ ಯೋಧರಾಗಿದ್ದವರು. ಸುಭಾಷ್ ಚಂದ್ರ ಬೋಸ್ ಅವರಿಗೆ ಸ್ವತಃ ಅಡುಗೆಮಾಡಿ, ಕೈಯ್ಯಾರೆ ಊಟ ಬಡಿಸಿದ್ದವರು ಆತ. ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷ್ ಸೇನೆಗೇ ತಿರುಗಿಬಿದ್ದವರು. ಇಂಥ ಮಹಾನ್ ವ್ಯಕ್ತಿ ಮನೆ, ಸಂಸಾರದ ಭಾರ ಹೊತ್ತು ನಿವೃತ್ತಿ ವಯಸ್ಸಿನಲ್ಲೂ ಧಾರವಾಡದ ರಸ್ತೆಗಳಲ್ಲಿ ಆಟೋರಿಕ್ಷಾ ಓಡಿಸುತ್ತಿದ್ದರು. ಸ್ವಾತಂತ್ರ್ಯ ಹೋರಾಟಗಾರರೆಂದು ಸುಳ್ಳು ಹೇಳಿ ಪೆನ್ಶನ್, ಮಾನ-ಸನ್ಮಾನ ಪಡೆಯುತ್ತಿರುವ ಖೋಟಾ ಜನರ ಮಧ್ಯೆ ಈ ವ್ಯಕ್ತಿ ಅಸಾಮಾನ್ಯರಾಗಿದ್ದಾರೆ. ಇವರ ಹೆಸರು ಹುಸೇನ್‌ಸಾಬ್ ಅಮೀನ್‌ಸಾಬ್ ಗೂಢವಾಲಾ. ಈಗ ಎಪ್ಪತ್ತೆರಡನೇ ವಸಂತಕ್ಕೆ ಕಾಲಿಟ್ಟಿದ್ದಾರೆ.

ಎಪ್ಪತ್ತು ವರ್ಷದ ಹಿಂದೆ ಧಾರವಾಡದ ಕಂಟ್ರಾಕ್ಟರ್ ಒಬ್ಬರಲ್ಲಿ ಕೆಲಸ ಮಾಡುತ್ತಿದ್ದ ಅಮೀನಸಾಬ ಗೂಢವಾಲಾ



ಹುಸೇನ್‌ಸಾಬ್ ಅಮೀನ್ ಸಾಬ್ ಗೂಢವಾಲಾ

ಎಂಬ ಸಾಮಾನ್ಯ ವ್ಯಕ್ತಿಯ ಮಗನಾಗಿ ಹುಟ್ಟಿದ ಹುಸೇನಸಾಬ ಗೂಢವಾಲಾರಿಗೆ ತಮ್ಮ ಹುಟ್ಟಿದ ದಿನವೂ ನಿಖರವಾಗಿ ಗೊತ್ತಿಲ್ಲ. ತಂದೆಯ ಬಡತನದ ಮಧ್ಯೆಯೇ ಧಾರವಾಡದ ಕರ್ನಾಟಕ ಹೈಸ್ಕೂಲ್‌ನಲ್ಲಿ ಓದಿ ಹತ್ತನೇ ಇಯತ್ತೆ ಪಾಸಾಗದೆ ಮನೆಯಲ್ಲಿ ಕುಳಿತರು. ಆಗ ದ್ವಿತೀಯ ಮಹಾಯುದ್ಧದ ಕಾಲ. ಇಂಗ್ಲೆಂಡ್, ಅಮೆರಿಕಾ, ರಷ್ಯಾ ಒಂದು ಕಡೆಗಿದ್ದರೆ ಜರ್ಮನಿ, ಜಪಾನ್, ಇಟಲಿ ಇನ್ನೊಂದು ಒಕ್ಕೂಟದಲ್ಲಿದ್ದವು. ಈ ಎರಡೂ ಗುಂಪಿನ ಮಧ್ಯೆ ಯುದ್ಧ ಜಗತ್ತನ್ನೇ ತಲ್ಲಣಗೊಳಿಸಿತ್ತು. ವೈರಿಗುಂಪಿನ ವಿರುದ್ಧ ಹೋರಾಡಲು ಬ್ರಿಟಿಷರು ಭಾರತದಲ್ಲಿ ಸೇನೆಗೆ ಯುವಕರನ್ನು ಆರಿಸುತ್ತಿದ್ದರು. ಆಗ ಹುಸೇನ್‌ಸಾಬ್ 2.8.1941ರಂದು ಮಿಲಿಟರಿ ಸೇರಿದರು. ಸೇರಿದ ಆರು ತಿಂಗಳಲ್ಲೇ ತರಬೇತಿ ಮುಗಿಸಿದ ಇವರ ಸೇನಾ ತುಕುಡಿ ಜಪಾನ್ ವಿರುದ್ಧ ಹೋರಾಡಲು 1942 ನೇ ಜನವರಿಯಲ್ಲಿ ಸಿಂಗಪೂರಕ್ಕೆ ತೆರಳಿತು. ಅಲ್ಲಿ ಜಪಾನ್ ಸೈನ್ಯಕ್ಕೂ, ಬ್ರಿಟಿಷ್ ಸೈನ್ಯಕ್ಕೂ ನಡೆದ ಕಾಳಗದಲ್ಲಿ 1942 ನೇ ಜನವರಿ 15 ರಂದು ಜಪಾನ್ ಸಿಂಗಪೂರವನ್ನು ವಶಪಡಿಸಿಕೊಂಡಾಗ ಭಾರತೀಯ ಸಿಪಾಯಿಗಳಿದ್ದ ಬ್ರಿಟಿಷ್ ಸೇನೆ ಶರಣಾಯಿತು. ಆ ಸೇನೆಯಲ್ಲಿ ಧಾರವಾಡದ ಹುಸೇನ್‌ಸಾಬ್ ಅವರೂ ಇದ್ದರು. ಇವರ ಜೊತೆ ಐವತ್ತು ಸಾವಿರಕ್ಕೂ ಮಿಕ್ಕಿದ ಯುದ್ಧ ಕೈದಿಗಳು ಜಪಾನೀಯರ ಬಂಧನದಲ್ಲಿದ್ದರು. ಮುಂದೆ ಜಪಾನ್ ದೇಶದ ಸಹಕಾರದೊಂದಿಗೆ ಭಾರತದ ಸ್ವಾತಂತ್ರ್ಯಕ್ಕಾಗಿ ಸುಭಾಷ್ ಚಂದ್ರ ಬೋಸ್, ಮೇಜರ್ ಫುಜಿಹಾರ, ಕ್ಯಾಪ್ಟನ್ ಮೋಹನ್‌ಸಿಂಗ್ ಕಟ್ಟಿದ ಇಂಡಿಯನ್ ನ್ಯಾಶನಲ್ ಆರ್ಮಿ (1942ನೇ ಸೆಪ್ಟೆಂಬರ್ 1) ಯಲ್ಲಿ 40,000 ಜನ ಸೈನಿಕರಿದ್ದರು. ಅವರಲ್ಲಿ ಜಪಾನ್ ಹಿಡಿದಿಟ್ಟ ಬ್ರಿಟಿಷ್ ಸೇನೆಯಲ್ಲಿದ್ದವರು. ಕೆಲವರು ಐ.ಎನ್.ಎ. ಸೇರಲು ಹಿಂದೇಟು ಹಾಕಿದರೂ ಬಹುಪಾಲು ಭಾರತೀಯ ಸೈನಿಕರು ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಹೋರಾಡಲು ಸಿದ್ಧರಾದರು. ಅವರಲ್ಲಿ ನಮ್ಮ ಧಾರವಾಡದ ಹುಸೇನ್‌ಸಾಬ್ ಗೂಢಾಭಾಯಿಯೂ ಒಬ್ಬರು. ಐ.ಎನ್.ಎ. ಹಾಗೂ ಸುಭಾಷ್ ಚಂದ್ರ ಬೋಸ್‌ರ ಕುರಿತು ಇಂದಿಗೂ ಅತ್ಯಂತ ಹೆಮ್ಮೆಯಿಂದ ಮಾತನಾಡುತ್ತಾರೆ ಗೂಢಾಭಾಯಿ.

ಪ್ರಶ್ನೆ : ಹುಸೇನ್ ಸಾಬ್ ಅವರೆ, ನೀವು ಬ್ರಿಟಿಷ್ ಆರ್ಮಿ ಸೇರಿ ನಂತರ ಅದನ್ನು ತೊರೆದು ಐ.ಎನ್.ಎ. ಸೇರುವಾಗ ನಿಮಗೇನನ್ನಿಸಿತು ?

ಉತ್ತರ: ಹತ್ತನೇ ಇಯತ್ತೆ ಫೇಲಾಗಿ ಮನೇಲಿ ಕುಳಿತವನಿಗೆ ಒಂದು ಕೆಲಸ ಬೇಕಾಗಿತ್ತು. ಆ ಕಾರಣ ಬ್ರಿಟಿಷರ ಮಿಲಿಟರಿ ಸೇರಿದೆ. ಆದರೆ 1942ರಲ್ಲಿ ನಾವು ಜಪಾನೀಯರ ಕೈದಿಗಳಾದಾಗ ಅಲ್ಲಿ ಸುಭಾಷ್ ಚಂದ್ರ ಬೋಸ್, ಮೋಹನ್‌ಸಿಂಗ್ ಹಾಗೂ ಹರ್ನಾಮ್‌ಸಿಂಗ್ ಇವರೆಲ್ಲರ ಭಾಷಣ ನಮ್ಮನ್ನು ನಿಜವಾದ ಸೈನಿಕರನ್ನಾಗಿ ಮಾಡಿತು. ಒಬ್ಬ ಸೈನಿಕನಾಗಿ ನಾನು ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ನಿರ್ಧರಿಸಿದೆ. ಕೆಲವರು ಐ.ಎನ್.ಎ. ಸೇರಲು ನಿರಾಕರಿಸಿ ಯುದ್ಧ ಕೈದಿಗಳಾಗಿಯೇ ಉಳಿದರು. ಆದರೆ ಹೆಚ್ಚಿನ ಜನ ನಾವು ಐ.ಎನ್.ಎ. ಸೇರಿ ಬ್ರಿಟಿಷರ ವಿರುದ್ಧ ಹೋರಾಡಲು ತೀರ್ಮಾನಿಸಿದೆವು. ಆವತ್ತು ನಮಗೆ 'ನಾವು ನಿಜವಾಗಿ ಸೈನಿಕರಾಗಿದ್ದು ಇವತ್ತು' ಎನ್ನಿಸಿತ್ತು.

ಪ್ರಶ್ನೆ: ನೀವು ಸುಭಾಷ್ ಚಂದ್ರ ಬೋಸ್ ಅವರ

ಡಾ॥ ಸಿದ್ದನಗೌಡ ಪಾಟೀಲ

ಜೊತೆ ಮಾತನಾಡಿದ್ದೀರಾ ?

ಉತ್ತರ : ಮೊದಲು ಅವರು ಬಹಿರಂಗ ಭಾಷಣ ಮಾಡುವಾಗ ಸಿಂಗಪೂರ ಮೈದಾನದಲ್ಲಿ ನೋಡಿದ್ದೆ. ಆಗ ನಾವು ಲಕ್ಷಾಂತರ ಜನರಿದ್ದೆವು. ಮುಂದೆ ಬ್ರಿಟಿಷ್ ಸೈನ್ಯದ ಜೊತೆ ಹೋರಾಡುವಾಗ ಬರ್ಮಾ ಗಡಿಯ 'ಪಿಪ್ರೊ' ಎಂಬಲ್ಲಿ ನಮ್ಮ ನಂ. 2-[illegible] ಕಂಪನಿ ಇತ್ತು. ಆಗ ರಾತ್ರಿ ಸುಭಾಷ್ ಚಂದ್ರ ಬೋಸ್ ಅವರು ನಮ್ಮ ಕಂಪನಿಗೆ ಬಂದು ಅಲ್ಲಿಂದ ಫೈರಿಂಗ್ ಲೈನ್ ಕಡೆಗೆ ಹೋಗುತ್ತಿದ್ದರು. ಹೀಗೆ ಒಂದು ದಿನ ಅವರು ಬಂದಾಗ ನಮ್ಮ ಕಮಾಂಡರ್ ಊಟ ಸಿದ್ಧಮಾಡಲು ಹೇಳಿದರು. ನಾನು ಅಡಿಗೆ ಮಾಡಿ ಬೋಸ್ ಅವರಿಗೆ ಊಟಕ್ಕೆ ನೀಡಿದೆ. ಅವರು [illegible] ಮಾಡುತ್ತಾ 'ನಿಮ್ಮ ಊರು ಯಾವುದು' ಎಂದರು. ನಾನು ಮುಂಬೈ ಪ್ರಾಂತದ ಧಾರವಾಡದವನು ಎಂದೆ. ನಾನು ಅಷ್ಟು ದೂರದಿಂದ ಬಂದು ಐ.ಎನ್.ಎ. ಸೇರಿದ್ದಕ್ಕೆ ಖುಷಿಪಟ್ಟರು. ಮುಂದೆ ನಮ್ಮ ಕಮಾಂಡರ್ ಹರ್ನಾಮ್‌ಸಿಂಗ್ [illegible]

([illegible]ನೇ ಪುಟಕ್ಕೆ ಮುಂದುವರಿದಿದೆ)



ಬಸ್‌ನಲ್ಲಿ ಒಂದು ಜಗಳ

ನಗರ ಸಾರಿಗೆ ಬಸ್ಸು ತುಂಬಿ ತುಳುಕುತ್ತಿತ್ತು. ಎಳ್ಳು ಹಾಕಲು ಜಾಗವಿರಲಿಲ್ಲ. ಬೇಸಿಗೆಯಾದ್ದರಿಂದ ಸೆಕೆ ಅಧಿಕವಿತ್ತು. [illegible] ಬೆರೆತು ಒಂದು ರೀತಿಯ ಕಂಪು ಬಸ್ ತುಂಬ ಆವರಿಸಿತ್ತು.

ಬಸ್ಸು ನಿಧಾನವಾಗಿ ಚಲಿಸುತ್ತಿತ್ತು. ಓವರ್ ಲೋಡ್‌ನ ಪ್ರಯುಕ್ತ ಎಡಗಡೆ ಸ್ವಲ್ಪ ಜಾಸ್ತಿಯಾಗಿ ವಾಲುತ್ತಿತ್ತು. ಡ್ರೈವರ್ ಎಡಕ್ಕೆ ಬಸ್ಸನ್ನು ತಿರುಗಿಸಿದಾಗ, ಫುಟ್‌ಬೋರ್ಡ್‌ನ ಪ್ರಯಾಣಿಕರು ''ಹೋ'' ಎನ್ನುತ್ತಿದ್ದರು.

ಬಸ್ ಒಳಗಡೆ ಕುಳಿತವರು ತಮ್ಮ ತಮ್ಮ ಲೋಕಗಳಲ್ಲಿ ಮುಳುಗಿದ್ದರು. ಕೆಲವರು ಇಂದಿನ ರಾಜಕೀಯ ಪರಿಸ್ಥಿತಿ ಬಗ್ಗೆ ಗಮನ ಹರಿಸಿದರೆ, ಇನ್ನೂ ಕೆಲವರು ವಿಶ್ವಕಪ್ ಕ್ರಿಕೆಟ್ ಪಂದ್ಯದ ಬಗ್ಗೆ ವ್ಯಾಖ್ಯಾನಿಸುತ್ತಿದ್ದರು. ಪಡ್ಡೆ ಹುಡುಗರು ಸಿನಿಮಾ ಬಗ್ಗೆ ಮಾತನಾಡುತ್ತಿದ್ದರು. ಕೆಲವು ಮುದುಕರು ''ಬ್ರಿಟಿಷರ ಕಾಲವೇ ಚೆನ್ನಾಗಿತ್ತಪ್ಪಾ.... ಸ್ವಾತಂತ್ರ್ಯ ಬಂದ ಮೇಲೆ ಎಲ್ಲಾ ಹಾಳಾಯ್ತು'' ಎಂದು ಗತಕಾಲದ ವೈಭವದಲ್ಲಿ ಮುಳುಗಿದ್ದರು.

ಹೀಗಿರುವಾಗ, ಯಾರೋ ಒಬ್ಬಾತ ಜೋರಾದ ದನಿಯಲ್ಲಿ ಕಿರುಚುತ್ತಿರುವುದು ಕೇಳಿಸಿತು– ''ಏನ್ರಿ, ಸಿಗರೇಟ್ ಸೇದ್ತಾ ಇದ್ದೀರಲ್ಲಾ... ಅದೂ ಇಂತಹ ಸೆಕೆಯಲ್ಲಿ.... ಸೇದಬಾರ್ದು ಅಂತ ಬರೆದಿರುವುದು ಕಾಣ್ಸೋದಿಲ್ಲವೇನ್ರೀ.... ಮೊದಲು ಬಿಸಾಕ್ರಿ ಅದನ್ನ...''ಪ್ರತಿಯಾಗಿ, ಸಿಗರೇಟ್ ಸೇದುತ್ತಿದ್ದವ ''ನಾನ್ ಸೇದ್ತೀನಿ... ನಿಮ್ಗೆ ಗಂಟೇನ್ ಹೋಗುತ್ತೆ ?... ಇಷ್ಟೆಲ್ಲಾ ಮಾತಾಡೋರು ಬಸ್‌ನಲ್ಲಿ ಏಕ್ರೀ ಬರ್ತೀರಾ... ಹಾಯಾಗಿ ಆಟೋದಲ್ಲಿ ಹೋಗ್ಬೇಕಪ್ಪಾ... ಅದೂ ಅಲ್ಲದೆ ನಾನ್ ಕಿಟಕಿ ಬಳಿ ಕೂತಿದ್ದೀನಿ...'' ಸಮಜಾಯಿಷಿ ನೀಡಿದ.

ನಂತರ ಇಬ್ಬರ ದನಿಯೂ ಜೋರಾಯಿತು. ಸಹ ಪ್ರಯಾಣಿಕರಲ್ಲಿ ಹಲವರು ಆಕ್ಷೇಪ ಎತ್ತಿದವನ ಪರ ವಾದಿಸಿದರು. ಕೆಲವರು ತಮ್ಮ ಪಾಡಿಗೆ ತಾವಿದ್ದರೆ, ಇನ್ನೂ ಕೆಲವರು– ''ರೀ...ಏನ್ರೀ... ನಿಮ್ಗೆ ಬೇರೆ ಕೆಲಸವಿಲ್ಲವೇನ್ರೀ... ಚಿಕ್ಕ ವಿಷಯ ದೊಡ್ಡದು ಮಾಡಿಕೊಂಡು....ಸಾಕು ನಿಲ್ಲಿಸ್ರಿ...'' ಎಂದು ಗಲಾಟೆಗೆ ತೆರೆ ಎಳೆಯಲು ಪ್ರಯತ್ನಿಸುತ್ತಿದ್ದರು. ಸಿಗರೇಟ್ ಸೇದುತ್ತಿದ್ದವನ ಪರವಾಗಿ ಕೆಲವರು ಮಾತನಾಡಿದರು.

ಜಗಳ ನೀನು-ತಾನುಗಳತ್ತ ನಿಧಾನವಾಗಿ ಹೊರಳುತ್ತಿತ್ತು. ಸಿಗರೇಟ್ ಸೇದುತ್ತಿದ್ದವ ಏನೋ ಅಭೂತಪೂರ್ವ ಯಶಸ್ಸನ್ನು ಗಳಿಸಿದ ಹಾಗೆ ಅಟ್ಟಹಾಸದ ನಗೆ ಬೀರುತ್ತಾ, ಆಕ್ಷೇಪವೆತ್ತಿದವನಿಗೆ ''ನೀ ಏನ್ ನನಗೆ ಬುದ್ಧಿ ಹೇಳೋದು... ಗಾಜಿನ ಮನೇಲಿರೋರು ಬೇರೆಯವರ ಮನೆ ಮೇಲೆ ಕಲ್ಲು ಎಸೆಯಬಾರ್ದು... ಗೊತ್ತಾಯ್ತಾ.... ನೀ ಠಾಕುಠೀಕಾಗಿ ಕೂತಿರೋದು ಹೆಂಗಸರಿಗೆ ಕಾದಿರಿಸಿದ ಜಾಗದಲ್ಲಿ... ಕೆಲವು ಹೆಂಗಸರು ಜಾಗ ಬಿಡುವಂತೆ ಕೇಳಿದರೂ ಜಾಗ ಬಿಡದೇ ಇರೋದು ಎಂಥ ನ್ಯಾಯ? ಬಂದ್ಬಿಟ್ಟ ಉಪದೇಶ ಮಾಡೋಕೆ...'' ರೋಪು ಹೊಡೆದ. ಈ ಅಸ್ತ್ರಕ್ಕೆ ಆಕ್ಷೇಪವೆತ್ತಿದವನ ಬಳಿ ಪ್ರತಿ ಅಸ್ತ್ರವಿರದಿದ್ದುದರಿಂದ ಆತ ತಣ್ಣಗಾದ. ಜಗಳ ಹೇಗೆ ಶುರುವಾಯಿತೋ ಹಾಗೆ ತಟಕ್ಕನೆ ಕೊನೆಗೊಂಡಿತು. ಇಷ್ಟಾದರೂ, ಆಕ್ಷೇಪವೆತ್ತಿದವನು ನಿಂತಿದ್ದ ಹೆಂಗಸರಿಗೆ ಸೀಟು ಬಿಟ್ಟುಕೊಡಲಿಲ್ಲ. ಸಿಗರೇಟ್ ಸೇದುತ್ತಿದ್ದವನೂ ರಾಜಾರೋಷವಾಗಿ ಧೂಮ ಸುರುಳಿಗಳಲ್ಲಿ ಮಗ್ನನಾದ.

ಮ. ಶ್ರೀ. ಮುರಳಿಕೃಷ್ಣ

ಸ್ವಲ್ಪ ಸಮಯದ ನಂತರ, ಕಂಡಕ್ಟರ್ ಟಿಕೆಟ್ ಇಶ್ಯು ಮಾಡಲು ಬಸ್ಸನ್ನು ನಿಲ್ಲಿಸಲಾಯಿತು. ಜಗಳಕ್ಕೆ ಕಾರಣರಾದವರಿಬ್ಬರು ಕೆಳಗಿಳಿದು, ಫುಟ್‌ಪಾತ್ ಮೇಲೆ ನಿಂತು, ಪರಸ್ಪರ ಮುಗುಳ್ನಗೆ ವಿನಿಮಯ ಮಾಡಿಕೊಂಡರು. ಸಿಗರೇಟ್ ಸೇದಿದವ ಹೇಳಿದ- ''ಇಲ್ಲಿಯವರೆಗೂ ಪುಕ್ಕಟೆಯಾಗಿ ಪ್ರಯಾಣ ಮಾಡಿದ್ದಾಯ್ತು.'' ಆಕ್ಷೇಪವೆತ್ತಿದವ- ''ನಾನೂ ಅಷ್ಟೇ... ಟಿಕೆಟ್ ತೆಗೆದುಕೊಂಡಿಲ್ಲ... ಯಾಕೆ ತೆಗೆದುಕೊಳ್ಳಬೇಕು ? ಏನ್ ಎಲ್ಲಾ ಸರಿಯಾಗಿದ್ಯಾ ನಮ್ಮ ದೇಶದಲ್ಲಿ ?...'' ಗಹಗಹಿಸಿದ. ಹಸ್ತಲಾಘವ ನೀಡಿ, ಇಬ್ಬರೂ ಜಾಗ ಖಾಲಿ ಮಾಡಿದರು. ಸಂಭಾಷಣೆ ಕೇಳಿಸಿಕೊಂಡ ಪ್ರಯಾಣಿಕರು ಹೇಗೆ ಪ್ರತಿಕ್ರಿಯಿಸಬೇಕೆಂದು ತಿಳಿಯದೆ ಪಿಳಿ ಪಿಳಿ ಕಣ್ಣು ಬಿಟ್ಟರು.

ಮ. ಶ್ರೀ. ಮುರಳಿಕೃಷ್ಣ
ನಂ. 100, 2ನೇ 'ಎ' ಕ್ರಾಸ್, ಗವಿಪುರಂ ಬಡಾವಣೆ
ಬೆಂಗಳೂರು - 560 019

ಮೂಲ (ಭೂತ) ವ್ಯಾಧಿ

[illegible] ಸಭೆ ಗುರುಗಳ ಆಗಮನಕ್ಕಾಗಿ ಕಾತರದಿಂದ ಕಾಯುತ್ತಿತ್ತು. [illegible] ಮಾತ್ರ ಬೇಸರಾಗಿದ್ದ. ಗುರುಗಳು ವೇದಿಕೆಗೆ ಸರಿಯಾಗಿ ಆಗಮಿಸಿ ಪದ್ಮಾಸನದಲ್ಲಿ ಕುಳಿತು, ಸಭೆಯ ಕಡೆ ಒಮ್ಮೆ ದೃಷ್ಟಿ ಹಾಯಿಸಿದರು. ಸಭೆಯಲ್ಲಿದ್ದ ಶಿಷ್ಯರು ಏನೋ ತೊಂದರೆಯಿಂದ [illegible] ಎಂದು ಶಿಷ್ಯರು [illegible] ಗುರುಗಳಿಗೆ ತಡವಾಗಲಿಲ್ಲ. ಕೂಡಲೇ ತಮ್ಮ [illegible] ಶಿಷ್ಯನನ್ನು ಹತ್ತಿರ ಕರೆದು :

[illegible], ''[illegible] ಶಿಷ್ಯ [illegible] ಮಾಡಲಿಲ್ಲವೇ ?''

[illegible]

''[illegible] ಗುರುಗಳೇ'' ಶಿಷ್ಯ ನಮ್ರತೆಯಿಂದ ಉತ್ತರಿಸಿದ.

''[illegible] ಮಾಡಲಿಲ್ಲವೇ ?''

''[illegible] ಗುರುಗಳೇ.''

''[illegible] ?''

''[illegible] ಗುರುಗಳೇ.''

''[illegible] ?''

''[illegible] ಗುರುಗಳೇ.''

[illegible]

ಹಾಗಿರಬೇಕಾದ ಶಿಷ್ಯರ ಮುಖಗಳು ಬಾಡುವುದೆಂದರೇನು? ಬಳಲುವುದೆಂದರೇನು?.... ಏನೋ ಬಲವಾದ ಕಾರಣವಿರಲೇಬೇಕು.

ಏನು ಕಾರಣ? ಕಾರಣವನ್ನು ಶಿಷ್ಯನನ್ನು ಕೇಳಿಯೇ ತಿಳಿಯಬೇಕಾಯಿತು. ಆದರೆ ದೈವಾಂಶ ಸಂಭೂತರಾದ ಗುರುಗಳು ಹಾಗೆ ಮಾಡುವುದೆ? ಹಾಗೆ ಮಾಡುವುದು ಅವರ ದಿವ್ಯದೃಷ್ಟಿಗೆ ಅಪಚಾರವಲ್ಲವೆ?

ಹಾಗೆಂದುಕೊಂಡು ಗುರುಗಳು ತಮ್ಮ ದಿವ್ಯದೃಷ್ಟಿ ಹರಿಸಿದರು. ಆದರೆ ಅದೇಕೋ ದಿವ್ಯದೃಷ್ಟಿಗೆ ಕ್ಯಾಟರಾಕ್ಟ್ ಪೊರೆ ಬಂದಂತಾಗಿ ಶಿಷ್ಯನನ್ನೇ ಕೇಳಿದರು ;

''ಶಿಷ್ಯೋತ್ತಮ, ಏನು ಕಾರಣ ?''

''ಪೈಲ್ಸ್ ಕಂಪ್ಲೇಂಟ್ ಗುರುಗಳೆ.''

''ಅಂದರೆ ಮೂಲವ್ಯಾಧಿ.''

''ಹೌದು ಗುರುಗಳೆ.''

ಪದ್ಮಾಸನದಲ್ಲಿ ಕುಳಿತಿದ್ದ ಶಿಷ್ಯ ಒದ್ದಾಡಿದ.

''ಎಷ್ಟು ಚಿಕ್ಕ ವಯಸ್ಸಿಗೆ? ವಯಸ್ಸಿನ್ನೂ 18.''

''[illegible] ಚಿಕ್ಕದು. ಆದರೆ [illegible] ದೊಡ್ಡದು ಗುರುಗಳೆ.''

''[illegible] ?''

''[illegible] ನಮ್ಮವರೇ ಆಗಿ ನಮಗೇ ಬತ್ತಿ ಇಟ್ಟಾಗ ಆಗುವ [illegible].''

''[illegible] ?''

''ವಾಜಪೇಯಿಯವರು ಪಾಕಿಸ್ತಾನಕ್ಕೆ ತೆರಳಿದ ದಿನದಿಂದ ಗುರುಗಳೆ. ಮೂಲವ್ಯಾಧಿ ನನಗೊಬ್ಬನಿಗೇ ಅಲ್ಲ ಬಂದಿರುವುದು ಗುರುಗಳೆ, ಸಭೆಯಲ್ಲಿ ಎಲ್ಲರಿಗೂ ಬಂದಿದೆ. ಎಲ್ಲರೂ ಪದ್ಮಾಸನದಲ್ಲಿ ಕೂರಲಾರದೆ... ಗುರುಗಳೇ ಸಭೆ ಬೇಗ ಮುಗಿಸಿ.''

ಸಭೆಗೆ ಕೂಡಲೇ ಬರಖಾಸ್ತ್ ಹೇಳಿದರು ಗುರುಗಳು. ನಂತರ ಗುರುಗಳು ಧ್ಯಾನಾಸಕ್ತರಾಗಿ ಯೋಚಿಸ ತೊಡಗಿದರು.

''ಈ ಹಾಳು ಮೂಲವ್ಯಾಧಿ ಮೂಲಭೂತವಾದಿಗಳನ್ನೇ ಏಕೆ ಕಾಡುತ್ತದೆ? ಮೂಲಭೂತ ವಾದಕ್ಕೂ ಮೂಲವ್ಯಾಧಿಗೂ ಏನಾದರೂ ಸಂಬಂಧವಿದೆಯೇ?''

ಯೋಚಿಸುತ್ತಾ ಹೋದಂತೆ ಹಲವಾರು 'ಭೂತ'ಗಳು ಅವರನ್ನು ಕಾಡುವುದಕ್ಕೆ ಶುರುವಾಯಿತು. ಒಮ್ಮೆ ಅವರು ಪೂರ್ವಾಶ್ರಮದಲ್ಲಿ ಉಗ್ರ ಮಾರ್ಕ್ಸ್‌ವಾದಿಯಾಗಿದ್ದಾಗ, ಅವರು ಪಟ್ಟಿದ್ದ ಮೂಲವ್ಯಾಧಿಯ ಯಾತನೆಯ ದಿನಗಳು ನೆನಪಿಗೆ ಬಂದು ಅವರ ಶರೀರ ಬೆವರಿತು.

ಮೂಲಭೂತವಾದಕ್ಕೂ ಮೂಲವ್ಯಾಧಿಗೂ ಏನು ಸಂಬಂಧ ? ಗುರುಗಳು ಪಟ್ಟು ಹಿಡಿದು ಯೋಚಿಸಿದಂತೆಲ್ಲಾ, ಅವರು ಪದ್ಮಾಸನದಲ್ಲಿ ಕೂರುವುದು ಕಷ್ಟವಾಯಿತೇ ಹೊರತು ಅವರ ಪ್ರಶ್ನೆಗೆ ಸೂಕ್ತ ಉತ್ತರ ಹೊಳೆಯಲಿಲ್ಲ.

-ಹಾಸಾಕೃ (ಎಚ್.ಎಸ್. ಕೃಷ್ಣಮೂರ್ತಿ)
ನಂ. 28, 6ನೇ ಮೈನ್, ಮಲ್ಲೇಶ್ವರಂ, ಬೆಂಗಳೂರು - 3



ವಾಜಪೇಯಿ
ನವಾಜ್ ಷರೀಫ್
ಇಬ್ಬರಿಗೂ ನಗುಮುಖ
ತೋರಿಸುವ
ಗೋಮುಖ ವ್ಯಾಘ್ರ
ನೀನೇನೂ
ಹೆದರಬೇಡ
ನವಾಜ್ ನಾವೆಲ್ಲಾ
ನಿನ್ನ ಜೊತೆ
ಇದ್ದೇವೆ...
ಮತದಾರರಿಗೆ
ತೋರಿಸುವಷ್ಟು
ಮುಖ ಇಲ್ಲ..

ಉತ್ತಮ ಅಧ್ಯಾಪಕ

ಅತ್ಯುತ್ತಮ ಕಾಲೇಜು ಅಧ್ಯಾಪಕರು ಯಾರು ಎಂಬುದನ್ನು ಸರ್ಕಾರ ಇತ್ತೀಚೆಗೆ ಪ್ರಕಟಿಸಿ ಅವರಿಗೆ ಪ್ರಶಸ್ತಿ ಘೋಷಿಸಿದೆ. ಆಶ್ಚರ್ಯವೆಂದರೆ ಅದು 1996-97 ಮತ್ತು 97-98ಕ್ಕೆ ಸಂಬಂಧಿಸಿದ್ದು. ಮೂರು ವರ್ಷಗಳ ಹಿಂದೆ ಯಾರು ಉತ್ತಮರಾಗಿದ್ದರೆಂದು ಈಗ ತಿಳಿಯಪಡಿಸುತ್ತಿರುವುದು ನಮ್ಮ ಸರ್ಕಾರ ಎಷ್ಟು ಚುರುಕು ಎಂಬುವಕ್ಕೆ ಒಂದು ಉದಾಹರಣೆ. ಹಿಂದೆ ಉತ್ತಮರಾಗಿದ್ದವರು ಈಗಲೂ ಹಾಗೇ ಉಳಿದಿದ್ದಾರೋ ಇಲ್ಲವೋ ಎಂಬುದನ್ನು ತಿಳಿಯಲು ಮತ್ತೊಂದು ಸಮಿತಿ ಬೇಕಾಗಬಹುದು. ಅದಕ್ಕೆ ಮತ್ತೆ ಶಿಕ್ಷಣತಜ್ಞ ಡಾ॥ ಎಚ್. ನರಸಿಂಹಯ್ಯನವರಿಗೆ ಕೆಲಸ ಕೊಡಬೇಕು ! ಬಿಡುವಿಲ್ಲದಿದ್ದಾಗಲೂ ಇಂತಹ ಸಮಿತಿಗಳಿಗೆ ನೇತಾರರಾಗಲು ಅವರು ಒಪ್ಪುತ್ತಾರೆ, ಅವರ ಶಿಕ್ಷಣ ಸೇವೆಯ ಒಂದು ಭಾಗ ಇದು ಎಂದು ತೋರುತ್ತದೆ.

ಪ್ರಶಸ್ತಿ ಗಳಿಸಿರುವ ಅಧ್ಯಾಪಕರನ್ನು ಅಭಿನಂದಿಸುತ್ತಾ ಅವರು ತಮ್ಮ ವಿದ್ಯಾರ್ಥಿಗಳ ಹಾಗೂ ಸಹೋದ್ಯೋಗಿಗಳ ಮೆಚ್ಚುಗೆಯನ್ನೂ ಪಡೆಯುತ್ತಾರೆಂದು ಆಶಿಸೋಣ. ಏಕೆಂದರೆ, ವಿದ್ಯಾರ್ಥಿಗಳು ಪ್ರಶಸ್ತಿ ಈಗಾಗಲೇ ನೀಡಿಲ್ಲದಿದ್ದರೆ ಸರ್ಕಾರ ನೀಡುವ ಪ್ರಶಸ್ತಿಗೆ ಬೆಲೆ ಬರುವುದಿಲ್ಲ. ಜೊತೆಗೆ, ಸರ್ಕಾರದ ಪ್ರಶಸ್ತಿಗೆ ಅರ್ಜಿ ಬೇರೆ ಸಲ್ಲಿಸಬೇಕೆಂಬ ಮೂರ್ಖ ಪದ್ಧತಿ ಇದೆ. ಹಿಂದೊಮ್ಮೆ ಕಾಲೇಜು ಅಧ್ಯಾಪಕರು ಚಳುವಳಿ ನಡೆಸುತ್ತಿದ್ದಾಗ ಅದನ್ನು ಮುರಿಯಲು ಅಂದಿನ ಮಂತ್ರಿ ಹೂಡಿದ ಯೋಜನೆಗಳಲ್ಲಿ ಪ್ರಶಸ್ತಿದಾನವೂ ಒಂದು. ಬೆಂಗಳೂರಿನ ಒಂದು ಕಾಲೇಜಿನಿಂದ ಈ ವರ್ಷ ಎಂಟು ಮಂದಿ ಪ್ರಶಸ್ತಿಗೆ ಅರ್ಜಿ ಹಾಕಿಕೊಂಡಿದ್ದರು. ಅಲ್ಲಿ ಅಷ್ಟೊಂದು ಉತ್ತಮ ಅಧ್ಯಾಪಕರಿದ್ದರೆ ಕಾಲೇಜು ಉತ್ತಮವಾಗಿರಲೇಬೇಕಲ್ಲ. ಆದರೆ ಹಾಗಿಲ್ಲವೆಂದು ಕೆಲವರ ಅಂಬೋಣ.

ಪ್ರಶಸ್ತಿಗೆ ಅರ್ಜಿ ಹಾಕಬೇಕೆಂಬ ನಿಯಮ ನಾಚಿಕೆಗೇಡಿನದು. ಸರ್ಕಾರ ಅದನ್ನು ನಿಲ್ಲಿಸಬೇಕು, ಇಲ್ಲವೇ ಅಧ್ಯಾಪಕರು ಗೌರವ ಹೊಂದಿದ್ದರೆ ಅರ್ಜಿ ಸಲ್ಲಿಸಲು ನಿರಾಕರಿಸಬೇಕು. ಅರ್ಜಿ ಹಾಕುವುದು, ಆಮೇಲೆ ಯಾವನೋ ಮಂತ್ರಿಯನ್ನೋ, ಶಾಸಕನನ್ನೋ ಭೇಟಿಯಾಗಿ ಶಿಫಾರಸು ಮಾಡಿಸುವುದು, ಇಂಥವೆಲ್ಲಾ ಪ್ರಾರಂಭವಾದರೆ ಅದು ಭ್ರಷ್ಟಾಚಾರಕ್ಕೆ ಎಡೆಗಲ್ಲಾಗುತ್ತದೆ. ಇಂತಹ ಪದ್ಧತಿ ಇರುವಾಗ ಸಮಿತಿಯ ಅಧ್ಯಕ್ಷರಾಗಲು ನಿರಾಕರಿಸುವಂತಹ ಉತ್ತಮ ತೀರ್ಪುಗಾರರೂ ನಮಗೆ ಬೇಕು. ಅರ್ಜಿಗಳನ್ನು ಹಾಕಿದವರು ಇನ್ನು ಮೇಲೆ ಸಮಿತಿಯ ಮುಂದೆ ಸಂದರ್ಶನಕ್ಕೆ ಬರಬೇಕು ಎಂಬ ನಿಯಮವೂ ಬೇಕಾಗಬಹುದು. ಹೀಗೇ ಆದರೆ ಕೊನೆ ಎಲ್ಲಿ?

ಇದಕ್ಕೆಲ್ಲಾ ಪರಿಹಾರವೆಂದರೆ ಆಯಾ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ನೀಡುವ ಪ್ರಶಸ್ತಿಯಿಂದ ತೃಪ್ತರಾಗಿ ತಮ್ಮ ಬೋಧನಾ ಕೆಲಸಗಳಲ್ಲಿ ಅಧ್ಯಾಪಕರು ತೊಡಗುವುದು. ಅದಕ್ಕಿಂತಲೂ ಉತ್ತಮವಾದ ಪ್ರಶಸ್ತಿ ಇನ್ನಾವುದಿದೆ?

ಆಕಾಶವಾಣಿಯಲ್ಲಿ ಏನೆಲ್ಲಾ ವಿಷಯಗಳನ್ನು ಕಲಿಸುತ್ತಾರೆಂದು ಗೊತ್ತಲ್ಲ; ಕೃಷಿ, ಸಂಗೀತ, ಹಿಂದಿ, ವಿಜ್ಞಾನ, ಇತ್ಯಾದಿ. ಜೊತೆಗೆ ಸಂಸ್ಕೃತ. ಅದೇ ಭಾರತದ ಜೀವಾಳವೆಂಬ ರೀತಿಯಲ್ಲಿ ಬೋಧನೆ ನಡೆಯುವುದು ರೂಢಿ. ಇದರಲ್ಲಿ ಈಚೆಗೆ ಅನುಸರಿಸುತ್ತಿರುವ ಒಂದು ಪದ್ಧತಿ ಇದೆ. ಅದೇನೆಂದರೆ ಪಾಠಗಳನ್ನು ದೆಹಲಿಯಲ್ಲಿ ರಚಿಸಿ ದೆಹಲಿಯ ವಿದ್ವಾಂಸರೇ ಸಂಸ್ಕೃತ ವಾಕ್ಯಗಳನ್ನೂ ಪದ್ಯಗಳನ್ನೂ ಪಠಿಸುತ್ತಾರೆ. ಅರ್ಥ ಮತ್ತು ತಾತ್ಪರ್ಯಗಳನ್ನು ಇಲ್ಲಿಯವರು ಕನ್ನಡದಲ್ಲಿ ಹೇಳುತ್ತಾರೆ. ಹಿಂದೆಲ್ಲಾ ಪಾಠಗಳ ರಚನೆ ಇಲ್ಲೇ ನಡೆದು, ಇಲ್ಲಿಯವರೇ ಅಧ್ಯಾಪಕರು, ವಿದ್ಯಾರ್ಥಿಗಳು ಇರುತ್ತಿದ್ದರು. ಆಗ ಸರಿಯಾಗಿ ಬೋಧನೆ ನಡೆಯಲಿಲ್ಲವೆಂದೋ ಏನೋ ಈಗ ದೆಹಲಿಯ ವಿದ್ವಾಂಸರನ್ನೇ ತಂದಿದ್ದಾರೆ. ಇಂತಹ ಚಿಕ್ಕ ವಿಷಯಗಳಲ್ಲೂ ರಾಜ್ಯಗಳ ಸ್ವಾಯತ್ತ ಭಾಗವಹಿಸುವಿಕೆಯನ್ನು ತುಂಡರಿಸಲಾಗುತ್ತಿರುವುದು ಶೋಚನೀಯ.

ಇಲ್ಲಿಯ ಆಕಾಶವಾಣಿ ಅಧಿಕಾರಿಗಳು ಹಾಗೂ ಸಂಸ್ಕೃತ ಅಧ್ಯಾಪಕರು ಇದನ್ನೇಕೆ ಒಪ್ಪಿದ್ದಾರೋ ತಿಳಿಯದು. ದೆಹಲಿಯ ಸಂಸ್ಕೃತ ಉಚ್ಚಾರಣೆಯು ಇಲ್ಲಿಯ ಕಿವಿಗಳಿಗೆ ಹಿತವಾಗಿರುವುದಿಲ್ಲ ಮತ್ತು ಇಲ್ಲಿಯ ವಿದ್ಯಾರ್ಥಿಗಳು ಅದನ್ನು ಗ್ರಹಿಸುವುದಿಲ್ಲ. ಮುರಳಿ ಮನೋಹರ ಜೋಶಿಯವರು ಎಲ್ಲ ಶಿಕ್ಷಣವನ್ನೂ ಅವರ ಮೂಗಿನಡಿಯೇ ತಯಾರಾದ "ಸರಸ್ವತೀ ವಿದ್ಯಾಮಂದಿರ"ದ ಪಂಡಿತರಿಂದ ಕೊಡಿಸಲು ಹೊರಟಿದ್ದಾರೆ. ಅವರ "ಸಂಸ್ಕೃತಿ"ಯನ್ನು ಪ್ರಚಾರ ಮಾಡಲು ಅವರೇ ಸಂಸ್ಕೃತವನ್ನು ಹೇಳಿಕೊಡಬೇಕಾದ ಅನಿವಾರ್ಯತೆ ಅವರಿಗಿರಬಹುದು. ಆದರೆ ಅದು ಹೀನಾಯ ಪ್ರವೃತ್ತಿ ಕೂಡ.

ಒಂದು ಸಂಗತಿ

ಮಧ್ಯಪ್ರದೇಶದಲ್ಲಿ ಈಗ್ಗೆ ಸುಮಾರು ಎರಡು ದಶಕಗಳ (1980ರ ಸುಮಾರಿನಲ್ಲಿ) ಹಿಂದೆ ನಾನು ಅಧೀಕ್ಷಣ ಯಂತ್ರಿಯಾಗಿದ್ದಾಗ (ಸೂಪರಿಂಟೆಂಡಿಂಗ್ ಇಂಜಿನಿಯರ್) ನಡೆದೊಂದು ಸಂಗತಿ. ಶಿವಪುರಿ ಎಂಬ ಒಂದು ಜಿಲ್ಲೆ. ಅಲ್ಲಿ ಪ್ರವಾಸ ಮಾಡುತ್ತಿದ್ದಾಗ, ನನ್ನನ್ನು ಕೆಲ ಹಳ್ಳಿಗರು ತುರ್ತಾಗಿ ಭೇಟಿ ಮಾಡಿ, ಅವರ ಹಳ್ಳಿಯ ಕಥೆ ಹೇಳಿ ಮೊರೆಯಿಟ್ಟರು. ಅವರ ಹಳ್ಳಿ ಜಿಲ್ಲೆಯ ಅಂಚಿನಲ್ಲಿ, ರಾಜಸ್ಥಾನದ ಸರಹದ್ದಿನ ಬಳಿ, ಸ್ಥಿತಿಗೊಂಡಿದ್ದು ಸುಮಾರು 50 ವರ್ಷಗಳಿಂದಲೂ ನೀರಿನ ಕ್ಷಾಮದಿಂದ ಬೇಸತ್ತ ಅವರ ಜೀವನಕ್ಕೆ ಯಾವ ಸರಕಾರವೂ ಗಮನಕೊಟ್ಟರಲಿಲ್ಲ. ಏಕೆಂದರೆ, ಅದೊಂದು ರಾಜ್ಯದ ಕೊನೆಯಲ್ಲಿ ಕಾಡಿನ ಮಧ್ಯೆ ಇತ್ತು ಮತ್ತು ಸರಹದ್ದಿನಲ್ಲಿ ಇದ್ದುದರಿಂದ ಪಕ್ಕದ ರಾಜಸ್ಥಾನವೂ ಪ್ರಶಾಸನಿಕ ಸಂಬಂಧವಿಲ್ಲದ್ದರಿಂದ ಗಮನ ಕೊಡಲಿಲ್ಲ.

ಅದಕ್ಕೆ ಸುಮಾರು 50 ವರ್ಷಗಳ ಹಿಂದೆ, ಗ್ವಾಲಿಯರ್ ಮಹಾರಾಜರು ಬೇಟೆ ಆಡಲು ಬಂದಾಗ ಅವರ ಕಷ್ಟವನ್ನು ಗ್ರಹಿಸಿ, ಒಂದು ಚಿಕ್ಕ ಕೆರೆಯನ್ನು ಕಟ್ಟಿಕೊಟ್ಟಿದ್ದರು. ಆದರೆ ಮೊದಲನೆಯ ವರ್ಷದಲ್ಲೇ ಪೂರ್ತಿ ನೀರು ತುಂಬಿದ ಕೆಲವು ಸಮಯ ನಂತರ ಕೆರೆ ಕಟ್ಟೆ ಒಡೆದು ಖಾಲಿ ಆಗಿಹೋಯಿತು. ಅಂದಿನಿಂದ ಯಥಾಪ್ರಕಾರ ಯಾರೂ ಕೇಳದೆಯೆ ಪರಿಸ್ಥಿತಿ ಎಂದಿನಂತೆ ! ನೀರಿನ ಬರದಿಂದ ಪೀಡಿತರಾಗಿ, ವರ್ಷಾನುಗಟ್ಟಲೆ ಆದಮೇಲೆ ಕಷ್ಟಪಟ್ಟು ನನ್ನನ್ನು ಭೇಟಿಮಾಡಿ ಆ ಘಳಿಗೆಯಲ್ಲೇ ಹಳ್ಳಿಗೆ ಬರಬೇಕೆಂದು ಒತ್ತಾಯ ಮಾಡಿದರು. ಅವರ ಕಥೆ ಕೇಳಿ, ಪ್ರವಾಸ ಬದಲಾಯಿಸಿ, ಅವರ ಜೊತೆಗೆ ಅವರ ಹಳ್ಳಿಗೆ ನಾನು ಹೊರಟೆ. ಹಳ್ಳಿ ತಲುಪುವುದಕ್ಕೆ ಸುಮಾರು 5 ಘಂಟೆಗೂ ಹೆಚ್ಚು ಕಾಲ ಹಿಡಿಯಿತು. ಹಳ್ಳಿ ತಲುಪಿದ ಕೂಡಲೇ ಅಲ್ಲಿನ ಮಹಿಳೆಯರೆಲ್ಲರೂ ತಂಡತಂಡವಾಗಿ ನನ್ನ ಸುತ್ತಲೂ ಸೇರಿ, ನೀರಿನ ಕೊರತೆಯಿಂದ ಅವರು ಪಡುವ ಕಷ್ಟಗಳ ಕಥೆಗಳನ್ನು ಹೇಳಿಕೊಂಡರು. ಹತ್ತಿರವಾದ ಕುಡಿಯುವ ನೀರಿನ ಬಾವಿ ಸುಮಾರು 15 ಕಿ. ಮೀ. ದೂರ. ಅಷ್ಟು ದೂರದಿಂದ ಕೊಡದಲ್ಲಿ ಹೊತ್ತು ತರುವುದೇ ದಿನದ ಮುಖ್ಯ ಕಾರ್ಯ ಮತ್ತು ದಿನವೆಲ್ಲಾ ಅದರಲ್ಲೇ ಕಳೆದುಹೋಗುತ್ತಿತ್ತು. ಅದಲ್ಲದೆ ಆ ಹಳ್ಳಿಗೆ ಬೇರೆ ಹಳ್ಳಿಯ ಯಾವ ಹುಡುಗಿಯನ್ನೂ ಮದುವೆ ಮಾಡಿಕೊಡುತ್ತಿರಲಿಲ್ಲ. ಏಕೆಂದರೆ ಆ ಹಳ್ಳಿಗೆ ಹೋದರೆ ಹುಡುಗಿಯ ಜೀವನಕಾಲವೆಲ್ಲಾ ನೀರು ತರುವುದರಲ್ಲೇ ಕಳೆಯಬೇಕಿತ್ತು. ಈ ಪರಿಸ್ಥಿತಿಯಲ್ಲಿ ಅಲ್ಲಿನ ಹುಡುಗರಿಗೆ ಮದುವೆಯೇ ಇಲ್ಲ. ಹುಡುಗರೆಲ್ಲ ಮದುವೆಗೋಸ್ಕರ ಊರು ಬಿಡಬೇಕಾಗುತ್ತಿತ್ತು. ಇಲ್ಲವೆ ಬ್ರಹ್ಮಚಾರಿಗಳಾಗಿಯೇ ಬದುಕಬೇಕು.

ಈ ಕಥೆಗಳನ್ನು ಕೇಳುತ್ತಾ ಮತ್ತು ಪ್ರವಾಸದಿಂದ ದಣಿದಿದ್ದರಿಂದ ಕುಡಿಯುವುದಕ್ಕೆ ನೀರು ಕೇಳಿದರೆ, ಅಲ್ಲಿನ ಹೆಂಗಸರು ಹೀಗೆ ಹೇಳಿದರು : "ಸ್ವಾಮೀ, ನೀರೊಂದು ಕೇಳಬೇಡಿ, ಅದನ್ನು ಕೊಡಲು ನಾವು ಶಕ್ತರಲ್ಲ, ಮುದುಕರು ಮತ್ತು ಮಕ್ಕಳಿಗೆ ಇಟ್ಟಿದ್ದೇವೆ. ಹಾಲು ಕೊಡ್ತೀವಿ. ಕುಡೀರಿ. ಹಾಲು ಕುಡಿದು ನಮಗೆ ನೀರಿನ ಸಮಸ್ಯೆ ಪರಿಹರಿಸಲು ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಮಾತುಕೊಡಿ" ಎಂದರು. ಅವರ ಕಥೆ ಎಲ್ಲಾ ಕೇಳಿ ನನಗೆ ಮತ್ತು ನನ್ನ ಕಾರ್ಯನಿರ್ವಾಹಕ ಯಂತ್ರಿಗೆ ಹಾಲು ಕುಡಿಯಲು ಮನಸ್ಸಾಗಲಿಲ್ಲ. ಆಗ ನಾನು ಹಳ್ಳಿಯವರ ಜೊತೆಯಲ್ಲಿ ಒಡೆದ ಕೆರೆ ಕಟ್ಟೆಯ ಸ್ಥಳ ಪರೀಕ್ಷಣ ವಿಶದವಾಗಿ ಮಾಡಿ ಅದನ್ನು ಪುನರುಜ್ಜೀವನಗೊಳಿಸುವುದೇ ಮುಖ್ಯ ಕರ್ತವ್ಯವೆಂದು ತಿಳಿದು, ಆ ಹಳ್ಳಿಯ ಮಹಿಳೆಯರಿಗೆ ಮತ್ತು ಜನತೆಗೆ ಕೆರೆಕಟ್ಟೆಯ ಪುನರ್ನಿರ್ಮಾಣ ಮಾಡುತ್ತೇವೆ ಅಂತ ಮಾತು ಕೊಟ್ಟೆ ಮತ್ತು ಅವರಿಗೆ ಕೆರೆ ಜೀರ್ಣೋದ್ಧಾರವಾದಮೇಲೆ. ಅದರ ನೀರನ್ನು ಅವರಿಂದಲೇ ಅವರ ಜೊತೆಗೆ ಕುಡಿದು ಆಮೇಲೆ ಹಾಲು ಕುಡಿಯುತ್ತೇನೆ ಎಂದು ಹೇಳಿ ಮರು ಪ್ರಯಾಣ ಮಾಡಿ ಗ್ವಾಲಿಯರ್‌ನಲ್ಲಿ ನನ್ನ ಸ್ಥಾನಕ್ಕೆ ಹಿಂತಿರುಗಿದೆ.

ಹಿಂತಿರುಗುವ ಮುನ್ನ ಅಲ್ಲಿನ ಕಾರ್ಯನಿರ್ವಾಹಕ ಯಂತ್ರಿಗೆ ತತ್‌ಕ್ಷಣವೇ ಸರ್ವೇಕ್ಷಣ ಮಾಡಲು ಆದೇಶಕೊಟ್ಟು, ಸರ್ಕಾರದಿಂದ ಪುನರುಜ್ಜೀವನ ಮಂಜೂರಿ ಬಂದಕೂಡಲೇ ಕಾರ್ಯ ಆದಷ್ಟು ಬೇಗ ಮಾಡಬೇಕೆಂದು ನಿರ್ದೇಶಿಸಿದೆ. ನಾನು ಸರಕಾರಕ್ಕೆ ವಿಶದವಾಗಿ ವರದಿ ಮಾಡಿ ಮಂಜೂರಾತಿ ತೆಗೆದುಕೊಂಡು ಜೀರ್ಣೋದ್ಧಾರ ಕಾರ್ಯ ಮುಗಿಸಿದೆ.

ನೀರು ತುಂಬುವ ವೇಳೆಗೆ ನಾನು ದೆಹಲಿಗೆ ನರ್ಮದಾ ಯೋಜನೆ ಸಲುವಾಗಿ ವರ್ಗಾಂತರವಾದ್ದರಿಂದ ಆ ಕೆರೆಯ ನೀರು ಕುಡಿದು ಆ ಹಳ್ಳಿಯ ಹಾಲು ಕುಡಿಯುವ ವಾಗ್ದಾನ ನೆರವೇರಿಸಲಾಗಲಿಲ್ಲ. ಆದರೂ ಕೆಲದಿನಗಳಾದ ಮೇಲೆ ಹಳ್ಳಿಯ ಇಬ್ಬರು ದೆಹಲಿಗೆ ಬಂದು ನನ್ನ ಭೇಟಿ ಮಾಡಿ, "ಹಳ್ಳಿಗೆ ಬನ್ನಿ, ಕೆರೆಯ ನೀರು ಪೂರ್ತಿ ತುಂಬಿದೆ, ಎಲ್ಲೆಡೆಯೂ ಅಲ್ಲಿ ಹರ್ಷ ಮತ್ತು ಹೆಚ್ಚಾಗಿ ಮಹಿಳೆಯರು ಸುಖದಿಂದ ಇದ್ದಾರೆ. ಹಳ್ಳಿಗೆ ಬಂದು ಕೆರೆಯ ನೀರು ಕುಡಿದು ಹಾಲು ಕುಡಿಯುವ ಮಾತು ನೆರವೇರಿಸಲು ಬನ್ನಿ" ಎಂದು ಒತ್ತಾಯ ಮಾಡಿದರು. ಆದರೆ ಹೊಸ ಕೆಲಸದ ಒತ್ತಡದಿಂದ ಇಂದಿನವರೆಗೆ ಅದು ಆಗದೆ ನಿಂತಿದೆ. ಎಂದಾದರೊಂದು ದಿನ ಅಲ್ಲಿಗೆ ಹೋಗಿ ಅಲ್ಲಿಯ ಮಹಿಳೆಯರ ನಗುಮುಖ ನೋಡಿ ಮಾತು ನೆರವೇರಿಸುವ ಆಸೆ ಇನ್ನೂ ಇದೆ.

– ಬಿ. ಎಸ್. ಭವಾನಿಶಂಕರ್

ನಂ. 76, 7ನೇ ಮೇನ್, 4ನೇ ಕ್ರಾಸ್, ಕೆ. ಎಸ್. ಆರ್. ಟಿ. ಸಿ. ಲೇಔಟ್, ಜೆ. ಪಿ. ನಗರ, 2ನೇ ಹಂತ, ಬೆಂಗಳೂರು 78

ಸ್ವಾಯತ್ತತೆಯ ದಮನ

ಭಾರತ ಗಣರಾಜ್ಯವು ಅನೇಕ ರಾಜ್ಯಗಳ ಒಕ್ಕೂಟ. ಇದರಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಿತಿಗೆ ಒಳಪಡುವ ಅಂಶಗಳನ್ನು ಸಾಕಷ್ಟು ಸ್ಪಷ್ಟವಾಗಿ ನಿಗದಿಗೊಳಿಸ ಲಾಗಿದೆ. ರಾಷ್ಟ್ರವೆಲ್ಲಾ ಒಂದು ಎಂಬ ಮಾತನ್ನು ರಾಜ್ಯಗಳ ಮಿತಿಯಲ್ಲಿ ಬರುವ ಅಂಶಗಳಲ್ಲಿ ಹಸ್ತಕ್ಷೇಪ ಮಾಡಲು ಕೇಂದ್ರವು ಉಪಯೋಗಿಸಿಕೊಂಡರೆ ಒಂದಲ್ಲ ಒಂದು ದಿನ ಒಡಕುಂಟಾಗುವುದು ಅನಿವಾರ್ಯ. ರಾಜ್ಯಗಳ ಸ್ವಾಯತ್ತತೆ ಹಾಗೂ ಜವಾಬ್ದಾರಿಗಳನ್ನು ಮೊಟಕುಗೊಳಿಸುವ ಯಾವುದೇ ಯೋಜನೆಯು ಕ್ರಮೇಣ ಒಕ್ಕೂಟವು ಶಿಥಿಲವಾಗಲು ಕಾರಣವಾಗುತ್ತದೆ. ಸುಭದ್ರವಾದ ಕೇಂದ್ರ ಇರಬೇಕಾದರೆ ರಾಜ್ಯಗಳ ಸ್ವಾಯತ್ತತೆ ಮತ್ತು ಅಭಿವೃದ್ಧಿಗಳಿಗೆ ಗೌರವ ಕೊಡಬೇಕು, ಅವನ್ನು ಕಡೆಗಾಣಿಸಬಾರದು.

ಕಳೆದ ಐವತ್ತು ವರ್ಷಗಳಲ್ಲಿ ಇದನ್ನು ಕುರಿತಂತೆ ಬೇಕಾದಷ್ಟು ಚರ್ಚೆಗಳಾಗಿವೆ. ಕೆಲವೊಮ್ಮೆ ಕೇಂದ್ರ ಮತ್ತು ರಾಜ್ಯಗಳ ನಡುವೆ ತಿಕ್ಕಾಟವೂ ಉಂಟಾಗಿದೆ. ಸಂವಿಧಾನದಲ್ಲಿ ಕೆಲವು ವಿಷಯಗಳು ಕೇಂದ್ರ ಮತ್ತು ರಾಜ್ಯಗಳೆರಡರ ಮಿತಿಗೂ ಒಳಪಡುವಂತೆ ಗುರುತಿಸಲ್ಪಟ್ಟಿವೆ. ಅಂತಹ ವಿಷಯಗಳಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವೆ ಒಮ್ಮತದ ನೀತಿಯ ಅನುಸರಣೆ ಅಗತ್ಯವಾಗುತ್ತದೆ. ಇದು ಒಕ್ಕೂಟದ ಪ್ರಾಥಮಿಕ ಸೂತ್ರ.

ಅಧಿಕಾರದಲ್ಲಿರುವವರು ಸ್ವಂತದ ಪಕ್ಷ ದೃಷ್ಟಿಯಿಂದ ಇಂತಹ ನಿಯಮಗಳನ್ನು ಮುರಿಯಲಾರಂಭಿಸಿದರೆ ಮನೆಗೆ ಬೆಂಕಿ ಹಾಕಿಕೊಂಡಂತಾಗುತ್ತದೆ. ಆ ಸಂದರ್ಭದಲ್ಲಿ ತಾತ್ಕಾಲಿಕವಾಗಿ ಅವರ ಪಕ್ಷದ ವರ್ಚಸ್ಸು ಸ್ವಲ್ಪ ಹೆಚ್ಚಬಹುದು. ಆದರೆ ಆಮೇಲೆ ಬೆಂಕಿ ಆರಿಸಲು ಎಷ್ಟು ನೀರು ತಂದರೂ ಸಾಲದೆ ಹೋಗುತ್ತದೆ.

ಇಂದು ಕೇಂದ್ರದಲ್ಲಿ ಹೇಗೋ ಉಳಿದುಕೊಂಡಿರುವ ಭಾರತೀಯ ಜನತಾ ಪಕ್ಷದ ನೇತೃತ್ವದ ಸಮ್ಮಿಶ್ರ ಸರ್ಕಾರಕ್ಕೆ ಇವೆಲ್ಲಾ ವ್ಯಾವಹಾರಿಕವಾಗಿ ಅನಗತ್ಯವೆಂದು ತೋರುತ್ತದೆ. ಭಾಜಪದ ಕಮಲ ಹುಟ್ಟಿಕೊಳ್ಳಲು ಎಲ್ಲೆಲ್ಲೂ ಕೆಸರನ್ನು ಮಾಡುವುದು ಆ ಪಕ್ಷದ ನೀತಿಯಾಗುತ್ತಿದೆ. ಇದು ರಾಷ್ಟ್ರೀಯ ಸಮಗ್ರತೆಗೆ ದೊಡ್ಡ ಪೆಟ್ಟಾಗಿ ಪರಿಣಮಿಸಿದಾಗ ಇಡೀ ರಾಷ್ಟ್ರ ಕ್ಷಕ್ಕೆ ಹಿಸುಕಿಕೊಳ್ಳಬೇಕಾಗುತ್ತದೆ.

ಸದ್ಯದ ಒಂದು ಚಿಕ್ಕ ಉದಾಹರಣೆಯನ್ನು ನೋಡೋಣ : ಇತ್ತೀಚೆಗೆ ಕೇಂದ್ರ ಸರ್ಕಾರವು "ರಾಷ್ಟ್ರೀಯ ಪುನರ್ರಚನಾ ಪಡೆ" ಎಂಬುದೊಂದನ್ನು ಹುಟ್ಟುಹಾಕಿದೆ. ಪ್ರಾರಂಭಕ್ಕೆ ರಾಷ್ಟ್ರದ [illegible] ಜಿಲ್ಲೆಗಳಲ್ಲಿ ಈ ಪಡೆಯು ಕಾರ್ಯಪ್ರವೃತ್ತವಾಗುತ್ತದೆ [illegible] ಅದಕ್ಕಾಗಿ 12 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ಈ ಪಡೆಯು ರಚನೆಯಾಗಿರುವ [illegible] [illegible]

ಕಾರ್ಯದ ಅಗತ್ಯವನ್ನು ಯಾರು ತಾನೆ ಅಲ್ಲಗಳೆಯಲಾದೀತು ?

ಒಕ್ಕೂಟದ ಕಲ್ಪನೆಗೆ ತೊಂದರೆಯುಂಟಾಗುವುದು ಈ ಪಡೆಯ ರಚನೆ ಮತ್ತು ಕಾರ್ಯಕ್ರಮಗಳಲ್ಲಿ ರಾಜ್ಯದ ಭಾಗವಹಿಸುವಿಕೆ ಮತ್ತು ಉಸ್ತುವಾರಿ ಇಲ್ಲದಾಗ. ಒಂದು ಪಕ್ಷದ ಪ್ರತಿನಿಧಿಗಳನ್ನು ಸೇರಿಸಿ ಇಂತಹ ಪಡೆ ರಚಿಸಿದರೆ ಕೇಂದ್ರದ ಹಣವನ್ನು ತಮ್ಮ ಪಕ್ಷದ ಕಾರ್ಯಕರ್ತರಿಗೆ ಹಂಚಿಕೊಡಲು ಹೂಡಿದ ಹುನ್ನಾರವಾಗಿ ಇದು ಕಾಣುತ್ತದೆ. ಮತ್ತು ಆ ಪಡೆಯು ಆ ಪಕ್ಷದ ವಿಕಾಸಕ್ಕೆ ಆದ್ಯತೆ ನೀಡಬಹುದೇ ಹೊರತು ಪ್ರಾದೇಶಿಕ ಪುನರ್ರಚನೆಗೆ ಆಗಿರುವುದಿಲ್ಲ. ಸದ್ಯದಲ್ಲಿ ಕೇಂದ್ರ ಸರ್ಕಾರ ಮಾಡಿರುವುದು ಇದನ್ನೇ. ಒಂದೊಂದು ಜಿಲ್ಲೆಯಲ್ಲೂ ಒಂದು ಸಾವಿರ ಮಂದಿಯನ್ನು ಆಯ್ಕೆ ಮಾಡಿ ರಚನಾ ಕೆಲಸಕ್ಕೆ [illegible]

[illegible]

ಆಕಾಶ



ಅವಕಾಶವಾಕಾಶಕ್ಕೆ ನೀವು
ತೆರೆದ ಪಂಜರದಿಂದ ಹಾರುತ್ತಿರುವ
ನಮ್ಮ ಹಕ್ಕಿಗಳು ಎಷ್ಟೊಂದು
ಎತ್ತರಕ್ಕೆ ಏರಿ ನಿಂತಿವೆ ನೋಡಿ.

ಧ್ರುವ ನಕ್ಷತ್ರಕ್ಕೆ ಮುಖಾಮುಖಿ ಹಕ್ಕಿ
ಬಿಕ್ಕಿ ಕೇಳುತ್ತಿದೆ: ನಾನೇಕೆ ಅಸ್ಪೃಶ್ಯತೆಯ
ಪಂಜರದಲ್ಲಿದ್ದೆ ?

ನಿಟ್ಟುಸಿರಿಡುತ್ತಿದೆ ಹಕ್ಕಿ, ನಮ್ಮ ಹಿಂಡಿನ
ಮರಿ ಹಕ್ಕಿ ಹಿರಿ ಹಕ್ಕಿಗಳ ಬಿಡಿಸುವ
ಚಂದ್ರಾಮ ಬಂದಾನು ಎಂದು !

ಉಸಿರ ಬಿಸಿಗೆ ನಕ್ಷತ್ರಗಳುದುರಿ
ರಂಗೋಲಿಯಾಗಿವೆ ಪಕ್ಷಗಳಂಗಳದಲ್ಲಿ
ನಕ್ಷೆಗಳ ಗಡಿಯಲ್ಲಿ ಭಿಕ್ಷೆಗಾಗಿ ನಿಂತ
ಕವಿಗಳ ಕೈಗಂಗಾಳದಲ್ಲಿ

ಉದುರುದುರಿ ಬರಿದಾದ
ಆಕಾಶದ ತುಂಬ ಚಿಲಿಪಿಲಿ ನಾದ
ತಮಗೆ ತಾವೆ ಥಿಕ್ಕಿ ರೆಕ್ಕೆಗಳು ಹರಿದು
ರಕ್ತ ತೊಟ್ಟಿಕ್ಕುತಿದೆ. ಭೂ ಮಂಡಲದ
ಅಗಲಕ್ಕೆ ಚಪ್ಪರ ಕಟ್ಟುವವರು ಯಾರೋ
ನಮ್ಮ ಮನೆಯಂಗಳದಿ ಬಿದ್ದ
ಕೆಂಪುಕಲೆ ತೊಳೆಯುವವರು ಯಾರೋ

ಪಂಜರದ ಗಿಣಿ ಗುನುಗುತ್ತಿದೆ
ಬಿಡುಗಡೆಯ ರಾಗ
ಕತ್ತಲು ಹರಿದೀತು ಬೆಳಕು ಬಂದೀತು
ಹಿಂಡಿನಕ್ಕಿಗಳೆಲ್ಲ ಗುಂಡಿನೆದೆಗೆ
ಕೊಟ್ಟಾವು ಎದೆಯಾ

ಡಾ॥ ಎಲ್. ಹನುಮಂತಯ್ಯ

ನೀಲಾಕಾಶದಿ ಇಂದ್ರನೈರಾವತ
ಕಂಡು ಅರಸರಡಿಯಲ್ಲಿ ಪಿತಗುಡುವ
ಪಕ್ಷಿಪಿಂಡಗಳ ಬಿಡಿಸೆಂದು
ಕೇಳಲಾಗದೆ ಕೆರಳಿ ಇತಿಹಾಸ ಚಕ್ರ
ಚಲಿಸಿದವರು
ಚರಕ ಕೊರಗುಡುವ ಸದ್ದು ಕೇಳಿ
ಕೀಲೆಣ್ಣೆಯಾಗಿ ಕಿಲುಬಾಗಿ ಸೊರಗಿದರೂ
ಕಿಲಕಿಲನೆ ನಗುತ ನರಳಿದವರು
ನೀಲಾಕಾಶದ ತುಂಬ ಕಪ್ಪು ಕಾಜಾಣಗಳು
ಬಿಳಿ ಪಾರಿವಾಳಗಳು ಬಿಡುಗಡೆಯ
ಬಾವುಟದ ಚಿತ್ರ ಬಿಡಿಸಿ
ಕಾಶ್ಮೀರದ ಹಸಿರಿಗೆ ಹರಕೆ ಹೊತ್ತು
ದೇಶದ ಕಿಚ್ಚಿಗೆ ಪೊರಕೆ ಹಿಡಿದು
ಹಿಂಡು ಹಿಂಡಾಗಿ ಬಂಡುಕೋರರ ಮನೆಯ
ಹಿತ್ತಲಲಿ ಬಿತ್ತಿಹರು ಪಿಸುದನಿಯ ಬಳ್ಳ
ಗರಿಕೆ ಹಸಿರು ಚಿಗುರು

ಡಾ॥ ಎಲ್. ಹನುಮಂತಯ್ಯ
ನಂ. 1027, 3ನೇ ಬ್ಲಾಕ್, 3ನೇ ಸ್ಟೇಜ್
ಬಸವೇಶ್ವರನಗರ, ಬೆಂಗಳೂರು - 79

ವಿನಂತಿ

ರವಿಕುಮಾರ್ ಅಜ್ಜೀಪುರ

ಕಟ್ಟಬೇಕೆಂದಿದ್ದೇನೆ
ಗುಡಿಗೋಪುರ ಮಂದಿರ ಮಸೀದಿ
ಚರ್ಚುಗಳನ್ನೆಲ್ಲ ಒಡೆದು
ಕಡೆದ ಪ್ರೀತಿಯನ್ನಷ್ಟೇ ತೆಗೆದು
ನೂರಾರು ಮಹಲು

ಇಲ್ಲಿ ಕದವಿಲ್ಲ, ಕಿಟಕಿಯಿಲ್ಲ
ಇಳಿಬಿಟ್ಟ ಪರದೆಗಳ ಗೋಜಿಲ್ಲ
ಕುರ್ಚಿ ಮೇಜು
ಸುಖಾಸನಗಳ ಸುಳಿವಿಲ್ಲ
ಖರೆ ಅಂದರೆ ಇಲ್ಲಿ
ಬಳಸುವ ಗೋಡೆಗಳೇ ಇಲ್ಲ
ನೀವೂ ಬನ್ನಿ ನಿಮ್ಮೊಟ್ಟಿಗೆ

ಎಲ್ಲರನೂ ಕರೆತನ್ನಿ
ಇಲ್ಲಿ ಜಾತಿ ಮತವಿಲ್ಲ
ದೈವತ್ವದ ಸುಳಿವಿಲ್ಲ
ಗೊಂದಲಗಳ ಗುರುತುಗಳಿಲ್ಲ
ಬರೀ ಗೊಂಚಲ ಹೂ
ಅದರ ಮಧು, ಸವಿಯಾದ ನೆನಪಷ್ಟೆ

ಯಾರೂ ತರಬೇಡಿ
ಮಚ್ಚು ಕೊಡಲಿಗಳ
ನೆತ್ತರಿನ ನೆರಳುಗಳ
ಬಿತ್ತ ಬನ್ನಿ ಸೌಹಾರ್ದದ ಬೀಜಗಳ.



ರವಿಕುಮಾರ್ ಅಜ್ಜೀಪುರ
ನಂ. 1178 ಮೊದಲನೆ ಮಹಡಿ, 4ನೇ 'ಬಿ' ಮುಖ್ಯ ರಸ್ತೆ,
ಎಂ [illegible] ಬಡಾವಣೆ, ವಿಜಯನಗರ, ಬೆಂಗಳೂರು - 40

ಗಿರಿ, ಮಣ್ಣಿನ ಗುಪ್ಪೆಯಲ್ಲ

ಚಿಕ್ಕಮಗಳೂರು ಸೀಮೆಯ ಬಹುತೇಕ ಜನಕ್ಕೆ ಮನೆಯ ಅಂಗಳದಲ್ಲೋ ಹಿತ್ತಿಲಲ್ಲೋ ನಿಂತರೆ ಬಾನಿಗೆ ತೆರೆಕಟ್ಟಿದಂತೆ ಇರುವ 'ಗಿರಿ'ಗಳು ಕಾಣುತ್ತವೆ. 'ಗಿರಿ' ಎಂದರೆ ಕಲ್ಹತ್ತಿಗಿರಿ, ಬಾಬಾ ಬುಡನ ಗಿರಿ, ಮುಳ್ಳಯ್ಯನ ಗಿರಿ - ಹೀಗೆ ಒಂದರ ತೋಳು ಮತ್ತೊಂದರ ಹೆಗಲನ್ನು ಬಳಸಿದಂತೆ ನಿಂತಿರುವ ಬೆಟ್ಟಗಳ ಗುಂಪು. ಈ ಸೀಮೆಗೆ ಮಳೆ ಬರುವಾಗ ಈ ಗಿರಿಶ್ರೇಣಿ ಮೊದಲು ಮೋಡಗಳಿಂದ ಮುಚ್ಚಿಹೋಗುತ್ತದೆ. ಚಳಿ ಬಂದರೆ ಬೆಣ್ಣೆಯಂಥ ಮಂಜಿನಲ್ಲಿ ಹುದುಗಿ ಹೋಗುತ್ತದೆ. ಈ ಸೀಮೆಗೆ ಸೂರ್ಯ ಮೂಡುವಾಗ ಈ ಗಿರಿಗಳ ನೆತ್ತಿ ಮೊದಲು ಹೊಂಬಣ್ಣದಿಂದ ಬೆಳಗುತ್ತದೆ. ಬೇಸಿಗೆಯಲ್ಲಿ ಕಾಡ್ಗಿಚ್ಚು ಬಿದ್ದರೆ, ಸಿಡಿಲುಗಳೆಲ್ಲ ಬಂದು ಈ ಗಿರಿಗಳ ಮೇಲೆ ಮಲಗಿಬಿಟ್ಟಿವೆ ಅನಿಸುತ್ತದೆ. ಮಳೆ-ಚಳಿ ಬೆಂಕಿ-ಬೆಳಕುಗಳ ಜೊತೆ ಈ ಗಿರಿಗಳು ಆಡುವ ಆಟವನ್ನೆಲ್ಲ ಕಾಣುತ್ತ ಇಲ್ಲಿನ ಜನ ಬೆಳೆದವರು. ಇಲ್ಲಿನ ಗಿರಿಗಳಲ್ಲಿ ಎಲ್ಲರಿಗೂ ಬೇಕಾದ ದೈವಗಳಿರುವುದರಿಂದ, ಎದ್ದೊಡನೆ ಅನೇಕ ಜನ ಗಿರಿಗೆ ಕೈಮುಗಿಯುವುದುಂಟು. ನಮ್ಮೂರ ಕಡೆಯಿಂದ ಪಾಸ್ತವವಾಗಿ ಕಾಣುವುದು ಕಲ್ಹತ್ತಿಗಿರಿ. ಅದರಲ್ಲೂ ಬೃಹದಾಕಾರದ ನೀಲಿ ಗೋಡೆಯಂತಿರುವ ಪರ್ವತದ ಹಣೆಗೆ ಬಿಳಿನಾಮ ಎಳೆದಂತೆ ತೋರುವ ಅದರ ಜಲಪಾತ. ಅನೇಕ ಜಲಪಾತಗಳು, ಕೆರೆಗಳು, ಎತ್ತರ ಶಿಖರಗಳು, ಆಳವಾದ ಪ್ರಪಾತಗಳು, ಒಂದು ಕಾಲಕ್ಕೆ ದಟ್ಟವಾಗಿದ್ದ ಅರಣ್ಯಗಳು, ಸಾವಿರಾರು ಕಾಫಿ ತೋಟಗಳು, ಕಬ್ಬಿಣ ಅದಿರಿನ ಗಣಿಗಳು, ಇಲ್ಲೆಲ್ಲ ಇರುವೆಗಳಂತೆ ದುಡಿಯುವ ಲಕ್ಷಾಂತರ ದುಡಿಮೆಗಾರರು, ಅರಮನೆಯಂತಹ ಬಂಗಲೆಗಳಲ್ಲಿರುವ ಪ್ಲಾಂಟರುಗಳು, ಜಿಂಕೆಯಿಂದ ಹಿಡಿದು ಹುಲಿ-ಆನೆವರೆಗೆ ಇರುವ ಪ್ರಾಣಿಗಳು ತುಂಬಿದ ಈ ಗಿರಿಗಳು ಈ ಸೀಮೆಯ ನಟ್ಟನಡುವೆ ಬರಿಯ ಕಲ್ಲು ಮಣ್ಣಿನ ಗುಪ್ಪೆಗಳಾಗಿ ಕುಳಿತಿಲ್ಲ. ಅದರಲ್ಲೂ ಇಲ್ಲಿ ನೆಲೆಸಿರುವ ದೈವಗಳಿಂದಾಗಿ ಇವು ಚರಿತ್ರೆ - ಪುರಾಣಗಳಾಚೆ ಹೋಗುವ ವ್ಯಕ್ತಿತ್ವಗಳನ್ನೂ ಪಡೆದುಬಿಟ್ಟಿವೆ. ಇಲ್ಲಿ ನೆಲೆಸಿರುವ ದೈವಗಳೇ ನೆಪವಾಗಿ ಈಗ ವಿವಾದಕ್ಕೂ ಕಾರಣವಾಗಿವೆ. ಈ ಸೀಮೆಯ ಜನರ ಬಾಳಿನಲ್ಲಿ ಬಾಬಾಬುಡನಗಿರಿಯು ಯಾವ ಯಾವ ಸಾಂಸ್ಕೃತಿಕ ಆಕಾರಗಳಲ್ಲಿ ನೆಲೆಸಿದೆ ಎಂಬುದನ್ನು ವಿವರಿಸುವುದು ಈ ಲೇಖನದ ಉದ್ದೇಶ.

ಬಾಬಾಬುಡನ್ - ದತ್ತಾತ್ರೇಯ ಎತ್ತಣಿ ಸಂಬಂಧ?

- ಡಾ॥ ರಹಮತ್ ತರೀಕೆರೆ -

ದೀಪ ನೀಡುವ ಹಬ್ಬದಲ್ಲಿ

ನಮ್ಮ ಕಡೆ ಅಲಾಬಿ ಹಬ್ಬಗಳಲ್ಲಿ ಕೆಲವರಿಗೆ ದೇವರು ಮೈದುಂಬಿ ಬರುತ್ತಿತ್ತು. ದೇವರ ಹೆಸರು ಕೇಳಿದರೆ ಯಾವುದೋ 'ಶಾವಲಿ' ಎಂದು ಹೇಳುತ್ತಿದ್ದರು. ಕೈಯಲ್ಲಿ ಹಸ್ತಾಕಾರದ 'ಪಂಜೆ' ಹಿಡಿದು, ಕಣ್ಣುಮುಚ್ಚಿಕೊಂಡು, ಮೈಕಂಪಿಸುತ್ತ ಕುಣಿಯುತ್ತಿದ್ದ ಈ ದೈವಗಳು ಒಮ್ಮೊಮ್ಮೆ ಹಿಡಿಯುವವರ ಕೈಗೂ ಸಿಗದಂತೆ ದಿಕ್ಕಾಪಾಲಾಗಿ ಓಡಿಹೋಗುತ್ತಿದ್ದವು. ಊರ ಜನ ಅವನ್ನು ಎಲ್ಲೂ ಹುಡುಕುತ್ತಿರಲಿಲ್ಲ. ನೇರ ಗಿರಿಗೆ ಹೋಗುತ್ತಿದ್ದರು. ಎರಡು ದಿನಗಳ ಬಳಿಕ ಕೆಳಗೆ ಇಳಿಸಿ ಕರೆತರುತ್ತಿದ್ದರು. ಒಂದೇ ಉಸಿರಿಗೆ ದೇವರು ಬಂದವರು ಮೂವತ್ತು ನಲವತ್ತು ಕಿ.ಮೀ. ಗಿರಿ ಹತ್ತುತ್ತಿದ್ದರು ಎಂಬುದೇ ವಿಸ್ಮಯ. ಅಲಾಬಿ ಹಬ್ಬಕ್ಕೂ, ಈ 'ದೇವರು'ಗಳಿಗೂ, ಗಿರಿಗಳಿಗೂ ಯಾವ ತಾರ್ಕಿಕ ಸಂಬಂಧವೂ ಇದ್ದಂತಿಲ್ಲ. ಆದರೆ ಇಲ್ಲಿನ ಜನರಿಂದ ದೈವಗಳವರೆಗೆ ಎಲ್ಲರಿಗೂ ಗಿರಿ ಹತ್ತುವ ಸೆಳೆತ. ಅನೇಕ ಬಗೆಯ ಸಮುದಾಯಗಳಿಗೆಲ್ಲ ಗಿರಿಗೆ ಹೋಗುವುದು ಇಲ್ಲಿನ ಸಂಪ್ರದಾಯ. ಮಕ್ಕಳು ಆದವರು, ಆಗದವರು, ಮಗುವಿನ ಜವಳ ತೆಗೆಸುವವರು, ಕಾಯಿಲೆಯಿಂದ ಎದ್ದವರು, ಹೊಸ ಆಟೋ ಕೊಂಡವರು, ಪರೀಕ್ಷೆ ಪಾಸಾದವರು, ಗಾಳಿಹಿಡಿದವರು ಹೀಗೆ ಹರಕೆ ಕಟ್ಟಿದ ಎಲ್ಲರೂ ಗಿರಿಗೆ ಹೋಗುವವರೇ. ಬಾಬಾಬುಡನಗಿರಿಗೆ ಬಂದವರು ಮಾಡುವ ಮುಖ್ಯ ಕೆಲಸವೆಂದರೆ - ಮಾಣಿಕ್ಯಧಾರೆ ಜಲಪಾತ ಗಾಳಿಕೆರೆಗಳಲ್ಲಿ ಸ್ನಾನ ಮಾಡಿ ಗವಿಹೊಕ್ಕು, 'ಗಂಧ' ಎನ್ನಲಾಗುವ ಅಲ್ಲಿನ ಹಳದಿಮಣ್ಣನ್ನು ತಿಂದು, ತಬ್ರುಕ್ (ತೀರ್ಥ) ಎಂಬ ಅಲ್ಲಿನ ಜಲವನ್ನು ಕುಡಿದು ಬರುವುದು. ಗಿರಿಗೆ ಬರುವವರೆಲ್ಲ ಕೇವಲ ಭಕ್ತಿಗೇ ಬರುತ್ತಾರೆ ಅನಿಸುವುದಿಲ್ಲ. ಈ ಶಿಖರಗಳಲ್ಲಿ ನಿಂತರೆ, ಪ್ರಕಾಶಗಳಲ್ಲಿ ಇಣುಕಿದರೆ, ಎದೆಬಡಿತ ನಿಲ್ಲಿಸುವಂತೆ ಕಾಣುವ ನಿಸರ್ಗ ಸೌಂದರ್ಯವನ್ನು ಒಳಗೆ ಬಿಟ್ಟುಕೊಂಡು ಯಾವ ಬಗೆಯ ಬಿಡುಗಡೆಯನ್ನು ಸಮುದಾಯಗಳು ಪಡೆಯುತ್ತವೆಯೋ ತಿಳಿಯದು. ಅದರಲ್ಲೂ ಧಾರವಾಡ, ಬಿಜಾಪುರ ಸೀಮೆಗಳಿಂದ ಬರುವ ಜನ ಮಾಯಾಲೋಕದಲ್ಲಿ ಎಂಬಂತೆ ಮೈಮರೆಯುತ್ತಾರೆ. ಅನೇಕ ಬಗೆಯ ಅನುಭೂತಿಗಳಿಗೆ ಕಾರಣವಾಗಿರುವ ಈ ಗಿರಿದೈವಗಳು ಈ ಭಾಗದ ಅನೇಕ ಆಚರಣೆಗಳಲ್ಲಿ ಸೇರಿಹೋಗಿವೆ. ಮಲೆನಾಡಿನ ದೀಪಾವಳಿ ಆಚರಣೆಗಳಲ್ಲಿ ಒಂದಾದ 'ಅಂಟಿಕೆ-ಪಂಟಿಕೆ'ಯಲ್ಲಿ ಬಾಬಾಬುಡನ ಸ್ವಾಮಿ ಸೇರಿಹೋಗಿದ್ದಾರೆ.

> ಎಲ್ಲಿ ದೇವರಿಗೆ ಏನು ಪೂಜೆನಾವರೆ / ಹಣ್ಣುಕಾಯಿಗಳ ಬಲಿಪೂಜೆ
> ಬುಡ್ಡಾ ಗಿರಿ ಸ್ವಾಮಿಗೆನಾ ಪೂಜೆನಾವರೆ / ಲೋಬಾನದೊಗೆಯೇ ಬಲಿಪೂಜೆ
> ಲೋಬಾನದೊಗೆಯೇ ಬಲಿಪೂಜೆನಾವರೆ, ಸಕ್ಕರೆಸೇರುಗಳ ಬಲಿಪೂಜೆ.

'ದೀಪ ನೀಡುವುದು' ಎಂದು ಕರೆಯಲಾಗುವ ಈ ಆಚರಣೆಯ ವಿಶೇಷವೆಂದರೆ, ಅಮಾವಾಸ್ಯೆಯ ಕಗ್ಗತ್ತಲಲ್ಲಿ ಮೇಳದವರು ಎಲ್ಲ ದೈವಗಳ ಎಲ್ಲ ಜಾತಿ-ಧರ್ಮಗಳ ಜನರ ಮೇಲೆ ಹಾಡು ಹೇಳುತ್ತ, ಮನೆಮನೆಗೆ ಹೋಗಿ ದೀಪ ಮುಟ್ಟಿಸುವುದು. ತಾವು ತಂದ ದೀಪದಿಂದ ಆಯಾ ಮನೆಯವರ ಮನೆಯ ದೀಪ ಹೊತ್ತಿಸುವುದು.

ಪುರಾಣ ಲೋಕದೊಳಗೆ

ಈ ಗಿರಿಸಮುಚ್ಚಯವನ್ನು 'ಜಲದೋಣಗಿರಿ' ಎಂದು ಕರೆಯಲಾಗುತ್ತದೆ. ಸಾವಿರಾರು ಅಡಿ ಎತ್ತರದ ಶಿಖರಗಳಲ್ಲಿ ಜಲಪಾತಗಳು ಧುಮ್ಮಿಕ್ಕುವ ವಿಸ್ಮಯವನ್ನು ಜನ ವಿವರಿಸುವುದಕ್ಕೆ ಒಂದು ಕತೆ ಕಟ್ಟಿದ್ದಾರೆ. ಲಂಕೆಯ ಯುದ್ಧದಲ್ಲಿ ಲಕ್ಷ್ಮಣ ಮೂರ್ಛೆಹೋದಾಗ, ಸಂಜೀವಿನಿ ತರಲು ಹೋದ ಆಂಜನೇಯ ಈ ಇಡೀ ಪರ್ವತವನ್ನೇನೋ ಒಯ್ದ. ಆದರೆ ವಾಪಾಸು ತಂದಿಡುವಾಗ ಅವಸರದಲ್ಲಿ ತಲೆಕೆಳಗೆ ಮಾಡಿ ಇಟ್ಟುಹೋದ! ಹೀಗಾಗಿ ಕೆಳಗಿದ್ದ ಜಲವೆಲ್ಲ ಮೇಲೆ ಹೋಗಿ ಅಲ್ಲಿಂದ ಸುರಿಯುತ್ತಿದೆ. (ಬಾಬಾಬುಡನಗಿರಿ ಸಾಲಿನಲ್ಲಿ ಗಾಳಿ ಹನುಮಂತರಾಯನ ಹೆಸರಲ್ಲಿ ಕೆರೆಯೂ ಇದೆ.) ಗಿಡಮರಗಳಿಗೆ ಬಳ್ಳಿಗಳು ಸುತ್ತುಹಾಕಿರುವಂತೆ, ಇಲ್ಲಿನ ದೈವಗಳಿಗೆ ಅನೇಕ ಕತೆಗಳು ಆವರಿಸಿಕೊಂಡಿವೆ. ಬಾಬಾಬುಡನಸ್ವಾಮಿ ಜೊತೆ ಸಾಕುಮಗಳಾಗಿ ಇದ್ದ ಮಾಮಾಜುಗನಿಗೆ ಸಂಬಂಧಿಸಿದ ಕತೆಗಳು ಸೀತಾಪಹರಣ ಪ್ರಸಂಗವನ್ನು ನೆನಪಿಸುತ್ತವೆ. ಅಪೂರ್ವ ಸುಂದರಿಯಾಗಿದ್ದ ಮಾಮಾಜುಗನಿಯನ್ನು ಒಬ್ಬ 'ಜಿನ್'(ಮಾಯಾವಿ) ಆಕೆ ಮಲಗಿದ್ದ ಮಂಚದಸಮೇತ ಅಪಹರಿಸಿಬಿಟ್ಟ. ನಿದ್ದೆ ತಿಳಿದ ಆಕೆ ಕಣ್ಣುಬಿಟ್ಟರೆ ಬಾಬಾಬುಡನಗಿರಿ ಬೆಟ್ಟಗಳಿವೆ. ಬಾಬಾ ಈ ಸುಂದರಿಯನ್ನು ದುರ್ಗಂಧ ಹೊಡೆಯುವ ಕುರೂಪಿಯಾಗಿಸಿಬಿಟ್ಟ. ಅಪಹರಣ ಮಾಡಿದ ಜಿನ್ ಪರಾರಿಯಾದ ಮೇಲೆ ಆಕೆಗೆ ಮೊದಲಿನ ರೂಪ ಬಂತು. ಆಕೆ ಬಾಬಾನ ಅಪ್ಪಣೆಯಂತೆ, ಗಿರಿಗೆ ಬರುವ ಬಡವರಿಗೆ ರೊಟ್ಟಿ ತಟ್ಟಿಕೊಡುವ ಕೆಲಸ ಮಾಡಿಕೊಂಡಿದ್ದಳು. ಈಕೆ ರೊಟ್ಟಿ ಮಾಡಿ, ಗುಹೆಯ ಒಂದು ಕಿಂಡಿಯ ಮೂಲಕ ಹಸಿದವರಿಗೆ ನೀಡುತ್ತಿದ್ದಳು.

ಅವಳ ಕೈಯ ಚೆಲುವನ್ನು ಕಂಡು ಮೋಹಗೊಂಡ ಮಲಂಗ್ ಎಂಬ ಫಕೀರ, ಒಮ್ಮೆ ಕೈಯನ್ನು ತುಡುಕಿಬಿಟ್ಟ. ಆಕೆ ಬಾಬಾನ ಸಲಹೆಯಂತೆ ಒಮ್ಮೆ ಕೈ ಝಾಡಿಸಲು ಆತ ದೂರ ಹೋಗಿ ಬಿದ್ದ. (ಈ ರೊಟ್ಟಿ ಮಾಡಿಕೊಡುತ್ತಿದ್ದ ಹೆಣ್ಣು ದತ್ತಾತ್ರೇಯನ ತಾಯಿ ಅನಸೂಯ ಎಂದೂ ನಂಬಿಕೆಯಿದೆ). ಇನ್ನೊಂದು ಕತೆಯ ಪ್ರಕಾರ ಆಕೆಯನ್ನು ಅಪಹರಣ ಮಾಡಿಕೊಂಡು ಹೋಗುವಾಗ ಆಕೆ ತನ್ನ ಮುತ್ತಿನ ಹಾರವನ್ನು ಹರಿದು ಹಾದಿಯುದ್ದಕ್ಕೂ ಚೆಲ್ಲುತ್ತಾ ಹೋದಳು. ಅದೇ ಮೋತಿಲಾಲ್ (ಮುತ್ತಿನಕೆರೆ) ಆಯಿತು.

ಈ ಪುರಾಣಕತೆಗಳು ಹೀಗೇ ಬೆಳೆಯುತ್ತಾ ಹೋಗುತ್ತವೆ. ಇವು ದಾಖಲೆ ಸಂಚಿ ಮಾತಾಡುವ ಯಾವುದೇ ಇತಿಹಾಸಕಾರರು ಗಹಗಹಿಸಿ ನಗುವಂತಿವೆ. ಆದರೆ ಇದನ್ನು ಜನ ಅಪಾರ ನಂಬಿಕೆಯಿಂದ ಭಕ್ತಿಯಿಂದ ಹೇಳುತ್ತಾರೆ. [illegible]

[illegible]

ಬಂಗಲೆಯಲ್ಲಿ ' ಎಂದು ಹೇಳಿದಂತಾಯಿತಂತೆ. ದೂರೆ ತಟ್ಟನೆ ಎದ್ದು, ತಪ್ಪಾಯಿತು ಎಂದು ಬಂಗಲೆ ತೊರೆದು ಹೋದವನು ಮತ್ತೆ ಬರಲಿಲ್ಲ. ಇಂಥ ಕತೆಗಳನ್ನು, ವೈಚಾರಿಕತೆ ಉಳ್ಳವರು 'ಮೂಢನಂಬಿಕೆ' ಎಂದು ಹೇಳುವುದಕ್ಕೆ ಯಾವ ಕಷ್ಟವನ್ನೂ ವಹಿಸಬೇಕಿಲ್ಲ. ಆದರೆ ಇಂಥ ಕತೆಗಳು ಯಾಕೆ ಹುಟ್ಟಿಕೊಳ್ಳುತ್ತವೆ ? ಇವುಗಳ ಆಶಯಗಳಿಗೂ ಜನರ ವಾಸ್ತವದ ಬಾಳಿನ ಆಸೆ- ಕೊರತೆಗಳಿಗೂ ಏನಾದರೂ ಸಂಬಂಧ ವಿದೆಯೇ ? ಇದರ ಬಗ್ಗೆ ಯೋಚಿಸಲು ಶುರುಮಾಡಿದರೆ, ಈ ಕತೆಗಳು ರೂಪಕಗಳಂತೆ ತೋರುತ್ತವೆ. ಸತ್ತಂತಿರುವವರನ್ನು ಬದುಕಿಸಲು ಸಂಜೀವಿನಿ ಹುಡುಕುವುದು, ಹಸಿದವರಿಗೆ ರೊಟ್ಟಿ ತಟ್ಟಿಕೊಡುವುದು, ದುಷ್ಟರ ಕೈಯಲ್ಲಿ ಸಿಕ್ಕ ಅಸಹಾಯಕರು ಪಾರಾಗಲು ಉಪಾಯ ಹುಡುಕುವುದು, ನಾನು ದೊಡ್ಡವನು ಎಂದವನ ಅಹಂ ಇಳಿಸುವುದು ಇತ್ಯಾದಿ ಆಶಯಗಳುಳ್ಳ ಈ ಕತೆಗಳು ಏನು ಸೂಚಿಸುತ್ತಿವೆ ? ಜನ ಕಟ್ಟಿಕೊಳ್ಳುವ ಇಂಥ ಪುರಾಣಕತೆಗಳ ಒಳಗಿನ ಅವರ ಹಂಬಲಗಳನ್ನು ನೋಡುವ ವಿದ್ಯೆಯೇ ನಮಗೆ ಗೊತ್ತಿಲ್ಲ! ಇವು ಖಂಡಿತ ಕೋರ್ಟುಗಳಲ್ಲಿ ಮಂಡಿಸಿ ಕೇಸು ಗೆಲ್ಲಿಸಬಲ್ಲ ಚಾರಿತ್ರಿಕ ಆಧಾರಗಳಲ್ಲ. ಆದರೆ ಸಮುದಾಯಗಳು ರೂಪಕಗಳಲ್ಲಿ ಸೃಷ್ಟಿಸಿಕೊಂಡ ಪರ್ಯಾಯ ಚರಿತ್ರೆಯ ಭಾಗಗಳು. ಬಾಬಾನ ಗುಹೆಯನ್ನು ಸರಿರಾತ್ರಿಯಲ್ಲಿ ಹುಲಿ ಬಂದು, ಬಾಲದಿಂದ ಕಸಗುಡಿಸಿ ಹೋಗುತ್ತದೆ - ಎಂಬ ನಂಬಿಕೆ ಗಮನಿಸಬೇಕು. ನಿಜಜೀವನದಲ್ಲಿ ನಮ್ಮನ್ನು ಭಯಗೊಳಿಸುವ ಶಕ್ತಿಗಳೆಲ್ಲ ದೈವಗಳ ಅಡಿಯಾಳಾಗಿಬಿಡುತ್ತವೆ. ಭಾರತದ ಸಂತರೆಲ್ಲ ಹುಲಿಸಿಂಹಗಳನ್ನು ಪಳಗಿಸಿ ಸರಿಮಾಡುವವರಾಗಿದ್ದಾರೆ. (ಉದಾ : ಮಲೆಮಾದೇಶ್ವರ). ದಟ್ಟಕಾಡಿನಲ್ಲಿರುವ ದೈವಗಳೆಲ್ಲ ಹುಲಿಯಿಂದ ಸೇವೆ ಪಡೆಯುವವರಾಗಿದ್ದಾರೆ.

ಈ ಪುರಾಣ ಕತೆಗಳ ವಿಶಿಷ್ಟತೆ ಎಂದರೆ - ರೊಟ್ಟಿ ತಟ್ಟಿಕೊಡುವ ಹೆಣ್ಣು ಮಾಮಾಜುಗನಿಯೂ ಆಗಿರಬಹುದು, ಅನಸೂಯೆಯೂ ಆಗಿರಬಹುದು; ಹೆಣ್ಣನ್ನು ಅಪಹರಿಸುವವನು ರಾವಣನೂ ಆಗಿರಬಹುದು, ಮಲಂಗನೂ ಆಗಿರಬಹುದು: ಇದೇ ರೀತಿ ಬಾಬಾಬುಡನ್ ಎಂಬ ಸಂತನು ದತ್ತಪಂಥಕ್ಕೆ ಸೇರಿದ ಯೋಗಿಯೂ ಆಗಿರಬಹುದು ಎಂಬ ಚೌಕಟ್ಟನ್ನು ಪಡೆದಿರುವುದು.

ಜತೆಗೆ ಬಂದ ಕಾಫಿ

ಚರಿತ್ರೆಯನ್ನು ಬೆನ್ನುಹತ್ತಿ ಹೋದರೆ ಬಾಬಾಬುಡನ್ ಹಾಗೂ ದತ್ತಾತ್ರೇಯರ ಸಂಬಂಧಗಳ ಬಗ್ಗೆ ಅನೇಕ ಸಂಗತಿಗಳು ಸಿಗುತ್ತವೆ. ಈ ಸಂಗತಿಗಳು ನಮ್ಮ ದೇಶದ ಅನುಭಾವಿಪಂಥಗಳು ಒಡನಾಡಿದ ಸ್ವಾರಸ್ಯಕರ ಕಥನದ ಭಾಗಗಳು. ಪಾರಸಿ- ದಖನಿ ಸಂತಚರಿತ್ರೆಗಳು (Hagiography) ಹೇಳುವಂತೆ ಬಾಬಾಬುಡನಗಿರಿಯ ದಾದಾ ಹಯಾತ್ ಖಲಂದರ್ ಎಂಬ [illegible] 17ನೇ ಶತಮಾನದಲ್ಲಿ ಅರಬ್ ದೇಶದಿಂದ ಈ [illegible]

ಸೇರಿದವನು. ಈ ವಂಶ ಸೂಫಿಪಂಥಕ್ಕೆ ಸೇರಿತ್ತು. ಸೂಫಿಪಂಥದಲ್ಲಿ ಚಿಸ್ತಿಯಾ, ಖಲಂದರಿಯಾ, ಖಾದ್ರಿಯಾ, ರಫಾಯಿಯಾ ಮುಂತಾದ ಶಾಖೆಗಳಿವೆ. ದಾದಾ ಹಯಾತನು ಖಲಂದರಿಯಾ ಶಾಖೆಗೆ ಸೇರಿದ ಕಾರಣ, ಖಲಂದರ್ ಎಂಬ ಬಿರುದು ಅಂಟಿಕೊಂಡಿದೆ. ಖಲಂದರ್ ಸೂಫಿಗಳ ಲಕ್ಷಣವೆಂದರೆ - ಸಾಂಪ್ರದಾಯಿಕ ಇಸ್ಲಾಂ ಧರ್ಮ ವಿಧಿಸುವ ಆಚಾರ(ಶರೀಯತ್)ಗಳನ್ನು ಲೆಕ್ಕಿಸದೆ, ಅನುಭಾವಿಕ ಸಾಧನೆಗಳಲ್ಲಿ ತೊಡಗುವುದು, ಆಲೋಚನೆ, ಕ್ರಿಯೆಗಳಲ್ಲಿ ನಿರಂಕುಶಮತಿಗಳಾಗಿರುವುದು. ಹೀಗಾಗಿ ಇಸ್ಲಾಮಿನ ಸನಾತನವಾದಿಗಳಿಗೂ ಈ ಖಲಂದರ್ ಸೂಫಿಗಳಿಗೂ ಯಾವಾಗಲೂ ತಾತ್ವಿಕ ಸಂಘರ್ಷಣಗಳು ನಡೆದಿವೆ. ದಾದಾ ಹಯಾತ ಖಲಂದರನು ಅರಬಸ್ಥಾನದಿಂದ ಬರುವಾಗ ಕಾಫೀ ಬೀಜಗಳನ್ನು ತಂದನು ಎನ್ನಲಾಗುತ್ತದೆ. (ಕಾಫಿಯ ಸಸ್ಯಶಾಸ್ತ್ರದ ಹೆಸರೇ 'ಕಾಫಿ ಅರಾಬಿಕಾ') ಅರಬ್ ಜನಾಂಗಕ್ಕೂ ಕಾಫಿಗೂ ಇರುವ ಚಾರಿತ್ರಿಕ ಸಂಬಂಧಗಳನ್ನು ಕುರಿತು ಬಹುದೀರ್ಘವಾದ ಚರ್ಚೆ ನಡೆದಿದೆ. (ನೋಡಿ : ಎಚ್. ಎಲ್. ನಾಗೇಗೌಡ : ಬೆಟ್ಟದಿಂದ ಬಟ್ಟಲಿಗೆ, 1983). ಈ ಚರ್ಚೆಗಳಲ್ಲಿ ಅತ್ಯಂತ ಸ್ವಾರಸ್ಯಕರವಾದುದು ಏನೆಂದರೆ, ಸೂಫೀ ಫಕೀರರು ದೈವಿಕ ಸಾಧನೆಗಳಲ್ಲಿ ಮೈಮರೆಯಲು ಕಾಫಿ ಬೀಜಗಳನ್ನು ತಿನ್ನುತ್ತಿದ್ದುದು. ಬಾಬಾಬುಡನ ಗಿರಿಯಲ್ಲಿರುವ ಕಾಫೀ ಬೆಳೆಗೂ ಅರಬ್ ದೇಶಕ್ಕೂ, ಸೂಫಿ ಪಂಥಕ್ಕೂ ಇರುವ ಈ ಸಂಬಂಧಗಳು ತುಂಬ ಮುಖ್ಯವಾದವು. ಅದರಲ್ಲೂ ದಾದಾ ಹಯಾತನೂ ಮಕ್ಕಾ ಪಟ್ಟಣವೂ ಕಾಫಿ ಪ್ರಸಾರದ ಕಥನದಲ್ಲಿ ಮತ್ತೆ ಮತ್ತೆ ಬರುತ್ತವೆ.

ಮಿಶನರಿಯಲ್ಲ , ಸೂಫಿ

ಈ ಸೂಫಿ ಕಾಫಿಯ ಸಂಬಂಧ ನೀಡುವ ಮತ್ತೊಂದು ಸೂಚನೆಯೆಂದರೆ, ದಾದಾ ಹಯಾತನು ಮುಸ್ಲಿಂ ಚರಿತ್ರೆಕಾರರು ಸಾಮಾನ್ಯವಾಗಿ ಹೇಳುವಂತೆ, ಇಸ್ಲಾಂ ಧರ್ಮದ ಪ್ರಸಾರಕ್ಕೆ ಬಂದ ಮಿಶನರಿಯಲ್ಲ. ಆದರೆ ರಹಸ್ಯಪಂಥಗಳಲ್ಲಿ ಒಂದಾದ ಸೂಫಿಪಂಥಕ್ಕೆ ಸಂಬಂಧಿಸಿದವನು ಎಂಬುದು. ಬಾಬಾಬುಡನಗಿರಿಯ ಏಕಾಂತಗುಹೆಗಳು, ಇಲ್ಲಿನ ಗಿಡಮೂಲಿಕೆಗಳು ಕೂಡ ಇದನ್ನು ದೃಢಪಡಿಸುತ್ತವೆ. ಯಾವತ್ತೂ ಧರ್ಮಪ್ರಸಾರ ಮಾಡುವ ಮಿಶನರಿಗಳು ಜನವಸತಿ ತುಂಬಿದ ಕಡೆ ನೆಲೆಸುತ್ತಾರೆ ಹಾಗೂ ಮಸೀದಿಗಳನ್ನು ನಿರ್ಮಿಸುತ್ತಾರೆ. ಉಳ್ಳಾಲದ ಸೈಯದ್ ಮದನಿ, ಕಾಸರಗೋಡಿನ ಮಲಿಕ್ ಬಿನ್ ದೀನಾರ ಸಮಾಧಿಗಳು ಜನವಸತಿಯ ಊರುಗಳಲ್ಲಿವೆ ಮತ್ತು ತಮ್ಮ ಪಕ್ಕದಲ್ಲಿ ಭಾರತದಲ್ಲೇ ಪ್ರಾಚೀನವಾದ ಮಸೀದಿಗಳನ್ನು ಹೊಂದಿವೆ ಎಂಬುದನ್ನು ಗಮನಿಸಬೇಕು. ದಾದಾ ಹಯಾತನು ತನ್ನ ವಾಸಕ್ಕೆ ಜನ ದೂರವಾದ, ದುರ್ಗಮ ಅರಣ್ಯಗಳ ನಡುವಿರುವ, ಯೋಗಸಾಧನೆ- ಧ್ಯಾನಗಳಿಗೆ ಸೂಕ್ತವಾದ ಗುಹೆಗಳನ್ನು ಆರಿಸಿಕೊಂಡ ಹಾಗೂ ಮಸೀದಿ ಕಟ್ಟಲಿಲ್ಲ. (ಇಲ್ಲಿನ ಮಸೀದಿಯು 50 ವರ್ಷಗಳಿಗಿಂತಲೂ ಈಚಿನದು). ದಾದಾ ಹಯಾತನ ಸಾಕುಮಗಳ ಹೆಸರಲ್ಲಿರುವ 'ಜುಗಿನಿ' ಎಂಬ ಪದವನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು. ಅದು 'ಯೋಗಿನಿ' ಎಂಬ ಶಬ್ದದ ತದ್ಭವವಾಗಿದೆ. ಮಾಮಾಜುಗಿನಿಯು ತನ್ನ 'ಫಿಲ್ಲಾ' (ಧ್ಯಾನ)ಗಳಿಗೆ ಹೆಸರಾದವಳು.

ಯೋಗ- ಔಷಧ- ದೀರ್ಘಾಯುಷ್ಯ

ಯೋಗಪಂಥಗಳ ಮೂಲಭೂತ ಲಕ್ಷಣವೆಂದರೆ ಏಕಾಂತವಾಸ. 'ಏಕಾಂತೇ ಮಠಿಕಾ ಮಧ್ಯೇ' ಎಂದು ಹಠಪ್ರದೀಪಿಕೆ ಹೇಳುತ್ತದೆ. ಯೋಗದ ಮೂಲಕ ದೃಢಕಾಯವನ್ನು, ವಜ್ರದೇಹವನ್ನು ಹೊಂದುವುದು ಎಂತಲೇ ಯೋಗಮಾರ್ಗದ ಸಂತರು ನೂರಾರು ವರ್ಷ ಬದುಕಿದ ಐತಿಹ್ಯ ಹುಟ್ಟಿರುವುದು. ದಾದಾ ಹಯಾತನ ಹೆಸರೊಳಗಿನ 'ಹಯಾತ್' ಎಂಬ ಅರಬಿಶಬ್ದದ ಅರ್ಥ 'ದೀರ್ಘಾಯುಷ್ಯ'. ಕರ್ನಾಟಕದ ಶಾಡಸಿದ್ಧ 777 ವರ್ಷ ಬದುಕಿದನಂತೆ; ದತ್ತಪಂಥಕ್ಕೆ ಸೇರಿದ ಚಾಂಗದೇವನೆಂಬ ಯೋಗಿಯೂ 1400 ವರ್ಷ ಬದುಕಿದನಂತೆ (ಗದಗಿನ ಸಮೀಪದ ಯಮನೂರಿನಲ್ಲಿರುವ ಚಾಂಗದೇವನಿಗೆ ಮುಸ್ಲಿಮರು 'ಚಾಂಗ್‌ಪೀರ್' ಎಂಬ ಹೆಸರಲ್ಲಿ ನಡೆದುಕೊಳ್ಳುತ್ತಾರೆ.) ಈ ದೀರ್ಘಾಯುಷ್ಯದ ಐತಿಹ್ಯಗಳಿಗೆಲ್ಲ ಯೋಗಪಂಥದಲ್ಲಿ ಸಾಂಕೇತಿಕ ಅರ್ಥವಿದೆ. ಬಹುಕಾಲ ಬದುಕುವುದು ಎಂದರೆ ಅಲ್ಲಿ ಔಷಧಿ ವಿದ್ಯೆ ಇರಲೇಬೇಕು. ಭಾರತದ ನಾಥಸಿದ್ಧರು ಹಾಗೂ ಸೂಫಿಸಂತರು ತಮ್ಮ ಔಷಧಿಜ್ಞಾನಕ್ಕೆ ಹೆಸರಾದವರು. ಈಗಲೂ ಬಾಬಾಬುಡನಗಿರಿ ಔಷಧಿಮೂಲಿಕೆಗಳ ತಾಣವಾಗಿದೆ. ಸಂಜೀವಿನಿ ಹುಡುಕಿಕೊಂಡ ರಾಮಾಯಣದ ಆಂಜನೇಯನು ಈ ಗಿರಿಗಳಿಗೆ ಬಂದ ಪುರಾಣವನ್ನು ಈ ಹಿನ್ನೆಲೆಯಲ್ಲಿಯೇ ಅರ್ಥಮಾಡಿಕೊಳ್ಳಬೇಕು. ಬಹು ಹಿಂದಿನ ಕಾಲದಿಂದಲೂ ಈ ಗಿರಿಗುಹೆಗಳು ಯೋಗಪಂಥಿಗಳ ವಾಸಸ್ಥಾನಗಳಾಗಿವೆ. ಕಾಫಿಬೀಜ, ಸೂಫಿ ಪಂಥ, ದೀರ್ಘಾಯುಷ್ಯ



ಬಾಬಾಬುಡನ್ ಗಿರಿ ರಾಜಕೀಯ ಆಖಾಡವಾದಾಗ

(ಹಯಾತ್), ಗಿಡಮೂಲಿಕೆಗಳು, ಗುಹೆಗಳು, 'ಜುಗಿನಿ' ಶಬ್ದ, ಇವೆಲ್ಲ ಒಂದೇ ಲೋಕದ ಪರಿಭಾಷೆಗಳು. ಇವು ದಾದಾ ಹಯಾತನು ಖಂಡಿತವಾಗಿಯೂ ಯಾವುದೋ ಮತ್ತೊಂದು ಯೋಗಮಾರ್ಗಿ ಪಂಥದ ಜತೆ ಒಡನಾಟ ಮಾಡಿರುವುದನ್ನು ಬೆರಳುಮಾಡಿ ತೋರಿಸುತ್ತಿವೆ. ಇಲ್ಲಿ ಆ 'ಮತ್ತೊಂದು' ಯೋಗಪಂಥವೆಂದರೆ, ಗುರುದತ್ತ ಪಂಥವಾಗಿದೆ.

ಗುರುಮಾರ್ಗಗಳು

ಸೂಫಿ ಹಾಗೂ ದತ್ತಪಂಥಗಳೆರಡೂ ಗುರುವನ್ನು ನಂಬುವ ಗುರುಮಾರ್ಗಗಳು. ಇವು ಬಾಬಾಬುಡನಗಿರಿಯಲ್ಲಿ ಮಾತ್ರವಲ್ಲ, ಭರತ ಉಪಖಂಡದಲ್ಲೇ ಜತೆ ಜತೆಯಾಗಿ ಬಾಳಿದ ಸುದೀರ್ಘ ಚರಿತ್ರೆಯಿದೆ. ಸೂಫಿಗಳನ್ನು ಭಾರತದ ಇತರ ಯೋಗಮಾರ್ಗಿಗಳ ಜತೆ ಅತ್ಯಂತ ಆಳವಾದ ಕೊಳುಕೊಡೆ ಮಾಡಿದ್ದು ಸಿಂಧ್ ಹಾಗೂ ಬಂಗಾಳ ಪ್ರಾಂತ್ಯಗಳಲ್ಲಿ. (ಈ ಕುರಿತು ಭಾರತದ ಖ್ಯಾತ ಸೂಫೀವಿದ್ವಾಂಸ ಎಸ್. ಎ. ಎ. ರಿಜ್ವಿ ಅವರು ತಮ್ಮ History of Sufism in India ಸಂಪುಟಗಳಲ್ಲಿ ವಿಶ್ಲೇಷಣೆ ನಡೆಸುತ್ತಾರೆ.) ಈ ಕೊಳುಕೊಡೆ ನಡೆದ ಮೂರನೇ ಪ್ರಾಂತ್ಯವೆಂದರೆ ದಕ್ಷಿಣ ಮಹಾರಾಷ್ಟ್ರ ಹಾಗೂ ಕರ್ನಾಟಕಗಳು ಕೂಡುವ ಸೀಮೆ. ಗೋರಖನಾಥ-ಮಚ್ಛೇಂದ್ರನಾಥರ ಮೂಲದಿಂದ ಹರಿದುಬಂದ ನಾಥ ಪಂಥದ ತಾತ್ವಿಕಧಾರೆಗಳು ಈ ಸೀಮೆಯಲ್ಲಿ ಮಾನುಭಾವ, ವಾರಕರಿ ಹಾಗೂ ದತ್ತಪಂಥಗಳ ಹುಟ್ಟಿಗೆ ಕಾರಣವಾದವು. ದತ್ತಪಂಥದಲ್ಲಿ ಎರಡು ಶಾಖೆಗಳಿವೆ. ಒಂದು ಜನಾರ್ದನ ಸ್ವಾಮಿಯಿಂದ ಶುರುವಾಗುವ ಮರಾಠೀ ದತ್ತಪರಂಪರೆ; ಎರಡನೆಯದು ಗಾಣಗಾಪುರದ ನರಸಿಂಹದತ್ತನಿಂದ ಬೆಳೆದ ಕರ್ನಾಟಕದ ದತ್ತಪರಂಪರೆ. ಮಹಾರಾಷ್ಟ್ರದಲ್ಲಿ ದತ್ತ ಪರಂಪರೆ ಮೂಡುವ ಕಾಲಕ್ಕೆ ಎರಡು ಮುಖ್ಯ ವಿದ್ಯಮಾನಗಳು ಸಂಭವಿಸಿದ್ದವು. ಒಂದನೆಯದು: ವರ್ಣಾಶ್ರಮಪದ್ಧತಿ ಸಮರ್ಥಿಸುವ ಬ್ರಾಹ್ಮಣರ ಸನಾತನವಾದಕ್ಕೆ ಪ್ರತಿರೋಧವಾಗಿ ಹುಟ್ಟಿದ ಮಾನುಭಾವ ಪಂಥವು ಸೂಫಿಗಳ ಜತೆ ಗಾಢಮೈತ್ರಿಯನ್ನು ಸಾಧಿಸಿಬಿಟ್ಟಿತ್ತು. ಈ ಮೈತ್ರಿ ಎಷ್ಟು ಗಾಢವಾಗಿತ್ತೆಂದರೆ, ಮಾನುಭಾವರನ್ನು 'ನೀವು ಮುಸಲ್ಮಾನರಾದಿರಿ' ಎಂದು ಸನಾತನವಾದಿಗಳು ಬಹಿಷ್ಕಾರ ಹಾಕಿದ್ದರು. ಇದಕ್ಕೆ ತಕ್ಕಂತೆ ಮಾನುಭಾವರು ಸೂಫಿಪಂಥಗಳು ಬೆಳೆದ ಆಫ್‌ಘಾನಿಸ್ತಾನದಲ್ಲಿ ತಮ್ಮ ಶಾಖೆಗಳನ್ನು ಹರಡಿ, ಶಿಷ್ಯರನ್ನು ಪಡೆದಿದ್ದರು. ಎರಡನೆಯ ವಿದ್ಯಮಾನವೆಂದರೆ, ಜನಾರ್ದನ ಸ್ವಾಮಿಗೆ ದತ್ತಾತ್ರೇಯನು ದರ್ಶನ ಕೊಟ್ಟಿದ್ದೇ ಸೂಫಿಗುರುವಿನ ರೂಪದಲ್ಲಿ, ಎಂಬ ನಂಬಿಕೆ ಹುಟ್ಟಿಕೊಂಡಿದ್ದು.

ದತ್ತಾತ್ರೇಯ : ಸನಾತನವಾದಿಯಲ್ಲ

ವೈದಿಕ ಬ್ರಾಹ್ಮಣಪುರಾಣಗಳು ಬಣ್ಣಿಸುವಂತೆ ದತ್ತಾತ್ರೇಯನು ವಿಷ್ಣುವಿನ ಅವತಾರ. ಅತ್ರಿಋಷಿ- ಅನಸೂಯಾ ದಂಪತಿಗಳಲ್ಲಿ ಹುಟ್ಟಿದವನು. ಆದರೆ ಬ್ರಾಹ್ಮಣ ಸನಾತನತೆಯ ಮುಖ್ಯ ಚಿಹ್ನೆಗಳಾದ ಶಿಖೆ ಹಾಗೂ ಜನಿವಾರಗಳನ್ನು ನಿರಾಕರಿಸಿದ ದತ್ತಾತ್ರೇಯನು ಒಬ್ಬ ಯತಿಯಾಗಿದ್ದನು. ಅವನ ಜನಪ್ರಿಯ ಚಿತ್ರವನ್ನು ಗಮನಿಸಬೇಕು. ಅಲ್ಲಿ ನಾಲ್ಕು ನಾಯಿಗಳಿವೆ. ಅವನ್ನು ನಾಲ್ಕು ವೇದಗಳೆಂದು ಹೇಳಲಾಗಿದೆ. ವೇದಗಳನ್ನು ಪ್ರಮಾಣವೆಂದು ಒಪ್ಪಿಕೊಳ್ಳುವುದು ವೈದಿಕ ಬ್ರಾಹ್ಮಣ ದರ್ಶನಗಳ ಮುಖ್ಯಲಕ್ಷಣ. ಆದರೆ ದತ್ತಾತ್ರೇಯನು ವೇದಗಳೇ ನಾಯಿಗಳಾಗಿ ತನ್ನನ್ನು ಹಿಂಬಾಲಿಸುಂತೆ ಮಾಡಿದ್ದಾನೆ. ನಾಯಿಯು ವೈದಿಕ ಸಂಸ್ಕೃತಿಗೆ ಅತ್ಯಂತ ಅಪವಿತ್ರವಾದ ಸಂಕೇತವಾಗಿದೆ. ವರ್ಣಾಶ್ರಮ, ಹುಟ್ಟಿನಿಂದ ಬರುವ ಜಾತಿ ಹಾಗೂ ಅಸ್ಪೃಶ್ಯತೆಗಳನ್ನು ಒಪ್ಪುವುದು ಬ್ರಾಹ್ಮಣ ಸನಾತನವಾದಕ್ಕೆ ಸಮ್ಮತ. ಆದರೆ ಗುರುಪಂಥಗಳಿಗೆ ಈ ನಿಯಮಗಳು ಸಮ್ಮತವಲ್ಲ. ಗುರು ಚಂಡಾಳನಾದರೂ ಯೋಗ್ಯನಾದರೆ ಅವನನ್ನು ಒಪ್ಪಿಕೊಳ್ಳಬೇಕೆಂದು ಗುರುಪಂಥಗಳು ಹೇಳುತ್ತವೆ. ಭಾರತದಲ್ಲಿ ವರ್ಣಾಶ್ರಮವಾದಿ ವೈದಿಕ ತತ್ವಜ್ಞಾನಿಗಳಿಗೆ ಬಲವಾದ ಪ್ರತಿರೋಧವನ್ನು ಈ ಗುರುಪಂಥಗಳು ಒಡ್ಡಿದವು. ಗುರುವಿನ ಮಹತ್ವ, ಜಾತಿನಿರಾಕರಣೆ, ವೇದಗಳನ್ನು ಒಪ್ಪದಿರುವುದು, ಯೋಗಸಾಧನೆ ಮಾಡುವುದು, ಇವು ನಾಥ ಪಂಥದ ಮುಖ್ಯ ಲಕ್ಷಣ. ಅದರಿಂದ ಹುಟ್ಟಿದ ದತ್ತ, ಮಾನುಭಾವ ಪಂಥಗಳು ಇದನ್ನು ಅನುಸರಿಸಿರುವುದು ಸಹಜವಾಗಿದೆ. ನಮ್ಮ ಕಾಲದ ಧೀಮಂತ ಸಂಶೋಧಕರಾದ ಶಂ.ಬಾ. ಜೋಶಿ ತಮ್ಮ 'ಮರಾಠಿ ಸಂಸ್ಕೃತಿ' ಎಂಬ ಕೃತಿಯಲ್ಲಿ ಇದರ ವಿಸ್ತಾರ ಚರ್ಚೆ ಮಾಡುತ್ತಾರೆ. ದತ್ತ ಹಾಗೂ ನಾಥ ಪಂಥಗಳ ಸಮಾನಗುಣಗಳ ಬಗ್ಗೆ ಅವರು ಹೀಗೆ ಬರೆಯುತ್ತಾರೆ:

''ಅತ್ರೇಯ ದತ್ತಮಾರ್ಗ ನಾಥ ಪಂಥದಂತೆಯೇ ಸರ್ವಸಂಗ್ರಾಹಕ ವೃತ್ತಿಯದಾಗಿದೆ. ಮುಸಲ್ಮಾನರಲ್ಲಿ ದತ್ತಭಕ್ತರಿದ್ದಾರೆ. ಬಾಬಾಬುಡನಗಿರಿಯು ದತ್ತಕ್ಷೇತ್ರವಿದ್ದು, ಅಲ್ಲಿಯ ಪೂಜಾರಿ ಮುಸಲ್ಮಾನನಿದ್ದಾನೆ. ಹಿಂದೂ ಮುಸಲ್ಮಾನರಿಬ್ಬರೂ ಯಾತ್ರೆಗೆ ಹೋಗುತ್ತಾರೆ. ಆಧುನಿಕ ಕಾಲದಲ್ಲಿ ದತ್ತನ ಅವತಾರವೆಂದೇ ಪ್ರಸಿದ್ಧವಾಗಿರುವ ಅಕ್ಕಲಕೋಟೆಯ ಮಹಾರಾಜರು ಮತ್ತು ಹೈದರಾಬಾದ ಪ್ರದೇಶದಲ್ಲಿಯ ಶ್ರೀ ಮಾಸಿಕಪ್ರಭುಗಳ ಅನುಯಾಯಿ ವರ್ಗದಲ್ಲಿ ಅನೇಕ ಮುಸಲ್ಮಾನರಿದ್ದಾರೆ. ಈ ಗುರುಮಾರ್ಗ ಅವಧೂತ ನಿರಂಜನ ಪಂಥವಾಗಿದೆ''. (ಪು. 192)

ಸೂಫಿ ಹಾಗೂ ದತ್ತ

''ಸರ್ವಸಂಗ್ರಾಹಕವೃತ್ತಿ'' ಎಂದರೆ ತನ್ನಂತೆಯೇ ಇರುವ ಪಂಥದ ಜತೆ ಮಿಲನವಾಗುವುದು. ಬಾಬಾಬುಡನಗಿರಿಯಲ್ಲಿ ಬಹುಶಃ ಇಂಥ ಮಿಲನ ಸಂಭವಿಸಿದೆ. ಜನಾರ್ದನಸ್ವಾಮಿಗೆ ದತ್ತಾತ್ರೇಯನು ಸೂಫಿಸಂತನ ವೇಷದಲ್ಲಿ ಸಾಕ್ಷಾತ್ಕಾರ ಕೊಟ್ಟನು ಎಂಬ ಕತೆಯಲ್ಲೂ ಈ ಮಿಲನದ ಸೂಚನೆಯಿದೆ. ಶಂ.ಬಾ. ಉಲ್ಲೇಖಿಸಿರುವ ಅಕ್ಕಲಕೋಟೆಯ ದತ್ತಾವತಾರಿ ಸ್ವಾಮಿಸಮರ್ಥನು ಅಲ್ಲೇ ಬಗಲಲ್ಲಿರುವ ಶೇಕ್‌ನೂರುದ್ದೀನ್ ಚಿಸ್ತಿ ಎಂಬ ಸೂಫಿಸಂತನ ಸಿಸುಮಗನೆಂದು ಖ್ಯಾತನಾಗಿದ್ದಾನೆ. ದರ್ಗಾದ ಎದುರು ಸ್ವಾಮಿ ಸಮರ್ಥ ಧ್ಯಾನ ಕೂರುತ್ತಿದ್ದ ಒಂದು ಜಾಗವನ್ನು ಜನ ಈಗಲೂ ತೋರಿಸುತ್ತಾರೆ. ಅದೇ ಭಾಗದಲ್ಲಿ ಬರುವ ವಡಬಾಳ್ಳ (ಸೊಲ್ಲಾಪುರ) ದತ್ತಚೈತನ್ಯನು ದೆಹಲಿಯ ನಾಸಿರುದ್ದೀನ್ ಚಿಸ್ತಿ (ಗುಲಬರ್ಗಾಯ ಸೂಫಿ ಬಂದೇನವಾಜನ ಗುರು) ಸಂಪ್ರದಾಯದವರಲ್ಲಿ ಬರುತ್ತಾನೆ. ಸ್ಟೈಹಾಕ್ ಎಂಬುವರು "Nasiruddin and Adinath, Nizamuddin and Khaniphnath" ಎಂಬ ಲೇಖನದಲ್ಲಿ ಇವರ ಸಂಬಂಧಗಳನ್ನು ವಿಶ್ಲೇಷಿಸುತ್ತಾರೆ. (Flags of fame. ed. Heidrun Bruckner. 1973). ಶಂಬಾ ಉಲ್ಲೇಖಿಸುವ ಹುಮನಾಬಾದಿನ ದತ್ತಮಾರ್ಗಿ ಮಾಣಿಕ ಪ್ರಭುವಂತೂ ಹಾಕುವ ವೇಷದಿಂದ ಹಿಡಿದು ಸಾಕ್ಷಾತ್ ಸೂಫಿಯಂತೆ ಬದುಕಿದವನು. ಅಕ್ಕಲಕೋಟೆಯ ಮತ್ತೊಬ್ಬ ಸೂಫಿಯ ಹೆಸರು ದಾತಾಪೀರ್ ! ಇದು ದತ್ತಾಪೀರ್‌ನ ರೂಪವಿರಬಹುದು ಅಥವಾ ಬಾಬಾಬುಡನಗಿರಿಯ 'ದಾದಾಪೀರ್' ದತ್ತಾಪೀರ್‌ನ ರೂಪವಿರಬಹುದು (ಚಾಂಗದೇವ 'ಚಾಂಗಪೀರ್', ಮಾಣಿಕಪ್ರಭು 'ಮಾಣಿಕಪೀರ್' ಆಗುವುದು ಸಾಮಾನ್ಯ). ಅಕ್ಕಲಕೋಟೆಯ ದಾತಾಪೀರನ ಅಪ್ಪ, ಮೀರ್‌ಅಲಂ ನವಾಜನ ದರ್ಗಾ ಹೊಸಪೇಟೆಯಲ್ಲಿದೆ. ಇವನ ಉರುಸಿಗೆ ಅಕ್ಕಲಕೋಟೆಯ ನೂರಾರು ದತ್ತಭಕ್ತರು ಈಗಲೂ ಬರುತ್ತಾರೆ. ಆದ್ದರಿಂದ ಶಂ.ಬಾ. ಹೇಳುವುದರಲ್ಲಿ ಯಾವ ಸೋಜಿಗವೂ ಇಲ್ಲ. ಹಾಗೆಯೇ ಬಾಬಾಬುಡನಗಿರಿಯಲ್ಲಿ ದಾದಾ ಹಯಾತ್ ಪೀರನೂ ದತ್ತಾತ್ರೇಯ ಪಂಥ ಯೋಗಿಯೂ ಜತೆಯಲ್ಲಿದ್ದರು ಎಂಬುದಕ್ಕೂ ಯಾರೂ ಅಚ್ಚರಿಪಡಬೇಕಿಲ್ಲ. ಇದು ಯಾರಿಗೆ ಸೇರಬೇಕು ಎಂಬುದು ಕೋರ್ಟಿನ ಪರಿಭಾಷೆಯಲ್ಲಿ ವಿವಾದ; ಸಂಸ್ಕೃತಿಯ ಪರಿಭಾಷೆಯಲ್ಲಿ ಇದು ಯೋಗಿಕಪಂಥಗಳು ಮತಧರ್ಮಗಳ ಆಚೆ ಹೋಗಿ ನಡೆಸಿದ ತಾತ್ವಿಕ ಕೊಡು ಕೊಳೆಯ ಒಂದು ರೂಪಕ. ಸಂಸ್ಕೃತಿಯನ್ನು ಖಾಸಗಿ ಆಸ್ತಿಯ ಹಕ್ಕಿನ ದೃಷ್ಟಿಯಲ್ಲಿ ನೋಡುವವರಿಗೆ ಈ ರೂಪಕಗಳು ಅರ್ಥವೇ ಆಗುವುದಿಲ್ಲ.

ಬಿಜಾಪುರದ ಬಸ್‌ನಿಲ್ದಾಣದ ಎದುರುಗಡೆಯಿರುವ ನರಸಿಂಹದತ್ತಮಂದಿರವು ಯೂಸುಫ್ ಆದಿಲಶಾಹಿ ಕಟ್ಟಿಸಿದ್ದು. ಇದು ಅರಮನೆ-ಕೋಟೆಗಳಿಗೆ ಅಂಟಿಕೊಂಡೇ ಇದೆ. ಆದಿಲಶಾಹಿ ಅರಸರು ಗಾಣಗಾಪುರದ ನರಸಿಂಹದತ್ತನ ಗುಪ್ತಭಕ್ತರು: ಅದರಲ್ಲೂ ಎರಡನೇ ಇಬ್ರಾಹಿಂ ಆದಿಲ್ ಶಾಹಿಯ ಮತ್ತೊಬ್ಬ ಗುರು ರುಕ್ಮಾಂಗದ ಪಂಡಿತನೂ ದತ್ತಪಂಥದವನು. ಗಾಣಗಾಪುರದ ದತ್ತಮಂದಿರಕ್ಕೆ ಆದಿಲಶಾಹಿ ಕಾಲದಲ್ಲಿ ನೂರಾರು ಜಹಗೀರುಗಳನ್ನು ಬಿಡಲಾಯಿತು. ನರಸಿಂಹದತ್ತನೂ (1378-1455) ದತ್ತಪಂಥಕ್ಕೆ ಆಕರ್ಷಿತನಾಗಿ 'ಅಲಂಪ್ರಭು' ಎಂಬ ಹೆಸರು ಪಡೆದ ಅಹಮದಶಾ ಬಹಮನಿಯೂ (1422-36) ಗುಲಬರ್ಗಾಯ ಸೂಫಿ ಬಂದೇನವಾಜನೂ (1317-1422) ಒಂದೇ ಕಾಲದಲ್ಲಿ ಒಂದೇ ಭಾಗದಲ್ಲಿ ಇದ್ದವರು. ಹೀಗೆ ಸೂಫಿಗಳು ದತ್ತಪಂಥಿಗಳ ಜತೆ, ದತ್ತಪಂಥಿಗಳು ಸೂಫಿಗಳ ಜತೆ ಸಂಧಾನಗಳನ್ನು ನಡೆಸಿದ್ದಾರೆ. ಇದಕ್ಕೆ ಈ ಕಾಲದ ಸಾಕ್ಷಿ ಎಂದರೆ, ಅಕ್ಕಲಕೋಟೆಯಲ್ಲಿ ನಾನು ಭೇಟಿಮಾಡಿದ ಒಬ್ಬ ದತ್ತಪಂಥಿ. ಮಹಾರಾಷ್ಟ್ರ ರಸ್ತೆ ಸಾರಿಗೆ ಇಲಾಖೆಯಲ್ಲಿ ಚಾಲಕನಾಗಿದ್ದ ಈತ 80 ವರ್ಷದ ಮುದುಕ. ಹೆಸರು ಯಾಕೂಬ್ ಸಾಬ್ ಜಮಾದಾರ್.

ಬಾಬಾಬುಡನಗಿರಿಯ ದಾದಾಪೀರ್, ದತ್ತಾತ್ರೇಯ ಎರಡು ವಿರುದ್ಧ ಧರ್ಮಗಳಿಗೆ ಸೇರಿದವರು. ಒಬ್ಬ ಮತ್ತೊಬ್ಬನನ್ನು ಆಕ್ರಮಿಸಿದ್ದಾನೆ ಎಂಬುದು [illegible] ಪರಂಪರೆ ಕುರಿತ ಅಜ್ಞಾನವಾಗಿದೆ.

ಇವು ಪವಿತ್ರ

ಕೆಲವು ಧಾರ್ಮಿಕ ಸ್ಥಾನಗಳಿಗೆ ಆಯಾ ಮತಸ್ಥರು ಮಾತ್ರ ಹೋಗುತ್ತಾರೆ. ಆದರೆ ಮತ್ತೆ ಕೆಲವು ಸ್ಥಾನಗಳಿಗೆ ಎಲ್ಲ ಧರ್ಮ-ಜಾತಿಗಳ [illegible]



ಯಾತ್ರಾಸ್ಥಳವು ಪೊಲೀಸರ ರಕ್ಷಣೆ ಪಡೆಯುವಂತಾದ ಅನಿಷ್ಟ ಬೆಳವಣಿಗೆ

ಅಲಮಪ್ರಭುವಿನ ಉರುಸನ್ನು ಒಬ್ಬ ಜಂಗಮ ಬಂದು ಆರಂಭಿಸುತ್ತಾನೆ. ಯಮನೂರಿನ ಚಾಂಗದೇವ, ಇಳಕಲ್ಲಿನ ಮುರ್ತುಜಾಖಾದ್ರಿ, ಜೀಳಗಿಯ ಹಸನಡೋಂಗ್ರಿ, ಇವರ ದರ್ಗಾಗಳು 'ಹಿಂದೂ'ಗಳ ಕೈಯಲ್ಲಿವೆ. ಯಾವತ್ತೂ ದರ್ಗಾ-ಗದ್ದುಗೆಗಳಿಗೆ ನಡೆದುಕೊಳ್ಳುವ ಜನರಿಗೆ, ಸಂತರ 'ಮೂಲ' ಚರಿತ್ರೆ ಬೇಕಾಗಿಲ್ಲ. ಅವನು ಯಾವ ಪಂಥಕ್ಕೆ, ದೇಶಕ್ಕೆ ಸೇರಿದವನು ಎಂಬುದೂ ಅಪ್ರಸ್ತುತ. ಅವರಿಗೆ ಗೊತ್ತಿರುವುದು ಅವರ ಮಹಿಮೆ ಬಣ್ಣಿಸುವ ಪುರಾಣಗಳು ಮಾತ್ರ. ಅವರಿಗೆ ಗೊತ್ತಿರುವುದು ಕಷ್ಟ ಬಂದಾಗ ಹರಕೆ ಕಟ್ಟಿಕೊಳ್ಳುವುದು ಮತ್ತು ಅವಕಾಶ ಸಿಕ್ಕಾಗ ಅದನ್ನು ತೀರಿಸುವುದು. ಅವರ ಭಕ್ತಿಯ ಸ್ವರೂಪದಲ್ಲಿ ಮೂಲ ಹುಡುಕುವ ಉದ್ದೇಶಗಳಿಲ್ಲ. ಇದನ್ನು 'ಸಹಜ ಸೆಕ್ಯುಲರಿಸಂ' ಎಂದು ಕರೆಯಬಹುದು. ಪ್ರಜ್ಞಾಪೂರ್ವಕವಾಗಿ, ವಿಚಾರಕ್ಕೆ ಬದ್ಧನಾಗಿ ಸೆಕ್ಯುಲರ್ ಆಗಿರುವುದಕ್ಕಿಂತ, ಧಾರ್ಮಿಕ ಶ್ರದ್ಧೆಯಿದ್ದೂ ಸೆಕ್ಯುಲರ್ ಆಗಿರುವುದು ಬೇರೆಯಾದುದು. ಮಳೆ ಸುರಿವಾಗ ಓಡಿಹೋಗಿ ಮರದಡಿ ನಿಲ್ಲುವವನಿಗೆ, ಇದು ಯಾವ ಜಾತಿಯ ಮರ, ನನ್ನ ಬಗಲಿಗೆ ನಿಂತವರು ಯಾವ ಮತದವರು ಎಂಬ ಪ್ರಶ್ನೆಗಳೇ ಬರುವುದಿಲ್ಲ. 'ನಮ್ಮ ದೇವರಿಗೆ ನೀವೇಕೆ ಬಂದಿರಿ ?' ಎಂದು ಯಾರೂ ಕೇಳುವುದಿಲ್ಲ. ಜನಸಾಮಾನ್ಯರ ಸ್ವಭಾವವೇ ಅದು. ಇಂಥವರನ್ನು 'ಹಿಂದುಗಳು' 'ಮುಸ್ಲಿಮರು' ಎಂಬ ಪರಿಭಾಷೆಯಲ್ಲಿ ಕರೆಯುವುದೇ ಅಪಚಾರ. ಅವರು ಕೇವಲ ಜನರು. ಬಾಬಾಬುಡನಗಿರಿ ಇಂಥ ಕೇವಲ ಜನರು ನಡೆದುಕೊಳ್ಳುವ ನಮ್ಮ ನಾಡಿನ ಕೆಲವೇ ಜಾಗಗಳಲ್ಲಿ ಒಂದು. ಈ ಕಾರಣಕ್ಕಾಗಿಯೇ ಇದು ಪವಿತ್ರ. ಈ ಕೇವಲ ಜನ, ಸಾಮಾನ್ಯವಾಗಿ ಸಮಾಜದ ಕೆಳಸ್ತರದವರು. ಬಾಳಿನ ಕಷ್ಟಗಳ ಹೊಡೆತದಲ್ಲಿ ನಲುಗಿದವರು. ನಮ್ಮ ಆರ್ಥಿಕ-ಸಾಮಾಜಿಕ ವ್ಯವಸ್ಥೆಯೂ ಅವರ ಈ ಸ್ಥಿತಿಗೆ ಕಾರಣ. ದರ್ಗಾಗಳಿಗೆ ಬರುವ ಜನರ [illegible] ಹೋದರೆ, [illegible] ವಾಗುತ್ತದೆ. [illegible] [illegible] [illegible]

ನಿಷ್ಠೆಯನ್ನು ಪ್ರದರ್ಶಿಸಲು ಬಂದವರಲ್ಲ. ಇವರಿಗೆ ನಿಜವಾಗಿಯೂ ಜಾತಿಮತಗಳಿಲ್ಲ. ಇಂಥ ಜನರ ಚೈತನ್ಯ ತಾಣಗಳಿರುವ ಕಾರಣಕ್ಕೇ ಈ ದರ್ಗಾಗಳು ಪವಿತ್ರವಾದವು. ಈ ದೇಶದಲ್ಲಿ ನೂರಾರು ವರುಷಗಳಿಂದ ಅನೇಕ ಪಂಥಗಳು ಸನಾತನ ವಾದಗಳನ್ನು ಧಿಕ್ಕರಿಸಿ ಮಾಡಿದ ತಾತ್ವಿಕ ಸಹಜೀವನದ ಸಂಕೇತಗಳಿವು. ಭಾರತದಂಥ ಬಹುಧರ್ಮೀಯ, ಬಹುಭಾಷೀಯ, ಬಹುಸಂಸ್ಕೃತಿಯ ನಾಡಿನಲ್ಲಿ ಇವು ಇರುವುದು ಸಾಂಸ್ಕೃತಿಕ ಅಗತ್ಯವಾಗಿದೆ. ಈ ಕಾರಣಕ್ಕಾಗಿಯೂ ಇವು ಪವಿತ್ರವಾದವು.

ನೈತಿಕ ಹಕ್ಕಿಲ್ಲ

ಈ ಪವಿತ್ರ ಜಾಗಗಳನ್ನು ಯಾವುದೇ ಧರ್ಮದ ಮತೀಯವಾದಿಗಳು ಕೈಹಾಕಿ ಅಪವಿತ್ರಗೊಳಿಸಲು ಬಿಡಬಾರದು. ಮತೀಯವಾದಿಗಳಿಗೆ, ಸನಾತನವಾದಿಗಳಿಗೆ ಇಲ್ಲಿ ಕೈಹಾಕಲು ನೈತಿಕ ಹಕ್ಕೇ ಇಲ್ಲ. ಯಾಕೆಂದರೆ ಈ ಸಂತರು ಚರಿತ್ರೆಯಲ್ಲಿ ಇವರ ಪೂರ್ವಜರು ಕೊಟ್ಟ ಕಿರುಕುಳ ಅನುಭವಿಸಿ, ಅವರ ವಿರುದ್ಧ ಸೆಣಸಾಡಿ ಬಾಳಿದವರು; ಇವು ನಮ್ಮ ಮತದವು ಎಂದು ಹೇಳಲು ಸನಾತವಾದಿಗಳಿಗೆ ಯಾಕೆ ನೈತಿಕ ಹಕ್ಕಿಲ್ಲವೆಂದರೆ, ವೈಯಕ್ತಿಕವಾಗಿ ಇವರು ಎಂದೂ ಭಕ್ತಿಯಿಂದ ನಡೆದುಕೊಳ್ಳುವವರಲ್ಲ; ರಾಜಕೀಯದ ಆಟಗಳಿಗೆ ಬಳಸಿಕೊಳ್ಳುವವರು. ಇವರಿಗೆ ನಮ್ಮ ದೇಶದ ಬಹುಮುಖಿ ಪರಂಪರೆ ಸೃಷ್ಟಿಸಿದ ಕೂಡುಸಂಸ್ಕೃತಿಯ ಅರಿವೇ ಇಲ್ಲ. ಇವರಿಗೆ ಯಾಕೆ ಹಕ್ಕಿಲ್ಲವೆಂದರೆ - ಜನರ ನಿಜವಾದ ಕಷ್ಟಗಳಿಗಿಂತ ವಿಚಿತ್ರವಾಗಿ ವ್ಯಾಖ್ಯಾನಿಸಲಾಗುವ 'ಧರ್ಮ'ವೇ ಮುಖ್ಯ. ಜನರ ಕಷ್ಟಗಳಿಗೆ ಕಾರಣವಾಗಿರುವ ವ್ಯವಸ್ಥೆಯನ್ನು ಮುಖಾಮುಖಿ ಮಾಡಬೇಕು, ಎಲ್ಲ ಜನರೂ ಸುಖವಾಗಿ ಸಮಾನವಾಗಿ ಬದುಕಬಲ್ಲ ನಾಡನ್ನು ಕಟ್ಟಬೇಕು ಎಂಬ ಕನಸೇ ಇವರಿಗೆ ಇಲ್ಲ. ಹೀಗಾಗಿ ಇವರು ತಂತಮ್ಮ ಧರ್ಮದ ಹಾಗೂ ಎಲ್ಲ ಧರ್ಮದ ಅಸಹಾಯಕ ಜನರ ಶತ್ರುಗಳು. ಈ ದೇಶ ಮಸೀದಿ-ಪೀಠಗಳ ಹೆಸರಲ್ಲಿ ಜಗಳಮಾಡಿಕೊಂಡೇ ಇರಬೇಕು. ಒಂದಾಗಿರಬಾರದು [illegible] ಬಯಸುವುದು ದೇಶದ್ರೋಹವಲ್ಲದೆ ಮತ್ತೇನು ? ಆದ್ದರಿಂದ ಈ ನಾಡನ್ನು ನಾಡಿನ ಜನರನ್ನು ನಿಜವಾಗಿ [illegible] ಇಂಥ ಪವಿತ್ರತಾಣಗಳನ್ನು ಇಟ್ಟುಕೊಂಡು ರಕ್ತಹರಿಸಲು ನಿಂತಿರುವ ರಾಜಕೀಯದ ಸೊಲ್ಲನ್ನು ಅಡಗಿಸಲೇಬೇಕಾಗಿದೆ.

ಬಿಕ್ಕಟ್ಟಿನಲ್ಲಿ ಸನಾತನವಾದಗಳು

ಬ್ರಾಹ್ಮಣ ಸನಾತವಾದ ಇಂದು ಬಿಕ್ಕಟ್ಟಿನಲ್ಲಿದೆ. ಅದು ತನಗೆ ಬಿಕ್ಕಟ್ಟು ಬಂದಾಗಲೆಲ್ಲ ತನ್ನ ತೆಕ್ಕೆಗೆ ಉಳಿದ ಎಲ್ಲ ಜಾತಿಯ ಜನರನ್ನು 'ಹಿಂದು'ಗಳು ಎಂದು ಕರೆದು ಕೂಡಿಸಿ, ಇದು ನಿಮ್ಮ ಬಿಕ್ಕಟ್ಟು ಎಂದು ಒಪ್ಪಿಸುತ್ತದೆ; ಅವರಿಗೊಬ್ಬ ಶತ್ರುವನ್ನು ನಿರ್ಮಿಸಿಕೊಡುತ್ತದೆ; ಆ ಶತ್ರುವಿನಿಂದ ರಕ್ಷಿಸುವ ಜವಾಬ್ದಾರಿಯನ್ನು ತಾನು ಹೊತ್ತುಕೊಳ್ಳುತ್ತದೆ. ದತ್ತಪೀಠ ವಿಮೋಚನೆಗೆ ಮುಂದಾಗಿರುವುದು, ಇಂಥ ಬ್ರಾಹ್ಮಣ ಸನಾತನವಾದ. ಇದು ಆಳದಲ್ಲಿ ತನ್ನ ವರ್ಗದ ಹಿತಗಳನ್ನು ಇಟ್ಟುಕೊಂಡಿದೆ. ತನಗೆ ಹಿತಮಾಡುವ ರಾಜಕೀಯ ಪಕ್ಷಕ್ಕೆ ಜನರ ವೋಟು ದೊರಕಿಸುವ ಉದ್ದೇಶ ಇದರಲ್ಲಿ ಅಡಗಿದೆ. ಮುಸ್ಲಿಂ ಮೂಲಭೂತವಾದ ಕೂಡ ಬೇರೊಂದು ಬಗೆಯ ಬಿಕ್ಕಟ್ಟಿನಲ್ಲಿದೆ. ಈ ದೇಶದ ಅನೇಕ ಪ್ರಾದೇಶಿಕ ಸಂಸ್ಕೃತಿಗಳ, ಪಂಥಗಳ ಭಾಗವಾಗಿ ಬೆಳೆದಿರುವ ಮುಸ್ಲಿಮರನ್ನೆಲ್ಲ ಅರಬ್ ಇಸ್ಲಾಮಿನ ಏಕರೂಪಕ್ಕೆ ತಂದು ಹೊಂದಿಸಬೇಕು, ಎಂಬುದು ಅದರ ಗುಪ್ತ ಕಾರ್ಯಕ್ರಮ. ಎಂತಲೇ ಅದು ಸಂತ ದರ್ಗಾಗಳಿಗೆ ಮುಸ್ಲಿಮರು ನಡೆದುಕೊಳ್ಳುವುದನ್ನು 'ಖಬರ್‌ಪರಸ್ತಿ' (ಸಮಾಧಿಪೂಜೆ) ಎಂದು ವ್ಯಂಗ್ಯ ಮಾಡುತ್ತದೆ; ಇದು ಹಿಂದುಗಳ ವಿಗ್ರಹಾರಾಧನೆಗೆ ಹತ್ತಿರವಾದುದು ಎಂದು ವಾದಿಸುತ್ತದೆ. ಯಾವ ಕಾರಣಕ್ಕಾಗಿ ಬಡವರು, ಹೆಂಗಸರು ಈ ದರ್ಗಾ ಸಂಸ್ಕೃತಿಯನ್ನು ನಿರ್ಮಿಸಿಕೊಳ್ಳಬೇಕಾಯಿತು ಎಂಬ ಪ್ರಶ್ನೆಯನ್ನು ಕೇಳಿಕೊಂಡರೆ, ಕಂಗೆಡುವಂಥ ಉತ್ತರ ಸಿಗುತ್ತದೆ. ಬಾಬ್ರಿ ಮಸೀದಿಯಷ್ಟು ಬಾಬಾಬುಡನಗಿರಿ ಪ್ರಕರಣ ಅವರಿಗೆ ಕಾಡುವ ಸಂಗತಿಯಲ್ಲ. ಇನ್ನು ದರ್ಗಾ ಉಸ್ತುವಾರಿ ಮಾಡುತ್ತಿರುವವರಿಗೋ ಧರ್ಮವೂ ಅಮುಖ್ಯ, ಜನರ ಸಂಸ್ಕೃತಿಯೂ ಅಮುಖ್ಯ. ವಹಿವಾಟಿನಿಂದ ಬರುವ ಉತ್ಪನ್ನವಷ್ಟೇ ಮುಖ್ಯ.

ಹೀಗಾಗಿ ಸದ್ಯ ಬಾಬಾಬುಡನಗಿರಿ ಹಿಂದೂ ಮತೀಯವಾದಿಗಳ ರಾಜಕೀಯ ಆಟಕ್ಕೆ ಮೈದಾನವಾಗಿದೆ, ಮುಸ್ಲಿಂ ಸನಾತನವಾದಿಗಳ ತಿರಸ್ಕಾರಕ್ಕೆ ಸಿಕ್ಕ ಅನಾಥ ಮಗುವಾಗಿದೆ. ದರ್ಗಾ ಅದರ ಉಸ್ತುವಾರಿದಾರರಿಗೆ ವರಮಾನ ತರುವ ಸೊತ್ತಿನ ರಕ್ಷಣೆಯಾಗಿದೆ. ಈ ಮೂರು ಒತ್ತಡಗಳಲ್ಲಿ ಗಿರಿಗೆ ನಡೆದುಕೊಳ್ಳುವ ಲಕ್ಷಾಂತರ ಮುಗ್ಧಜನ ಬಾಯಿ ಕಳೆದುಕೊಂಡವರಾಗಿದ್ದಾರೆ. ಇಂಥ ಬಾಯಿ ಕಳೆದುಕೊಂಡ ಜನರ ಪರವಾಗಿ ಸೇರಿಕೊಳ್ಳುವುದು ಈಗಿನ ಅಗತ್ಯವಾಗಿದೆ. ಈ ಕೆಲಸವನ್ನು ನಾಡಿನ ಆರೋಗ್ಯವಂತ ಮನಸ್ಸುಗಳು ಶುರುಮಾಡಿವೆ ಕೂಡ. ದೀಪ ನೀಡುವ ಹಬ್ಬದ ಹಾಡಿನೊಳಗಿನ ಬೆಳಕೂ ಆರಿಹೋಗುವುದಾದರೆ, ಜನರನ್ನು ಜಾತ್ಯತೀತವಾಗಿ ಬೆಸೆಯುವಂಥ ಕೆಲವೇ ತಾಣಗಳೂ ತಮ್ಮ ಸಂಜೀವಿನಿ ಶಕ್ತಿ ಕಳೆದುಕೊಳ್ಳುವಂತಾದರೆ, ಈ ದೇಶವು ಕೋಮುವಾದಿಗಳು ಸೃಷ್ಟಿಮಾಡಲಿರುವ ಘೋರ ಕತ್ತಲೊಳಗೆ ಉಸಿರುಗಟ್ಟಿ ಹೋಗುವುದು.

ಡಾ॥ ರಹಮತ್ ತರೀಕೆರೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - 583276 (ಬಳ್ಳಾರಿ)

ವೈದ್ಯಕೀಯದಲ್ಲಿ ಹೊಸತು

ಡಾ॥ ಸಿ. ಆರ್. ಚಂದ್ರಶೇಖರ್



ವೈದ್ಯ ವಿಜ್ಞಾನ ಇಂದು ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ. ಅನೇಕ ಕಾಯಿಲೆಗಳ ಕಾರಣಾಂಶಗಳನ್ನು ಪತ್ತೆ ಮಾಡಿದೆ. ರೋಗನಿದಾನಕ್ಕೆ 'ಹೈಟೆಕ್' ತಂತ್ರಜ್ಞಾನದ ಬಳಕೆಯಾಗುತ್ತಿದೆ. ಅನೇಕ ಔಷಧಿಗಳ ಮತ್ತು ಚಿಕಿತ್ಸಾವಿಧಾನಗಳ ಆವಿಷ್ಕಾರವಾಗಿ, ಸಾವು ನೋವು ತಗ್ಗುತ್ತಿವೆ. ವೈದ್ಯವಿಜ್ಞಾನದಲ್ಲಿ ಅನೇಕ ಶಾಖೆ ಉಪಶಾಖೆಗಳಾಗಿದ್ದು, ಒಂದೊಂದು ಶಾಖೆ ಉಪಶಾಖೆಗಳಲ್ಲಿ ಸಂಗ್ರಹವಾಗುತ್ತಿರುವ ಜ್ಞಾನವನ್ನು ಒಬ್ಬ ವ್ಯಕ್ತಿ ತನ್ನ ಜೀವಿತಕಾಲವನ್ನೆಲ್ಲಾ ಬಳಸಿದರೂ ಅರಗಿಸಿಕೊಳ್ಳಲಾರ. ವಿಜ್ಞಾನ ಮತ್ತು ತಂತ್ರಜ್ಞಾನದ ಅಪರಿಮಿತ ಬೆಳವಣಿಗೆಯಿಂದ ಮನುಷ್ಯ ಜೀವನದಲ್ಲಿ ಆರಾಮಾಗಿರಲು ಅಸಂಖ್ಯಾತ ವಸ್ತುಗಳನ್ನು ವ್ಯವಸ್ಥೆಗಳನ್ನು ರೂಪಿಸಿಕೊಂಡಿದ್ದಾನೆ. ಆದರೆ ಆತನ ಆರೋಗ್ಯ ಸುಧಾರಿಸಿದೆಯೇ? ಯಾವುದಾದರೂ ಕಾಯಿಲೆಗಳನ್ನು ಮೂಲೋಚ್ಚಾಟನೆ ಮಾಡಿ ಪ್ರಪಂಚದಿಂದ ಅಟ್ಟಲಾಗಿದೆಯೇ? ಮನುಷ್ಯರನ್ನು ಕಾಡುವ ಎಲ್ಲ ಕಾಯಿಲೆಗಳಿಗೆ 'ಗುಣ' ಮಾಡುವಂತಹ ಔಷಧೋಪಚಾರಗಳ ಆವಿಷ್ಕಾರವಾಗಿದೆಯೇ? ಪ್ರಪಂಚದಲ್ಲಿ ಅನಾರೋಗ್ಯದಿಂದ ಬಳಲುವವರ ಸಂಖ್ಯೆ ಕಡಿಮೆಯಾಗಿ, ಆರೋಗ್ಯವಂತರ ಸಂಖ್ಯೆ ಹೆಚ್ಚುತ್ತಿದೆಯೇ?

ಇಂದು ಎರಡು ಬಗೆಯ ಕಾಯಿಲೆಗಳನ್ನಷ್ಟೇ ಗುಣ ಮಾಡಲು ಸಾಧ್ಯವಾಗಿದೆ. ಒಂದು, ಕೊರತೆಯ ಕಾಯಿಲೆಗಳು: ಮುಖ್ಯವಾಗಿ ಪೌಷ್ಟಿಕಾಂಶಗಳ ಕೊರತೆಯಿಂದ ಬರುವಂಥವು. ಉದಾ : ವಿಟಮಿನ್ 'ಎ' ಕೊರತೆಯಿಂದ ಬರುವ ಇರುಳು ಕುರುಡುತನವನ್ನು ಆ ವಿಟಮಿನ್ ಕೊಟ್ಟು ವಾಸಿಮಾಡಬಹುದು. ಅಯೋಡಿನ್ ಕೊರತೆಯನ್ನು ತುಂಬಿ 'ಹೈಪೋಥೈರಾಯಿಡಿಸಮ್' ಮತ್ತು 'ಕ್ರೆಟಿನಿಸಂ' ಅನ್ನು ನಿವಾರಿಸಬಹುದು. ಕಬ್ಬಿಣಾಂಶ, ಫೋಲಿಕ್ ಆಮ್ಲದ ಕೊರತೆಯಿಂದ ಬರುವ ಅನೀಮಿಯಾವನ್ನು ಗುಣಪಡಿಸಬಹುದು. ಡೋಪಮಿನ್ ಕೊರತೆಯಿಂದ ಬರುವ ಖಿನ್ನತೆ ಕಾಯಿಲೆಯನ್ನು 'ಖಿನ್ನತೆ ನಿವಾರಕ ಔಷಧ'ವನ್ನು ಕೊಟ್ಟು ಸರಿಪಡಿಸಬಹುದು. ಹೀಗಿದ್ದರೂ ನಮ್ಮ ದೇಶದಲ್ಲಿ ಅಪೌಷ್ಟಿಕತೆಯಿಂದ ಉಂಟಾಗುವ ಅನೇಕ ಕಾಯಿಲೆಗಳಿಂದ ನಮ್ಮ ಮಕ್ಕಳು, ಗರ್ಭಿಣಿಯರು, ಸ್ತ್ರೀಯರು, ವೃದ್ಧರು ಬಳಲುವುದು ತಪ್ಪಿಲ್ಲ. ನಮ್ಮ ದೇಶದಲ್ಲಿರುವ ಅರ್ಧದಷ್ಟು ಅಂಧರಿಗೆ ಅಂಧತ್ವ ಬರಲು 'ವಿಟಮಿನ್ ಎ' ಕೊರತೆಯೇ ಕಾರಣ. ಶೇಕಡ 40ರಷ್ಟು ಜನ ಬಡತನ ರೇಖೆಯಿಂದ ಕೆಳಗಿದ್ದು ಅವರಿಗೆ ಎರಡು ಹೊತ್ತಿನ ಊಟ ಸಿಗದಿರುವುದು ಒಂದು ಕಾರಣವಾದರೆ, ಗರ್ಭಿಣಿಯರಿಗೆ, ಮಕ್ಕಳಿಗೆ ಎಂತಹ ಆಹಾರ ಕೊಡಬೇಕು ಎಂದು ಜನರಿಗೆ ತಿಳಿದಿಲ್ಲದಿರುವುದು ಮತ್ತೊಂದು ಪ್ರಮುಖ ಕಾರಣ. ಉಚಿತವಾಗಿ, ಅವರಿಗೆ ಲಭ್ಯವಾಗುವ ರೀತಿಯಲ್ಲಿ, ವೈದ್ಯಕೀಯ ಸೇವಾ ಸೌಲಭ್ಯಗಳು ದೊರೆಯದಿರುವುದೂ ಅಷ್ಟೇ ಪ್ರಮುಖ ಕಾರಣ.

ಆಂಟಿಬಯಾಟಿಕ್‌ಗಳ ಆವಿಷ್ಕಾರದಿಂದ ಲಕ್ಷಾಂತರ ಜನರ ಪ್ರಾಣ ಉಳಿಯಿತು, ಉಳಿಯುತ್ತಾ ಇದೆ. 1928ರಲ್ಲಿ ಸರ್ ಅಲೆಕ್ಸಾಂಡರ್ ಫ್ಲೆಮಿಂಗ್ ಕಂಡುಹಿಡಿದ ಪೆನಿಸಿಲಿನ್‌ನಿಂದ ಹಿಡಿದು ಮೂರನೇ ತಲೆಮಾರಿನ ಸಿಫಾಲೋಸ್ಪೋರಿನ್‌ಗಳು, ಕ್ವಿನೋಲೋನ್‌ಗಳವರೆಗೆ, ಹತ್ತಾರು ವಿಶಾಲ ಶ್ರೇಣಿಯ ಆಂಟಿಬಯಾಟಿಕ್‌ಗಳು ಬಳಕೆಯಲ್ಲಿವೆ. ಇವು ಬೆಕ್ಟೀರಿಯಾಗಳನ್ನು ಕೊಲ್ಲಬಲ್ಲವು. ಸ್ವಲ್ಪಮಟ್ಟಿಗೆ ಫಂಗಸ್‌ಗಳನ್ನು ನಾಶಮಾಡಬಲ್ಲವು. ಆದರೆ ವೈರಸ್‌ಗಳನ್ನು ಏನೂ ಮಾಡಲಾರವು. ಹೀಗಾಗಿ ಸರ್ವೇಸಾಮಾನ್ಯವಾದ ನೆಗಡಿಗೆ (common cold) ಇಂದಿಗೂ ಔಷಧವಿಲ್ಲ, ಫ್ಲೂಗೆ ಔಷಧವಿಲ್ಲ. ಚಿಕ್ಕಮ್ಮ (Chicken pox), ಗೌತಲಮ್ಮ (Mumps), ದಡಾರ (Measles), ಪೋಲಿಯೊ ಮಿದುಳಿನ ಜ್ವರ (Viral encephalitis or menengitis), [illegible] ಸೋಂಕಿಗೆ ಔಷಧವಿಲ್ಲ. ಇಷ್ಟಲ್ಲದೆ ಆಂಟಿಬಯಾಟಿಕ್‌ಗಳನ್ನು ವಿವೇಚನೆ ಇಲ್ಲದೆ, ವೈದ್ಯರೂ, ರೋಗಿಗಳೂ ಬಳಸುತ್ತಾ ಬಂದು ಅನೇಕ ರೋಗಾಣುಗಳು, ಲಭ್ಯವಿರುವ [illegible] ಆಂಟಿಬಯಾಟಿಕ್‌ಗಳಿಗೆ 'ಪ್ರತಿರೋಧ' (Resistance)ವನ್ನು ಬೆಳೆಸಿಕೊಂಡಿವೆ. ಹೀಗಾಗಿ ಎಷ್ಟೋ ಸೋಂಕುಗಳಲ್ಲಿ, ಕೊಟ್ಟ ಆಂಟಿಬಯಾಟಿಕ್‌ಗಳು ಕೆಲಸ ಮಾಡದೇ ಹಣ, ಶ್ರಮ ವ್ಯರ್ಥವಾಗುತ್ತಿದೆ; ರೋಗಿಗಳ ನರಳಿಕೆ ಮುಂದುವರೆದಿದೆ. ಹೊಸ ಆಂಟಿಬಯಾಟಿಕ್‌ಗಳ [illegible] ದುಬಾರಿ [illegible] ಮಧ್ಯಮವರ್ಗದವರಿಗೂ ಅವನ್ನು ಕೊಂಡುಕೊಳ್ಳುವುದು ಕಷ್ಟವಾಗಿದೆ.

ಸಿಡುಬುರೋಗ ಒಂದನ್ನು ಮಾತ್ರ ಪ್ರಪಂಚದಿಂದ ಉಚ್ಚಾಟಿಸಲು ಸಾಧ್ಯವಾಗಿದೆ. ಉಳಿದೆಲ್ಲ ರೋಗಗಳು ಮತ್ತು ಅವುಗಳ ಹಾವಳಿ [illegible] ಹತೋಟಿಗೆ ಬಂದಿವೆ, ಅವನ್ನು [illegible] ಮರುಕಳಿಸಿವೆ. ಉದಾಹರಣೆಗೆ ಕ್ಷಯ, ಮಲೇರಿಯಾ, ಪ್ಲೇಗ್ ರೋಗಗಳು. ಇದಕ್ಕೆ ಕಾರಣ, ಜನರಲ್ಲಿ ಆರೋಗ್ಯ ಪ್ರಜ್ಞೆ ಬೆಳೆಯಲಿಲ್ಲ. ಮನೆಯ ಒಳಗೆ ಹೊರಗೆ ಸಮಾಜದಲ್ಲಿಯ ಸ್ವಚ್ಛತೆಯ ಅಗತ್ಯವನ್ನು ಜನ ಅರಿಯಲಿಲ್ಲ. ರೋಗಾಣುಗಳು ಎಲ್ಲಿ ಹುಟ್ಟುತ್ತವೆ, ಹೇಗೆ ಬೆಳೆಯುತ್ತವೆ, ಹೇಗೆ ಹರಡುತ್ತವೆ ಎಂಬುದು ವೈದ್ಯರಿಗೆ ತಿಳಿದಿದೆಯೇ ಹೊರತು ಜನಸಾಮಾನ್ಯರಿಗೆ ತಿಳಿಸುವ ಕೆಲಸ ಆಗಲಿಲ್ಲ. ರೋಗ ಬಂದರೆ ವೈದ್ಯರಲ್ಲಿಗೆ ಹೋಗಿ ಔಷಧಿ ತೆಗೆದುಕೊಳ್ಳಬೇಕು ಎಂದು ಜನ ತಿಳಿದರೇ ವಿನಃ ಕಾಯಿಲೆಗಳು ಬರದಂತೆ ಮಾಡಲು ಸಾಧ್ಯವಿದೆ, ಅದು ತಮ್ಮ ಕೈಯಲ್ಲಿಯೇ ಇದೆ ಎಂದು ತಿಳಿದುಕೊಳ್ಳಲಿಲ್ಲ. ಇಂದಿಗೂ ಕುಡಿಯುವ ನೀರಿನ ಮೂಲಗಳಾದ ಕೆರೆ, ಬಾವಿ, ಹೊಳೆ, ನದಿ, ಸರೋವರಗಳಿಗೆ ಮನುಷ್ಯ ಮತ್ತು ಪ್ರಾಣಿಗಳ ಮಲ, ಮೂತ್ರ ಹಾಗೂ ಕೈಗಾರಿಕೆಗಳ ತ್ಯಾಜ್ಯವಸ್ತುಗಳು ಸೇರುತ್ತಾ ನೀರಿನ ಮೂಲಕ ಹರಡುವ ಟೈಫಾಯಿಡ್, ಅತಿಸಾರ, ಕಾಲರಾ, ಪೋಲಿಯೊ, ಅಮೀಬಿಯಾಸಿಸ್‌ನಂತಹ ರೋಗಗಳು ಎಲ್ಲೆಡೆ ಕಂಡುಬರುತ್ತವೆ. ಜನಸಂಖ್ಯೆಯ ಶೇಕಡಾ 90ರಷ್ಟು ಜನರ ಕರುಳುಗಳಲ್ಲಿ ಕೊಕ್ಕೆ ಹುಳು, ದುಂಡು ಹುಳು, ದಾರದ ಹುಳು, ಲಾಡಿಹುಳುಗಳು ಮನೆ ಮಾಡಿವೆ. ಹೊಟ್ಟೆನೋವು, ಮಲಬದ್ಧತೆ, ಭೇದಿ, ರಕ್ತಹೀನತೆ ಅಪೌಷ್ಟಿಕತೆಗೆ ಕಾರಣವಾಗಿವೆ. ಯಾವುದೇ ಶಾಲೆಯಲ್ಲಿ ಶೇ. 40ರಿಂದ 50 ಮಕ್ಕಳು ಈ ಮೂಲದ ತೊಂದರೆಗಳಿಂದ ಬಳಲುತ್ತಿದ್ದಾರೆ.

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಸೋಂಕುರೋಗಗಳನ್ನು ಬಹುಮಟ್ಟಿಗೆ ತಡೆಗಟ್ಟಿದ್ದಾರೆ. ಇದಕ್ಕೆ ಕಾರಣ ಸ್ವಚ್ಛತೆಗೆ ಅವರು ಕೊಡುವ ಪ್ರಾಮುಖ್ಯತೆ. ವೈಯಕ್ತಿಕ ಸ್ವಚ್ಛತೆ, ಮನೆಯ ಒಳಗೆ ಮತ್ತು ಹೊರಗೆ ವಾಸಸ್ಥಳಗಳ ಸ್ವಚ್ಛತೆ, ತ್ಯಾಜ್ಯವಸ್ತುಗಳ ಸರಿಯಾದ ವಿಲೇವಾರಿ, ಕುಡಿಯುವ ನೀರು ಮತ್ತು ಸೇವಿಸುವ ಆಹಾರದ ಶುದ್ಧತೆ ಇವು ಈ ಸಾಧನೆಗೆ ಕಾರಣವಾಗಿವೆ. ಇದನ್ನು ನಾವು ಅವರಿಂದ ಕಲಿಯಬೇಕು.

ಆದರೆ, 6 ಸಾಂಕ್ರಾಮಿಕ ರೋಗಗಳ ಹಾವಳಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ದಿನೇ ದಿನೇ ಏರುತ್ತಿದೆ. ನಮ್ಮ ದೇಶವೂ ಇದರಲ್ಲಿ ಹಿಂದೆ ಬಿದ್ದಿಲ್ಲ. ಅಧಿಕ ರಕ್ತದೊತ್ತಡ, ಹೃದ್ರೋಗಗಳು, ಸಿಹಿಮೂತ್ರರೋಗ, ಬೊಜ್ಜು, ಕೀಲುಗಳ ಉರಿತ, ಕ್ಯಾನ್ಸರ್, ದೀರ್ಘಕಾಲ ಕಾಡುವ ಒತ್ತಡದ ತಲೆನೋವು ಮತ್ತು ಮೈಗ್ರೇನ್ ತಲೆನೋವು, ರಕ್ತನಾಳಗಳು ಕಟ್ಟಿಕೊಳ್ಳುವ ಕಾಯಿಲೆಗಳು, ಇತ್ಯಾದಿ. ಈ ಕಾಯಿಲೆಗಳಲ್ಲಿ ಮಾನಸಿಕ ಒತ್ತಡದಿಂದ ಬರುವಂತಹ ಕಾಯಿಲೆಗಳು - ಮನೋದೈಹಿಕ ರೋಗಗಳು, ಇದರ ಜೊತೆಗೆ ಮಾನಸಿಕ ಕಾಯಿಲೆಗಳಾದ ಖಿನ್ನತೆ, ಆತಂಕ, ಡೆಮೆನ್ಷಿಯಾಗಳೂ ಹೆಚ್ಚುತ್ತಿವೆ. ಅಪಘಾತ, ಆತ್ಮಹತ್ಯೆ, ಹಿಂಸಾಚಾರ, ಅಪರಾಧ ಪ್ರವೃತ್ತಿಯೂ ಏರುತ್ತಿದೆ. ಇವಕ್ಕೆಲ್ಲಾ ಪ್ರೇರಣೆ ನೀಡುವ ಅಂಶಗಳೆಂದರೆ,

1. ವಿಪರೀತ ಸ್ಪರ್ಧೆ, ಅನಿಶ್ಚಯತೆ, ಅಭದ್ರತೆ;
2. ಮಹತ್ವಾಕಾಂಕ್ಷೆ, ಹೆಚ್ಚಿನ ಸ್ವಾರ್ಥ;
3. ಕುಟುಂಬ ವ್ಯವಸ್ಥೆ ಸಡಿಲಗೊಳ್ಳುತ್ತಾ, ವ್ಯಕ್ತಿ ಕೇಂದ್ರವಾದ ವ್ಯವಸ್ಥೆ [illegible] ವಿಚ್ಛೇದನಗಳು ಹೆಚ್ಚುತ್ತಿರುವುದು, ಅವಿಭಕ್ತ ಕುಟುಂಬಗಳು ಕಣ್ಮರೆಯಾಗುತ್ತಿರುವುದು;
4. ಮನುಷ್ಯ-ಮನುಷ್ಯರ ನಡುವಿನ ಸಂಬಂಧ 'ಕೇವಲ ವ್ಯಾವಹಾರಿಕ ಮಟ್ಟವನ್ನು' ಮುಟ್ಟಿರುವುದು. ಸಾಮಾಜಿಕ ಸಂಬಂಧಗಳು ಆಸರೆಗಳು ಇಲ್ಲವಾಗುತ್ತಿರುವುದು;
5. ನೈತಿಕ ಮೌಲ್ಯಗಳು ಕುಸಿದಿರುವುದು, ಹಣಕ್ಕೆ ಪ್ರಾಧಾನ್ಯತೆ;
6. ಕಟ್ಟುಪಾಡುಗಳಿಲ್ಲದ, ಮುಕ್ತ ಹಾಗೂ ಸ್ವೇಚ್ಛಾಚಾರದ ಲೈಂಗಿಕ ಚಟುವಟಿಕೆಗಳು;
7. ಹೆಚ್ಚುತ್ತಿರುವ ಅಸಮಾನತೆ, ಅವ್ಯವಸ್ಥೆ, ಶೋಷಣೆಗಳು;
8. ವಲಸೆ, ಕಿಕ್ಕಿರಿದು ತುಂಬಿರುವ, ಬೆಳೆಯುತ್ತಿರುವ ನಗರ ಹಾಗೂ ಪಟ್ಟಣಗಳು ಮತ್ತು ಅಲ್ಲಿನ ಪರಿಸರ ಮಾಲಿನ್ಯ;
9. ಮದ್ಯಸಾರ, ಹೊಗೆಸೊಪ್ಪು, ಮಾದಕ ವಸ್ತುಗಳು ಸುಲಭವಾಗಿ ಎಲ್ಲೆಡೆ ಲಭ್ಯವಿರುವುದು. ಜನ ಅವನ್ನು ಬಳಸುತ್ತಿರುವುದು;
10. ಹೆಚ್ಚುತ್ತಿರುವ ಮಾನಸಿಕ ಗೊಂದಲ, ದ್ವಂದ್ವ, ಅತೃಪ್ತಿ, ಅಸಮಾಧಾನಗಳು, ಚಿಂತೆ ವ್ಯಸನಗಳು, ಭಯ, ನಿರಾಶೆಗಳು.

ಹೀಗಾಗಿ 1990ರಲ್ಲಿ ವಿಶ್ವ ಆರೋಗ್ಯ [illegible]

1. ಉಸಿರಾಟದ ವ್ಯವಸ್ಥೆಯ ಕೆಳಭಾಗದ ಸೋಂಕುಗಳು - ಶ್ವಾಸಕೋಶಗಳು - ಶ್ವಾಸನಾಳಗಳ ಕಾಯಿಲೆಗಳು ;
2. ಹೃದಯಕ್ಕೆ ರಕ್ತ ಪೂರೈಸುವ ರಕ್ತನಾಳಗಳು ಕಟ್ಟಿಕೊಳ್ಳುವ ಕಾಯಿಲೆಗಳು; ಹೃದಯಾಘಾತ (Ischaemic Heart Disease) ;
3. ಮಿದುಳಿಗೆ ರಕ್ತಪೂರೈಕೆಯಲ್ಲಿ ಆಗುವ ಅಡೆತಡೆಗಳ ಕಾಯಿಲೆಗಳು - ಲಕ್ವ (Cerebro vascular Diseases) ;
4. ಭೇದಿ-ಅತಿಸಾರ;
5. ಹೆರಿಗೆ ನಂತರದ ತೊಂದರೆಗಳು (ಹೆಚ್ಚು ರಕ್ತಸ್ರಾವ, ಸೋಂಕು, ಹೆರಿಗೆ ಕಷ್ಟವಾಗಿ ತಾಯಿ ಮತ್ತು ಮಗು ನಿತ್ರಾಣಗಳಾಗುವುದು);
6. ಕ್ಷಯರೋಗ ;
7. ಶ್ವಾಸಕೋಶಕ್ಕೆ ಸಂಬಂಧಿಸಿದ ಕಾಯಿಲೆಗಳು ;
8. ದಡಾರ ;
9. ಮಲೇರಿಯಾ ;
10. ರಸ್ತೆ ಅಪಘಾತಗಳು.

ಹಾಗೆಯೇ, ವ್ಯಕ್ತಿಗಳ ದೈಹಿಕ ಮತ್ತು ಮಾನಸಿಕ ಶಕ್ತಿ ಸಾಮರ್ಥ್ಯಗಳನ್ನು ಕುಗ್ಗಿಸಿ, ಅವರು ದುರ್ಬಲರಾಗುವಂತೆ ಮಾಡುವ (Disability producing) ಟಾಪ್ 10 ಕಾಯಿಲೆಗಳಿವು :

1. ತೀವ್ರಮಟ್ಟದ, ಒಳಜನ್ಯ ಖಿನ್ನತೆ ;
2. ರಕ್ತ ಕೊರೆ - ಅನಿಮಿಯಾ ;
3. ಅಪಘಾತ, ಬೀಳುವುದರಿಂದ ಆದ ಗಾಯಗಳು, ಪೆಟ್ಟುಗಳು ;
4. ಮದ್ಯಪಾನ ಸೇವನೆ ಮತ್ತು ಚಟ ;
5. ಶ್ವಾಸಕೋಶದ ಕಾಯಿಲೆಗಳು ;
6. ಮೇನಿಯಾ-ಖಿನ್ನತೆ-ಕಾಯಿಲೆ (Bipolar Mood Disorders);
7. ಅಜನ್ಮ ನ್ಯೂನತೆಗಳು ;
8. ಮೂಳೆ ಮತ್ತು ಕೀಲುಗಳ ಉರಿತ (Oster-orthritis);
9. ಸ್ಕಿಜೋಫ್ರೀನಿಯಾ ಮನೋರೋಗ ;
10. ಗೀಳು ಮನೋರೋಗ (Obsessive compulsive disorder).

ಪ್ರಪಂಚದಾದ್ಯಂತ ಕಂಡುಬರುವ 'ಡಿಸ್‌ಎಬಿಲಿಟಿ' (ಮೈಮನಗಳ ಶಕ್ತಿ ಸಾಮರ್ಥ್ಯದ ನಷ್ಟ)ಯಲ್ಲಿ ಶೇಕಡ 11ರಷ್ಟು ಜನರಲ್ಲಿ ಡಿಸ್‌ಎಬಿಲಿಟಿಗೆ ಮಾನಸಿಕ ಕಾಯಿಲೆಗಳೇ ಕಾರಣವೆಂದು ವರದಿಯಾಗಿದೆ. ಪ್ರತಿವರ್ಷ 10 ಲಕ್ಷ ಜನ ಮನೋಕ್ಲೇಶಗಳಿಂದ, ಜೀವನದಲ್ಲಿ ಜಿಗುಪ್ಸೆಹೊಂದಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಭಾರತದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆ ಪ್ರತಿವರ್ಷ ಒಂದು ಲಕ್ಷ ! ಆದರೆ ಮಾನಸಿಕವಾಗಿ ನೊಂದವರಿಗೆ, ಕಾಯಿಲೆ ಬಿದ್ದವರಿಗೆ ಚಿಕಿತ್ಸೆ ನೀಡಲು ಇರುವ ಮಾನಸಿಕ ಆಸ್ಪತ್ರೆಗಳ ಸಂಖ್ಯೆ ಕೇವಲ 40. ಮೂರುಲಕ್ಷ ಜನಸಂಖ್ಯೆಗೆ ಒಬ್ಬರಂತೆ, ಇಡೀ ದೇಶದಲ್ಲಿರುವ ಮನೋವೈದ್ಯರ ಸಂಖ್ಯೆ ಕೇವಲ 3000 !

ಇಂದು ನಮ್ಮ ದೇಶದಲ್ಲಿ 'ಇನ್‌ವಿಟ್ರೋಫರ್ಟಿಲೈಸೇಶನ್' ಮಾಡಿ ಟೆಸ್ಟ್‌ಟ್ಯೂಬ್ ಬೇಬಿಗಳನ್ನು ಸೃಷ್ಟಿಸುತ್ತಿರುವ ತಜ್ಞರಿದ್ದಾರೆ. ಹೃದಯದ ಕಸಿಮಾಡುವ ಸರ್ಜನ್‌ಗಳಿದ್ದಾರೆ. ಅತ್ಯಾಧುನಿಕ ರೀತಿಯ ಉಪಕರಣಗಳನ್ನು ಅಳವಡಿಸಿ ಶಸ್ತ್ರಕ್ರಿಯೆ ಮಾಡುವ ಆರ್ಥೋಪಿಡಿಕ್ ಸರ್ಜನ್‌ಗಳಿದ್ದಾರೆ. ಪೊರೆಹಿಡಿದ ಮಸೂರವನ್ನು ಅಲ್ಲೇ ಕರಗಿಸಿ ಹೀರಿತೆಗೆದು, ಅದರ ಜಾಗದಲ್ಲಿ [illegible] ಕೃತಕ ಮಸೂರವನ್ನು [illegible]ಕೊಡುವ ನೇತ್ರತಜ್ಞರಿದ್ದಾರೆ. ಒಂದು ತೊಟ್ಟು ರಕ್ತವನ್ನು [illegible] ರಕ್ತದ ಸಂಪೂರ್ಣ ವಿವರಗಳನ್ನು ಕೊಡುವ ಹೈಟೆಕ್ ಯಂತ್ರಗಳಿರುವ ಆಸ್ಪತ್ರೆಗಳಿವೆ. [illegible] ಅಲ್ಟ್ರಾಸೌಂಡ್ ಯಂತ್ರಗಳು, ಇಸಿಜಿ, ಇ.ಇ.ಜಿ., [illegible] ಮೂತ್ರನಾಳದಲ್ಲಿರುವ ಕಲ್ಲುಗಳನ್ನು ಕರಗಿಸಿ [illegible] ವ್ಯವಸ್ಥೆ ಎಲ್ಲಾ ಇವೆ. [illegible] ವೈದ್ಯರು ಇದ್ದಾರೆ. ಆದರೆ [illegible] ? ಜನಸಂಖ್ಯೆಯ ಶೇಕಡಾ [illegible] ಮಾತ್ರಿಕ [illegible].

[illegible]

ವೈದ್ಯಕೀಯ ಸೌಲಭ್ಯಗಳು ಮತ್ತು ತಜ್ಞರು ಇದ್ದಾರೆ. ಜನಸಂಖ್ಯೆಯ ಶೇಕಡ 75ರಷ್ಟು ಜನರಿರುವ ಗ್ರಾಮೀಣ ಪ್ರದೇಶಗಳಲ್ಲಿ ಇರುವವರು ನಾಟಿವೈದ್ಯರು, ಅಳಲೆಕಾಯಿ ಪಂಡಿತರು, ನಿರಾಶೆ-ನಿರುತ್ಸಾಹಗಳಿಂದ ಬಳಲುವ ಎಂಬಿಬಿಎಸ್ ವೈದ್ಯರು, ಔಷಧಗಳಿಲ್ಲದ, ಲ್ಯಾಬ್ ಇಲ್ಲದ, ಶಸ್ತ್ರಕ್ರಿಯಾ ಕೊಠಡಿ ಇಲ್ಲದ, ಬೆಡ್-ಬೆಡ್‌ಶೀಟ್ ಇಲ್ಲದ ಪ್ರಾಥಮಿಕ ಆರೋಗ್ಯ ಕೇಂದ್ರಗಳು ! ಪ್ರತಿ 1500 ಜನರಿಗೆ ಒಬ್ಬರಂತೆ ವೈದ್ಯರಿದ್ದರೂ, ಅವರೆಲ್ಲ ನಗರ - ಪಟ್ಟಣವಾಸಿಗಳ ಸೇವೆಯಲ್ಲಿ ನಿರತರಾಗಿದ್ದಾರೆ, ಪರಸ್ಪರ ಸ್ಪರ್ಧಿಸುತ್ತಾ, ಅನೈತಿಕ ಅವೈಜ್ಞಾನಿಕ ಪ್ರಾಕ್ಟೀಸ್‌ನಲ್ಲಿ ತೊಡಗಿದ್ದಾರೆ.

ಖಾಸಗೀಕರಣ ಮತ್ತು ವ್ಯಾಪಾರೀಕರಣ

ಕಳೆದ ಹತ್ತು ವರ್ಷಗಳಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಖಾಸಗೀಕರಣ ಮತ್ತು ವ್ಯಾಪಾರೀಕರಣ ನಿರಂತರವಾಗಿ ನಡೆದಿದೆ. ಎಲ್ಲೆಡೆ ಖಾಸಗಿ ಚಿಕಿತ್ಸಾಲಯಗಳು, ನರ್ಸಿಂಗ್ ಹೋಂಗಳು, ಹೈಟೆಕ್ ಆಸ್ಪತ್ರೆಗಳು ತಲೆಯೆತ್ತಿವೆ. ಅಲ್ಲಿ ಕುಳಿತರೆ ದುಡ್ಡು, ನಿಂತರೆ ಉಸಿರಾಡಿದರೆ ದುಡ್ಡು ಕೊಡಬೇಕು. ಅಮೃತಶಿಲೆಯ ನೆಲಹಾಸು, ಫಳಫಳನೆ ಹೊಳೆಯುವ ಗೋಡೆಗಳು, ಹವಾನಿಯಂತ್ರಣ, ಸಿನೇಮಾ ಶೂಟಿಂಗ್‌ಗೆ ಸಜ್ಜಾಗಿರುವಂತೆ ಅಲಂಕೃತಗೊಂಡ ಸಿಬ್ಬಂದಿ, ಕಣ್ಣು ಕುಕ್ಕುವ ಹೈಟೆಕ್ ಯಂತ್ರಗಳನ್ನು ಇಟ್ಟುಕೊಂಡು 'ಇದೇ ಉತ್ತಮ ವೈದ್ಯಸೇವೆ' ಎಂದು ಇವುಗಳ ಮಾಲೀಕರು ಹೇಳುತ್ತಾರೆ. ಜನರೂ ನಂಬುತ್ತಾರೆ. ಇಂದು ಸರ್ಕಾರಿ ಆಸ್ಪತ್ರೆಗೆ ಯಾರೂ ಹೋಗಲಿಚ್ಛಿಸುವುದಿಲ್ಲ. ದರಿದ್ರ ಕಡುಬಡವರು ವಿಧಿ ಇಲ್ಲದೆ ಹೋಗುತ್ತಾರೆ. ಈ ವ್ಯವಸ್ಥೆಯಲ್ಲಿ 'ರೋಗಿಗಳು' ಒಂದು ಬಂಡವಾಳ: ಶೋಷಣೆಗೆ ಒಳಗಾಗುವ ನತದೃಷ್ಟರು. ರೋಗನಿದಾನಕ್ಕೆ, ದುಬಾರಿ ಚಿಕಿತ್ಸಾ ವಿಧಾನಗಳಿಗೇ ಮೊದಲ ಆದ್ಯತೆ. ರೋಗ ಗುಣವಾದರೆ, ರೋಗಿ ಉತ್ತಮಗೊಂಡರೆ ಅದೊಂದು ಆಕಸ್ಮಿಕ ಅಷ್ಟೆ. ರೋಗ ತಡೆಗೆ, ನಿವಾರಣಾ - ಮುಂಜಾಗ್ರತೆ ಕ್ರಮಗಳಿಗೆ ಯಾವ ಗಮನವೂ ಇಲ್ಲ. ಆದರೆ ಇದನ್ನೇ 'ವೈದ್ಯಕೀಯದಲ್ಲಿ ಹೊಸತು' ಎಂದು ಜನ ತಿಳಿದಿರುವುದು ಒಂದು ದೊಡ್ಡ ದುರಂತ.

ಆಧುನಿಕ ವೈದ್ಯ ವಿಜ್ಞಾನದ ಈ ಕೆಟ್ಟ ಪ್ರದರ್ಶನವನ್ನು ಕಂಡ ಜನ ಈಗ 'Alternative Medicines', ಅಂದರೆ ಪರ್ಯಾಯ ವೈದ್ಯ ವ್ಯವಸ್ಥೆಗಳತ್ತ ನೋಡುತ್ತಿದ್ದಾರೆ. ಹಳೆಯ ಆಯುರ್ವೇದ, ಪ್ರಕೃತಿಚಿಕಿತ್ಸೆ, ಯೋಗ, ಧ್ಯಾನ, ಪ್ರಾಣಾಯಾಮಗಳ ಮೊರೆ ಹೋಗುತ್ತಿದ್ದಾರೆ. ಬೇರೆಡೆಯಿಂದ ಬಂದ ಹೋಮಿಯೋಪತಿ, ಯುನಾನಿ, ರೇಖಿ, ಆಕುಪಂಕ್ಚರ್, ಆಕುಪ್ರೆಶರ್, ಪ್ರಾಣಿಕ್ ಹೀಲಿಂಗ್, ಮೆಗ್ನೆಟೋ ಥೆರಪಿ, ವಿಪಸ್ಸನಾ ಇತ್ಯಾದಿಗಳನ್ನೂ ಒಂದು ಕೈ ನೋಡುತ್ತಿದ್ದಾರೆ. ಹಳೆಯ ಶಾಸ್ತ್ರಗಳೆಲ್ಲ ಈಗ ಹೊಸ ಉಡುಗೆ ತೊಟ್ಟು 'ನಮ್ಮದೂ ಒಂದು ವೈಜ್ಞಾನಿಕ ಶಿಸ್ತೇ' ಎಂದು ಹೇಳುತ್ತಿರುವುದು ಎಷ್ಟು ನಿಜ ? ಪ್ರಜ್ಞಾವಂತರು ಯೋಚಿಸಬೇಕು. ಮಾಹಿತಿಗಳನ್ನು ಕಲೆಹಾಕಿ ವಿಶ್ಲೇಷಿಸಬೇಕು.

ಕಾಯಿಲೆಗಳು ಬರದಂತೆ ಮಾಡಲು, ವ್ಯಕ್ತಿ ನಿರೋಗಿಯಾಗಿರುವುದಷ್ಟೇ ಅಲ್ಲ, ಆರೋಗ್ಯವಂತನಾಗಿ ಆನಂದವಾಗಿರಲು ಸಾಧ್ಯವಿದೆ. ಇದು ಪ್ರಾಚೀನ ಭಾರತದ ಕೊಡುಗೆ.

1. ಹಿತಮಿತ ಆಹಾರ ಸೇವನೆ : ಹಸಿವಿಲ್ಲದೇ ಏನನ್ನೂ ತಿನ್ನಬಾರದು, ಹಸಿವಾಗಿ ಉಣದಿರಬಾರದು. ಸುಲಭವಾಗಿ ಜೀರ್ಣವಾಗಬಲ್ಲ ಹಸಿರು ಸೊಪ್ಪು, ತರಕಾರಿ, ಹಣ್ಣು, ಹಾಲು, ಕಾಳುಗಳು, ಸಾತ್ವಿಕ ಸಸ್ಯಾಹಾರ ಸೇವನೆ, ಉಪ್ಪು ಹುಳಿ ಖಾರ, ಎಣ್ಣೆ ಜಿಡ್ಡು ಸಿಹಿ ತಗ್ಗಿಸಿ.
2. ಸ್ವಚ್ಛತೆಯೇ ದೇವರು : ಆಹಾರ ಸೇವಿಸುವ ಮೊದಲು, ಆಹಾರ ಪದಾರ್ಥಗಳನ್ನು ಮುಟ್ಟುವಾಗ, ತಯಾರುಮಾಡಿ ಬಡಿಸುವಾಗ, ಕೈಗಳು ಸ್ವಚ್ಛವಾಗಿರಬೇಕು. ನಿತ್ಯ ಸ್ನಾನ, ಮನೆಯ ಒಳಗೆ ಹೊರಗೆ ಸ್ವಚ್ಛತೆಗೆ ಗಮನ ನೀಡಿ.
3. ವ್ಯಾಯಾಮ : ನಡಿಗೆ, ಓಟ, ಈಜು, ಆಟ, ಯೋಗಾಸನಗಳು ನಿತ್ಯವೂ ಇರಬೇಕು.
4. ಪ್ರಸನ್ನ ಮನಸ್ಸು : ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳನ್ನು ಹತೋಟಿಯಲ್ಲಿಡಬೇಕು. ಸರಳ, ತೃಪ್ತಿ ಜೀವನ ಮಾಡಬೇಕು. ಕಷ್ಟ-ಸುಖಗಳನ್ನು ಸಮಭಾವದಿಂದ ಸ್ವೀಕರಿಸಬೇಕು. ದೇವರ ಧ್ಯಾನ, ಆಧ್ಯಾತ್ಮಿಕ ಚಟುವಟಿಕೆಗಳಿಂದ ಮನಸ್ಸಿಗೆ ನೆಮ್ಮದಿ. ಸ್ವಾರ್ಥಕ್ಕಿಂತ ಪರಹಿತ, ಪರೋಪಕಾರಕ್ಕೆ ಹೆಚ್ಚು ಗಮನ ನೀಡಿ.
5. ಆರೋಗ್ಯಕರ ಮನರಂಜನೆ : ಸಂಗೀತ ಶ್ರವಣ, ಓದು, ಪ್ರವಾಸ, ಚಿತ್ರಕಲೆ, ನಾಟ್ಯ, ನಾಟಕ, ಕಲಾವಸ್ತುಗಳ ಸೃಷ್ಟಿ, ಧಾರ್ಮಿಕ ಪುಸ್ತಕಗಳ ಪಠಣ, ಸ್ನೇಹಪೂರ್ಣ ಆಟಗಳು ದೇಹ ಮತ್ತು ಮನಸ್ಸುಗಳಿಗೆ ಹಿತವನ್ನು ನೀಡಬಲ್ಲವು, ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಬಲ್ಲವು.

ಡಾ॥ ಪಿ. ಆರ್. ಚಂದ್ರಶೇಖರ್
ಟೈಪ್-5, ಬ್ಲಾಕ್ 2, ಕ್ವಾರ್ಟರ್ ನಂ. 15, ನಿಮ್ಹಾನ್ಸ್ ಕ್ವಾರ್ಟರ್, ಬೆಂಗಳೂರು - 560 029

ಕೃಷಿಯೆಂಬ ಮಾಯಾಲೋಕ

ಸುಮಾರು ಮೂರು ವರ್ಷಗಳ ಹಿಂದೆ ಸುಸ್ಥಿರ ಕೃಷಿ ಕುರಿತ ವಿಚಾರ ಸಂಕಿರಣವೊಂದನ್ನು ಸಂಘಟಿಸಿದ್ದೆವು. ಗುಲ್ಬರ್ಗಾ ಜಿಲ್ಲೆಯ ರೈತ ಮಿತ್ರರೊಬ್ಬರು ತುಂಬಾ ಆತ್ಮ ವಿಶ್ವಾಸದಿಂದ ತಾವು ಬೆಳೆದ ಸ್ಟ್ರಾಬೆರಿ ಬೆಳೆಯ ಬಗ್ಗೆ ವಿವರಿಸುತ್ತಿದ್ದರು. ಸಭಿಕರೆಲ್ಲರಿಗೆ ಬಾಯಿಯಲ್ಲಿ ನೀರೂರುವುದೊಂದೇ ಕಡಿಮೆ! ಕೆ.ಜಿ. ಒಂದಕ್ಕೆ 200 ರೂ.ನಂತೆ ತಾವು ಮಾರಿದ ಸ್ಟ್ರಾಬೆರಿ ಹಣ್ಣುಗಳ ಬಗ್ಗೆ ಅವರು ಹೇಳಿದಷ್ಟೂ ತಲೆ ತೂಗುವವರ ಸಂಖ್ಯೆ ಜಾಸ್ತಿಯಾಗುತ್ತಿತ್ತು. ಆದರೆ ಇಂದೇನಾಗಿದೆ? ಸ್ಟ್ರಾಬೆರಿ ಹೀಗೆ ಬಂದು ಹಾಗೆ ಮಿಂಚಿ ಮಾಯವಾಗಿ ಬಿಟ್ಟಿದೆ. ಅಬ್ಬರದ ಪ್ರಚಾರ ಗಿಟ್ಟಿಸಿಕೊಂಡು ಸ್ಟ್ರಾಬೆರಿ ಸಸಿಗಳನ್ನು ಮಾರಿ ಹಣ ಮಾಡಿದವರೇನೊ ಗೆದ್ದುಕೊಂಡರು. ಎಕರೆಗಟ್ಟಲೆ ಸ್ಟ್ರಾಬೆರಿ ಬೆಳೆದವರು ಮೇಲೇಳಲಾರದಂತೆ ನೆಲ ಕಚ್ಚಿಬಿಟ್ಟರು.

ರೈತರನ್ನು ಕನಸಿನ ಲೋಕಕ್ಕೆಳೆದುಕೊಂಡು ಹೋಗುವುದು ಎಷ್ಟು ಸುಲಭವಾಗಿಬಿಟ್ಟಿದೆ? ಸ್ಟ್ರಾಬೆರಿಯಂತೆಯೇ ಕುಣಿ ಕುಣಿದು ಬಂದಿದ್ದು ಮ್ಯಾಂಜಿಯಂ ಎಂಬ ಆಸ್ಟ್ರೇಲಿಯಾದ ಬೆಡಗಿನ ಮರ. ತೇಗಕ್ಕಿಂತಲೂ ಉತ್ಕೃಷ್ಟ ಮರವೆಂಬ ಹೆಗ್ಗಳಿಕೆ ಬೇರೆ. ಪ್ರತಿ ಸಸಿಯೊಂದಕ್ಕೆ ರೂ. 20 ರಿಂದ ರೂ. 50ರ ತನಕ ಹಣ ದೋಚಿದವರು ಬುದ್ಧಿವಂತ (?) ರೆನಿಸಿಕೊಂಡರು. ಈ ಗಿಡ ಹಚ್ಚಿದವರೆಲ್ಲಾ ಕೆಲವೇ ವರ್ಷಗಳಲ್ಲಿ ಭ್ರಮನಿರಸನಗೊಂಡಿದ್ದಾರೆ.

ಮುಳ್ಳು ಸೌತೆ, ಮಿಡಿ ಸೌತೆ ಮುಂತಾದ ಹೆಸರಿನಲ್ಲಿ ರೈತರನ್ನು ಕಂಗಾಲಾಗಿಸುತ್ತಿರುವ ಗರ್ಕಿನ್ಸ್‌ದೇ ಬೇರೆಯ ಕತೆ. ಈ ಮುಳ್ಳು ಸೌತೆಯ ಹೆಸರಿನಲ್ಲಿ ಹಣ ದೋಚಲು ಅನೇಕ ಕಂಪನಿಗಳು ಸಾಲುಗಟ್ಟಿ ನಿಂತಿವೆ. ಅವರ ಮೋಸದಾಟಗಳೂ ತುಂಬಾ ವ್ಯವಸ್ಥಿತ. ಈ ಮುಳ್ಳು ಸೌತೆ ಹೊರ ದೇಶಗಳಿಗೆ ರಫ್ತಾಗುತ್ತದೆ. ಅದಕ್ಕೆಂದೇ ಗುಣಮಟ್ಟಕ್ಕೆ ಹೆಚ್ಚು ಪ್ರಾಮುಖ್ಯತೆ ಎಂದು ಅಬ್ಬರದ ಪ್ರಚಾರ ಮಾಡಿ ಕಾಂಟ್ರಾಕ್ಟ್ ಫಾರ್ಮಿಂಗ್ ಹೆಸರಿನಲ್ಲಿ ರೈತರ ಅತ್ಯಮೂಲ್ಯ ನೀರು, ಭೂಮಿ, ಶ್ರಮವನ್ನೆಲ್ಲ ತುಂಬಾ ವ್ಯವಸ್ಥಿತವಾಗಿ ಇವರು ಬಳಸಿಕೊಳ್ಳುತ್ತಾರೆ. ಈ ಮುಳ್ಳು ಸೌತೆಯ ಮಾಯಾಜಾಲದಲ್ಲಿ ಬಿದ್ದ ರೈತನ ಗೋಳು ಶುರುವಾಗುವುದು ಸೌತೆಕಾಯಿ ಕುಯ್ಯಲು ಪ್ರಾರಂಭವಾದಾಗ. ಈ ಸೌತೆಯ ಉದ್ದ ಎಷ್ಟಿರಬೇಕು ಗೊತ್ತೆ? ಕೇವಲ ಎರಡು ಸೆಂ.ಮೀ.ಗಳಷ್ಟು. ಇಂದು ಕುಯ್ಯುವ ಬದಲು ಕಾರಣಾಂತರಗಳಿಂದ ನಾಳೆ ಕುಯ್ದರೆ ಈ ಸೌತೆ ಸ್ವಲ್ಪ ಬೆಳೆದು ಬಿಡುತ್ತದೆ. ಹೀಗೆ ನಿಗದಿತ ಗಾತ್ರಕ್ಕಿಂತ ಒಂದೇ ಸೆಂ.ಮೀ.ನಷ್ಟು

ಡಾ|| ಜಿ. ಎಸ್. ಎಸ್. ರೆಡ್ಡಿ

ಬೆಳೆದರೂ ಅದನ್ನು ಕೊಳ್ಳುವುದಿಲ್ಲ. ಬೆಳೆದದ್ದನ್ನೆಲ್ಲ ಕೇವಲ ಬೀಜ, ಗೊಬ್ಬರ, ಔಷಧಿಗಳನ್ನು ಸಾಲಕೊಟ್ಟ ಕಂಪನಿಗೆ ಮಾರಬೇಕಾಗಿರುವುದರಿಂದ ರೈತನ ಜುಟ್ಟು ಕಂಪನಿಯವರ ಕೈಯಲ್ಲಿ. ಕಂಪನಿ ತಿರಸ್ಕರಿಸಿದಾಗ ಕಾಯಿಗಳನ್ನು ಸಂತೆಗೆ ತೆಗೆದುಕೊಂಡು ಹೋದರೆ ಕೆಲವೇ ಸೆಂ.ಮೀ. ದಪ್ಪನೆಯ ಈ ಸೌತೆಕಾಯಿ ನೋಡಿ ಜನ ನಗುವುದೊಂದೇ ಬಾಕಿ. ಇನ್ನು ಅದನ್ನು ಅವರು ಕೊಳ್ಳುವುದಂತೂ ದೂರ ಉಳಿಯಿತು.

ಈ ಕತೆ ಇಲ್ಲಿಗೆ ನಿಲ್ಲುವುದಿಲ್ಲ. ರೈತರನ್ನು ಬೀಳಿಸಲು ಬೇಕಾದ ಬಲೆಗಳನ್ನು ಸದಾ ನೇಯುತ್ತಲೇ ಇರುವ ಅನೇಕ ಬುದ್ಧಿವಂತರು ನಮ್ಮಲ್ಲಿದ್ದಾರೆ. ತಾವು ಕಲಿತ ವಿದ್ಯೆಯನ್ನೆಲ್ಲಾ ಬಳಸಿ ಯಾರಿಗೂ ಬೇಡದ ತಂತ್ರಜ್ಞಾನ ಸೃಷ್ಟಿಸುವ ಗುಂಪು ಒಂದೆಡೆಯಾದರೆ, ಈ ತಂತ್ರಜ್ಞಾನಗಳನ್ನು ರೈತರಿಗೆ ಮುಟ್ಟಿಸಿ ಮರುಳು ಮಾಡುವವರ ಗುಂಪು ಮತ್ತೊಂದೆಡೆ. ಕೃಷಿಯ ಮೂಲ ಪಾಠಗಳನ್ನು ಕಲಿಯದಿರುವವರೂ ಇಂದು ತಜ್ಞರ ವೇಷದಲ್ಲಿ ರೈತರ ದಾರಿ ತಪ್ಪಿಸುತ್ತಿದ್ದಾರೆ. ಸಮೂಹ ಮಾಧ್ಯಮಗಳ ವ್ಯಾಪ್ತಿಯನ್ನು ಬಲ್ಲ ಈ ಮಂದಿಗೆ ಹಣದ ಕೊರತೆಯೇನೂ ಇಲ್ಲವಲ್ಲ. ಲಕ್ಷಾಂತರ ರೂಪಾಯಿಗಳನ್ನು ಪ್ರಚಾರಕ್ಕಾಗಿ ಖರ್ಚು ಮಾಡುವ ಇವರು ರೈತರನ್ನೂ ಸುಲಿಯದೆ ಬಿಟ್ಟಾರೆಯೇ?

ಇತ್ತೀಚೆಗೆ ಸಾವಯವ ಕೃಷಿ ಕುರಿತು ಹೆಚ್ಚಿನ ಅರಿವು ಮೂಡುತ್ತಿರುವುದು ಸರಿಯಷ್ಟೇ? ಯಾವುದೋ ವಿಷವಸ್ತುಗಳನ್ನೆಲ್ಲಾ ಇಷ್ಟು ವರ್ಷಗಳೂ ಅಗ್ರೋ ಕೆಮಿಕಲ್ಸ್ ಹೆಸರಿನಲ್ಲಿ ಮಾರಿ ಹಣ ಮಾಡಿದ ದೊಡ್ಡ ದೊಡ್ಡ ಕಂಪನಿಗಳೆಲ್ಲ ಈಗ ಸಾವಯವದ ಬಗ್ಗೆ ಮಾತಾಡಲಾರಂಭಿಸಿದ್ದಾರೆ. ರೈತರ ಬೇವಿನ ಬೀಜವನ್ನು ತಂದು, ಬೇವುಮೂಲದ ಕೀಟನಾಶಕಗಳೆಂದು ಮತ್ತೆ ರೈತನಿಗೇ ತಿರುಮಂತ್ರ ಹಾಕುತ್ತಿದ್ದಾರೆ. ಬರೀ ಯೂರಿಯಾ ಮಾರುತ್ತಿದ್ದವರು ಇಂದು ಬೇವು ಮಿಶ್ರಿತ ಯೂರಿಯಾ ಮಾರಲಾರಂಭಿಸಿದ್ದಾರೆ. ಇಷ್ಟೆಲ್ಲಾ ಗೊತ್ತಿದ್ದೂ ರೈತರೇಕೆ ಇವರ ಬಲೆಗೆ ಇಷ್ಟು ಸುಲಭವಾಗಿ ಬೀಳುತ್ತೇವೆಂದು ಗೊತ್ತಾಗುವುದಿಲ್ಲ.

ಸಣ್ಣರೈತರದು ಈ ಗತಿಯಾದರೆ ಬ್ಯಾಂಕುಗಳಿಂದ ಕೋಟಿಗಟ್ಟಲೆ ಸಾಲ ತೆಗೆದುಕೊಂಡು ಕೃಷಿ ಮಾಡಲು ಹೊರಟ ಕೃಷಿಕೋದ್ಯಮಿಗಳದೇ ಬೇರೆ ಕತೆ. 15 ಕೋಟಿ ರೂಪಾಯಿ ಸಾಲ ತೆಗೆದು ಹಾಲೆಂಡ್ ದೇಶದಿಂದ ತಂತ್ರಜ್ಞಾನ ತಂದು ಹೂವಿನ ಕೃಷಿ ಮಾಡಹೊರಟ ಆಧುನಿಕ (?) ಕೃಷಿಕನೊಬ್ಬನ ತೋಟ ನೋಡುವ ಅವಕಾಶವೊದಗಿತ್ತು. ದೊಡ್ಡಬಳ್ಳಾಪುರದ ಬಳಿಯ ಈ ತೋಟ ಕೇವಲ ಒಂದೇ ವರ್ಷದಲ್ಲಿ ಹಾಳುಬಿದ್ದ ಮನೆಯಂತಾಗಿರುವುದು ನೋಡಿದರೆ ನಮ್ಮ ಕೃಷಿ ಯಾವ ಹಾದಿ ಹಿಡಿದಿದೆ ಎಂಬುದು ತಿಳಿಯುವುದು. ಹಾಲೆಂಡ್ ಮಾರುಕಟ್ಟೆಗೆ ಬೇಕಾದಂತಹ ಹೂ ಬೆಳೆಯಲು ಅತ್ಯಮೂಲ್ಯವಾದ ನಮ್ಮ ನೆಲ ಜಲವನ್ನು ಬಳಸುವುದು ಎಷ್ಟರ ಮಟ್ಟಿಗೆ ಸರಿ ಎಂಬುದು ಬೇರೆ ಪ್ರಶ್ನೆ. ಆದರೆ ಈ ಹೂ ಬೆಳೆಯಲು ಬೇಕಾದ ಷೆಡ್ ಕಟ್ಟಲು ಪ್ಲಾಸ್ಟಿಕ್ ಹಾಳೆ, ಕಬ್ಬಿಣದ ಸರಳು ಮುಂತಾದ್ದನ್ನೆಲ್ಲ ಹಾಲೆಂಡ್‌ನಿಂದಲೇ ಆಮದು ಮಾಡಿಕೊಳ್ಳುವುದೆಂದರೆ ಮೂರ್ಖತನವಲ್ಲವೆ? ಇದಕ್ಕೆ ಮಿತಿ ಎಲ್ಲಿದೆ? ಇಂತಹ ಒಂದು ಯೋಜನೆಗೆ 15 ಕೋಟಿ ಸಾಲ ಮಂಜೂರು ಮಾಡಿದ ಬ್ಯಾಂಕಿನವರಿಗಾದರೂ ಸ್ವಲ್ಪ ಕಾಮನ್ ಸೆನ್ಸ್ ಇರುವುದು ಬೇಡವೇ? ಇದೇ ರೀತಿ ಪ್ರಾರಂಭವಾದ ಕೆಲವೇ ತಿಂಗಳುಗಳಲ್ಲಿ ನೆಲಕಚ್ಚಿದ ಮತ್ತಷ್ಟು ಹೂ ಬೆಳೆಯುವ ಉದ್ಯಮಗಳಿವೆಯೋ?

ಡಾ|| ಜಿ. ಎಸ್. ಎಸ್. ರೆಡ್ಡಿ
ಮುಖ್ಯ ಕಾರ್ಯಕ್ರಮ ಸಂಯೋಜನ ಅಧಿಕಾರಿಗಳು
ಬೈಫ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ಕ). ಕಾಮಧೇನು,
ಅಂಚೆ ಚೀಲ 3, ಶಾರದಾನಗರ, ತಿಪಟೂರು 572 202

ಸೂಚನೆ : ಕೃಷಿಲೋಕದಲ್ಲಿ ಹೀಗೆ ಕುತಂತ್ರಗಳಿಗೆ ತುತ್ತಾಗಿರುವ ಬೇರೆ ಪ್ರಸಂಗಗಳನ್ನು ಅನುಭವ ಹೊಂದಿದವರು ಇತರರೊಂದಿಗೆ ಹಂಚಿಕೊಳ್ಳಲು ಈ ಪತ್ರಿಕೆಗೆ ಬರೆಯಬೇಕಾಗಿ ಕೋರುತ್ತೇವೆ.
- ಸಂಪಾದಕರು

ವಿಪರ್ಯಾಸ



ಇಡೀ	ಮರಣ
ಜೀವನ	[illegible]
ಗಾಂಧಿವಾದ	ಶ್ರೀಗಂಧ
ಸ್ವರಾಜ	[illegible]

- ಮ. ಶ್ರೀ. ಮುರಳಿಕೃಷ್ಣ

BOOKS BOOKS BOOKS BOOKS BOOKS BOOKS BOOKS BOOKS BOOKS BOOKS BOOKS BOOKS
DENTAL ○ MEDICAL ○ NURSING ○ PHARMACY ○ COMPUTER ○ ENGINEERING ○ MANAGEMENT ○ HOTEL MANAGEMENT ○ COMPETITIVE

ಸಾಮ್ರಾಜ್ಯಶಾಹಿಯ ಹೊಸ ಟಿಸಿಲುಗಳು

ಪಾರ್ಥಸಾರಥಿ

ಪಕ್ವವಾದ ಹಣ್ಣು ಫಕ್ಕನೆ ತೊಟ್ಟು ಕಳಚಿ ಬೀಳುವಂತೆ 20ನೇಯ ಶತಮಾನ ಬರುವ ಶತಮಾನದ ಬಟ್ಟಲಿಗೆ ಬೀಳುತ್ತದೆಯೇನೋ! ಮರೆಯಾಗುತ್ತಿರುವ ಈ ಶತಮಾನದ ಬಗ್ಗೆ ಏನೆಲ್ಲಾ ಬರೆದುಬಿಡಲು ಎಲ್ಲೆಲ್ಲೂ ನೂಕುನುಗ್ಗಲು! ಅನಿಸಿಕೆಗಳಿಗೆ ಧ್ವನಿ ನೀಡುವ ಎಲ್ಲ ಮಾಧ್ಯಮ ಪ್ರಕಾರಗಳಿಗೂ ಸುಗ್ಗಿಯೋ ಸುಗ್ಗಿ. ಒಂದೊಂದು ಕಾಲಘಟ್ಟದಲ್ಲಿ ಸ್ವಲ್ಪ ನಿಂತು, ನಡೆದುಬಂದ ದಾರಿಯ ಪುನರಾವಲೋಕನ ಒಂದು ಆರೋಗ್ಯಕರ ಪ್ರವೃತ್ತಿಯೂ ಆಗಬಹುದು.

ಈ ಶತಮಾನದ ವೈಶಿಷ್ಟ್ಯಗಳಲ್ಲಿ ಎರಡು ಪ್ರವೃತ್ತಿಗಳನ್ನು ಗುರುತಿಸುವುದುಂಟು: ಸಾಮ್ರಾಜ್ಯ ಶಾಹಿಯ ಪತನ ಮತ್ತು ಪ್ರಜಾಪ್ರಭುತ್ವದ ದಾಪುಗಾಲು. ಇವೆರಡೂ ವಿಷಯಗಳಲ್ಲಿ ಹೊಸ ಶತಮಾನದ ತಲೆಬಾಗಿಲಿನಲ್ಲಿ ಪ್ರಸ್ತುತವಾಗಿ ಉಳಿಯುವ ಪರಿಸ್ಥಿತಿ ಏನಿರಬಹುದು? ಹೌದು. ಇದಕ್ಕಿಂತ ಹೆಚ್ಚು ತೀವ್ರವಾದ ಸಂಗತಿಗಳ ಬಗೆಗೂ ಇದೇರೀತಿ ಜಮಾಬಂದಿ ಮಾಡಬೇಕಾದದ್ದು ಇದೆ. ಲೆವಿನ್ಸ್ಕಿ ಪ್ರಕರಣದ ಹಿನ್ನೆಲೆಯಲ್ಲಿ ಸ್ತ್ರೀಪುರುಷರ ಸಂಬಂಧ ತೀರಾ ವೈಯಕ್ತಿಕವಾಗಿ ಆದರೂ ಮುಕ್ತವಾಗಿ ಮತ್ತು ಜವಾಬ್ದಾರಿಯುತವಾಗಿ ಉಳಿಯಬೇಡವೇ? ವಿಶ್ವವಿದ್ಯಾಲಯಗಳಲ್ಲಿ ಮಾನವಿಕಗಳನ್ನೂ ಪಾಠಮಾಡುವುದು ಅನಗತ್ಯ ನಷ್ಟವಲ್ಲವೇ? ಕಂಪ್ಯೂಟರಿನಲ್ಲೇ ಪಾಠ ಹೇಳಬಹುದಾದ್ದರಿಂದ, ಶಾಲೆಗಳು ಬೇಕೆ? ವಿದ್ಯುನ್ಮಾನಯುದ್ಧ ಮಾಡುವ ಕಾಲದಲ್ಲಿ, ಸದಾಸಿದ್ಧ ಯೋಧರ ಪಡೆ ಬರಖಾಸ್ತು ಮಾಡಬೇಡವೇ? ವಿಂಧ್ಯ ಪರ್ವತದ ಎತ್ತರವನ್ನು ಬೇಕೆಂದಾಗ ಒಂದು ಸಾವಿರ ಅಡಿಯಷ್ಟಾದರೂ ಎತ್ತರಿಸುವ-ಕಡಿಮೆಮಾಡುವ ವ್ಯವಸ್ಥೆ ಸಾಧ್ಯವೇ... ಹೀಗೆ ಹತ್ತು-ಹಲವಾರು ಪ್ರಮುಖ ಸಮಸ್ಯೆಗಳ ಬಗ್ಗೆ ತೀವ್ರ ಕಾಳಜಿ ಇರುವಾಗ, Y2K ಸಮಸ್ಯೆಯೊಂದೇ ಜರೂರೆನಿಸಬಹುದೇ?

ಇಷ್ಟಾದರೂ, ಸಾಮ್ರಾಜ್ಯಶಾಹಿ ವಿಷಯ ಚರ್ಚಿಸುವ ಕುತೂಹಲಕ್ಕೆ ಒಂದು ಪ್ರಬಲವಾದ ಕಾರಣವಿದೆ: ಕಮ್ಯೂನಿಸಂ ಸತ್ತಿತೆಂದು ಸಾರುವವರೇ ಸಾಮ್ರಾಜ್ಯಶಾಹಿಯ ಪ್ರಾಬಲ್ಯದ ಬಗೆಗೂ ಖಚಿತವಾಗಿ ಸಂತಸದಿಂದಿರುವವರು. ಆದ್ದರಿಂದಲೇ ಈ ವಿಷಯ ಪರೀಕ್ಷಿಸದೆ ಅಷ್ಟೊಂದು ಸುಲಭವಾಗಿ ನಂಬಲಾಗದು.

19ನೆಯ ಶತಮಾನದ ಆರಂಭದ ದಿನಗಳಲ್ಲಿ ಯೂರೋಪಿನ ರಾಷ್ಟ್ರಗಳು ಒಂದೆಡೆ ಕಲೆತು ಭೂಗೋಳವನ್ನು ತಮ್ಮ ತಮ್ಮಲ್ಲೇ ಹಂಚಿಕೊಂಡರಂತೆ. ಅದರಂತೆ ತಮ್ಮ ತಮ್ಮ ವಸಾಹತುಗಳನ್ನು ಸ್ಥಾಪಿಸಿಕೊಂಡರು. ಅತ್ಯಂತ ಪ್ರಭಾವಿ-ಪ್ರಬಲ ಬ್ರಿಟನ್ ಸೂರ್ಯ ಮುಳುಗದ ಸಾಮ್ರಾಜ್ಯ ಸ್ಥಾಪಿಸಿಕೊಂಡಿತು. ಇತರೆ ಪಶ್ಚಿಮ ಮತ್ತು ಮಧ್ಯ ಯೂರೋಪ್ ರಾಷ್ಟ್ರಗಳು ತಮ್ಮ ತಮ್ಮ ವಸಾಹತುಗಳನ್ನು ಸ್ಥಾಪಿಸಿಕೊಂಡವು. ಈ ಸಾಮ್ರಾಜ್ಯ ಕಟ್ಟುವ, ವಸಾಹತುಗಳನ್ನು ಶೋಷಿಸುವ ಕಾರ್ಯಾಚರಣೆ ಸುಮಾರು ನೂರು ವರ್ಷಗಳಷ್ಟು ನಿರಾತಂಕವಾಗಿ, ನಿರಾಯಾಸವಾಗಿ ನಡೆಯಿತೆನ್ನಬಹುದು. ಆದರೆ ನಿರೀಕ್ಷಿಸಿದಂತೆ ಅವರವರಲ್ಲೇ ಶೋಷಣೆಯ ಸಂಪತ್ತನ್ನು ಹಂಚಿಕೊಳ್ಳುವ ಸಂಚಿನಲ್ಲಿ ಕದನ-ಕೋಲಾಹಲ-ಎರಡು ಮಹಾಯುದ್ಧಗಳು ಈಗಷ್ಟೇ ಆಗಿಹೋದ ಸಂಗತಿಗಳು. ಈ ಯುದ್ಧಗಳ ಪರಿಣಾಮವೇ ಎನ್ನುವಂತೆ, ವಸಾಹತುಗಳೆಲ್ಲ ಸ್ವತಂತ್ರವಾಗಿವೆ ಈಗ. ಹೀಗಾಗಿ ಎಲ್ಲಿಯ ಸಾಮ್ರಾಜ್ಯ, ಇನ್ನೆಲ್ಲಿನ ಸಾಮ್ರಾಜ್ಯಶಾಹಿ ಎಂಬ ಸರಳ ಸಂಶಯ ಉಂಟಾದರೆ ಆಶ್ಚರ್ಯವಿಲ್ಲ.

ಪ್ರತಿಯೊಂದು ಶತಮಾನಕ್ಕೂ ಅಥವಾ ಕಾಲಮಾನಕ್ಕೂ ಅದರ ಒಟ್ಟಾರೆ ವೈಶಿಷ್ಟ್ಯ ನೋಡಿ, ಇತಿಹಾಸಕಾರರು ಕೆಲವು ಹೆಸರುಗಳನ್ನು ಇಡುವ ವಾಡಿಕೆ. ಅಂಧಕಾರಯುಗ, ವೈಚಾರಿಕ ಯುಗ, ಮುಂತಾಗಿ. ಹತ್ತೊಂಭತ್ತನೆಯ ಶತಮಾನವನ್ನು ವಸಾಹತುಶಾಹಿ ಯುಗವೆನ್ನಬಹುದೇನೋ. ಎರಡು ಮಹಾಯುದ್ಧ ನಡೆಸಿದ, ಅಣುಶಕ್ತಿ ಬಳಸಿದ, ಅಂತರಿಕ್ಷಯಾನ ಮಾಡಿದ ಈ ಶತಮಾನಕ್ಕೆ ಬಹುಮುಖಿ ವೈಶಿಷ್ಟ್ಯವಿದ್ದು, ಒಂದೇ ಹೆಸರಿನಲ್ಲಿ ಕರೆಯುವುದು ಕಷ್ಟವಾದೀತು. ನಾವಿರುವ ಕಾಲಘಟ್ಟದ ವಿಮರ್ಶೆಯನ್ನು ಬರುವ ಶತಮಾನದ ಚಿಂತನಶೀಲರಿಗೇ ಬಿಡಬೇಕು ಅನ್ನಿಸುತ್ತದೆ. ನಾವು ವಸ್ತುನಿಷ್ಠರಾಗಿ ಚರ್ಚಿಸುವುದು ಕಷ್ಟದ ಕೆಲಸ. ನಮ್ಮ ಶತಮಾನದಲ್ಲಿ ಆದುದಾದರೂ ಏನು? ಎರಡು ಮಹಾಯುದ್ಧಗಳು, ಕಮ್ಯುನಿಸ್ಟ್ ಕ್ರಾಂತಿಗಳು, ಶೀತಲಯುದ್ಧ, ರಾಜರ ಸ್ಥಾನದಲ್ಲಿ ಸರ್ವಾಧಿಕಾರಿಗಳ ಉಗಮ, ಇವೆಲ್ಲವುಗಳ ಹಿನ್ನೆಲೆಯಲ್ಲಿ ಮಿಂಚಿನ ವೇಗದಲ್ಲಿ ಆಗಿಹೋದ ಕೈಗಾರಿಕಾ ಪ್ರಗತಿ, ವಿಜ್ಞಾನದ ನಾಗಾಲೋಟ, ಗಣಕಯಂತ್ರ, ದೂರದರ್ಶನ, ದೂರಸಂವೇದಿ, ದೂರಸಂಪರ್ಕಗಳ ಅತ್ಯಾಶ್ಚರ್ಯಕರ ಬೆಳವಣಿಗೆ. ಇವೆಲ್ಲವುಗಳ ನೇರ ಪರಿಣಾಮ, ಪಶ್ಚಿಮ ಯೂರೋಪಿಯನ್ನರ ಹತೋಟಿ ತಪ್ಪಿ, ವಸಾಹತುಗಳೆಲ್ಲ ಸ್ವತಂತ್ರವೆನಿಸಿಕೊಂಡದ್ದು. ಮತ್ತೊಂದು ಅರ್ಥವತ್ತಾದ ಬೆಳವಣಿಗೆ– ಯೂರೋಪ್ [illegible] ತನ್ನ ಸಾಮರ್ಥ್ಯ ಕಳೆದು ಕೊಂಡಂತೆಯೇ, ಅದಕ್ಕೆ ಹಿಂದೆ ತನ್ನಷ್ಟಕ್ಕೆ ತಾನು ದೂರ [illegible] (ಅಮೆರಿಕ) ದಷ್ಟ-ಪುಷ್ಟವಾಗಿ ಬೆಳೆದು, ಕೊಳ್ಳು [illegible] ನೀಡುವಂತೆ ಆದದ್ದು. ಕಳೆದ ಶತಮಾನದಲ್ಲಿ ಬ್ರಿಟನ್ [illegible] ಬರುವ ಶತಮಾನದಲ್ಲಿ ಅಮೆರಿಕದ ಶಕ್ತಿ ಅದರ ಸ್ಥಾನವನ್ನು [illegible] ಶತಮಾನಕ್ಕೂ ಇಪ್ಪತ್ತನೆಯ ಶತಮಾನಕ್ಕೂ [illegible] ಒಂದೇ. ಈ ಬೆಳವಣಿಗೆ ಇನ್ನೂ ಮುಗಿದಂತೆ ಕಾಣುತ್ತಿಲ್ಲ.

ಹತ್ತೊಂಬತ್ತನೇ ಶತಮಾನದ ಅಂತ್ಯದ ವೇಳೆಗೆ ವಸಾಹತುಗಳಿಗಾಗಿ ಸಾಮ್ರಾಜ್ಯಶಾಹಿ [illegible] ನಡುವೆ ಬರಲಿದ್ದ ಭೀಕರ ಕಚ್ಚಾಟಗಳನ್ನು, ಅವುಗಳ ಅನಿವಾರ್ಯತೆಯನ್ನು ಗುರುತಿಸಲಾಗಿತ್ತು. ಲಾಭೈಕ ಉದ್ದೇಶದ ಬಂಡವಾಳದ ಸತತ ಹೂಡುವಿಕೆ, ಅದರ ಆಯಾತ ನಿರ್ಯಾತ, ಅದರ ಅನಿರ್ಬಂಧ ಚಾಲನೆಗೆ ಸರ್ಕಾರ-ಪ್ರಭುತ್ವಗಳ ಮೇಲೆ ನಿರಂಕುಶ ಹತೋಟಿ ಪಡೆಯುವ ನಿರಂತರ ಹವಣು; ಇದಕ್ಕಾಗಿ ಮಾನವ ತತ್ತ ಬೆಲೆ-ಬಡತನ, ರೋಗರುಜಿನ, ಸಾವು ನೋವು, ದೇಶಭ್ರಷ್ಟತೆ, ಯುದ್ಧ, ಯುದ್ಧ..... ಒಂದು ಕ್ಷಣ ಗೆದ್ದೂ ಸೋತ, ಸೋತೂ ಸತ್ತ, ಸುಸ್ತಾದವರೆಲ್ಲ ಒಂದೆಡೆ ಕುಳಿತು ಪರಿಹಾರ ಯೋಚಿಸಿದ್ದು ವಿಶ್ವಸಂಸ್ಥೆ, ವಿಶ್ವ ಆಹಾರ ಸಂಸ್ಥೆ, ವಿಶ್ವ ಆರೋಗ್ಯ ಸಂಸ್ಥೆ, ವಿಶ್ವ ವಾಣಿಜ್ಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಸ್ಥೆ..... ಇವೆಲ್ಲವರ ಮೇಲೆ [illegible] ಭದ್ರತಾಮಂಡಲಿ! ಮಹಾಯುದ್ಧದ ಮಿತ್ರ ಪಕ್ಷದ ಪ್ರಮುಖರು, ತಮ್ಮ ಅಂತರಾಳದಲ್ಲಿ ಹುದುಗಿದ್ದ ಅಭದ್ರತೆಯನ್ನು ಮುಚ್ಚಿಕೊಳ್ಳಲೋ ಏನೋ ತಂತಮ್ಮ ಶಾಶ್ವತ ಸದಸ್ಯತ್ವದ ಆಧಾರದ ಮೇಲೆ ನಿರ್ಮಿಸಿಕೊಂಡ ಸರ್ವಾಧಿಕಾರ ಸಂಸ್ಥೆ.... ಅಣ್ವಸ್ತ್ರ [illegible] ಮುಂದೆ ಯಾರ್ಯಾರು ಈ ಅಸ್ತ್ರ ಪಡೆಯುವರೋ ಎಂಬ ಗುಮಾನಿ. ಶೀತಲ ಯುದ್ಧ.... ವಿಶ್ವಸಂಸ್ಥೆ ಇದ್ದರೂ, ಭದ್ರತಾಮಂಡಲಿ ಇದ್ದರೂ ಅಥವಾ ಅದೇ ಕಾರಣದಿಂದಾಗಿ, ಶೀತಲಯುದ್ಧ ಕಾಲದಲ್ಲಿ [illegible] ನಡೆದ ಹಲವಾರು ಅನಪೇಕ್ಷಿತ, ಪ್ರಾದೇಶಿಕ ಯುದ್ಧಗಳು- ವಸಾಹತು ಕಳೆಕೊಂಡವರ ಕಿತಾಪತಿಯಿಂದ ಸೃಷ್ಟಿಸಲ್ಪಟ್ಟ ಸಮಸ್ಯೆಗಳು- ವಿಯತ್ನಾಂ, ಕೊರಿಯಾ, ಪಶ್ಚಿಮ ಏಷ್ಯಾ, ಆಫ್ರಿಕಾ, ಭಾರತ-ಪಾಕಿಸ್ತಾನ- ಇವೆಲ್ಲಾ ರಣರಂಗಗಳೂ ಯೂರೋಪಿನಿಂದ ಹೊರಗೆ- ಈ ಸಣ್ಣ ಸಣ್ಣ ಕದನಗಳಲ್ಲಿ ಮಡಿದ, ನೋಯಾಳಿಗಳ ಆರ್ಥಿಕ ನಷ್ಟ ಮಹಾಯುದ್ಧದಲ್ಲಿ ಆದ ವಿಶ್ವವ್ಯಾಪಕ ಕ್ಷೋಭೆಗಿಂತ ಏನೂ ಕಡಿಮೆಯಿರಲಿಲ್ಲ... ವಿಶ್ವಶಾಂತಿಯನ್ನು ಕಾಪಾಡಲು ಸ್ಥಾಪಿಸಿದ ಸಂಸ್ಥೆಗಳೆಲ್ಲ ನಿರರ್ಥಕವಾಗುತ್ತಿರುವುದು, ಈ ಭದ್ರತಾಮಂಡಲಿಯ ಬಹುಮುಖ್ಯ ಸದಸ್ಯ ಅಮೆರಿಕ, ತನ್ನ ಸದಸ್ಯತ್ವ ಶುಲ್ಕ ಕೊಡದಿರುವುದು, ವಿಶ್ವಸಂಸ್ಥೆಯ ಹೆಸರಿನಲ್ಲಿ, ಅದರ ಆದೇಶವಿಲ್ಲದೆ, ನಿಯಮ ಬಾಹಿರ ಮಾರ್ಗದಲ್ಲಿ ಪರರಾಷ್ಟ್ರಗಳ ಮೇಲೆ ದಬ್ಬಾಳಿಕೆ ನಡೆಸುತ್ತಿರುವುದು... ಜಪಾನ್ ಮತ್ತು ಜರ್ಮನಿಗೂ, ಅವರು ಇಂದಿನ ಜಿ-7 ಶ್ರೀಮಂತರ ಒಕ್ಕೂಟಕ್ಕೆ [illegible] ಕಾರಣದಿಂದಾಗಿಯೇ ಭದ್ರತಾ ಸಮಿತಿಯ ಶಾಶ್ವತ ಸದಸ್ಯತ್ವ ನೀಡುವ ಹವಣು. ಇಷ್ಟು ದೊಡ್ಡ ಏಕಮೇವಾದ್ವಿತೀಯ ಸಾಮ್ರಾಜ್ಯ ಹಿಂದೆಂದೂ ಇದ್ದದ್ದಿಲ್ಲ.

ಈ ಸಾಮ್ರಾಜ್ಯದ ಪ್ರಭುಗಳ ಮತ್ತು ಒಕ್ಕೂಟದ ಸರ್ವಾಧಿಕಾರಿ ಅಮೆರಿಕದ [illegible]- ಮೇಲ್ನೋಟಕ್ಕೆ ವಿಶ್ವಶಾಂತಿಯ ರಕ್ಷಣೆ! ಪ್ರಜಾಪ್ರಭುತ್ವದ ರಕ್ಷಣೆ! ಮಾನವೀಯ ಹಕ್ಕುಗಳ ರಕ್ಷಣೆ!.... ಇತ್ಯಾದಿ. ಈ ಸಾರ್ವಭೌಮರ ಕಾಳಜಿಗಳ ಹಿಂದಿನ ಮರ್ಮವೇನಿರಬಹುದೋ! ಬರಲಿರುವ ಶತಮಾನದಲ್ಲಿ ಈ ಹೊಸ ಸಾಮ್ರಾಟರ [illegible] ತೋರುತ್ತದೆ. ಇದರ ಕೆಲವು ಝಲಕ್ ಈಗಾಗಲೇ ಸ್ಪಷ್ಟವಾಗಿವೆ.

ಎರಡನೆಯ ಮಹಾಯುದ್ಧ ಮುಗಿದ ತರುಣದಲ್ಲಿ ಮೂಡಿದ್ದ ಮಹತ್ತರ ಭರವಸೆ: ಗ್ಯಾಟ್ (ಮಾರಾಟ ಮತ್ತು ಸುಂಕಗಳ ಸಾಮಾನ್ಯ ಒಪ್ಪಂದ) ಒಪ್ಪಂದದ ಮೂಲಕ ಅಂತರರಾಷ್ಟ್ರೀಯ ವಾಣಿಜ್ಯ ವ್ಯವಹಾರದಲ್ಲಿ, ನ್ಯಾಯಯುತವಾದ, ದುರ್ಬಲರಿಗೂ ಅನುಕೂಲವಾಗುವ ವ್ಯವಸ್ಥೆ ಬರುತ್ತದೆ. ನಿಶ್ಶಸ್ತ್ರೀಕರಣ ಸಾಧ್ಯವಾಗುತ್ತದೆ. ವಿಶ್ವಶಾಂತಿ ನೆಲೆಸುತ್ತದೆ ಎಂಬ ಆಶಯ. ಆದರೆ ಎಲ್ಲೋ ನಾವು ನಡೆಯುತ್ತಿದ್ದ ಭೂಮಿಯೇ ಕುಸಿದಂತೆ ಈ ಎಲ್ಲ [illegible] ಅವುಗಳ ಜಾಗದಲ್ಲಿ ವಿಶ್ವ ವಾಣಿಜ್ಯ ಸಂಸ್ಥೆ (WTO) [illegible] ತಮ್ಮ ಮಾರುಕಟ್ಟೆಯನ್ನು [illegible] ಬಗ್ಗುಬಡಿಯುತ್ತಿದ್ದಾರೆ. [illegible] (ಅನುಮತಿ [illegible]) [illegible] ಹಾಕುತ್ತಿದ್ದಾರೆ. ನಮ್ಮ [illegible] ಕೇಳಿದ [illegible] ನಮಗೆ. [illegible]

ಕಟ್ಟಿಸುವ ಬೆದರಿಕೆ. ತೈವಾನ್ ಚೀನಾದಲ್ಲಿ ಕ್ಷಿಪಣಿ ಕ್ಷೇತ್ರ ಸ್ಥಾಪನೆಯ ಸಂಚು. ದುರ್ಬಲ ಆರ್ಥಿಕ ವ್ಯವಸ್ಥೆಗಳ ಪುನರ್ನಿರ್ಮಾಣ ವಿಶ್ವಶಾಂತಿಗೆ ಪೂರಕವಾದ ಅಗತ್ಯವಾದ ಕೆಲಸವೇನೊ. ಅದಕ್ಕಾಗಿ ನಿರ್ಮಾಣವಾದ ವಿಶ್ವಬ್ಯಾಂಕ್ ಐಎಂಎಫ್ (ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ) ನೆರವು ತಮ್ಮ ಸಾರ್ವಭೌಮತ್ವವನ್ನು ಪ್ರಶ್ನಿಸುವವರಿಗೆ ದೊರೆಯದಂತೆ ಮಾಡುತ್ತಿರುವುದು. ಹಿಂದಿನ ಪರಸ್ಪರ ವೈರಿಗಳಾಗಿದ್ದ ಕೆಲವೇ ಪುಂಡರು ತಮ್ಮತಮ್ಮ ನಡುವಿನ ಜಗಳ ತಾತ್ಕಾಲಿಕವಾಗಿ ಯಾದರೂ ನಿಲ್ಲಿಸಿ ಒಂದಾಗಿ, ಮಿಕ್ಕೆಲ್ಲರನ್ನೂ ಸದೆಬಡಿಯ ಹೊರಟಂತೆ! ಹಿಂದಿನ ಸಾಮ್ರಾಜ್ಯಶಾಹಿಗಳ ಮತ್ತೊಂದು ಅವತಾರ ಹೊಸ ಶತಮಾನದೊಂದಿಗೆ ಅನಾವರಣವಾಗುತ್ತಿದೆ. ಬಂಡವಾಳ ಹೂಡಲು ಆರ್ಥಿಕ ವಸಾಹತು: ಹಿಂದಿನಂತೆ, ರಾಜಕೀಯ ಜವಾಬ್ದಾರಿಯೂ ಇಲ್ಲದ ನಗ್ನ ನಿರಂಕುಶ ಅಧಿಕಾರ. ಹಿಂದೆಂದೂ ಕೆಲವೇ ಜನರ ಕೈಗೆ ಅಗಾಧ ಪ್ರಮಾಣದಲ್ಲಿ ಹೊಣೆಗಾರಿಕೆ ಇಲ್ಲದ ಇಷ್ಟೊಂದು ಅಪಾರ ಅಧಿಕಾರ ದಕ್ಕಿರಲಿಲ್ಲ!

ಅಂತರರಾಷ್ಟ್ರೀಯ ಸಾರ್ವಭೌಮದ ಕುದುರೆ ಈಗ ಅಶ್ವಮೇಧ ಪ್ರದಕ್ಷಿಣೆ ಆರಂಭಿಸಿದೆ. ಈ ಸೊಕ್ಕಿನ ಕುದುರೆ ಹಾಯ್ದು ಮಾರ್ಗದಲ್ಲಿ ನಿರಂತರ ನರಮೇಧ ಅದರ ವಿಜಯದ ಕುರುಹು. ಇದರ ಆರಂಭದ ನಡೆಗಳನ್ನು ಅಲ್ಲಲ್ಲೇ ಗುರುತಿಸಬಹುದು. ಪೂರ್ವ ಏಷ್ಯದಲ್ಲಿ ಈ ಕುದುರೆ ಷೇರುಪೇಟೆಯಲ್ಲಿ ದಳ್ಳಾಳಿಗಳ ಮಧ್ಯವರ್ತಿಯ ಮೂಲಕ ಕುಣಿದು ಕುಪ್ಪಳಿಸಿ, ಅವರ ಆರ್ಥಿಕ ವ್ಯವಸ್ಥೆಯನ್ನು ಕೆಲವೇ ದಿನಗಳಲ್ಲಿ ಮೂಲೆಗುಂಪಾಗಿಸಿತು. ಪಶ್ಚಿಮ ಏಷ್ಯಾದ ಬಲಿಷ್ಠ ಬ್ಯಾಂಕೊಂದು ಒಬ್ಬ ದಳ್ಳಾಳಿಯ ಆಟದಿಂದ ನೆಲಕಚ್ಚಿತು. ಭಾರತದ ಪ್ರಜಾಪ್ರಭುತ್ವದ ವಿವೇಕ ನಮ್ಮ ದುರ್ಬಲ ಆರ್ಥಿಕ ವ್ಯವಸ್ಥೆಯನ್ನು ಸ್ವಲ್ಪ ರಕ್ಷಿಸಿ ಸ್ವಲ್ಪ ಮುಕ್ತವಾಗಿಸುತ್ತಾ ಬಂದಿತು; ಇದರ ಹಣಕಾಸು ವ್ಯವಸ್ಥೆಯನ್ನು ಕೆಲವೇ ವಾರಗಳ ಷೇರುಪೇಟೆ ಹಗರಣದಲ್ಲಿ, ಸಾಮಾನ್ಯ ಜನರ ಹಣದ ದುರುಪಯೋಗ ಮಾಡಿ, ಅದರ ರಕ್ಷಣೆಯ ಕೋಟೆಯನ್ನು ಕೆಡವಲಾಯಿತು. ಅದರಲ್ಲಿ ಭಾಗವಹಿಸಿದ ವಿದೇಶೀ ಬ್ಯಾಂಕುಗಳೆರಡಕ್ಕೂ ಆದ ಅಗಾಧ ನಷ್ಟವನ್ನು ನಿಮಿಷಾರ್ಧದಲ್ಲಿ ತುಂಬಿಕೊಟ್ಟ ಅದೃಶ್ಯಶಕ್ತಿ ಈ ಕುದುರೆಯದೇ ಎಂಬುದು ಇಂದು ಗುಟ್ಟೇನೂ ಅಲ್ಲ.

ಶೀತಲಯುದ್ಧವನ್ನು ಸೃಷ್ಟಿಸಿದ ಹಿಂದಿನ ಸಾಮ್ರಾಜ್ಯಶಾಹಿಗಳು ಕೊರಿಯಾ, ಪಶ್ಚಿಮ ಏಷ್ಯ, ಭಾರತ - ಪಾಕಿಸ್ತಾನ - ಅಂಗೋಲ - ವಿಯೆಟ್ನಾಂ - ಹೈಟಿ ಎಲ್ಲೆಡೆಯೂ ಈಗ ಇಲ್ಲಿಯ ಸಮಸ್ಯೆಗಳ ಎರಡೂ ಬಣದವರನ್ನು ಕುಳಿತು ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವಂತೆ ಬೆದರಿಸುತ್ತಿದ್ದಾರೆ. ತಾವೇ ಸೃಷ್ಟಿಸಿದ ಈ ಆಟ ಇನ್ನು ಸಾಕು ಎಂದು ಏಕಪಕ್ಷೀಯವಾಗಿ [illegible] ವ್ಯಾಪಾರ ವ್ಯವಹಾರ ಸುಗಮವಾಗಿ ನಡೆಯಲು ಈ ಸಣ್ಣಪುಟ್ಟ ಪ್ರಾದೇಶಿಕ ಕಲಹಗಳು ಅಡಚಣೆಯೆಂಬಂತೆ ಇರಾನ್-ಇರಾಕ್ ಜನಕ್ಕೆ, ಕೊಸಾವೋ ಜನಕ್ಕೆ ಯಾವ ಸರ್ಕಾರ ಬೇಕೆಂದು ಅಲ್ಲಿಯ ಆಂತರಿಕ ವ್ಯವಹಾರಗಳಲ್ಲಿ ತಲೆ ಇಡುವುದು ಅಮೆರಿಕದ ಹಕ್ಕಾಗಿದೆ. [illegible]

ಕೇವಲ ಆರ್ಥಿಕ ದಿಗ್ಬಂಧನ ಸಾರುವುದರಿಂದ ರಾಷ್ಟ್ರ- ರಾಷ್ಟ್ರಗಳ ಹತೋಟಿ ಸಾಧ್ಯವಾಗುತ್ತಿರುವುದು ಒಂದು ಹೊಸ ಬೆಳವಣಿಗೆ.

ಒಂದು ಕಡೆ, ಜಿ-ಏಳು ಮತ್ತೊಂದು, ಎಂದು ಹೆಸರಾಗಿರುವ ಶ್ರೀಮಂತ ರಾಷ್ಟ್ರಗಳ ಬಣ. ಇನ್ನೊಂದು ಕಡೆ ಇವರನ್ನು ಸ್ವಲ್ಪಮಟ್ಟಿಗಾದರೂ ಪ್ರತಿರೋಧಿಸುವ ಧ್ವನಿಯನ್ನು ಎಬ್ಬಿಸಿರುವ ಜಿ 15-17 ರಾಷ್ಟ್ರಗಳ ಗುಂಪು. ಆದಷ್ಟೂ ಜಿ-7 ರಾಷ್ಟ್ರಗಳ ದಯೆಯ ಮೇಲೆ ಅವಲಂಬಿಸದೆ, ವಾಣಿಜ್ಯ ವ್ಯವಹಾರಗಳಲ್ಲಿ, ಜಿ- 15- 17, ಪರಸ್ಪರ ಸಹಕರಿಸಿ, ಸ್ವಾವಲಂಬಿಯಾಗುವ ಮಾರ್ಗವನ್ನು ಚರ್ಚಿಸುತ್ತಿದ್ದಾರೆ. ಇವರ ಈ ಪ್ರಯತ್ನ ಸಫಲವಾಗದಿರುವಂತೆ ನೋಡಿಕೊಳ್ಳುವ ತಂತ್ರವಾಗಿ, ಜಿ-7 ರಾಷ್ಟ್ರಗಳು, ಈ ಎರಡೂ ಬಣಗಳಿಗೆ ಸೇರಲಾಗದ ದುರ್ಬಲರ ಆಂತರಿಕ ವ್ಯವಹಾರಗಳಲ್ಲಿ ನಾನಾ ರೀತಿ ಪ್ರವೇಶಿಸಿ, ಪರಿಸ್ಥಿತಿ ಕಲುಷಿತಗೊಳಿಸುವ ಕುತಂತ್ರ ಮಾಡಿಯಾರು. ಈ ಮಧ್ಯೆ ರಷ್ಯಾದವರ ಸಲಹೆ –ಚೀನಾ, ರಷ್ಯ, ಭಾರತ ಪರಸ್ಪರ ಸಹಕರಿಸಬೇಕೆಂಬುದು ತೆರೆಯ ಹಿಂದೆ ಚರ್ಚೆ ನಡೆಯುತ್ತಿದ್ದು– ಬರುವ ಶತಮಾನದ ಚದುರಂಗದಾಟಕ್ಕೆ ಸಿದ್ಧತೆ ಸಂಪೂರ್ಣವಾಗಿದೆ ಎನ್ನಬಹುದು. ಈ ಮೂರೂ ರಾಷ್ಟ್ರಗಳನ್ನು ವಿಭಜಿಸಿ, ಸಣ್ಣಪುಟ್ಟ ರಾಜ್ಯ ರಚನೆಗಳಾಗಿ ಚದುರಿಸುವವರೆಗೆ ಈ ಆಟ ಮುಗಿಯದೇನೋ!

ಲೋಕಪ್ರಸಿದ್ಧ ಲಾಹೋರ್ ಶಿಖರ ಸಮ್ಮೇಳನದಂದು ನಮ್ಮ ಮತ್ತು ಪಾಕಿಸ್ತಾನಿ ಪ್ರಧಾನಿಗಳು ಎಲ್ಲರ ಎದುರಿಗೆ ಪರಸ್ಪರ ಗಾಢಾಲಿಂಗನ ಮಾಡಿಕೊಂಡರೂ ಒಳಗೆ ಕುಳಿತಾಗ ತಮ್ಮಿಬ್ಬರ ಮಧ್ಯೆ ಒಂದು ಖಾಲಿ ಕುರ್ಚಿಯನ್ನು ಕಾದಿರಿಸಿಕೊಂಡಂತಿತ್ತು. ಈ ಕುರ್ಚಿಯಲ್ಲಿ ಕೂರುವವರು ಹಿಂದಿನ ಶತಮಾನಗಳಲ್ಲಿ ಕಣ್ಣಿಗೆ ಕಾಣುತ್ತಿದ್ದರು. ಇಂದು ಅದೃಶ್ಯರಾಗಿದ್ದರೂ, ಪರಿಣಾಮಕಾರೀ ಅವರ ಅಸ್ತಿತ್ವ ಅಂತೆಯೇ. ಇಷ್ಟಪಟ್ಟರೂ ಸೋದರರಿಬ್ಬರು ಮನಬಿಚ್ಚಿ ಮಾತನಾಡಲಾಗುತ್ತಿಲ್ಲ. ಅವರಿಬ್ಬರ ನಡುವೆ ಜಗಳ ತಂದಿಟ್ಟವರು ಅವರೇನು ಮಾತನಾಡಬೇಕೆಂದೂ ಷರತ್ತು ಹಾಕುತ್ತಿದ್ದಾರೆ. ಪ್ರತಿಯೊಂದು ಶತಮಾನಕ್ಕೂ ಅವರದೇ ಆದ ವೈಶಿಷ್ಟ್ಯ, ನೋಡಿ, ಹೆಸರಿಸುವ ಬಳಕೆಯಿದೆ: ಮಧ್ಯಯುಗ, ಅಂಧಕಾರಯುಗ, ಕೈಗಾರಿಕಾ ಕ್ರಾಂತಿಯುಗ, ವೈಚಾರಿಕತೆಯ ಯುಗ ಮುಂತಾಗಿ, ಹತ್ತೊಂಭತ್ತನೆಯ ಶತಮಾನದಲ್ಲಿ ಆರಂಭವಾದ ಸಾಮ್ರಾಜ್ಯಶಾಹಿ ಮುಂದುವರಿದದ್ದೂ ಇದೆ, ಮುಂದಿನ ಶತಮಾನಕ್ಕೂ ಹರಿಯುತ್ತಿದೆ ಅನಿಸುತ್ತೆ. ಅದರ ರೀತಿ ರಿವಾಜುಗಳು ಬದಲಾಯಿಸಿವೆಯೇ ವಿನಃ ಮೂಲಸ್ವರೂಪ ಹಾಗೇ ಇದೆ. ಮಿಲಿಟರಿ ಹಾದಿಯನ್ನು ಹತೋಟಿಯಲ್ಲಿಟ್ಟು, ಆರ್ಥಿಕ ನೀತಿಯನ್ನೇ ಯುದ್ಧತಂತ್ರವನ್ನಾಗಿ ಬಳಸುತ್ತಿದೆ ಅಷ್ಟೆ.

ಹಿನ್ನೋಟ ಹರಿಸಿದರೆ ಲೀಗ್ ಆಫ್ ನೇಷನ್ಸ್ ಕಾಲದಲ್ಲೂ ವಿಶ್ವಸಂಸ್ಥೆಯ ಸ್ಥಾಪನೆಯ ಸಮಯದಲ್ಲೂ ಸಂಬಂಧಪಟ್ಟ ಬಲಿಷ್ಠರಲ್ಲಿ ಪ್ರಾಮಾಣಿಕತೆಗಿಂತ ಸಮಯ ಸಾಧಕತೆಯೇ ಮುಖ್ಯ ಪ್ರೇರಣೆಯಾಗಿತ್ತು ಎಂದೆನಿಸುತ್ತದೆ. ಮುಖ್ಯವಾಗಿ ಕಾದಾಡಿದವರ ನಡುವೆ ಪರಸ್ಪರ ಅಪನಂಬಿಕೆ [illegible]ವಾಗಿತ್ತು. ಎರಡೂ ಬಣಕ್ಕೂ ಬೆನ್ನೆಲುಬಾಗಿ ನಿಂತ [illegible]ವಾಗಿ ತೋರಿಕೆಯಾಗಿಯೇ ಆದರೂ ಏನಾದರೂ [illegible]ಬೇಕಾಗಿತ್ತು. ಆತಂಕದ ಬಹು ಎಚ್ಚರಿಕೆಯಿಂದ ನೇಯ್ದ ಒಳಸಂಚಿನಲ್ಲಿಯೋ ಈ ಎರಡೂ ಸಂಸ್ಥೆಗಳ ಹುಟ್ಟಿನ ಹಿಂದಿನ ಕಾರಣ? ಈ ಮುಖ್ಯರ ನಡುವೆ ಈಗ ಒಡಂಬಡಿಕೆ, ಹೊಂದಾಣಿಕೆ [illegible]. ಹೊಂದಾಣಿಕೆಯಿಂದ ಅಜೇಯ ಬಲ ಬಂದಿದೆ. ಆದುದರಿಂದ ಮತ್ತೊಮ್ಮೆ ಮಿಕ್ಕೆಲ್ಲರನ್ನೂ ಧಿಕ್ಕರಿಸುವ, ವಿಶ್ವಸಂಸ್ಥೆಯನ್ನೂ ಮತ್ತು ಅದರ ಅಂಗ ಸಂಸ್ಥೆಗಳನ್ನೂ ನಿಷ್ಕ್ರಿಯಗೊಳಿಸುವ ಹುನ್ನಾರ ನಡೆಯುತ್ತಿಲ್ಲವೆ?

ಅಥವಾ ಮತ್ತೊಂದು ಸಾಧ್ಯತೆ: ಈ ಮುಖ್ಯರ ನಡುವೆ ಇತಿಹಾಸ ಪೂರ್ವ ಕದನ - ವೈಮನಸ್ಯವೇ ತಾಂಡವವಾಡಿ, ಈಗ ಆಗಿರುವ ಹೊಂದಾಣಿಕೆಯೂ ಜಳ್ಳಿರಬಹುದು. ಯೂರೋಪ್, ಅಮೆರಿಕ ನಡುವೆ ನಡೆಯುತ್ತಿರುವ ವಾಣಿಜ್ಯ ನೀತಿ ಸಂಬಂಧ, ಘರ್ಷಣೆ ಗಮನಿಸಿ ಯೂರೋಪಿಯನ್ ಯೂನಿಯನ್ನನ್ನು ಅಮೆರಿಕದ ನೆರವಿಲ್ಲದೆ, ಸ್ವತಂತ್ರವಾಗಿ ನಿಲ್ಲಬಲ್ಲ ಶಕ್ತಿ ಪಡೆಯಲು, ಅಪ್ರಭಾವಿತ ನ್ಯಾಟೋ ಗುಲಾಮಗಿರಿಯಿಂದ ಹೊರಬರಲು ಯತ್ನ ನಡೆಯುತ್ತಿದೆ. ಈಗಂತೂ ರಷ್ಯದ ಮಿಲಿಟರಿ ಬಲ ಕುಸಿದುಬಿಟ್ಟು, ಯೂರೋಪಿಗೆ ಅಮೆರಿಕದ ಛತ್ರಿ ಇಲ್ಲದಿದ್ದರೂ ಆದೀತು. ಪರಿಣಾಮವಾಗಿ, ಮತ್ತೊಮ್ಮೆ ಈ ಎರಡು ಬಣಗಳೂ ಮಾರುಕಟ್ಟೆಗಾಗಿ ವಿಶ್ವವ್ಯಾಪಕವಾಗಿ ಕಾದಾಡಿಯಾವು. ಇಷ್ಟವೋ ಕಷ್ಟವೋ ನಮ್ಮೆಲ್ಲರನ್ನೂ ಅದರ ಸುಳಿಯೊಳಗೆ ಸೆಳೆದುಕೊಂಡಾವು. ಸಿನಿಮಾ ಕ್ಯೂನಲ್ಲಿ ನಿಂತಾಗ ಜೇಬುಗಳ್ಳರಿಬ್ಬರ ನಡುವಿನ ಹುಸಿ ಜಗಳವನ್ನು ಅದೇನೆಂದು ವಿಚಾರಿಸಹೋದ ಅಮಾಯಕರ ಪಾಡಿನಂತೆ!

ಗ್ಯಾಟ್‌ನಿಂದ WTO ಆಯ್ತು. ಈಗ WTOನಲ್ಲಿ ಆಗಿರುವ ಒಪ್ಪಂದಗಳು ಪ್ರಯೋಗಕ್ಕೆ ಬರುವುದಕ್ಕೆ ಮುಂಚೆಯೇ, ಅದರ ಪುನರ್ವಿಮರ್ಶೆ ಮುಂದಿನ ಮೂರು ವರ್ಷಗಳವರೆಗೆ! ಕಳೆದ ಐವತ್ತು ವರ್ಷಗಳಿಂದ ನ್ಯಾಯಯುತ ವಾಣಿಜ್ಯ ನೀತಿಗಾಗಿ ದುರ್ಬಲ ರಾಷ್ಟ್ರಗಳು ಕಾಯುತ್ತಲೇ ಇವೆ. WTO ಆಗುತ್ತಿದ್ದಂತೆಯೇ ಅದರ ಪ್ರಣಾಳಿಕೆಗೆ ವಿರುದ್ಧವಾದ ವಾಣಿಜ್ಯ ಒಕ್ಕೂಟಗಳನ್ನೂ ರಚಿಸಲಾಗಿದೆ. ಯೂರೋಪಿಯನ್ ಯೂನಿಯನ್ ಒಂದು ಕಡೆ –ಉತ್ತರ ಅಮೆರಿಕ ವಾಣಿಜ್ಯ ವಲಯ ಒಂದು ಕಡೆ – ಈಗ ಅಮೆರಿಕ ಬ್ರಿಟಿಷರನ್ನು ಯೂರೋಪಿಯನ್ ಯೂನಿಯನ್ ಬಿಟ್ಟು ಉತ್ತರ ಅಮೆರಿಕ ವಾಣಿಜ್ಯ ವಲಯಕ್ಕೆ ಸೇರಲು ಆಹ್ವಾನಿಸಿದೆ.

ಸಿಯಾಟಲ್‌ನಲ್ಲಿ ನಡೆಯುವ ವಾಣಿಜ್ಯ ಸಮಾವೇಶದ ಮೇಲೆ ದಬಾವಣೆ ತರಲು ಅಮೆರಿಕ ನೇತೃತ್ವದ ಏಷ್ಯಾ-ಪೆಸಿಫಿಕ್ ವಾಣಿಜ್ಯ ಸಮಾವೇಶ ಆಕ್‌ಲ್ಯಾಂಡ್‌ನಲ್ಲಿ ನಡೆಯುತ್ತಿದೆ. ಅಮೆರಿಕದ ಈ ಪ್ರತಿಯೊಂದು ನಡೆಯೂ ಆರ್ಥಿಕ-ಮಿಲಿಟರಿ ಶಕ್ತಿ ಪರಾಕಾಷ್ಠತೆಯ ಪ್ರಜಾಪ್ರಭುತ್ವ ತತ್ವ ವಿರೋಧಿ ನಡೆಯೆನಿಸಿದೆ. ಮುಂದಿನ ಶತಮಾನದ ಬಹುಭಾಗ ಈ ಶಕ್ತಿಯ ಮಿತಿಯನ್ನು ಗುರುತಿಸುವುದರಲ್ಲೇ ವ್ಯಯವಾಗಬಹುದು.

ಶಾಂತಿಯೆಂಬುದು ಎರಡು ಯುದ್ಧಗಳ ಮಧ್ಯಂತರ ಸಮಯ ಎಂದು ಹೇಳುತ್ತಿದ್ದುದು ಉಂಟು. ಕೆಲವೇ ಜನ ಬಹುಪಾಲು ಜನರ ಶ್ರಮದ ಶೋಷಣೆಯ ಮೇಲೆ ಐಷಾರಾಮದಲ್ಲಿ ಇರುವ ಬಯಕೆ ಸಾಮ್ರಾಜ್ಯಶಾಹಿಯ ಮೂಲ ಸ್ರೋತ. ವಿಜ್ಞಾನ ಎಲ್ಲರಿಗೂ ಸಾಕಷ್ಟು ಸಮಭಾವ ನೀಡಬಲ್ಲ ಆರ್ಥಿಕ ಬೆಳವಣಿಗೆಯ ಸಾಧ್ಯತೆಯನ್ನು ಬಿಡಿಸಿಟ್ಟಿರುವ ಈ ಕಾಲದಲ್ಲಿ, ಸಾಮ್ರಾಜ್ಯಶಾಹಿ ಶೋಷಣೆಯನ್ನು ಅನಗತ್ಯ-ಅತಾರ್ಕಿಕವಾಗಿಸಿದೆ. ಈ ಸಮಸ್ಯೆಯನ್ನು ಬಗೆಹರಿಸದಿದ್ದರೆ, ವಿಶ್ವಶಾಂತಿ ಬರುವ ಶತಮಾನದಲ್ಲೂ ಹಗಲುಗನಸೇ ಆಗಬಹುದು.

ಪಾರ್ಥಸಾರಥಿ, 713, ವಿಜಯ ಮ್ಯಾನ್‌ಷನ್
ಮೊದಲನೇ ಮುಖ್ಯರಸ್ತೆ, ಆರ್.ಪಿ.ಸಿ. ಲೇಔಟ್, ಬೆಂಗಳೂರು -40

ಜನಸಾಮಾನ್ಯರು, ಅದರಲ್ಲೂ ಬಡವರು ಹಾಗೂ ದುರ್ಬಲರು, ದೊಡ್ಡ ಸುಳ್ಳುಗೇಡಿಗಳೆಂಬ ಭಾವನೆ ಪೊಲೀಸರಲ್ಲಿ ತುಂಬಿದೆ. ಬೇರೆಬೇರೆ ಜಾತಿಮತಗಳ ಜನರಲ್ಲಿ ನಡೆಯುವ ಲೈಂಗಿಕ ಅತ್ಯಾಚಾರಗಳನ್ನೇ ತೆಗೆದುಕೊಳ್ಳಿ. ಅಂತಹ ಪ್ರಸಂಗಗಳಲ್ಲಿ ತನಿಖೆ ನಡೆದು ವರದಿಯಾದ ಪ್ರಕರಣಗಳು ಸುಳ್ಳೆಂದು ತೀರ್ಮಾನವಾಗುವುದು ಅಪರೂಪವಲ್ಲ. ರಾಷ್ಟ್ರೀಯ ಮಟ್ಟದಲ್ಲಿ ಹೀಗೆ ತೀರ್ಮಾನವಾಗುವುದು ಶೇಕಡ ಐದರಷ್ಟು. ರಾಜಾಸ್ತಾನದಲ್ಲಾದರೋ ಇಂತಹ ಪ್ರಕರಣಗಳ ಪೈಕಿ ಶೇಕಡ 27ರಷ್ಟು ''ಸುಳ್ಳು'' ಎಂದು ತೀರ್ಮಾನವಾಗುತ್ತವೆ. ಇದರ ಅರ್ಥವೇನು ? ದೂರುಕೊಟ್ಟ ಮಹಿಳೆಯರ ಪೈಕಿ ಆ ರಾಜ್ಯದಲ್ಲಿ ಬೇರೆ ಕಡೆಗಳಿಗಿಂತ ಐದರಷ್ಟು ಹೆಚ್ಚು ಸುಳ್ಳು ಮಹಿಳೆಯರಿದ್ದಾರೆ ಎಂದು. ಅದು ಹಾಗೆ ತೋರಿದರೂ ನಿಜಾಂಶ ಬೇರೆಯೇ ಇದೆ. ಅದೇನೆಂದರೆ, ರಾಜಾಸ್ತಾನದ ವ್ಯವಸ್ಥೆಯಲ್ಲಿ ಮಹಿಳೆಯರ ವಿರುದ್ಧ ಅಗಾಧವಾದ ಪಕ್ಷಪಾತವಿದೆ. ''ಸುಳ್ಳು [illegible] ದೂರು ಎಂದು ಎಲ್ಲ ಜನವಿಭಾಗಗಳ ದೂರುಗಳಲ್ಲಿ [illegible] ತಳ್ಳಿಹಾಕುತ್ತಾರೆ. ಆದರೆ ಸ್ವಲ್ಪ ಒಳಹೊಕ್ಕು ಅಂಕಿ-ಅಂಶಗಳನ್ನು ವಿಂಗಡಿಸಿ ನೋಡಿದರೆ ಪಕ್ಷಪಾತಕ್ಕೆ ಗುರಿಯಾಗಿ ತಳ್ಳಿಹಾಕಲ್ಪಡುವ ದೂರುಗಳಲ್ಲಿ ದಲಿತರು ಮತ್ತು [illegible] ದೂರುಗಳೇ ಹೇರಳವಾಗಿರುತ್ತವೆ. **ಅಂದರೆ, ಈ ಗುಂಪುಗಳ ವಿರುದ್ಧ ನಡೆಯುವ ದೌರ್ಜನ್ಯಗಳು ಬೇರೆ ವಿಭಾಗಗಳ ಮೇಲೆ ಜರುಗುವುದಕ್ಕಿಂತ ಹೆಚ್ಚಿನ ಮಟ್ಟದ್ದು ಎಂದರ್ಥ.**

(–ಪಿ. ಸಾಯಿನಾಥ್ 'ದಿ ಹಿಂದು' ಪತ್ರಿಕೆಯಲ್ಲಿ 13.6. 1999 ರಂದು ಪ್ರಕಟಿಸಿದ ಒಂದು ಲೇಖನದಿಂದ)

-ಇದು ಸಂಶೋಧನೆಯಲ್ಲ, ಎಲ್ಲರ ಕಣ್ಣಿಗೆ ಕಾಣುವ ಸಂಗತಿ. ಬೇಕೆಂದೇ ಕಣ್ಣು ಮುಚ್ಚಿಕೊಳ್ಳುವ ಗೂಬೆಗಳ ಕಣ್ಣು ತೆಗೆಸುವ ಕೆಲಸ ಜನರದ್ದಾಗಬೇಕು.

''**ನೀ**ನು ನಮ್ಮ ಬಗ್ಗೆ ಕೇಳಿರಬಹುದು. ನಾವು ಮೆಕ್ಸಿಕನ್ನರು, ಬಹುಮಟ್ಟಿಗೆ ಸ್ಥಳೀಯರು. 1994ರ ಜನವರಿ 1ರಂದು ನಾವು ಶಸ್ತ್ರಗಳನ್ನು ಹಿಡಿದೆವು. ನಾವು ಕೇಳಿದ್ದಿಷ್ಟೆ : ಭೂಮಿಯ ಮೇಲಿನ ಅಮಾಯಕರಿಗೆ ಧ್ವನಿ, ಮುಖ ಮತ್ತು ಹೆಸರು ಬೇಕು. ಅಷ್ಟು ಕೇಳಿದ್ದೇ ಸಾಕು, ಮೆಕ್ಸಿಕೋದ ಸರ್ಕಾರ ನಮ್ಮ ಮೇಲೆ ಯುದ್ಧ ಹೂಡಿದೆ. ನಮ್ಮನ್ನು ಕೊಚ್ಚಿಹಾಕಲು ನಮ್ಮ ಬೆನ್ನುಹತ್ತಿದ್ದಾರೆ. ಅವರ ಉಪಟಳಕ್ಕೆ ಎಲ್ಲೆಯಿಲ್ಲ. ನಾವು ಸಾಯಬೇಕೆಂಬುದಷ್ಟೇ ಅವರ ಮಹದಾಸೆ. ನಾವು ಇಲ್ಲವಾದರೆ ಅವರಿಗೆ ನಿಸೂರು. ನಾವು ಬಾಯಿ ಮುಚ್ಚಿದರೆ ಅವರಿಗೆ ಸಂತಸ. ಇದಕ್ಕೆ ಕಾರಣವಾದರೂ ಏನು ? ನಾವಿರುವ ಭೂಪ್ರದೇಶ ಸಂಪದ್ಭರಿತವಾಗಿದೆ; ತೈಲ, ಯುರೇನಿಯಂ, ಸೊಗಸಾದ ದಿಮ್ಮಿಗಳು, ಎಲ್ಲಾ ಇಲ್ಲಿ ತುಂಬಿದೆ. ಅದನ್ನೆಲ್ಲಾ ಬಹುರಾಷ್ಟ್ರೀಯ ಕಂಪನಿಗಳ ಪಾಲು ಮಾಡಲು ಸರ್ಕಾರ ಉತ್ಸುಕವಾಗಿದೆ. ನಾವಾದರೋ ಅದೆಲ್ಲಾ ಮೆಕ್ಸಿಕನ್ನರಿಗೇ ಇರಬೇಕೆಂದು ಇಚ್ಛಿಸುವವರು.''

(–ಒಬ್ಬ ಪೊಲೀಸ್ ಪೇದೆಯನ್ನು ಕೊಂದನೆಂಬ ಸುಳ್ಳು ಆಪಾದನೆಯ ಮೇರೆಗೆ ಮರಣದಂಡನೆಗೆ ಗುರಿಯಾಗಿ ಅಮೆರಿಕಾದ ಫಿಲಡೆಲ್ಫಿಯಾ ಕಾರಾಗೃಹವಾಸದಲ್ಲಿರುವ ಕರಿಯ ಜನರ ಕಣ್ಮಣಿ, ಹೋರಾಟಗಾರ ಮಾಮಿಯಾ ಅಬು-ಜಮಾಲ್‌ಗೆ ಮೆಕ್ಸಿಕೋದ ಚಿಯಾಪಾ ಪ್ರದೇಶದ ಸಶಸ್ತ್ರ ರೈತ ಚಳುವಳಿಯ ಪರವಾಗಿ ಮಾರ್ಕೋಸ್ ಬರೆದ ಪತ್ರದ ಒಂದು ಭಾಗ ಇದು).

–ಎಲ್ಲ ಕಡೆಯಲ್ಲೂ ಬಂಡವಳಿಗರ ಪ್ರತಿನಿಧಿಗಳಾಗಿ ಕೆಲಸ ಮಾಡುವವರಿಗೆ ಒಂದೇ ರೋಗ ಮತ್ತು ಎಲ್ಲ ಕಡೆಯಲ್ಲೂ ಜನಪರ ಹೋರಾಟಗಾರರದ್ದೂ ಒಂದೇ ರಾಗ. ರಾಷ್ಟ್ರೀಯ ಸಂಪನ್ಮೂಲಗಳನ್ನು ಪರಭಾರೆ ಮಾಡುವುದಕ್ಕೆ ಜನವಿರೋಧಿ ನೀತಿಯಲ್ಲಿ 'ಉದಾರೀಕರಣದಿಂದ ಅಭಿವೃದ್ಧಿ' ಎಂಬ ನಾಮಧೇಯ ಬೇರೆ ! ಅದರ ಒಳತಂತ್ರವನ್ನು ಗ್ರಹಿಸುವುದು ಜನಪರ ಹೋರಾಟಗಳಿಗೆ ಮೊದಲ ಮೆಟ್ಟಿಲು.

ಭಾರತ ಮತ್ತು ಪಾಕಿಸ್ತಾನಗಳ ಅಣ್ವಸ್ತ್ರ ಮತ್ತು ಕ್ಷಿಪಣಿ ತಜ್ಞರ ವಿಶೇಷ ಗಳಿಕೆಗಳನ್ನು ಅಲ್ಲಗಳೆಯುವುದು ನನ್ನ ಉದ್ದೇಶವಲ್ಲ. ಪರಸ್ಪರರ ದೇಶಗಳನ್ನು ಕೆಲವೇ ನಿಮಿಷಗಳಲ್ಲಿ ವಿಕಿರಣದ ಬೂದಿಯನ್ನಾಗಿಸುವ ಗುರಿಯನ್ನು ಅವರಿಬ್ಬರೂ ಸಾಧಿಸಿಕೊಂಡಿದ್ದಾರೆ. ಇದೇನೂ ಸಾಮಾನ್ಯವಾದ ಗಳಿಕೆಯಲ್ಲ; ಏಕೆಂದರೆ, ಈಗಲೂ ನಿಖರವಾದ ಪದ್ಧತಿಯನ್ನು ಮೈಗೂಡಿಸಿಕೊಂಡು ಇಂಥದನ್ನು ಸಾಧಿಸಲು ಅಸಾಧಾರಣವಾದ ಇಂಜಿನಿಯರಿಂಗ್ ಬುದ್ಧಿಮತ್ತೆಯ ಅಗತ್ಯವಿದೆ. ಅತಿ ಸಂಕೀರ್ಣವಾದ ಯಂತ್ರಗಳ ಚಾಲನೆಗೆ ಸಹ ಅಗಾಧವಾದ ಬುದ್ಧಿ ಬೇಕು; ಅಂತೆಯೇ, ಪುಸ್ತಕಗಳಲ್ಲಿ ಹಾಗೂ ಇತರ ದಾಖಲೆಗಳಲ್ಲಿ ನಮೂದಿಸಲಾದ ಸೂತ್ರಗಳನ್ನು ಬಾಂಬು ಮತ್ತು ರಾಕೆಟ್ಟುಗಳಾಗಿ ಪರಿವರ್ತಿಸಲು ವಿಶೇಷ ಕೌಶಲ್ಯ ಬೇಕು. ಆದರೆ ಇದೆಲ್ಲಾ ವೈಜ್ಞಾನಿಕ ಪ್ರತಿಭೆ ಎನಿಸಿಕೊಳ್ಳುವುದಿಲ್ಲ; ದೇಶದ ತಾಂತ್ರಿಕ ಪರಿಣತಿಯ ಅರ್ಥವತ್ತಾದ ಬೆಳವಣಿಗೆಯೆಂದೂ ಅದು ಎನಿಸಿಕೊಳ್ಳಲಾರದು.

(–ಪಾಕಿಸ್ತಾನದ ಇಸ್ಲಾಮಾಬಾದ್‌ನ ಕೈದ್-ಎ-ಆಜಂ ವಿಶ್ವವಿದ್ಯಾನಿಲಯದ ಅಣು ವಿಜ್ಞಾನಿ ಮತ್ತು ಭೌತಶಾಸ್ತ್ರದ ಪ್ರಾಧ್ಯಾಪಕ ಪರ್ವೇಜ್ ಹೂದ್‌ಭಾಯ್ ತನ್ನೊಂದು ಲೇಖನದಲ್ಲಿ ಹೇಳಿದ್ದು).

–ಅಣ್ವಸ್ತ್ರದಂತಹ ಮಾರಕಾಸ್ತ್ರವನ್ನು ತಯಾರಿಸುವುದು ಮಾನವ ಕುಲದ ಒಳಿತಿಗಲ್ಲ ಮತ್ತು ಅದು ದೊಡ್ಡ ವೈಜ್ಞಾನಿಕ ಸಾಧನೆಯಲ್ಲ ಎಂಬುದನ್ನು ಮಾನವತೆಯಲ್ಲಿ ನಂಬಿಕೆ ಇರುವ ಯಾವುದೇ ದೇಶದ ಧೀಮಂತನೂ ಬಗೆಯುತ್ತಾನೆ ಎಂಬುದಕ್ಕೆ ಇದೊಂದು ನಿದರ್ಶನ.

ಅತ್ಯಂತ ದುಬಾರಿ ಉಪಾಹಾರ

1962. ಚಿಕ್ಕ ದ್ವೀಪ ಕ್ಯೂಬಾದಲ್ಲಿ ಫಿಡೆಲ್ ಕ್ಯಾಸ್ಟ್ರೋ ಅಧ್ಯಕ್ಷನಾಗಿದ್ದುದು ಅಮೆರಿಕಾದ ಅಧ್ಯಕ್ಷನಿಗೆ ಸಹಿಸಲಾಗದ ನಂಜಾಗಿತ್ತು. ಆತನನ್ನು ಮತ್ತು ಅಲ್ಲಿನ ವ್ಯವಸ್ಥೆಯನ್ನು ನಾಶಮಾಡಲು ಅಮೆರಿಕಾ ಎಂತಹ ಗುಪ್ತಾಚರಣೆಗೂ ಸಿದ್ಧವಿತ್ತು. ಉತ್ತರ ಮತ್ತು ದಕ್ಷಿಣ ಅಮೆರಿಕಾ ರಾಷ್ಟ್ರಗಳ ಒಂದು ಸಂಸ್ಥೆ ಇದೆ. ಆಗ್ಗೆ ಕ್ಯೂಬಾ ಸಹ ಅದರ ಸದಸ್ಯತ್ವ ಹೊಂದಿತ್ತು. ಕ್ಯಾಸ್ಟ್ರೋ ಪ್ರತಿನಿಧಿಗಳ ಜೊತೆ ವಾಷಿಂಗ್‌ಟನ್ನಿನ ಶ್ವೇತಭವನದ ಪ್ರತಿನಿಧಿ ಕುಳಿತುಕೊಳ್ಳಬೇಕೆ ? ಅದಕ್ಕಿದ್ದ ಪರಿಹಾರ ಒಂದೇ : ಕ್ಯೂಬಾದ ಸದಸ್ಯತ್ವವನ್ನು ರದ್ದುಗೊಳಿಸುವುದು. ಬೇರೆ ರಾಷ್ಟ್ರಗಳು ಒಪ್ಪಿ ಬಹುಮತ ನೀಡಿದರೆ ಮಾತ್ರ ಇದು ಸಾಧ್ಯವಿತ್ತು. 1962ರ ಫೆಬ್ರವರಿ 12ರಂದು ಸಂಸ್ಥೆಯ ಸಭೆ ಉರುಗ್ವೆಯ ಪುಂಟಾ ಡೆಲ್ ಎಸ್ಟಾ ಎಂಬಲ್ಲಿ ಜರುಗಲಿತ್ತು. ಅಂದು ಬೆಳಿಗ್ಗೆ ಅಮೆರಿಕಾದ ರಾಯಭಾರಿ ಹೈಟಿಯ ವಿದೇಶಾಂಗ ಸಚಿವನನ್ನು ಬೆಳಗಿನ ಉಪಾಹಾರಕ್ಕೆ ಆಮಂತ್ರಿಸಿದ. ಭರ್ಜರಿ ಉಪಾಹಾರ ಅದಾಗಿದ್ದಿರಬೇಕು. ಮಾರನೆಯ ಬೆಳಿಗ್ಗೆ ಮಾಂಟಿವಿಡಿಯೋದ ಪತ್ರಿಕೆಗಳು ಹೇಳಿದವು: ''ಅದು ಅತ್ಯಂತ ದುಬಾರಿ ಉಪಾಹಾರವಾಗಿತ್ತು. ಮಧ್ಯಾಹ್ನದ ಸಭೆಯಲ್ಲಿ ಅಮೆರಿಕಾ ಪರ ಮತ ನೀಡಲು ಹೈಟಿಯ ಸಚಿವನಿಗೆ ಅಮೆರಿಕಾದ ರಾಯಭಾರಿ ಐವತ್ತು ಲಕ್ಷ ಡಾಲರ್ ಹಣ ನೀಡಿದ್ದ !'' (=20ಕೋಟಿ ರೂ)

ನರಸಿಂಹರಾಯರು ಲೋಕಸಭಾ ಸದಸ್ಯರಿಗೆ ನೀಡಿದ್ದರೆನ್ನಲಾದ ಹಣ ಇದರ ಮುಂದೆ ಕೇವಲ ಜುಜುಬಿ, ಅಲ್ಲವೆ ? ಅವರವರ ಶಕ್ತಿಗೆ ತಕ್ಕಂತೆ ನೀಡಿದ್ದಾರೆ. ಪ್ರಜಾಪ್ರಭುತ್ವದ ರಕ್ಷಕರಲ್ಲವೇ ಇವರು ?


ನಿಜವಾದ ವಿಷಜಂತು

ಆ ಜಂತುವಿನಲ್ಲಿ ನಿಜಕ್ಕೂ ಹೊಸದೇನೂ ಇಲ್ಲ. ಏಕೆಂದರೆ ಅದು ಹಲವು ದಶಕಗಳಿಂದ ತನ್ನ ಚಾಳಿಯನ್ನು ಇದೇ ರೀತಿ ಪ್ರದರ್ಶಿಸುತ್ತಾ ಬಂದಿದೆ. ಆ ಜಂತುವಿಗೆ ''ಸಿದ್ಧಾಂತ'' ಎಂಬ ಹಣೆಪಟ್ಟಿಯ ಅವಶ್ಯಕತೆ ಇದ್ದಾಗ ''ಲೋಹಿಯಾವಾದಿ.'' ಲೋಹಿಯಾ, ಗೋಪಾಲಗೌಡ, ಜಯಪ್ರಕಾಶ ನಾರಾಯಣ, ಮುಂತಾದವರ ಹೆಸರುಗಳನ್ನು ಆಗಾಗ್ಗೆ ಉಸುರುವುದಷ್ಟೇ ಅದರ ''ತತ್ವ'' ಆಗಿದ್ದಿತು. ಕ್ರಮೇಣ ಅವೆಲ್ಲಾ ಬೇಕಿಲ್ಲವೆಂದು ಪೂರ್ತಿ ಬೆತ್ತಲೆಯಾಗಿ ತನ್ನ ನಿಜ ವ್ಯಕ್ತಿತ್ವವನ್ನು ತೋರಿಸುತ್ತಾ ಬಂದಿತು. ಕಣ್ಣಿದ್ದೂ ಕುರುಡಾಗಿದ್ದವರು ಅದನ್ನು ನೋಡಲು ನಾಚಬೇಕಾದ ಪ್ರಸಂಗವೇ ಬರಲಿಲ್ಲ.

ಜುಲೈ ಮೂರನೆಯ ವಾರದಲ್ಲಿ ಬಹಿರಂಗವಾಗಿ ಜೆ. ಎಚ್. ಪಟೇಲ್ ಹೇಳಿದರು : ''ಈಗಿನ ಸಂದರ್ಭದಲ್ಲಿ ತತ್ತ್ವ-ಸಿದ್ಧಾಂತಗಳಿಗೆ ಅರ್ಥವಿಲ್ಲ ,'' ಎಂದು.

–ಹಾಗೆ ನೋಡಿದರೆ, ಅವರ ಮಟ್ಟಿಗೆ ಅವಕ್ಕೆ ಯಾವತ್ತೂ ಅರ್ಥವಿರಲಿಲ್ಲ. ಸೌಂದರ್ಯಸ್ಪರ್ಧೆಯ ವೇಳೆಯಲ್ಲಿ ಬಚ್ಚನ್ ಜೊತೆ ಸೇರಿ ರಾಜ್ಯದ ಮರ್ಯಾದೆಯನ್ನು ಕಳೆದ ಈ ವ್ಯಕ್ತಿ ಮುಖ್ಯಮಂತ್ರಿಯಾಗಿ ರಾಜ್ಯದ ಜನರಿಗಾಗಿ ಏನೊಂದೂ ಕೆಲಸ ಮಾಡಬೇಕಾಗಿಲ್ಲವೆಂದು ತೋರಿಸಿಕೊಟ್ಟಿದ್ದಾರೆ. ದುಡಿಯುವ ಜನರ ಎಲ್ಲ ವಿಭಾಗಗಳಿಗೂ ಬಾಧೆ ನೀಡುವುದರಲ್ಲಿ ಪ್ರಶಸ್ತಿ ಗಿಟ್ಟಿಸಿರುವ ಈತ ಚುನಾವಣೆಯಲ್ಲಿ ಮುಖಕ್ಕೆ ಮಂಗಳಾರತಿ ಎತ್ತಿಸಿಕೊಂಡು ಒಂದು ಸ್ಥಾನವನ್ನೂ ಗೆಲ್ಲಲಾರದೆ ಹೋಗುವುದು ನಿಶ್ಚಯವೆಂದು ತಿಳಿದು ಈಗ ಕಮಂಗಿ ಚೇಷ್ಟೆ ಆರಂಭಿಸಿದ್ದಾರೆ. ತತ್ತ್ವನಿಷ್ಠೆಯ ಬಗ್ಗೆ ಅತಿಯಾಗಿ ಮಾತನಾಡುವ ಬಿ.ಜೆ.ಪಿ. ಈಗ ಈತನನ್ನು ಹೇಗೆ ಆಲಂಗಿಸಿಕೊಳ್ಳುತ್ತದೆಂಬುದು ಸೋಜಿಗದ ವಿಷಯ. ತನಗೆ ಯಾವತ್ತೂ ಬೇಡವಾಗಿದ್ದ ತತ್ತ್ವ-ಸಿದ್ಧಾಂತಗಳನ್ನು ಈಗ ಬೇರೆಯವರ ಬಳಿ ಶಿಷ್ಯತ್ವ ವಹಿಸಿ ಕಲಿತುಕೊಳ್ಳುವುದು ಪಟೇಲ್‌ಗೆ ಹೇಗೆ ಸಾಧ್ಯ? ಅವರನ್ನು ತತ್ತ್ವಭ್ರಷ್ಟರನ್ನಾಗಿಸಿ ದೇಶಸೇವೆ ಮಾಡಹೊರಟಿರುವ ಪಟೇಲ್‌ಗೆ ವಿಷಜಂತುಗಳ ಸಹವಾಸ ಹೊಸದೇನಲ್ಲ. ''ಪರಸ್ಪರ ಹೇಸಿ ಮಾಡಿಸಲ್ಪಟ್ಟವರು'' ಎಂಬ ಸ್ಪರ್ಧೆಯಲ್ಲಿ ಪಟೇಲ್- ಯಡಿಯೂರಪ್ಪ- ಹೆಗ್ಡೆ ಸದಾ ವಿಜಯಿಗಳು.

ಜೀವನ ಪ್ರೇಮಿ ಎ.ಎನ್. ಮೂರ್ತಿರಾವ್



ಪ್ರಪಂಚವೆಲ್ಲಾ ಮಾಯೆ, ಬ್ರಹ್ಮವಸ್ತುವೊಂದೇ ಸತ್ಯ, ಬ್ರಹ್ಮಜ್ಞಾನದಿಂದಲೇ ಮೋಕ್ಷ, ಮೋಕ್ಷವೇ ಪರಮಸಾಧನ, ಕರ್ಮಪಾಶದಿಂದ ಬಿಡುಗಡೆ ಹೊಂದುವುದೇ ಶ್ರೇಷ್ಠ ಪುರುಷಾರ್ಥ, ಎಂಬಿತ್ಯಾದಿ ಮಾತುಗಳು ಭಾರತೀಯ ಸಂಸ್ಕೃತಿಯ ಜೀವಾಳವೆಂಬಂತೆ ವ್ಯಾಖ್ಯಾನಿಸುವುದು ನಮ್ಮಲ್ಲಿ ಒಂದು ಪದ್ಧತಿಯಾಗಿಹೋಗಿದೆ. ದೇಹವೆಂಬ ಪಂಜರದಲ್ಲಿ ಆತ್ಮವೆಂಬ ಗಿಣಿ ಸಿಲುಕಿಹಾಕಿಕೊಂಡಿದೆ. ಅದಕ್ಕೆ ಬಿಡುಗಡೆ ಮೋಕ್ಷದಿಂದ ಮಾತ್ರ. ''ಜಗಮೇ ಮಾಯಂ, ಬ್ರತುಕೇ ಮಾಯಂ, ವೇದಾಲಲೋ ಸಾರಮಿಂತೇನಯ್ಯಾ'', ಎಂದು ಘಂಟಸಾಲಾ ಒಂದು ಸಿನಿಮಾದಲ್ಲಿ ಕೂಡ ಹಾಡಿಬಿಟ್ಟಿದ್ದಾನೆ. ಅದಕ್ಕಿಂತಲೂ ಅಸಂಬದ್ಧವಾದ ಮಾತು ಬೇರೊಂದಿಲ್ಲ.

ವೇದಕಾಲದ ಸಮಾಜದಲ್ಲಿ ಜೀವಿಸಬೇಕೆಂಬ ಹಂಬಲ ಅತ್ಯಂತ ಉತ್ಕಟವಾಗಿ ಪ್ರಕಟವಾಗುತ್ತಿತ್ತು. ''ನೂರು ಕಾಲ ಬಾಳೋಣ; ಮುದದಿಂದ ಬಾಳೋಣ, ಆನಂದಿಸೋಣ, ವ್ಯವಹರಿಸೋಣ, ಅಜೇಯರಾಗಿರೋಣ'', - ಇದು ವೇದಕಾಲದ ಜೀವನದಲ್ಲಿ ವ್ಯಾಪಕವಾಗಿ ಪ್ರಕಟವಾಗಿರುವ ಆಕಾಂಕ್ಷೆ. ಸುತ್ತಣ ಪ್ರಪಂಚದ ಆಗುಹೋಗುಗಳನ್ನು, ವಿಸ್ಮಯಗಳನ್ನು, ತನ್ಮಯತೆಯಿಂದ ಕಾಣುತ್ತಾ, ಅವನ್ನು ಅರ್ಥೈಸಲು ಹಾಗೂ ಮಧ್ಯಪ್ರವೇಶ ಮಾಡಲು ತವಕಿಸುತ್ತಾ ಬಾಳುವುದು ವೇದವಾಙ್ಮಯದಲ್ಲಿ ಹಾಸುಹೊಕ್ಕಾಗಿ ಸೇರಿಹೋಗಿದೆ.

ತಮ್ಮ ಜೀವನಕ್ಕೆ ಅಂತಹ ಆಯಾಮವನ್ನು ಕಲ್ಪಿಸಿಕೊಂಡು ನಿಜಕ್ಕೂ ನೂರುಕಾಲ ಬಾಳಿ, ಲವಲವಿಕೆಯಿಂದ ಜೀವನವನ್ನು ಸವಿಯಲು ಇಂದಿಗೂ ಅತಿಹೆಚ್ಚಿನ ಶ್ರದ್ಧೆಯನ್ನು ಉಳಿಸಿಕೊಂಡಿರುವವರು ಹಿರಿಯ ಪ್ರಾಧ್ಯಾಪಕರಾದ ಶ್ರೀ ಎ. ಎನ್. ಮೂರ್ತಿರಾವ್ ಅವರು. ಇದೇ ಜೂನ್ 16ರಂದು ತಮ್ಮ ನೂರನೇ ವರ್ಷಕ್ಕೆ ಕಾಲಿರಿಸಿರುವ ಈ ಅಸಾಮಾನ್ಯ ಚೇತನಕ್ಕೆ 'ಹೊಸತು' ತನ್ನ ಮೊಟ್ಟಮೊದಲ ಸಂಚಿಕೆಯಲ್ಲಿ ಅಭಿನಂದನೆ ಹಾಗೂ ಶುಭಾಶಯಗಳನ್ನು ಸಲ್ಲಿಸಲು ಹರ್ಷಿಸುತ್ತದೆ. ಸಿನಿಕತನವನ್ನು ಪೋಷಿಸುವುದು ಮತ್ತು ಪ್ರಚಾರ ಮಾಡುವುದು ಈಚಿಗಿನ ನಮ್ಮ ಸಾಹಿತ್ಯಕ್ಷೇತ್ರದ ಕೆಲವು ಮಹಾನುಭಾವರಿಗೆ ಒಂದು ಮೌಲ್ಯವಾಗಿಬಿಟ್ಟಿದೆ. ನಮ್ಮ ಭವ್ಯತೆಯೆಲ್ಲಾ ಭೂತಕಾಲದಲ್ಲಿ ಅಡಗಿಹೋಗಿದೆಯೆಂದು ಚಿಂತಾಕ್ರಾಂತರಾಗುವ ಮತ್ತು ಅದಕ್ಕೆ ಪರಿಹಾರ ರೂಪದಲ್ಲಿ ಭಾವೋದ್ರೇಕಕ್ಕೆ ಸೊಪ್ಪುಹಾಕುವ ಜನಕ್ಕೆ ನಮ್ಮಲ್ಲಿ ಕೊರತೆಯಿಲ್ಲ. ಇಂತಹ ವಾತಾವರಣದಲ್ಲಿ ನೂರು ವರ್ಷ ಬಾಳಿಯೂ ಹತಾಶೆಯ ಭಾವನೆಗೆ ಆಸ್ಪದವಿಲ್ಲದಂತೆ ಬೌದ್ಧಿಕವಾಗಿ ಮತ್ತು ಕ್ರಿಯಾತ್ಮಕವಾಗಿ ಸಾರ್ಥಕ ಬದುಕು ನಡೆಸಿರುವ ಮೂರ್ತಿರಾಯರು ಉದಾತ್ತ ಜೀವಿಯೇ ಸರಿ.

ಅವರನ್ನು ಪರಿಚಯಿಸುವ ಅಗತ್ಯವಿಲ್ಲ. ಅವರು ನಿರ್ವಹಿಸಿದ ಜವಾಬ್ದಾರಿಗಳು, ಪಡೆದ ಪ್ರಶಸ್ತಿಗಳು, ಪ್ರಕಟಿಸಿರುವ ಗ್ರಂಥಗಳು, ಮುಂತಾದ ವಿವರಗಳು ಈಗಾಗಲೇ ವಿಪುಲವಾಗಿ ಜನರಿಗೆ ಮುಟ್ಟಿವೆ. ಇಂತಹ ವಿಶೇಷ ವ್ಯಕ್ತಿತ್ವದ ಸ್ನೇಹಪರ ಜೀವಿ 'ದೇವರು' ಎಂಬ ಪುಸ್ತಕ ಬರೆದುಬಿಟ್ಟರಲ್ಲಾ ಎಂದು ಎಷ್ಟೋ ಮಂದಿಗೆ ಮುಜುಗರ ಉಂಟಾಗಿದೆ. ಅಂತಹವರಲ್ಲಿ ಅವರ ಕೆಲವು ವಿದ್ಯಾರ್ಥಿಗಳೂ ಸೇರಿದ್ದಾರೆಂದು ಸ್ವತಃ ಮೂರ್ತಿರಾಯರೇ ಹೇಳುವುದುಂಟು. ಆದರೆ ಅದರಿಂದ ವಾತ್ಸಲ್ಯ- ಅಭಿಮಾನಗಳಿಗೇನೂ ಚ್ಯುತಿಯುಂಟಾಗಿಲ್ಲದಿರುವುದು ಕೂಡ ಅವರ ವ್ಯಕ್ತಿತ್ವದ ಒಂದು ದ್ಯೋತಕ. ಆ ಪುಸ್ತಕವೇ ಅವರ ಅತ್ಯಂತ ಮಹತ್ವದ ಕೃತಿಯೇನೂ ಅಲ್ಲ. ಜೊತೆಗೆ, ದೇವರನ್ನುಳಿದು ಬೇರೇನನ್ನೂ ಪ್ರೊಫೆಸರ್ ಮೂರ್ತಿರಾಯರು ಚಿಂತನೆಗೆ ವಸ್ತುವನ್ನಾಗಿಸಿಕೊಂಡಿಲ್ಲವೆಂದು ಯಾರೂ ಹೇಳಲಾರರು. ಇಪ್ಪತ್ತನೆಯ ಶತಮಾನವನ್ನು ಇಡಿಯಾಗಿ ಕಂಡಿರುವ ಯಾವ ಸಂವೇದನಾಶೀಲ ವ್ಯಕ್ತಿಯೂ ಕೇವಲ ಆ ಒಂದು ವಿಷಯದ ಸುತ್ತ ಮಾತ್ರ ಸುತ್ತುತ್ತಿರಲು ಸಾಧ್ಯವಿಲ್ಲ. ಅವರು ಪ್ರಕಟಿಸಿರುವ ಹತ್ತಾರು ಗ್ರಂಥಗಳ ಪೈಕಿ ಕೆಲವನ್ನು ಹೆಸರಿಸಿದರೆ ಅದು ತನಗೆ ತಾನೇ ಸ್ಪಷ್ಟವಾಗುತ್ತದೆ : **ಹಗಲುಗನಸುಗಳು, ಅಲೆಯುವ ಮನ, ಷೇಕ್ಸ್‌ಪಿಯರ್, ಪೂರ್ವಸೂರಿಗಳೊಡನೆ, ಸಾಹಿತ್ಯ ಮತ್ತು ಸತ್ಯ, ಸಂಜೆಗಣ್ಣಿನ ಹಿನ್ನೋಟ, ಅಪರ ವಯಸ್ಕನ ಅಮೆರಿಕಾಯಾತ್ರೆ, ಜನತಾ ಜನಾರ್ದನ, ಆಷಾಢಭೂತಿ, ಸಾಕ್ರೆಟೀಸನ ಕೊನೆಯ ದಿನಗಳು, ಅಮೆರಿಕನ್ ಸಾಹಿತ್ಯ, - ಇಂಡಿಯ - ಇಂದು ಮತ್ತು ನಾಳೆ.** ಸಂಸ್ಕೃತಿಯ ಎಲ್ಲ ಪ್ರಕಾರಗಳಲ್ಲೂ ಸಮಾನ ಆಸಕ್ತಿ ಬೆಳೆಸಿಕೊಂಡು ಸಮೃದ್ಧ ಬಾಳುವೆ ನಡೆಸಿರುವ ಶ್ರೀ ಮೂರ್ತಿರಾಯರು 'ಹೊಸತು' ಪತ್ರಿಕೆಯೊಡನೆ ಒಂದು ಆತ್ಮೀಯ ಸಂವಾದದಲ್ಲಿ ಭಾಗವಹಿಸಿದ್ದಾರೆ. ಅದನ್ನು ಭಾಗಶಃ ಓದುಗರ ಮುಂದಿರಿಸುತ್ತಾ ಪತ್ರಿಕೆಯು ಪ್ರೊ॥ ಮೂರ್ತಿರಾಯರಿಗೆ ಗೌರವ ಅರ್ಪಿಸುತ್ತದೆ ಮತ್ತು ಶುಭಾಶಯ ಕೋರುತ್ತದೆ.

- ಜಿ. ಆರ್.

ಪಡೆಯಿತು, ತ್ವರಿತ ಗತಿಯಲ್ಲಿ ಸಾಗಿತು. ನಮ್ಮಲ್ಲಿ ಪ್ರಶ್ನಿಸುವವರಿಗೆ ಆದ್ಯತೆ ಕಡಿಮೆ. ಉಪನಿಷತ್ತು ಹೇಳಿಕೊಂಡಂತೆ ''ಯಾನ್ಯಸ್ಮಾಕಂ ಸುಚರಿತಾನಿ ತಾನಿ ಸೇವಿತವ್ಯಾನಿ, ನೋ ಇತರಾಣಿ'' (ನಮ್ಮ ಯಾವ ಸಚ್ಚಾರಿತ್ರ್ಯದ ನಡತೆಗಳಿವೆಯೋ ಅವನ್ನು ಅನುಸರಿಸತಕ್ಕದ್ದು, ಬೇರೆಯವನ್ನಲ್ಲ). ಬೇರೆಯ ಒಳ್ಳೆ ನಡತೆಗಳು ಏಕೆ ಬೇಡ? ಇವನ್ನೇ ಅನುಸರಿಸು ಎಂಬ ಕಟ್ಟಪ್ಪಣೆ ಏಕೆ?

ಹೊ : ಇಂಗ್ಲಿಷ್ ಕಲಿಕೆ ಮತ್ತು ಇಂಗ್ಲಿಷ್ ಮಾಧ್ಯಮದ ಬಗ್ಗೆ

ಹೊಸತು : ಧರ್ಮ ಮತ್ತು ಬ್ರಹ್ಮಜ್ಞಾನಗಳಿಗೆ ವೇದವು ಮೂಲ ಆಧಾರವೆಂದು ಹೇಳುತ್ತಾರೆ. ಅದಕ್ಕೆ ನೀವೇನನ್ನುವಿರಿ?

ಮೂರ್ತಿರಾವ್ : ಯಾವುದೂ ಬ್ರಹ್ಮಜ್ಞಾನ ಕೂಡ ಆದರೂ ನಮ್ಮ ಜೀವನಾನುಭವದಿಂದ ಬರುವಂಥದು. ಧರ್ಮ ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳುವ ರೀತಿಯಲ್ಲಿ ವೇದವು ಪ್ರತಿಪಾದಿಸುವುದಿಲ್ಲ. ಪ್ರತಿಯೊಂದು ಸಮಾಜವೂ ಒಂದು ಧರ್ಮವಿರುತ್ತದೆ. ಅದು ಸ್ಥಗಿತವಾಗಿರುವುದಿಲ್ಲ. ಚರಿತ್ರೆಯ ನಂತರದ ಕಾಲವಾಸ್ತವ ಕಲ್ಪನೆಗಳನ್ನು ಬಿಂಬಿಸ ಸಾಹಿತ್ಯಕ್ಕೆ ಬದಲಾಗಬೇಕಾಗುತ್ತದೆ.

ನಮ್ಮ ಒಂದು ಮನೆಯಲ್ಲಿ ಎಳೆಯದಾದ ಬಸ್ತಿಗೆ ಶಿಕ್ಷಣವಂತ ಮಾಡುವಿಕೆಯ ತಗಲೆಯನ್ನು. ಅವನ್ನ ಬದಲಿಸಿ ಕೊಳ್ಳುವರು ಪ್ರತಿಯೊಂದಾಗಿ ಮಾಡಿ ಕೊಡುವುದಾಗಿ ನಿಗದಿಯಾದದ್ದು. ಅದಕ್ಕೆ ಇದು ಶಾಸ್ತ್ರವೆಂದು ಹೇಳುವವರ ಆ ರೀತಿ ನಡೆದುಕೊಳ್ಳಬೇಕಾದ ಕಾರಣ ಏನೆಂದು. ಹೀಗಾದ ಆದರ ಉದ್ದೇಶವೇನು? ಶಾಸ್ತ್ರವಿಧಿಯ ಬಗ್ಗೆ ಹಾಗಾದರೆ ಮಾಡಬೇಕಷ್ಟೆ?

ಹೊ: ಅಂಥದೇ ಪ್ರಸಂಗ ಬುದ್ಧನ ಸಂಬಂಧದಲ್ಲಿ ಬರುತ್ತದೆ. ಯಾವುದೋ ಕ್ರಮವನ್ನು ಧರ್ಮಶಾಸ್ತ್ರಕ್ಕೆ ವಿರೋಧವಾಗಿದೆಯೆಂಬ ಆತಂಕವನ್ನು ಶಿಷ್ಯನೊಬ್ಬ ಪ್ರಕಟಿಸಿದಾಗ ಬುದ್ಧ ಹೇಳಿದನಂತೆ - ಹಾಗಿದ್ದರೆ ಆ ಧರ್ಮಶಾಸ್ತ್ರವನ್ನು ಬದಲಿಸೋಣ, ಎಂದು.

ಮೂ : ವೇದವನ್ನು ಅದರಲ್ಲಿರುವುದಕ್ಕಾಗಿಯೇ ಒಪ್ಪಿಕೊಳ್ಳಬಹುದು. ಹಾಗೇ ಅದಕ್ಕೆ ಬೇಕಾದಷ್ಟು ಬೆಲೆಯಿದೆ.

ಹೊ : ನಮ್ಮ ದೇಶಕ್ಕೆ ಇಂಗ್ಲಿಷಿನವರು ಬಾರದೆಹೋಗಿದ್ದರೆ ಏನಾಗುತ್ತಿತ್ತು?

ಮೂ : ಅವರು ಬಂದದ್ದರಿಂದ ಏನು ಪ್ರಯೋಜನವಾಗಿದೆಯೋ ಅದು ಇಲ್ಲದೇ ಹೋಗುತ್ತಿತ್ತು. ಆದರೆ ನಮ್ಮಲ್ಲಿ ಬದಲಾವಣೆಗಳೇನೂ ನಿಂತುಹೋಗುತ್ತಿರಲಿಲ್ಲ. ಬಹುಶಃ ಇನ್ನು ಸ್ವಲ್ಪ ಜಾಸ್ತಿ ಸಮಯ ತಗುಲುತ್ತಿತ್ತೇನೋ. ಅಷ್ಟೇ. ನಮ್ಮ ಪಕ್ಕದ ಬಂಧುಗಳಂತೆ ಹೀಗೂ ಬೆಳೆಸಿಕೊಳ್ಳುತ್ತಿದ್ದೆವು. ಅದಕ್ಕೆ ಸ್ವಲ್ಪ ಜಾಸ್ತಿ ಸಮಯ ಹಿಡಿಯುತ್ತಿತ್ತು. ಭಕ್ತಿ ಮಾಡುವ ಸ್ವಭಾವ ನಮ್ಮಲ್ಲಿದ್ದರಿದ್ದುದೇನೋ, ಆದರೆ ಅದು ಹೆಚ್ಚು ಪ್ರಾಮುಖ್ಯತೆ ಏನೆನ್ನುತ್ತೀರಿ?

ಮೂ : ಮದುವೆಯಾದ ಹೆಂಡತಿಯನ್ನು ಬಿಟ್ಟು ಬೇರೆಯವಳನ್ನು ಕಟ್ಟಿಕೊಳ್ಳುವಂತಾಗುತ್ತದೆ ನಮ್ಮ ಭಾಷೆಯನ್ನು ಬಿಟ್ಟು ಬೇರೆ ಭಾಷೆಯ ಮೂಲಕ ಕಲಿಯಹೊರಡುವುದು. ನಮ್ಮ ಭಾಷೆಯಲ್ಲಿ ಕಲಿಯುವುದು ಸಹಜ. ನಮ್ಮ ಭಾಷೆ ಶ್ರೀಮಂತವಾಗುವುದು ಹೇಗೆ ಅದನ್ನು ಬಿಟ್ಟುಬಿಟ್ಟರೆ? ಲ್ಯಾಟಿನ್, ಗ್ರೀಕ್‌ಗಳಿಂದ ಇಂಗ್ಲಿಷ್ ಶ್ರೀಮಂತವಾಗಲಿಲ್ಲವೇ. ಹಾಗೆ. ಷೇಕ್ಸ್‌ಪಿಯರ್ ಕಾಲದಲ್ಲೇ ಹನ್ನೆರಡು ಸಾವಿರ ವಿದೇಶಿ ಪದಗಳು ಇಂಗ್ಲಿಷಿನಲ್ಲಿ ಇದ್ದುವಂತೆ. ನಮ್ಮ ಸಂಪತ್ತನ್ನು ಇಂಗ್ಲಿಷಿನವರು ಹೇರಳವಾಗಿ ದೋಚಿಕೊಂಡು ಹೋಗಿದ್ದಾರೆ. ನಾವು ಅವರ ಭಾಷೆಯ ಪದಗಳನ್ನಾದರೂ ದೋಚಿಕೊಳ್ಳೋಣ.

ಹೊ : ಸಂಗೀತದಲ್ಲಿ, ವಿಶೇಷತಃ ಕರ್ನಾಟಕ ಸಂಗೀತದಲ್ಲಿ, ಮತಧರ್ಮದ ಶ್ರದ್ಧೆಗೆ ಒತ್ತುಕೊಡಲಾಗುತ್ತದೆ. ಭಕ್ತಿ, ದೈನ್ಯ, ಸಮರ್ಪಣೆ, ಇವೇ ಭಾವಗಳು. ನೀವು ಸಂಗೀತವನ್ನು ಆಳವಾಗಿ ಅನುಭವಿಸಿರುವವರು. ನಿಮ್ಮ ಭಾವನೆ ಮತ್ತು ಈ

ಭಾವ ಹೇಗೆ ಹೊಂದಿಕೊಳ್ಳುತ್ತವೆ?

ಮೂ : ಸಂಗೀತ ಮತ್ತು ದೈವಭಕ್ತಿಯ ಸಮೀಕರಣ ಆಗಿದೆಯೆಂಬುದು ನಿಜ. ಆದರೆ ಹಾಗಾಗಲೇಬೇಕೆಂದೇನೂ ಇಲ್ಲ. ಅದಿಲ್ಲದೆಯೂ ಸಂಗೀತದ ಆಸ್ವಾದನೆ ಸಾಧ್ಯ. ''ಸಂಗೀತ ಜ್ಞಾನಮು ಅರ್ಥವಿನಾ'' ಎಂಬ ಒಂದು ಲೇಖನವನ್ನು ನಾನು ಬರೆದಿದ್ದೇನೆ. ಸಂಗೀತದಲ್ಲಿ ಪ್ರಾಧಾನ್ಯವಿರುವುದು ಪದದ ಅರ್ಥಕ್ಕಲ್ಲ, ರಾಗದ ಅರ್ಥಕ್ಕೆ. ''ಸೀತಾಪತೇ ನಾ ಪೈ ನೀಕಭಿಮಾನಮು ಲೇದಾ'' (ವಾಸುದೇವಾಚಾರ್ಯರ ಕೃತಿಯಿಂದ) ಎಂಬುದನ್ನು ನೋಡಿ. ಅದಕ್ಕೆ ನಾಲ್ಕಾರು ಅರ್ಥಗಳಿವೆ : ನನ್ನ ಮೇಲೆ ಅಭಿಮಾನವಿಲ್ಲವೇ ಎಂದು ಪ್ರಶ್ನೆ ಕೇಳುವಾಗ ಉತ್ತರ ಅದರಲ್ಲೇ ಇದೆ. ನನಗೆ ಗೊತ್ತು, ನಿನಗೆ ನನ್ನ ಮೇಲೆ ಅಭಿಮಾನವಿದೆಯೆಂದು, ಇತ್ಯಾದಿ. ಅನುಮಾನ, ಭರವಸೆ ಮುಂತಾದ ಭಾವಗಳೆಲ್ಲಾ ಇಲ್ಲಿವೆ. ಸಂಗತಿಗಳನ್ನು ಹಾಡುವಾಗ ಆ ಭಾವಗಳನ್ನು ಸಂಗೀತಗಾರ ಹೊರತರುತ್ತಾನೆ. ರಾಗದ ಆಲಾಪನೆಯಲ್ಲಿ ನಿಜವಾದ ಸಂಗೀತ ಇರುವುದು. ಅದರಲ್ಲಿ ತಲ್ಲೀನನಾದಾಗ ನಾನು ಮತ್ತು ಆ ರಾಗದ ಭಾವ ಬಿಟ್ಟು ಬೇರೇನೂ ಇಲ್ಲವೇನೋ ಎಂಬಷ್ಟು ಗಾಢವಾದ ಪರಿಣಾಮವನ್ನು ಸಂಗೀತ ಉಂಟುಮಾಡಬಲ್ಲದು. ಸಂದೇಹ, ವಿರಕ್ತಿ, ಮುಂತಾದುವನ್ನೆಲ್ಲಾ ಅದು ಮೂಡಿಸಿ ಮನಸ್ಸಿಗೆ ಉಲ್ಲಾಸ ಹಾಗೂ ಹೊಸ ಪ್ರಜ್ಞೆ ನೀಡುತ್ತದೆ.

ಹೊ : ಸಾಹಿತ್ಯದಿಂದ ಎಷ್ಟರಮಟ್ಟಿನ ಮತ್ತು ಯಾವ ರೀತಿಯ ಬದಲಾವಣೆ ನಿರೀಕ್ಷಿಸಬಹುದು ?

ಮೂ : ಕೇವಲ ಸಾಹಿತ್ಯದಿಂದ ಬದಲಾವಣೆ ಆಗುವುದಿಲ್ಲ. ಪ್ರತಿಯೊಬ್ಬನಲ್ಲೂ ಒಳಿತು-ಕೆಡುಕು ಸೇರಿಕೊಂಡಿರುತ್ತವೆ. ಒಳ್ಳೆಯ ಸಾಹಿತ್ಯವು ಜೀವನದಲ್ಲಿ ಕಾಣುವ ಈ ಬಗೆಯ ಗುಣವನ್ನು ವಿಶ್ಲೇಷಿಸಿ ತೋರಿಸುತ್ತದೆ, ಒಳಿತಿನತ್ತ ಪ್ರೇರಣೆ ನೀಡುತ್ತದೆ, ಅದನ್ನು ನಮ್ಮಲ್ಲಿ ವೃದ್ಧಿಸುತ್ತದೆ. ನಮ್ಮ ನಂಬಿಕೆಗಳೇನೇ ಇರಲಿ ಸಾಹಿತ್ಯವು ಉದಾತ್ತ ಸಾಮಗ್ರಿ ನೀಡುತ್ತದೆ. ಯೂರೋಪಿನಲ್ಲಿ ಒಂದು ಕಾಲಕ್ಕೆ ದೇವರನ್ನು ಯಾವ ಸ್ವರೂಪದಲ್ಲಿ ನಂಬಬೇಕೆನ್ನುವುದನ್ನು ಕುರಿತು ಘರ್ಷಣೆ ನಡೆದಾಗ ಒಂದೇ ಒಂದು ದಿನದಲ್ಲಿ 24 ಸಾವಿರ ಜನರನ್ನು ಕೊಲ್ಲಲಾಯಿತು. ಇದೆಂತಹ ಪ್ರಜ್ಞೆ? ಅದನ್ನು ನಿವಾರಿಸುವುದು ಕೂಡ ಸಾಹಿತ್ಯದ ಒಂದು ಕೆಲಸ.

ಹೊ : ಸಾಹಿತ್ಯ ಸೃಷ್ಟಿಸುವವರು ಕೂಡ ದುಷ್ಟತನದಲ್ಲಿ ತೊಡಗುವುದನ್ನು ನಾವು ನೋಡುತ್ತಿದ್ದೇವಲ್ಲಾ!

ಮೂ : ಜೀವನವನ್ನು ಎಷ್ಟು ವಿಧಗಳಲ್ಲಿ ನೋಡಬಹುದೆಂಬುದನ್ನು ಸಾಹಿತ್ಯ ತಿಳಿಸುತ್ತದೆ. ಸಾಹಿತಿಯನ್ನೂ ಹಾಗೆ ಕಾಣಬಹುದೇನೊ! ದೇವರ ಬಗ್ಗೆ ಮಾತನಾಡಿ ಪೂರ್ತಿ ಅದಕ್ಕೆ ವಿರೋಧವಾಗಿ ನಡೆದುಕೊಳ್ಳುತ್ತಾರಲ್ಲ, ಹಾಗೆ.

ಹೊ : ವ್ಯವಹಾರದಲ್ಲಿ ವಿಚಾರವಂತಿಕೆಯನ್ನು ಕುರಿತಂತೆ ಹೇಳುವಾಗ, ವೈಯಕ್ತಿಕವಾಗಿ ಯಾರೋ ಮೂಢನಂಬಿಕೆ ಇರಿಸಿಕೊಂಡಿದ್ದರೆ ನಮಗೇನು ಎನ್ನುವ ಅಭಿಪ್ರಾಯವಿದೆಯಲ್ಲ, ನಿಮ್ಮ ಅನಿಸಿಕೆ ಏನು ?

ಮೂ : ಹೇಳಿದೆನಲ್ಲ, ಅವನು 24 ಸಾವಿರ ಜನರನ್ನು ಕೊಲ್ಲುವುದರಲ್ಲಿ ಭಾಗಿಯಾಗುತ್ತಾನೆ. ಅವನಿಗೆ ವಿಮರ್ಶಾ ಬುದ್ಧಿಯೇ ಇರುವುದಿಲ್ಲ. ಅದಕ್ಕೇ ವಿಚಾರವಂತಿಕೆ ಬೇಕೆನ್ನುವುದು. ಬೆಕ್ಕು ಅಡ್ಡವಾದರೆ ನಮಗೇನೂ ಆಘಾತವಿಲ್ಲ ಎಂಬ ಬುದ್ಧಿ ಬಂದರೆ ಅದನ್ನು ವಿಸ್ತರಿಸಿಕೊಳ್ಳುತ್ತಾ ಹೋಗಲು ಸಾಧ್ಯ. ಒಂದು ಘಟನೆ ನೆನಪಾಗುತ್ತದೆ. ವಾದವೆಂದು ಅದನ್ನು ಹೇಳುತ್ತಿಲ್ಲ. ಒಮ್ಮೆ ನಮ್ಮ ಮರಿ ಎಂಬುವರ ಮನೆಯ ಕಾಂಪೌಂಡಿನಲ್ಲಿ ಏನೋ ಓದುತ್ತಾ ಕುಳಿತಿದ್ದಾಗ ಅಲ್ಲೇ ಓಡಾಡುತ್ತಿದ್ದ ಬೆಕ್ಕು ಸರಕ್ಕನೆ ನನ್ನ ತೊಡೆಯಲ್ಲಿ ಬಂದು ಕುಳಿತಿತು. ಅದರ ತಲೆ ಸವರಿ ಮುದ್ದು ಮಾಡಿದೆ. ಸ್ವಲ್ಪ ಹೊತ್ತಿನ ಮೇಲೆ ಅದು ಸುಮ್ಮನೆ ಹೊರಟುಹೋಯಿತು. ಅದಕ್ಕೆ ನನ್ನ ಮೇಲೆ ಅಷ್ಟು ವಿಶ್ವಾಸ ಬಂತಲ್ಲ!

ಹೊ : ಮೂಢನಂಬಿಕೆಗಳಿಗೆ ಏನೇನೋ ವೈಜ್ಞಾನಿಕ ವಿವರಣೆ ಕಲ್ಪಿಸುತ್ತಾರೆ. ಅದನ್ನು ಬಿಡಿ, ಆದರೆ ಮೂಢ ನಂಬಿಕೆಗಳನ್ನು ತೆಗಳುವಾಗ ನಮ್ಮ ಆಶಯ ಏನು ?

ಮೂ : ಎರಡು ರೀತಿ ಇರಬಹುದು. ಒಂದು, ನಮ್ಮದೇ ಅಹಂಕಾರ, ದೊಡ್ಡಸ್ತಿಕೆ. ನಿಮ್ಮ ಆಚರಣೆ ನಮ್ಮ ನಂಬಿಕೆಗಿಂತ ಕೀಳಾದ್ದು ಎಂಬ ಅಹಮಿಕೆ. ಎರಡನೆಯದಾಗಿ, ಅದು ಸಂಪೂರ್ಣವಾಗಿ ತರ್ಕದ ನೆಲೆಯಿಂದ ಬರುವುದು. ಇದೇಕೆ ಹೀಗೆ ಅತಾರ್ಕಿಕವಾಗಿ ನಡೆದುಕೊಳ್ಳುತ್ತಾರೆ ಎಂಬ ಭಾವನೆ. ಆದರೆ ಅದಕ್ಕೆ ಕೋಪ ಮಾಡಬಾರದು. ನಿಧಾನವಾಗಿ ವಿವರಿಸಿ ಹೇಳಬಹುದು. ಇಲ್ಲದಿದ್ದರೆ ನಮ್ಮ ತರ್ಕಕ್ಕೆ ಬಾಧೆಯುಂಟಾಗುತ್ತದೆ.



ಹೊ : ಸಾಂಸ್ಕೃತಿಕ ಬದಲಾವಣೆ ಎಂಬ ಮಾತು ಆಗಾಗ್ಗೆ ಕೇಳಿಬರುತ್ತದೆ. ಅದರಲ್ಲಿ ನಾವು ನಿಜಕ್ಕೂ ನಿರೀಕ್ಷಿಸುವುದೇನು?

ಮೂ : ಸಂಸ್ಕೃತಿ ಎಂಬುದನ್ನು ಪದಶಃ ಅರ್ಥಮಾಡಿಕೊಂಡರೆ ಎಲ್ಲವನ್ನೂ ಒಳಿತನ್ನಾಗಿಸುವುದು ಎಂದು ಅದರರ್ಥ. ಅಂದರೆ, ಇರುವುದನ್ನು ಮಾರ್ಪಡಿಸುವುದು. ಅದೂ ನಮ್ಮ ಪ್ರಯತ್ನದಿಂದ. ಅದು ಬಿಟ್ಟು, ಸಂಸ್ಕೃತಿಯೆಂದರೆ ನಮ್ಮ ಗುಂಪಿನ ಸಾಂಪ್ರದಾಯಿಕ ಆಚರಣೆ ಎಂದು ಹೊರಟರೆ ನಮಗೆ ಅನ್ಯಾಯವಾಗುತ್ತದೆ, ಮತ್ತು ಇತರರ ಪ್ರತಿರೋಧವೂ ಇರುತ್ತದೆ. ಸಂಸ್ಕೃತಿಯ ಈ ಅರ್ಥವನ್ನು ನಾವು ವಿರೋಧಿಸಬೇಕು. ನಾನೊಮ್ಮೆ ಪುಟ್ಟಪ್ಪನವರ (ಕುವೆಂಪು) ಮನೆಗೆ ಹೋಗಿದ್ದೆ. ಬೇಕಾದರೆ ಬ್ರಾಹ್ಮಣ ಅಡಿಗೆಯವನನ್ನು ಕರೆಸುವುದಾಗಿ ಹೇಳಿದರು. ಅದೆಲ್ಲಾ ಬೇಡ, ನಾನು ಸಸ್ಯಾಹಾರಿ, ಅದನ್ನು ಮಾತ್ರ ಕೊಟ್ಟರೆ ಸಾಕು, ಎಂದೆ. ನಾನಿದ್ದ ಮೂರು ದಿನ ಅವರ ಮನೆಯಲ್ಲಿ ಮಾಂಸ ಬೇಯಿಸಲಿಲ್ಲ.

ಹೊ : ನಿಮಗೂ ಕುವೆಂಪು ಅವರಿಗೂ ವಯಸ್ಸಿನ ಅಂತರ ಎಷ್ಟಿತ್ತು ?

ಮೂ : ಮೂರು ವರ್ಷ. ಕಾಲೇಜಿನಲ್ಲಿ ಕೆಲವು ದಿನಗಳ ಮಟ್ಟಿಗೆ ಅವರು ನನ್ನ ವಿದ್ಯಾರ್ಥಿಯಾಗಿದ್ದರು. ಆಮೇಲೆ ನನಗೆ ವರ್ಗವಾಗಿ ಬೇರೆ ಊರಿಗೆ ಹೋದೆ.

ಹೊ : ಪರದೇಶದ ಸಂಸ್ಕೃತಿಗೆ ನಾವು ಮಾರು ಹೋಗಿದ್ದೇವೆ, ಅದು ನಮ್ಮನ್ನು ಹಾಳುಮಾಡುತ್ತಿದೆ, ನಮ್ಮ [illegible] ನಾಶವಾಗುತ್ತಿದೆ. ದೂರದರ್ಶನದ ಮುಖಾಂತರ [illegible] ನಡೆಯುತ್ತಿದೆ. ಇತ್ಯಾದಿ ಮಾತುಗಳಿಗೆ ನಿಮ್ಮ ಪ್ರತಿಕ್ರಿಯೆ ಏನು ?

ಅಮೆರಿಕಾ ನಿಮಗೆ ಚೆನ್ನಾಗಿ ತಿಳಿದಿದೆ. [illegible] ನಮಗೆ ಅಪಾಯವಿದೆಯೇ ? - ಸಾಂಸ್ಕೃತಿಕವಾಗಿ

ಮೂ : ಸಾಹಿತ್ಯ, ಸಂಗೀತ, ಕಲೆ, ಸಂಸ್ಕೃತಿ ಇತ್ಯಾದಿಗಳಲ್ಲಿ ನಾನು [illegible] ಪ್ರಭಾವಗಳನ್ನೂ ಸ್ವಾಗತಿಸುತ್ತೇನೆ. ಹಾಗೆಯೇ ಅಭಿವ್ಯಕ್ತಿ, ವಿಚಾರ, ವಾದ, ಮುಂತಾದವಲ್ಲಿ ನಾವೇ ಎಲ್ಲಾ ವಿಷಯಗಳ ಸರ್ವತೋಮುಖವಾದ ತಿಳುವಳಿಕೆ ಪಡೆದಿದ್ದೇವೆಂದು ಬೀಗಲು ಸಾಧ್ಯವೇ ? ಬೇರೆಯವರ ವಿಚಾರ ಕಟ್ಟಿಕೊಂಡು ನಮಗೇನು ಎನ್ನಲಾಗುತ್ತದೆಯೆ ? ಹೊಸಹೊಸ ಮಾರ್ಗಗಳು ಕಂಡುಬರುವುದು ಇಂತಹ ಸಂಬಂಧಗಳಿಂದ.

ಹೊ : ಅದೆಲ್ಲಾ ಬೌದ್ಧಿಕವಾಗಿ ಆಯಿತು, ವ್ಯವಹಾರದಲ್ಲಿ, ನಮ್ಮ ಯುವಜನಾಂಗ ಕಳಪೆ ದರ್ಜೆಯ ಗೀಳುಗಳನ್ನು ಬೆಳೆಸಿಕೊಳ್ಳುತ್ತಿದ್ದಾರೆಂಬ ಆಕ್ಷೇಪ ಇದೆಯಲ್ಲ, ಸಂಗೀತ, ನೃತ್ಯ, ಊಟ-ತಿಂಡಿ...

ಮೂ : ಮದುವೆಯನ್ನು ಸೇರಿಸಬಹುದು ಅದರಲ್ಲಿ !

ಹೊ : ಸಾಹಿತ್ಯಕ ಅಭಿವ್ಯಕ್ತಿ ಕೂಡ. ಇದರಲ್ಲಿ ಆತಂಕಕ್ಕೆ ಎಡೆಯುಂಟೆ ?

ಮೂ : ಆತಂಕಕ್ಕೆ ಎಡೆ ಇರಬಹುದು, ಆದರೆ ಹೊಸ ನಿರೀಕ್ಷೆಗಳಿಗೂ ಅವಕಾಶವಿದೆ. ಅದು ವ್ಯಕ್ತಿಯ ಪ್ರತಿಕ್ರಿಯೆಯನ್ನು ಅವಲಂಬಿಸುತ್ತದೆ. ನಮ್ಮ ಮನೆಗೆ ನ್ಯಾನ್ಸಿ ಸೊಸೆಯಾಗಿ ಬಂದಾಗ ನನ್ನ ಹೆಂಡತಿ ಅದನ್ನು ಹೇಗೆ ತೆಗೆದುಕೊಳ್ಳಬಹುದೆಂಬ ಅನುಮಾನವಿತ್ತು. ನಾನು ಕೆಲವು ಸೂಚನೆಗಳನ್ನು ನೀಡಿದ್ದೆ ; ಆದರೆ ಎಲ್ಲವನ್ನೂ ಆಕೆಗೇ ಬಿಟ್ಟಿದ್ದೆ. ಸೊಸೆ ಬೇರೆ ದೇಶದವಳು. ಅವಳ ಮನಸ್ಸಿಗೆ ನೋವುಂಟುಮಾಡಬಾರದು ಎಂಬುದನ್ನು ಮಾತ್ರ ಒತ್ತಿಹೇಳಿದ್ದೆ. ನ್ಯಾನ್ಸಿ ಬಂದ ಮಾರನೇ ದಿನ ಅತ್ತೆ-ಸೊಸೆ ಅತ್ಯಂತ ಆತ್ಮೀಯವಾಗಿ ಬೆರೆತು ಜೊತೆಯಾಗಿ ಪೂಜೆ ಮಾಡುತ್ತಾ ಕುಳಿತಿದ್ದರು.

ಹೊ : ಅಮೆರಿಕಾದ ರಾಜಕೀಯ ಪ್ರಭಾವದ ಬಗ್ಗೆ ಏನು ಹೇಳುತ್ತೀರಿ ?

ಮೂ : ಅವರಲ್ಲಿ ವಿಪರೀತ ಜಂಭವಿದೆ, ಅವರಿಗೆ ಅಷ್ಟು ಶಕ್ತಿಯಿದೆ

ಹೊ : ಹೌದು, ಅವರೇ ವಿಶ್ವಸಂಸ್ಥೆ. ಎಲ್ಲಿ, ಯಾವಾಗ ಬೇಕಾದರೂ ಯಾರನ್ನಾದರೂ ಹೊಡೆಯಲು ಅವರಿಗೆ ವಿಶ್ವಸಂಸ್ಥೆಯ ಪರವಾನಗಿ ಇದೆ !

ಮೂ : ಅವರ ಶಕ್ತಿ, ತಂತ್ರಜ್ಞಾನ, ವಿಜ್ಞಾನದ ಮುನ್ನಡೆ, ಇತ್ಯಾದಿಗಳ ಬಗ್ಗೆ ಅವರಿಗೆ ಹೆಮ್ಮೆ ಇದೆ. ಅವರ ಶಕ್ತಿಯನ್ನು ಹೆಚ್ಚಾಗಿ ಬಳಸುತ್ತಿಲ್ಲವೆನ್ನಬಹುದು.

ಹೊ : ಅದೇಕೆ ಹಾಗೆ ಹೇಳುತ್ತೀರಿ. ಅವರು ಬೇಕಾದಷ್ಟು ಕಡೆ ಅದನ್ನು ದುರ್ಬಳಕೆ ಮಾಡಿಕೊಂಡಿಲ್ಲವೆ ?

ಮೂ : [illegible]

ಹೊ : [illegible]

ಮೂ : [illegible]

ಹೊ : [illegible]

ಮೂ : [illegible]

[illegible] ಇಲ್ಲ. [illegible] ಒಮ್ಮೆ ಕಾಲೇಜಿಗೆ ಪಂಚೆ ಉಟ್ಟೇ ಹೋಗಬೇಕಾಗಿ ಬಂತು. ಹುಡುಗರು ಹುಬ್ಬೇರಿಸಿ ನಕ್ಕರು. ಹತ್ತು ನಿಮಿಷ ನಕ್ಕುಬಿಡಿ, ಆಮೇಲೆ ಪಾಠ ಮಾಡುತ್ತೇನೆ ಎಂದೆ. ನಂತರ ಯಾವಾಗಲೂ ಪಂಚೆಯೇ ಆಯಿತು. ಹಿಂದಿನ [illegible] ವ್ಯಾಮೋಹ ಹೋಯಿತು.

ಹೊ : ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ಬಹಳ ಕಲುಷಿತ ವಾತಾವರಣ ಉಂಟಾಗಿದೆ ಎನ್ನುತ್ತಾರೆ. ನೀವೇನೆನ್ನುತ್ತೀರಿ?

ಮೂ : ನನಗೆ ನೇರ ಅನುಭವ ಇಲ್ಲ. ಬಹುಶಃ ಹೆಚ್ಚಿನ [illegible]

ಹೊ : ಹೊಸ ಪೀಳಿಗೆ ಕಾಲೇಜುಗಳಿಗೆ ಬಂದಿದೆ, ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದಾರೆ. ಶಿಕ್ಷಣ ಸೌಲಭ್ಯವನ್ನು ಶತಮಾನಗಳ ಕಾಲ ಹೊಂದಿಲ್ಲದಿದ್ದವರು ಇಂದು ಅದನ್ನು ಪಡೆಯುತ್ತಿದ್ದಾರೆ. ಅದರಿಂದಾಗಿ ಸ್ವಲ್ಪ ಬಿಸಿ ವಾತಾವರಣ ಮೂಡಿದೆ. ಅಲ್ಲಲ್ಲಿ ತಿರುಗು-ಮುರುಗು ಉಂಟಾಗಿದೆ. ನಿಮ್ಮ ಕಾಲದಲ್ಲಿ ಕ್ಯಾಪಿಟೇಶನ್ ಶುಲ್ಕ ಇರಲಿಲ್ಲ.

ಮೂ : ನಮ್ಮ ಕಾಲದಲ್ಲೇ ಮಹತ್ವದ ಬದಲಾವಣೆಗಳನ್ನು ಕಂಡಿದ್ದೇವು. ಕಾಲೇಜಿನಲ್ಲಿ ಜಾತಿ-ಮತಗಳ ಬಂಧವೇ ಇರುತ್ತಿರಲಿಲ್ಲ. ಯೂರೋಪಿಯನ್ನರು ಇಲ್ಲಿಯ ಅನಿವಾರ್ಯ ಬದಲಾವಣೆಗಳನ್ನು ಮನಗಂಡಿದ್ದರು. ರಾಲೋ ಅಂಥವರಿಗೆ ಇದು ಚೆನ್ನಾಗಿ ತಿಳಿದಿತ್ತು. ''ನಾಳೆ ಇಲ್ಲಿಂದ ಹೋಗುವವರು ನಾವು'' ಎಂದು ಒಬ್ಬಿಬ್ಬರು ನೇರವಾಗಿ ಹೇಳುತ್ತಿದ್ದುದೂ ಉಂಟು. ಅಷ್ಟರಮಟ್ಟಿಗೆ ಮುಕ್ತತೆ ಇತ್ತು ಅವರಲ್ಲಿ. ಹೈಸ್ಕೂಲಿನ ಯೂರೋಪಿಯನ್ ಉಪಾಧ್ಯಾಯರೊಬ್ಬರು ನಮ್ಮನ್ನು ಕೆಲವರನ್ನು ಅವರ ಮನೆಗೆ ಊಟಕ್ಕೆ ಕೂಡ ಕರೆಯುತ್ತಿದ್ದರು. ನಾವು [illegible] ಹದಿನೈದು ಜನ ಇದ್ದೆವು. ಅಷ್ಟು ಮಂದಿಯನ್ನು ಊಟಕ್ಕೆ ಕರೆದು ಸಸ್ಯಾಹಾರ ಭೋಜನ ಮಾಡಿಸುತ್ತಿದ್ದುದೂ ಉಂಟು.

ಹೊ : ಇದು ಭಗವದ್ಗೀತೆಯ ಬಗ್ಗೆ. ಟಾಗೋರರು [illegible] ಅನುಭವ ಹೇಳುತ್ತಾ ಇಂಗ್ಲೆಂಡ್ [illegible] ಬಾಂಬುಗಳ ಬಗ್ಗೆ [illegible] ಹೋಗುತ್ತಿದ್ದಂತೆ [illegible] ಅದರಿಂದ [illegible] ಸುರಿಸುವುದು ಸುಗಮ. ಹತ್ತಿರದಲ್ಲಿದ್ದರೆ ಅಷ್ಟು [illegible] ವ್ಯಕ್ತಿ ಸೊಪ್ಪೆಯಾಗಿಬಿಟ್ಟರೆ [illegible] ಗೀತೆಯಲ್ಲಿ ಕೃಷ್ಣನು [illegible] ಹಾಗಿದ್ದರೆ ಯುದ್ಧ ಏಕೆ? ನಮ್ಮವರನ್ನೇ ಕೊಂದು [illegible] ಎಂಬುದು ಅರ್ಜುನನ [illegible]

ನೀಡುತ್ತಾನೆ. ವೈಭವೀಕರಣದಿಂದ ವಸ್ತುಸ್ಥಿತಿಯನ್ನು ಮರೆಮಾಚುತ್ತಾನೆ. ಅಮೂರ್ತತೆಯ ಗುಂಗಿನಲ್ಲಿ ವಾಸ್ತವವು ದೂರವಾಗುತ್ತದೆ. ನಿಮಗೇನನ್ನಿಸುತ್ತದೆ?

ಮೂ : ಸ್ವಲ್ಪಮಟ್ಟಿಗೆ ಅದು ನಿಜವೆನಿಸುತ್ತದೆ. ನಾನು ಗೀತೆಯನ್ನು ಓದಿ ಬಹಳ ದಿನಗಳಾಗಿವೆ. ಈ ದೃಷ್ಟಿಯಿಂದ ಓದಿದರೆ ಚೆನ್ನಾಗಿರುತ್ತದೆಯೇನೋ ನೋಡಬೇಕು. ನೀವು ಹೇಳುವಂತೆ ಗೀತೆಯ ಮೊದಲ ಅಧ್ಯಾಯ ಬೇರೆಲ್ಲ ಅಧ್ಯಾಯಗಳಿಗಿಂತಲೂ ಸೊಗಸಾಗಿದೆ. ಅಲ್ಲಿಯ ಪ್ರಶ್ನೆಗಳಿಗೆ ಮುಂದಿನ ಅಧ್ಯಾಯಗಳಲ್ಲಿ ಉತ್ತರವಿದೆಯೇ ಎಂಬುದನ್ನು ಇನ್ನೊಮ್ಮೆ ಗೀತೆಯನ್ನು ಓದಿ ತಿಳಿದುಕೊಳ್ಳಬೇಕು. ಈಗಲೇ ನಾನು ಏನೂ ಹೇಳಲಾರೆ. ಒಳಿತಾದದ್ದೇನೋ ನಷ್ಟವಾಗಿ ಹೋಗುತ್ತಿದೆ ಎಂಬ ಆತಂಕ ಅಲ್ಲಿದೆ. ಒಳಿತು ಅಂತಿಮವಾಗಿ



ಶ್ರೀ ಎ. ಎಂ. ಸುಬ್ಬರಾಮಯ್ಯ (ಶ್ರೀ ಮೂರ್ತಿರಾವ್‌ರ ಮಗ) ಸಂದರ್ಶಕರು, ಶ್ರೀ ಎ. ಎನ್. ಮೂರ್ತಿರಾವ್

ಗೆಲ್ಲುತ್ತದೆಂಬುದು ನಮ್ಮ ಶ್ರೇಷ್ಠವಾದ ನಂಬಿಕೆ. ಬೇರೆ ಪ್ರಶ್ನೆಗಳು ಪ್ರಮುಖವಲ್ಲ. ಸತ್ತವರಿಗೆ ಪಿಂಡ ಇಡುವವರು ಇಲ್ಲದಿದ್ದರೆ ಏಕೆ ಅಳಬೇಕು? ನನಗೆ ಯಾರೂ ಪಿಂಡ ಇಡಬೇಕಾಗಿಲ್ಲವೆಂದು ನನ್ನ ಮಕ್ಕಳಿಗೆ ಹೇಳಿಬಿಟ್ಟಿದ್ದೇನೆ. ಜೀವನದಲ್ಲಿ ಉನ್ನತಮಟ್ಟ ಕಂಡವನು ಗೀತೆಯನ್ನು ಬರೆದಿದ್ದಾನೆಂದು ನನ್ನ ಭಾವನೆ.

ಹೊ : ಪಾಕಿಸ್ತಾನದ ವಿರುದ್ಧ ಅಣ್ವಸ್ತ್ರ ಪ್ರಯೋಗಿಸಬೇಕೆಂದು ಭಾರತೀಯ ಸಂಸ್ಕೃತಿಯ ಸ್ವಯಂಘೋಷಿತ ಪ್ರತಿಪಾದಕರು ಕೆಲವರು ಹೇಳುತ್ತಿದ್ದಾರೆ. ಅದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

ಮೂ : ಅದೆಂತಹ ಸಂಸ್ಕೃತಿಯೋ ಗೊತ್ತಿಲ್ಲ. ಅದರಿಂದ ಪಾಕಿಸ್ತಾನಿಗಳು ಮಾತ್ರವೇ ತುತ್ತಾಗುವುದಿಲ್ಲ, ಅಷ್ಟೇ ಘಾಸಿ ನಮಗೂ ಉಂಟಾಗುತ್ತದೆ. ಹಿಮಾಲಯದಲ್ಲಿ ಅಣ್ವಸ್ತ್ರ ಪ್ರಯೋಗ ಅಂದರೇನು? ಈ ಗೆರೆಯಿಂದ ಆ ಕಡೆಗೆ ಮಾತ್ರ ಹೋಗು ಎಂದು ಆ ಬಾಂಬಿಗೆ ಹೇಳಲಾಗುತ್ತದೆಯೆ? ಅದು ಬರ್ಬರತೆ. ಅಮೆರಿಕಾದಲ್ಲಿ ಒಮ್ಮೆ ಥಿಯೇಟರಿಗೆ ಹೋಗಿದ್ದೆ. ಅಮೆರಿಕನ್-ಇಂಡಿಯನ್ನರ ನೃತ್ಯ, ಸಂಗೀತ ಎಲ್ಲಾ ಇತ್ತು. ನನ್ನ ಪಕ್ಕದಲ್ಲಿ ಒಬ್ಬ ಮಹಿಳೆ ಕುಳಿತಿದ್ದಳು. ನನಗೆ ಆಕೆಯ ಪರಿಚಯವೇ ಇಲ್ಲ. ನನ್ನ ಬೆನ್ನ ಮೇಲೆ ಕೈಹಾಕಿ ಆಕೆ ಹೇಳಿದಳು: ನಾವು ಅಲ್ಲಿರಬೇಕಿತ್ತು, ಅವರು ಇಲ್ಲಿರಬೇಕಿತ್ತು. ನಾವು ಆ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಬೇಕು ಎಂಬುದು ಆಕೆಯ [illegible] ಎಂತಹ [illegible] ಮಾಡಿಕೊಂಡುಬಿಟ್ಟೆವು [illegible]?

ಹೊ : [illegible] ಎಂತಹ [illegible]ಗಳಿಲ್ಲಿ [illegible]?

ಮೂ : [illegible] ಮಾಡುವವನು ಮೊದಲಿಗೆ ಗಮನಾರ್ಹವಾದ ಗೀತೆಯಲ್ಲಿ ಪ್ರಾಮಾಣಿಕತೆಗೆ ಆದ್ಯತೆ ಕೊಡಬೇಕು. ಇವನು ನ್ಯಾಯವಂತನೆಂಬ ಭಾವನೆ ಎಲ್ಲರಲ್ಲೂ

ಇರುವಂತಾದರೆ ಆಗ ಅವನು ಚಳುವಳಿ ನಡೆಸಬಹುದು. ಅವನಲ್ಲಿ ಕೋಪ ಇರಬಾರದು. ಆಗ ಸಾರ್ವಜನಿಕರ ಹಿತಕ್ಕಾಗಿ ಆಟಂಬಾಂಬ್ ವಿರುದ್ಧ ಬೇಕಾದರೂ ಚಳುವಳಿ ಹೂಡಬಹುದು.

ಹೊ : ನಮಗೇನಾದರೂ ಸಂದೇಶ ಕೊಡುವುದಿದೆಯೇ

ಮೂ : ಇಷ್ಟೇ ಹೇಳಬಹುದು - ನಿಮ್ಮ ಬಗೆಗೇ ಚಿಂತಿಸುವುದನ್ನು ಕಡಿಮೆ ಮಾಡಿ, ನಿಮ್ಮ ಅನಿಸಿಕೆಗಳಿಗೇ ಪ್ರಾಧಾನ್ಯ ನೀಡುವುದನ್ನು ಕಡಿಮೆ ಮಾಡಿ. ''ನನಗೇ ಅವನು ಈ ಮಾತನ್ನಾಡಿದ್ದಿದ್ದರೆ ನನಗೆ ಏನನಿಸುತ್ತಿತ್ತು,'' ಎಂಬ ಯೋಚನೆ ಬಂದರೆ ಸಾಕು.

ಹೊ : ಹಿಂಸೆ, ದುರಾಚಾರ, ಇವೆಲ್ಲವುಗಳ ನಡುವೆ ಕ್ರಮೇಣ ಹೆಚ್ಚುಹೆಚ್ಚು ಜನ ಸಾರ್ವಜನಿಕ ರಂಗದಲ್ಲಿ ಭಾಗವಹಿಸುತ್ತಿದ್ದಾರೆ. ಹಿಂದಿನಂತೆ ಯಾರನ್ನಾದರೂ ಅಪಮಾನಕ್ಕೆ ಗುರಿಮಾಡಿದರೆ ಸುಮ್ಮನೆ ಬಿಡುವುದಿಲ್ಲ, ಅವರು ಪ್ರತಿಭಟಿಸುತ್ತಾರೆ. ನಮ್ಮ ಸಾಂಪ್ರದಾಯಿಕ ನಿಯಮಗಳನ್ನು ಪ್ರಶ್ನಿಸುವ ಜನ ಬಂದಿದ್ದಾರೆ. ಆದ್ದರಿಂದಲೆ ಹೆಚ್ಚು ಒತ್ತಡ ಕಾಣಬರುತ್ತದೆ.

ಮೂ : ಅದು ಸರಿ, ನಮ್ಮ ಪದ್ಧತಿ ಮತ್ತು ನಿಯಮಗಳು ಸಾರ್ವಕಾಲಿಕವಾದುವೇನಲ್ಲ. ಅವನ್ನು ಈಗಿನವರು ಸುಧಾರಿಸಿ ಉತ್ತಮಗೊಳಿಸಬಲ್ಲರು. ಪರಸ್ಪರರಲ್ಲಿ ನಡೆದುಕೊಳ್ಳುವ ರೀತಿ ಈಗ ಮೊದಲಿಗಿಂತಲೂ ಉತ್ತಮವಾಗಿದೆ. ಗಂಡ-ಹೆಂಡತಿ ನಡುವೆ, ಮಕ್ಕಳೊಡನೆ, ಸೇವಕರೊಡನೆ....

ಹೊ : ಹಳ್ಳಿಗಳನ್ನೆಲ್ಲಾ ಹಾಳುಮಾಡಿ ಬಿಟ್ಟಿದ್ದೇವೆಂಬ ಆಪಾದನೆ ಇದೆ; ರಾಜಕೀಯ ಹಿಂಸೆ, ಆಧುನಿಕ ಯಂತ್ರಗಳು, ಇತ್ಯಾದಿಗಳಿಂದ ಮೊದಲಿನ ಶಾಂತಿ ಕದಡಿಹೋಗಿದೆ......

ಮೂ : ಹಿಂದಿನ ಕ್ರೌರ್ಯ ಮರೆತು, ಎಲ್ಲವನ್ನೂ ವೈಭವೀಕರಿಸಿ ಈಗ ಹಾಗೆ ಹೇಳಬಹುದು, ಅಷ್ಟೇ. ಎಷ್ಟೋ ಜನರ ವ್ಯಕ್ತಿತ್ವವನ್ನೇ ಗಣನೆಗೆ ತೆಗೆದುಕೊಂಡಿರಲಿಲ್ಲವಲ್ಲ. ಮೈಸೂರಿನಲ್ಲಿ 1924-25ರಲ್ಲಿ ನಡೆದ ಒಂದು ಘಟನೆ ಈಗಲೂ ಜ್ಞಾಪಕ ಇದೆ. ಒಬ್ಬ ಇಂಗ್ಲಿಷಿನವ ಚಿಕ್ಕ ಗಾಡಿಯಲ್ಲಿ ಕೂತು ಹೋಗುತ್ತಿದ್ದ. ಡಾಗ್-ಕಾರ್ಟ್ ಎನ್ನುತ್ತಿದ್ದರು ಅದನ್ನು. ದಾರಿಯಲ್ಲಿ ಒಬ್ಬ ಗಾಡಿಗೆ ಬಹಳ ಹತ್ತಿರ ಬಂದ. ಇವನು ಅವನಿಗೆ ಚಾರುಕೋಲಿನಲ್ಲಿ ಹೊಡೆದ. ಅವನು ಎಲ್ಲರಂತೆ ಸುಮ್ಮನಿರಲಿಲ್ಲ. ಆ ಬಿಳಿಯವನನ್ನು ಹಿಡಿದು ಹಿಗ್ಗಾ-ಮುಗ್ಗಾ ಚಚ್ಚಿದ. ಕಡೆಗೆ ತನಗೇ ಕೈ ನೋವಾಗಿ ಬಿಟ್ಟುಬಿಟ್ಟ. ಕೈನೋವಾಗುವಷ್ಟು ಹೊಡೆಯಬೇಕಾಗಿರಲಿಲ್ಲ ಎಂದಷ್ಟೇ ನಾವು ಹೇಳಬಹುದಾದ್ದು! ಮಂಜೇರಿ ರಾಮಯ್ಯ ಎಂದು ಆತನ ಹೆಸರು, ಇನ್ನೂ ಜ್ಞಾಪಕವಿದೆ.

ಹೊ : ಈಗ ಜನ ಪ್ರತಿಕ್ರಿಯಿಸುತ್ತಿದ್ದಾರೆ. ಆದ್ದರಿಂದ ಕೆಲವರಿಗೆ ಮುಜುಗರ ಉಂಟಾಗಿದೆ ಎನ್ನಬಹುದು. - ಕಡೆಯದಾಗಿ ಎಲ್ಲರೂ ಕೇಳಿರುವ ಒಂದು ಪ್ರಶ್ನೆ : ನಿಮ್ಮ ದೀರ್ಘಾಯುಷ್ಯಕ್ಕೆ ಏನಾದರೂ ಗುಟ್ಟಿದೆಯೆ?

ಮೂ : ಏನೂ ಇರಲಾರದು. ನಾನು ಮಾನಸಿಕವಾಗಿ ಶಾಂತಚಿತ್ತನಾಗಿರುವುದನ್ನು ರೂಢಿ ಮಾಡಿಕೊಂಡಿದ್ದೇನೆ. ಅನಗತ್ಯವಾಗಿ ಆಹಾರ ಸೇವಿಸುವುದಿಲ್ಲ, ತಪ್ಪದೆ ಕಾಲ್ನಡಿಗೆ ಹೋಗುತ್ತೇನೆ. ಮನಸ್ಸಿಗೆ ಸುಮ್ಮನೆ ಭಾರ ಮಾಡಿಕೊಳ್ಳುವುದಿಲ್ಲ, ಅದೇ ಮುಖ್ಯ.

ಹೊ: ಸಾಕಷ್ಟು ಸಮಯ ತೆಗೆದುಕೊಂಡೆ. ನಮಸ್ಕಾರ.

○○

ಹಿಂಸೆ - ಒಂದು ಟಿಪ್ಪಣಿ

ಏಪ್ರಿಲ್ 20, 1999 ಅಮೆರಿಕದ ಬೆಳಗಿನ ದೈನಿಕಗಳಲ್ಲಿ ಹೊತ್ತು ತಂದ ಸುದ್ದಿ 21ನೇ ಶತಮಾನದಲ್ಲಿ ನಾವೆತ್ತ ಸಾಗಬಹುದು ಎಂಬ ದಾರಿ ತೋರಿಸುವಂಥದು. ಕೊಲೆರಾಡೋ ಪ್ರಾಂತದ, ಸುಮಾರು 35,000 ಜನವಸತಿಯುಳ್ಳ ಲಿಟಲ್‌ಟೌನ್ ಎಂಬ ಪಟ್ಟಣದ ಕೊಲಂಬೈನ್ ಎಂಬ ಮಾಧ್ಯಮಿಕ ಶಾಲೆಯ ಬೆಳಗಿನ 11.30ರ ಸಮಯ. ಶಾಲೆ ನಡೆಯುತ್ತಿದ್ದಾಗ, ಶಾಲೆಯ ಗ್ರಂಥಾಲಯದಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ನೆರೆದಿದ್ದಾಗ ಒಳಗೆ ಬಂದ ಒಂದು ವಿದ್ಯಾರ್ಥಿ ತಂಡದ ಇಬ್ಬರು ಸಶಸ್ತ್ರ ವಿದ್ಯಾರ್ಥಿಗಳು ಮನಬಂದಂತೆ ಗುಂಡು ಹಾರಿಸಿ ಸ್ಥಳದಲ್ಲೇ ಸತ್ತ ವಿದ್ಯಾರ್ಥಿಗಳು 15 ಮಂದಿ. ಗುಂಡಿನೇಟಿಗೀಡಾಗಿ ಆಸ್ಪತ್ರೆ ಸೇರಿ ಬದುಕಿ ಉಳಿಯಲು ಹೋರಾಟ ನಡೆಸಬೇಕಾಗಿ ಬಂದವರು 13 ಮಂದಿ. ಆರಂಭದ ವರದಿಗಳಂತೆ ಈ ಸಂಖ್ಯೆ ಸತ್ತವರು 23, ಗಾಯಗೊಂಡವರು 20 ಎಂದಿದ್ದರೂ, ಮುಂದೆ ದೊರಕಿದ ಅಧಿಕೃತ ಸಂಖ್ಯೆ ಸತ್ತವರು 15, ಗಾಯಗೊಂಡವರು 13 ಎಂದು. ಸುಮಾರು 24 ತಾಸು ಸತ್ತ ವಿದ್ಯಾರ್ಥಿಗಳ ಶವಗಳನ್ನು ಹೊರತೆಗೆಯಲು ಸಾಧ್ಯವಾಗದೆ ಇರುವ ಕಾರಣ ಒಳಗೆ ಇರಬಹುದಾಗಿದ್ದ ಬಾಂಬುಗಳ ಸಂಖ್ಯೆ ಪೋಲೀಸಿನವರ ಅಂದಾಜಿನಂತೆ 13. ಯಾರು ಈ ಮಾರಣ ಹೋಮಕ್ಕೆ ಕಾರಣ ? ತಮ್ಮನ್ನು ತಾವೇ 'ಟ್ರೆಂಚ್‌ಕೋಟ್ ಮಾಫಿಯಾ' ಎಂದು ಕರೆದುಕೊಳ್ಳುತ್ತಿದ್ದ ವಿದ್ಯಾರ್ಥಿಗಳ ಮಾಫಿಯಾ ತಂಡ. ಈ ಅನಾಹುತಕ್ಕೆ ಕಾರಣರಾದವರೆಂದು ಶಂಕಿಸಲಾದ ಇಬ್ಬರು ಈ ತಂಡದ ವಿದ್ಯಾರ್ಥಿಗಳು ಸತ್ತವರಲ್ಲೇ ಇದ್ದ ಕಾರಣ, ಹತ್ಯೆ ಆತ್ಮಹತ್ಯೆ ಎರಡೂ ಈ ಮಾಫಿಯಾ ತಂಡದ ಉದ್ದೇಶವಾಗಿತ್ತೇ ಎಂಬುದು ಮುಂದಿನ ತನಿಖೆಗಳಿಂದ ಸ್ಪಷ್ಟವಾಗಬೇಕಷ್ಟೇ.

ಘಟನೆ ನಡೆದ ನಂತರದ ಟಿವಿ ವರದಿಗಳಿಂದ, ಈ ಕುರಿತು ನಡೆಸಿದ ಸಂದರ್ಶನ ಚರ್ಚೆಗಳಿಂದ ವ್ಯಕ್ತವಾದ ಒಂದು ವಿಚಾರ ಸ್ಪಷ್ಟೀಕರಿಸುವುದು ನಾವು ಹಿಂಸೆಯನ್ನು ಒಂದು ಆದರ್ಶವಾಗಿ ನೆಚ್ಚಿಕೊಳ್ಳುತ್ತಿರುವ ಒಂದು ಯುವ ಪೀಳಿಗೆಯನ್ನು ಸೃಷ್ಟಿಸುತ್ತಿದ್ದೇವೆ ಎಂಬುದನ್ನೇ.

ಈ ಘಟನೆಗೆ ಕಾರಣಗಳನ್ನು ಹುಡುಕುತ್ತಿರುವಾಗ, ಈ ತಂಡ ಹಿಟ್ಲರನ 110ನೇ ಹುಟ್ಟುಹಬ್ಬದ ದಿನವನ್ನು ಈ ಹತ್ಯಾಕಾಂಡಕ್ಕೆ ಆರಿಸಿಕೊಂಡುದು ಆಕಸ್ಮಿಕವೇನಲ್ಲ ಎಂಬ ವಿಚಾರವನ್ನು ಪ್ರಕಟಿಸಲಾಗಿದೆ. ತಂಡದ ಉದ್ದೇಶಿತ ಗುರಿ ಅಲ್ಪಸಂಖ್ಯಾತರಾದ ಹಿಸ್ಪಾನಿಕ್ ಎಂದರೆ ಸ್ಪಾನಿಶ್ ಮೂಲದವರು, ಫುಟ್‌ಬಾಲ್ ಆಟಗಾರರು ಮತ್ತು ಕರಿಯರು ಎಂದೂ ಸೂಚಿಸಲಾಗಿದೆ. ಘಟನೆಯ ಕುರಿತು ತೀವ್ರ ಸಂತಾಪ ವ್ಯಕ್ತಪಡಿಸಿದ ಅಧ್ಯಕ್ಷ ಬಿಲ್ ಕ್ಲಿಂಟನ್ ಇಂತಹ ಘಟನೆಗಳು ಜರಗುತ್ತಿರುವುದು ನಮ್ಮ ಯುವ ಪೀಳಿಗೆಯನ್ನು ಸರಿಯಾದ ದಾರಿಯಲ್ಲಿ ಕೊಂಡೊಯ್ಯಲು ನಾವು ಮಾಡುತ್ತಿರುವ ಪ್ರಯತ್ನಗಳು ಸರಿದಾರಿಯದಲ್ಲವೇನೋ ಎಂದು ಆತ್ಮ ವಿಮರ್ಶೆ ಮಾಡುವುದು ಅಗತ್ಯ ಎಂದಿದ್ದಾರೆ.

ಈ ಘಟನೆಯು ಹಿನ್ನೆಲೆಯಲ್ಲಿ ಕಳೆದ ಕೆಲವು ವಾರಗಳಿಂದ ಯುಗೊಸ್ಲಾವಿಯಾದ ಕೊಸವೋ ವಿಭಾಗದಲ್ಲಿ ನಡೆಯುತ್ತಿದೆಯೆಂದು ಹೇಳಲಾಗಿರುವ ಸರ್ಬಿಯನ್ ಮಿಲಿಟರಿ ಪಡೆಗಳ ಅತ್ಯಾಚಾರ, ಅದರಿಂದ ನಿರಾಶ್ರಿತರಾಗಿ ಪಕ್ಕದ ಅಲ್ಬೇನಿಯಾದ ಕಡೆ, ಇತರ ಪ್ರಾಂತಗಳ ಕಡೆ ಸಾಗುತ್ತಿರುವ ಲಕ್ಷಗಟ್ಟಲೆ ನಿರಾಶ್ರಿತರ ಬವಣೆ, ಈ ಬವಣೆಯನ್ನು ತಡೆಯಲೆಂದು ಮಾನವೀಯ ದೃಷ್ಟಿಯಿಂದ ಎಂದು ಹೇಳಿಕೊಂಡು ನಾಟೋ (NATO) ವಲಯದ ಯುದ್ಧ ವಿಮಾನಗಳು ದಿನ ರಾತ್ರಿ ಯುಗೊಸ್ಲಾವಿಯಾದ ಮೇಲೆ ನಡೆಸುತ್ತಲೇ ಇರುವ ಧಾಳಿ, ಅದರಿಂದ ಆಗುತ್ತಿರುವ ಹಾನಿ ಇವೆಲ್ಲವನ್ನು ಗಮನಿಸುವಾಗ, ಹಿಂಸೆಯೊಂದೇ ನಮ್ಮೆಲ್ಲ ಸಮಸ್ಯೆಗಳಿಗೆ ಪರಿಹಾರ ಸೂತ್ರವೇ, ಹಿಂಸೆಯನ್ನೇ ಒಂದು ಆದರ್ಶವಾಗಿ, ಇತಿಹಾಸದ ಬಳುವಳಿಯೆಂದು ನಮ್ಮ ಯುವ ಪೀಳಿಗೆಗಳಿಗೆ ದಾಟಿಸುತ್ತಿದ್ದೇವೆಯೇ ಎಂಬ ಯೋಚನೆ ಕಾಡುತ್ತಿದೆ. ಕೊಲೆರಾಡೋ ಶಾಲೆಯ 'ಟ್ರೆಂಚ್‌ಕೋಟ್ ಮಾಫಿಯಾ' ತಂಡದ ವಿದ್ಯಾರ್ಥಿಗಳೇ ನಡೆಸಿದ ಹಿಂಸೆಗೂ, ಯುಗೊಸ್ಲಾವಿಯಾದ ಕೊಸವೋ ವಿಭಾಗದಲ್ಲಿ ಸೆರ್ಬಿಯನ್ ಪಡೆಗಳು ನಡೆಸಿವೆಯೆನ್ನಲಾದ ಹಿಂಸೆಗೂ, ಇದರ ಪರಿಣಾಮ ಸ್ವರೂಪಿ ಕೊಸವೋ ವಿಭಾಗದ ಅಲ್ಬೇನಿಯನ್ ಮೂಲದ ನಿವಾಸಿಗಳ ಉಚ್ಚಾಟನೆಯಲ್ಲಿ ಅಡಕವಾಗಿರುವ ಹಿಂಸೆಗೂ, ಇದನ್ನು ತಡೆಯಲೆಂದು ಸಂಯುಕ್ತ ರಾಷ್ಟ್ರ ಸಂಘದ ಅನುಮತಿಯಂತೆ ಯುಗೊಸ್ಲಾವಿಯಾದ ಮೇಲೆ ನಡೆಸಲಾಗುತ್ತಿರುವ ವಿಮಾನ ಧಾಳಿಯ ಹಿಂಸೆಗೂ ಹೇಗೆ ಸಂಬಂಧವನ್ನು ಕಲ್ಪಿಸಬೇಕು ? ಹಿಂಸೆಯಿಂದಲೇ ಹಿಂಸೆಯನ್ನು ತಡೆಯಬೇಕು ಎಂಬ ನಮ್ಮ ನಿಲುವಿನಲ್ಲಿ, ಅಹಂಕಾರ, ಸ್ವಾರ್ಥ, ಮಾನವೀಯತೆನಿಸುವ ಆದರ್ಶ ಎಲ್ಲಿ ಬೆರೆಯುವಾಗ ಸತ್ಯ ಎಲ್ಲಿದೆಯೆಂದು ಹುಡುಕುವುದು ಹೇಗೆ ಸಾಧ್ಯ, ಹುಡುಕುವವರು ಯಾರು ಎಂಬೆಲ್ಲ ಪ್ರಶ್ನೆಗಳು ಸಹಜವಾಗಿಯೇ ಮುಂದೆ ಬರುತ್ತಿವೆ.

ಕೊಲಂಬೈನ್ ಶಾಲೆಯ ಹತ್ಯಾಕಾಂಡ ಅಮೆರಿಕ ಭೂಖಂಡದಾದ್ಯಂತ ಪ್ರತಿಧ್ವನಿಸಿದೆ. ಈ ಸಾಮಾಜಿಕ ಅನಾಹುತಕ್ಕೆ ಎಲ್ಲರೂ ಕಾರಣಗಳನ್ನು ಹುಡುಕುವವರೇ. ಗುಂಡಿನೇಟು ಆರಂಭವಾದಾಗ ವಿದ್ಯಾರ್ಥಿಗಳನ್ನು ರಕ್ಷಿಸಲು ಮುಂದಾಗಿ ಜೀವತೆತ್ತ ಅಧ್ಯಾಪಕರ ಮಾನವೀಯ ಆದರ್ಶವೂ ಇಲ್ಲಿ ಸೇರಿಕೊಂಡಿದೆ. ಶಾಲೆಯ ವಿದ್ಯಾರ್ಥಿಗಳಿಗೆ ಸಂಬಂಧಿಸಿದವರಲ್ಲವಾದರೂ ನೊಂದವರ ನೆರವಿಗೆ ಬಂದ ಉದಾಹರಣೆಗಳೂ ಇವೆ. ಇದರ [illegible] ಘಟನೆಗಳ ಕಾರ್ಯಕಾರಣ ಚಿತ್ರಣ [illegible] ವರ್ತನೆಯಲ್ಲಿ ಮುಕ್ತ[illegible] ಹೆಚ್ಚು. ಇದಕ್ಕೆ ಪರಿಹಾರವನ್ನು ಹುಡುಕುವುದು ಹೆಚ್ಚಿನ [illegible] ಸಂಶೋಧನೆಗಳಲ್ಲಿ, ಹೆಚ್ಚು [illegible] ಕ್ಯಾಮೆರಾಗಳು. ಲೋಹಶೋಧಕ ಯಂತ್ರಗಳು. ಹೆಚ್ಚು ಶಸ್ತ್ರಾಸ್ತ್ರಗಳನ್ನು ಗುರುತಿಸುವ ಎಕ್ಸ್‌ರೇ ಉಪಕರಣಗಳಲ್ಲಿ, ಹೆಚ್ಚು ಸಶಸ್ತ್ರ ಕಾವಲು ಪಡೆಯಲ್ಲಿ.

ಟಿ.ವಿ. ಸಂದರ್ಶನದಲ್ಲಿ ಮಾತನಾಡಿದವರು ಹಲವು ಕಾರಣಗಳನ್ನು ಹುಡುಕುತ್ತಾರೆ. ಟಿ.ವಿ., ಕಂಪ್ಯೂಟರ್ ಆಟಗಳು, ಹಿಂಸೆಯನ್ನು, ಹಾದರವನ್ನು ಪ್ರಚೋದಿಸುವ ಸಂಗೀತ, ಜೊತೆಗೆ ಮನೆಗೆಲಸ [illegible] ಇಂದಿನ ಯುವ ಪೀಳಿಗೆಯನ್ನು ದಾರಿ ತಪ್ಪಿಸುತ್ತಿವೆಯೋ ಎಂಬ ಸಂದೇಹ ಎಲ್ಲರಲ್ಲಿದೆ. ಆದರೆ ಇದರಿಂದ ಬಿಡುಗಡೆ ಹೇಗೆಂದು ಯಾರೂ ಯೋಚಿಸುವುದಿಲ್ಲ. ನಮ್ಮ ಮನರಂಜನೆಯ ಸಾಧನಗಳು ಹಿಂಸೆಯ ಸಂಸ್ಕೃತಿಯನ್ನು ಹುಟ್ಟು ಹಾಕುತ್ತಿದೆ ಎನ್ನುವವರೂ ಅಸಹ್ಯ ಹುಟ್ಟಿಸುವ ಕಂಪ್ಯೂಟರ್ ಆಟಗಳು, ಸಾವು, ಮಾದಕ ವಸ್ತುಗಳ ಕುರಿತ ಪಾಪ್ ಸಂಗೀತ, ಕ್ರೌರ್ಯ ಪ್ರಧಾನವಾದ ಮಾನಸಿಕ ತುಮುಲ ಹಾಗೂ ಕೊಲೆಗಳಿಗೆ ಸಂಬಂಧಿಸಿದ ಚಲಚ್ಚಿತ್ರಗಳು ಇವೆಲ್ಲ ಹುಟ್ಟುಹಾಕಿರುವ ಹಿಂಸೆಯ ಸಂಸ್ಕೃತಿ ಬೆಳೆಯುತ್ತಿರುವುದು ನಿಜವಾದರೂ, ಮನರಂಜನೆಯ ಉದ್ಯಮಕ್ಕೆ ಸಂಬಂಧಿಸಿದವರೆಲ್ಲ ಈ ವಾದವನ್ನು ನಿರಾಕರಿಸುತ್ತಾರೆ. ಕಾರಣ ಅವರ ಸ್ವಾರ್ಥವೆನ್ನುವುದು ಸುಸ್ಪಷ್ಟ. ಅಮೆರಿಕದ ಅಧ್ಯಕ್ಷರ ಪತ್ನಿ ಹಿಲಾರಿ ಕ್ಲಿಂಟನ್ ಅವರೇ ''ನಮ್ಮ ಮಾಧ್ಯಮ ಪ್ರಪಂಚ ನಮ್ಮ ಮಕ್ಕಳ ಮೇಲೆ ಮಾಡುತ್ತಿರುವ ದುಷ್ಪರಿಣಾಮಗಳನ್ನೂ, ಇದರಿಂದ ಕೆಲವರ ಮೇಲಾದರೂ ಆಗುತ್ತಿರುವ ಹಿಂಸಾತ್ಮಕ ಪ್ರಚೋದನೆಯನ್ನೂ ನೋಡಿಕೊಂಡು ನಾವು ಸುಮ್ಮಗಿರಲಾಗುವುದಿಲ್ಲ'' ಎಂದಿದ್ದಾರೆ ಒಂದು ಭಾಷಣದಲ್ಲಿ. ಶಸ್ತ್ರಗಳು ಎಲ್ಲರ ಕೈ ಸೇರದಂತೆ ನಿಯಂತ್ರಿಸಬೇಕು ಎಂಬ ಒಂದು ವಾದವಿದೆ ಯಾದರೂ, ಶಸ್ತ್ರಗಳನ್ನು ಪಡೆಯುವುದು ಸಂವಿಧಾನ ಕೊಡಮಾಡಿದ ಹಕ್ಕು ಎನ್ನುವವರೂ ಬಹಳಷ್ಟು ಮಂದಿ– ಭಾರತದಲ್ಲಿ ಸ್ವಾತಂತ್ರ್ಯ ಸ್ವಚ್ಛಂದ ವರ್ತನೆಗೂ ಅನುಮತಿ ಕೊಡುತ್ತಿದೆ ಎಂದು ತಿಳಿದಿರುವ ಬಹಳಷ್ಟು ಮಂದಿಯಂತೆ.

ಕೊಲಂಬೈನ್ ಶಾಲೆಯ ಹತ್ಯಾಕಾಂಡದ ಘಟನೆ ನಡೆದ ಎರಡೇ ದಿನಗಳಲ್ಲಿ, ಬಾಂಗ್ಲಾ ದೇಶೀಯರೇ ಹೆಚ್ಚಾಗಿ ಇರುವ ಈಸ್ಟ್ ಎಂಡ್ ವಿಭಾಗದಲ್ಲಿ ಒಂದು ಕಾರಿನಲ್ಲಿರಿಸಿದ್ದ ಬಾಂಬು ಸ್ಫೋಟಗೊಂಡು ಹಲವಾರು ಮಂದಿ ಗಾಯಗೊಂಡಿದ್ದಾರೆ. ಇದು ಜನಾಂಗ ದ್ವೇಷದ ಹಿಂಸೆಯೆಂದೂ ಪ್ರಾಥಮಿಕ ವರದಿಗಳು ತಿಳಿಸಿವೆ. ಇಂಥ ಹಿಂಸೆ ಇಂಗ್ಲೆಂಡಿನಲ್ಲಿ ನಡೆಯುತ್ತಿರುವುದು ಇದೇ ಮೊದಲಲ್ಲ. ಎರಡನೆಯ ಮಹಾಯುದ್ಧಕ್ಕೆ ಕಾರಣನಾದ ಹಿಟ್ಲರ್ ಸತ್ತು 55 ವರ್ಷಗಳಾದರೂ, ಹಿಟ್ಲರನೇ ಒಂದು ರೀತಿಯ [illegible]ವಾಗಿ [illegible] ಮೆರೆಯುತ್ತಿರುವುದೂ, ಅವನ ಅನುಯಾಯಿಗಳಾಗಿ [illegible] ಆದರ್ಶವಾದ [illegible] ಬೆಳೆಯುತ್ತಿರುವುದೂ ಇದಕ್ಕೆ [illegible]

ವ್ಯಾಸರಾಯ ಬಲ್ಲಾಳ

[illegible] ಸಹಕರಿಸುತ್ತಿರುವುದೂ, [illegible] [illegible] ಸಾಗಬಹುದಾದ ರೀತಿಯನ್ನೇ [illegible] ಯಾರೂ ಗಂಭೀರವಾಗಿ [illegible]

ಈ ಸಂದರ್ಭದಲ್ಲಿ ಕೊಲಂಬೈನ್ ಶಾಲೆಯ ಹತ್ಯಾಕಾಂಡ ಟಿವಿ ವರದಿಯನ್ನು ವೀಕ್ಷಿಸುತ್ತಿದ್ದ ಈ ಲೇಖಕನಿಗೆ, ಟಿವಿ ಸಂದರ್ಶಕರು ಸಂಪರ್ಕಿಸಿದ ಒಬ್ಬ [illegible] ಮಾತು ಎಲ್ಲ ಕಡೆಗಳಲ್ಲಿ [illegible] ಎಂದು ತೋರುತ್ತಿದೆ. ಅವರ ಮಾತಿನ ಸಾರಾಂಶ ಇಷ್ಟೆ : "ನಾವು ಎಲ್ಲ ಸಮಸ್ಯೆಗಳಿಗೂ ಪರಿಹಾರ ಹುಡುಕುತ್ತಿರುವುದು ಹಿಂಸೆಯಲ್ಲಿ. ನಮ್ಮ ಆದರ್ಶದ ಪ್ರತೀಕ ಹಿಂಸೆಯೇ. ನಾವು ಹಿಂಸೆಯನ್ನು ಆರಾಧಿಸುತ್ತೇವೆ. ನಮ್ಮ ಆದರ್ಶದ ಮಾದರಿಗಳು (Role models) ಯುದ್ಧ, ಶಕ್ತಿ ಪ್ರದರ್ಶನಗಳನ್ನು ಸರಿಯಾದ ದಾರಿಯೆಂದು ತೋರಿಸುವವರೇ. ಮಾರ್ಟಿನ್ ಲೂಥರ್ ಕಿಂಗ್, ಗಾಂಧಿ ನಮ್ಮ ಆದರ್ಶಗಳಲ್ಲ ಎಂದು".

ಬಾಲ್ಕನ್ ಪ್ರದೇಶದ ಕೊಸೊವೋ ಪ್ರದೇಶದಲ್ಲಿ ನಡೆದಿದೆ ಎನ್ನಲಾದ ಅಲ್ಪ ಸಂಖ್ಯಾತರ ಉಚ್ಚಾಟನೆ (ethnic cleansing) ಇದರಿಂದ ಲಕ್ಷಗಟ್ಟಲೆ ಜನ ನಿರಾಶ್ರಿತರಾಗಿ ವಲಸೆ ಹೋಗುತ್ತಿರುವ ವರದಿಗಳನ್ನು ನೋಡಿದಾಗ ನನಗೆ ನೆನಪಾದುದು ಬಾಂಗ್ಲಾ ದೇಶದ ಹುಟ್ಟಿಗೆ ಕಾರಣವಾದ ಪೂರ್ವ ಬಂಗಾಲದಿಂದ ಭಾರತಕ್ಕೆ ನಿರಾಶ್ರಿತರಾಗಿ ವಲಸೆ ಬಂದ ಮಿಲಿಯನ್‌ಗಟ್ಟಲೆ ಬಾಂಗ್ಲಾದೇಶೀಯರ ಸಮಸ್ಯೆ- 70ರ ದಶಕದ ಆದಿಯಲ್ಲಿ. ಅದೂ ಮಾನವೀಯ ಸಮಸ್ಯೆಯೇ ಆಗಿತ್ತು. ಆದರೆ ವಿಶ್ವದ ಹೆಚ್ಚಿನ ಪಶ್ಚಿಮದ ಪ್ರಬುದ್ಧ ರಾಷ್ಟ್ರಗಳಿಗೆ ಅದು ಮಾನವೀಯ ಸಮಸ್ಯೆಯೆಂದು ತೋರಲಿಲ್ಲ.- ರಾಜಕೀಯ ಸ್ವಾರ್ಥದ ಕಾರಣಗಳಿಂದ. ನಮ್ಮ ಕಾಶ್ಮೀರದಲ್ಲೇ ಲಕ್ಷಗಟ್ಟಲೆ 'ಪಂಡಿತ' ಜನರು ಉಗ್ರಗಾಮಿಗಳ ಹಿಂಸೆಯಿಂದ ನಿರ್ವಾಸಿತರಾಗಿ ಬಂದಾಗ, ಭಾರತದಲ್ಲೇ ಅದೂ ಒಂದು ಮಾನವೀಯ ಸಮಸ್ಯೆಯೆಂದು ಎಷ್ಟು ಜನ ಅದರ ಕುರಿತು ಚಿಂತಿಸಿದ್ದಾರೆಂದು ಹೇಳುವುದು ಕಷ್ಟ. ಇದು ಸಾಮಾನ್ಯರನ್ನಷ್ಟೇ ತಟ್ಟಲಿಲ್ಲವೆಂದಲ್ಲ, ಭಾರತದ ಕುರಿತೇ ಚಿಂತಿಸಬೇಕಾದ ರಾಜಕೀಯ ಪಕ್ಷಗಳಿಗೂ ಇದು ಒಂದು ರಾಜಕೀಯ ಪ್ರಶ್ನೆಯಾಗಿಯೇ ತೋರಲಿದೆ ಹೊರತು ಮಾನವೀಯ ಪ್ರಶ್ನೆಯಾಗಿ ಕಾಣಲಿಲ್ಲ.- ಇದಕ್ಕೂ ಕಾರಣ ರಾಜಕೀಯ ಸ್ವಾರ್ಥ. ಅಷ್ಟೇ ಏಕೆ! ಬಿಹಾರದಲ್ಲಿ ನಡೆಯುತ್ತಿರುವ ರಣವೀರ ಸೇನೆಯಂತಹ ಶಕ್ತಿಯನ್ನೇ ಸಮಸ್ಯೆಗಳಿಗೆ ಪರಿಹಾರವೆಂದು ತಿಳಿಯುತ್ತಿರುವ ಸಂಘಟನೆಗಳ ಹತ್ಯಾಕಾಂಡಗಳಾಗಲೀ, ದೇಶದಲ್ಲಿ [illegible] [illegible] [illegible] ತೋರುವುದಿಲ್ಲ.

[illegible] ಕೊಲಂಬೈನ್ ಶಾಲೆ, [illegible] [illegible] ಕಾಶ್ಮೀರ, ಬಾಂಗ್ಲಾ ದೇಶ, [illegible] ಇವು ಇಂದು ನಮ್ಮ ಮುಂದೆ [illegible] ಸಮಸ್ಯೆಗಳಿಗೆ [illegible] ಕೇಳುವವರಿಗೆ, ಮನುಷ್ಯನ ಮೂಲಭೂತ ಸ್ವಭಾವದಲ್ಲೇ ಅಡಗಿರುವ ಹಿಂಸೆ, ಅದು ಪ್ರಚೋದಿಸುವ ಕ್ರೌರ್ಯ, ವಿಶ್ವದಾದ್ಯಂತ ಹಿಂಸೆಯೊಂದೇ ಎಲ್ಲ ಸಮಸ್ಯೆಗಳಿಗೆ ನಮ್ಮ ಸ್ವಾರ್ಥವನ್ನು ಕಾಪಾಡಲು ಅಥವಾ ನಾವು ಆದರ್ಶವೆಂದು ತಿಳಿದಿರುವ ಸ್ವಾರ್ಥವನ್ನು ಕಾಪಾಡಲು ಅಗತ್ಯವಾದ ಆಯುಧವೆಂದು ತಿಳಿಯುವಂತಾಗಿದೆಯೇ ಎಂದು ಯೋಚಿಸಬೇಕಾಗಿದೆ. ವಿಜ್ಞಾನದ ಅದ್ಭುತವೆನಿಸುವ ಪ್ರಗತಿಯಲ್ಲಿ ನಾವು 21ನೇ ಶತಮಾನದ ಯುವಜನಾಂಗಕ್ಕೆ ದಾಟಿಸುವ ಬಳುವಳಿ 'ಹಿಂಸೆ'ಯೇ ಎಂಬ ಅನುಮಾನವೂ ಮೂಡುತ್ತಿದೆ. ಮುಂಬಯಿಯ ಒಂದು ಮಾಫಿಯಾ ತಂಡದ ನಾಯಕ ಒಂದು ರಾಜಕೀಯ ಪಕ್ಷವನ್ನು ಸಂಘಟಿಸಲು ಸಾಧ್ಯವಾಗುವಂತಹ ಸಾಮಾಜಿಕ ಸ್ಥಿತಿ ನಮ್ಮದಿರುವಾಗ, ಕೊಲಂಬೈನ್ ಶಾಲೆಯ ಹತ್ಯಾಕಾಂಡಕ್ಕೂ ಭಾರತಕ್ಕೂ ಏನು ಸಂಬಂಧ ಎನ್ನುವವರು, ಹಿಂಸೆಯ ಕಾರ್ಯಕಾರಣ ಜಿಜ್ಞಾಸೆಯಲ್ಲಿ ಕಾರಣಗಳನ್ನು ಹುಡುಕುವವರು, ಒಂದು ಕ್ರಿಯೆಯ ಪರಿಣಾಮಗಳಿಗೆ ಸ್ಪಂದಿಸಬೇಕಾದ ಕಾರಣಗಳನ್ನು ಹುಡುಕುವವರೇ ಹೊರತು, ಆ ಕ್ರಿಯೆ ಉಂಟಾಗುವ ಸಂದರ್ಭದ ಕುರಿತು ಹೆಚ್ಚಿನ ವಿವೇಚನೆಗೆ ತೊಡಗುವುದಿಲ್ಲ.

ಕೊಲಾಂಬೈನ್ ಶಾಲೆಯ ಹತ್ಯಾಕಾಂಡ ಭಾರತಕ್ಕಿಂತ ಮೂರು ಪಾಲು ವಿಸ್ತೀರ್ಣ ಹೆಚ್ಚಿರುವ ಅಮೆರಿಕಾದ ಭೂಖಂಡದಲ್ಲಿ ಸಾರ್ವತ್ರಿಕವಾಗಿ ಪ್ರತಿಕ್ರಿಯೆಗಳಿಗೆ ಕಾರಣವಾಗಿದೆ. ಈ ಘಟನೆ ನಡೆದ ಕೆಲವೇ ದಿನಗಳಲ್ಲಿ ಕೆನಡಾದ ಒಂದು ಶಾಲೆಯಲ್ಲಿ ಶಾಲೆಯಿಂದ ಹೊರಹಾಕಲ್ಪಟ್ಟಿದ್ದ ಒಬ್ಬ ಹುಡುಗನಿಂದ ಗುಂಡಿಟ್ಟು ಕೊಲ್ಲುವ ಪ್ರಕರಣ ನಡೆದು, ಒಬ್ಬ ವಿದ್ಯಾರ್ಥಿ ಸತ್ತು ಇನ್ನೊಬ್ಬ ಗಾಯಗೊಂಡಂತಾಗಿದೆ. ಹಿಂಸೆಯ ಪ್ರಕರಣಗಳ ಅನುಕರಣೆ, ಇಂಟರ್‌ನೆಟ್ ಮೂಲಕ ಬಾಂಬು ತಯಾರಿಸುವ ತಿಳಿವಳಿಕೆ ತಂದುಕೊಳ್ಳುವ ಸಾಧ್ಯತೆ, ಇವನ್ನೆಲ್ಲ ನಮ್ಮ 'ಸ್ವಾತಂತ್ರ್ಯ'ಕ್ಕೆ ಹೊಂದಿಸುವ ಪ್ರಜ್ಞೆ ಕಾಡುವುದು ಹಿಂಸೆಗೆ ಕಾಲ ದೇಶಗಳ ಪರಿಜ್ಞಾನವಿಲ್ಲ ಎಂಬುದನ್ನೇ.

ಕೊಲಾಂಬೈನ್ ಶಾಲೆಯ ಹತ್ಯಾಕಾಂಡದ ವಿವರಗಳನ್ನು ಪ್ರತಿದಿನ ವೀಕ್ಷಕರಿಗೆ ದಾಟಿಸುತ್ತಿದ್ದ ಟಿವಿ ಜಾಲಗಳು ಗಾಂಧೀಜಿಯ ಕೆಲವು ಚಿತ್ರಗಳನ್ನು ಆಗಾಗ ತೋರಿಸಿ ಅವರ 'ಅಹಿಂಸೆ'ಯ ಸಂದೇಶವನ್ನು ನೆನಪಿಗೆ ತರಲು ಪ್ರಯತ್ನಿಸುತ್ತಿದ್ದುದನ್ನು ನಾನು ಕಂಡಮೇಲೆ,– ಈ ಚಿತ್ರಗಳಲ್ಲಿ ಹಲವು ಗಾಂಧೀಜಿಯ ಭಾರತದ ರಾಜಕೀಯ ಚಟುವಟಿಕೆಗಳಿಗೆ ಸಂಬಂಧಿಸಿದಂಥವು – ಭಾರತದಲ್ಲೇ ನಾವು ಗಾಂಧೀಜಿಯನ್ನು ರಾಷ್ಟ್ರಪಿತನೆಂದು ಕರೆಯುತ್ತಲೇ ಹಿಂಸೆಗೆ–ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ– ದಾರಿ ಮಾಡಿಕೊಡುತ್ತಿರುವ ಸಾಮಾಜಿಕ ಸ್ಥಿತಿಯನ್ನು ಉಂಟುಮಾಡುತ್ತಿಲ್ಲವೇ ಎಂಬ ಯೋಚನೆ ಕಾಡಿದೆ.

ಎಲ್ಲ ಹಿಂಸೆಗೂ ಪರಿಸರದ ಸಾಮಾಜಿಕ ಸ್ಥಿತಿ ಒಂದು ಕಾರಣವಾದರೆ, ಅದು ಸಾಮೂಹಿಕವಾಗಿ ತನ್ನ ನೆನಪಿನ ಬುತ್ತಿಯಲ್ಲಿ ತಂದುಕೊಳ್ಳುವ ಸ್ವಾರ್ಥಕ್ಕೆ ಸಂಬಂಧಿಸಿದ ಆದರ್ಶಗಳೂ ಒಂದು ಕಾರಣ. ಈ ಆದರ್ಶಗಳಲ್ಲಿ ಹಿಂಸೆಯೂ ಸೇರಿಕೊಂಡಿರಬಹುದು. ಎರಡನೇ ಮಹಾಯುದ್ಧ ಕೊನೆಗೊಂಡ ಬಗೆ ಹಾಗೂ ಹಿಟ್ಲರನ ಆತ್ಮಹತ್ಯೆ ಇವುಗಳ ಇತಿಹಾಸ ನಮ್ಮ ಮುಂದಿದೆಯಾದರೂ ಹಿಟ್ಲರನ ಅನುಯಾಯಿಗಳ ತಂಡ ಬೆಳೆಯುತ್ತಿರುವುದು ಕೊಡುವ ಸೂಚನೆ ಇದೇ. ವರ್ಣದ್ವೇಷ ಸಾಮೂಹಿಕವಾಗಿ ಜನಾಂಗ ಜನಾಂಗಗಳ ನಡುವೆ ಆನುವಂಶಿಕವಾಗಿ ಹೂತು ಹೋಗಿದೆಯೇ ಎಂಬ ಸಂದೇಹವನ್ನೂ ಇಲ್ಲಿ ವ್ಯಕ್ತಪಡಿಸಬೇಕಾಗಿದೆ. ವರ್ಣದ್ವೇಷ ಬದಲುತ್ತಿರುವ ಇತಿಹಾಸದ, ಅದರ ಮೂಲಕ ಸಮಾಜದ ಗತಿಗೆ ಸಂಬಂಧಿಸಿದುದು.

ಅಮೆರಿಕದ ಯುವಜನಾಂಗ ಇಂದು ಅನುಭವಿಸುತ್ತಿರುವ ಹಿಂಸೆಯ ಹತ್ಯಾಕಾಂಡಗಳಿಗೆ ಕಾರಣ ಹುಡುಕುವವರು ಪರಿಹಾರದ ಕ್ರಮಗಳೆಂದು ಕೋವಿಗಳ ಹಂಚಿಕೆಯ ನಿಯಂತ್ರಣವನ್ನು ಪರಿಹಾರವೆಂದು ಸೂಚಿಸುತ್ತಾರೆ. ಶಸ್ತ್ರಾಸ್ತ್ರಗಳ ನಿಯಂತ್ರಣ ಇದಕ್ಕೆ ಮದ್ದಲ್ಲ, ನೈತಿಕ ಶಿಕ್ಷಣ ಸರಿಯಾದ ಮದ್ದು ಎನ್ನುವ ಸಂಪಾದಕೀಯ ಬರೆಹಗಳೂ ಪ್ರಕಟವಾಗಿವೆ. ಇಲ್ಲಿ ಅಮೆರಿಕಾದ ಕುಟುಂಬ ಸ್ವರೂಪ ಅನುಭವಿಸುತ್ತಿರುವ ದಾಂಪತ್ಯಕ್ಕೆ ಸಂಬಂಧಿಸಿದ ಹಿಂಸೆಯ ಕುರಿತು ಯಾರೂ ಹೆಚ್ಚು ಯೋಚಿಸುವುದಿಲ್ಲ. ದಾಂಪತ್ಯ ವಿಚ್ಛೇದನ, ಮರು ಮದುವೆ, ತಬ್ಬಲಿಗಳಂತೆ ಬದುಕಿನ ಆದರ್ಶ ಕಂಡುಕೊಳ್ಳಬೇಕಾದ ಮಕ್ಕಳು, ವರ್ಣದ್ವೇಷ, ಅಲ್ಪಸಂಖ್ಯಾತರ ಸ್ಥಿತಿ ಹಾಗೂ ದೇಹಶಕ್ತಿಯಲ್ಲಿ, ಆಟೋಟಗಳಲ್ಲಿ ತಮ್ಮನ್ನು ಮೀರಿಸುವ ಇತರರು, ಹೆಚ್ಚಾಗಿ ಕರಿಯರು, ಇದರಿಂದ ಬೆಳೆಯುವ ಅಸಹನೆ ಇವೆಲ್ಲ, ಹಿಂಸೆಗೆ ಪ್ರಚೋದನೆ ಕೊಡುವ ಅಸಹನೆಯನ್ನು ನೆಚ್ಚಿಕೊಂಡು, ಇಂದಿನ ವಿಜ್ಞಾನ, ತಂತ್ರಜ್ಞಾನಗಳ ಸಾಧನೆ ತಂದುಕೊಡುವ ಹಿಂಸಾತ್ಮಕ ಪ್ರಯೋಗಗಳ ಕಡೆ ಯುವ ಜನಾಂಗ ಆಕರ್ಷಿತರಾಗುವಾಗ ನಾವು ದೂರಬೇಕು ಯಾರನ್ನು ?

ಎಲ್ಲ ರೀತಿಯ ದ್ವೇಷದ ಮೂಲದಲ್ಲಿರುವುದು ಅಸಹನೆ. ಇತರರ ತಿಳುವಳಿಕೆಯನ್ನು ಮನುಷ್ಯ ತನ್ನ ತಿಳಿವಳಿಕೆಯೊಂದಿಗೆ ಹೊಂದಿಸುವುದು ಸ್ವಾರ್ಥದ ಕಣ್ಣಿನಿಂದಲೇ. ಅಸಹನೆ ಯಾವಾಗಲೂ ದ್ವೇಷವನ್ನು ಕಡಿಮೆ ಮಾಡುವ ಸಾಧನವಾಗುವುದಿಲ್ಲ. ಅದು ಸಾಮೂಹಿಕವಾಗಿ ಒಂದು ಗುಂಪಿನ, ಕೋಮಿನ, ಒಂದು ರಾಷ್ಟ್ರದ, ಪ್ರಜ್ಞೆಯಲ್ಲಿ ಬೆರೆತುಕೊಳ್ಳುವಾಗ, ನಮಗೆ ಹಿಟ್ಲರನ ಕುರಿತು ಆಶ್ಚರ್ಯವಾಗಬೇಕಿಲ್ಲ; ಕೊಸವೋ, ರುವಾಂಡ, ಪೂರ್ವ ಬಂಗಾಲ, ಕಾಶ್ಮೀರಗಳ ಕುರಿತೂ ಆಶ್ಚರ್ಯವಾಗಬೇಕಿಲ್ಲ, ಬಾಸ್ನಿಯಾ, ಕ್ರೋಶಿಯಾ, ಸರ್ಬಿಯಾಗಳ ಕುರಿತೂ ಆಶ್ಚರ್ಯವಾಗಬೇಕಿಲ್ಲ.

ಅಮೆರಿಕಾದ ಕೊಲಂಬೈನ್ ಶಾಲೆಯ ಯುವ ಪೀಳಿಗೆಗೆ

ಉರುಳು



ಉರುಳು-
ವ
ಮರಗಳು
ಮಾನವನ
ಉರುಳು!

– ಮು. ಶ್ರೀ. ಮುರಳಿಕೃಷ್ಣ

ಸಂಬಂಧಿಸಿದ ಹತ್ಯಾಕಾಂಡದ ಒಂದು ಘಟನೆ ವಿಶ್ವವ್ಯಾಪಿಯಾಗಿ ಬೆಳೆಯುತ್ತಿರುವ ಹಿಂಸಾತ್ಮಕವೆನಿಸುವ ಅಸಹನೆಯ ಪ್ರತೀಕವೆಂದು ತಿಳಿಯುವಂತಾದಾಗ, ನಮ್ಮ ಸುತ್ತಮುತ್ತ ನಡೆಯುತ್ತಿರುವ, ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ಹಿಂಸೆಗೆ ಕಾರಣಗಳನ್ನು ಶೋಧಿಸುವ ಕುತೂಹಲ ನಮ್ಮದಾಗಬಹುದು. ಹಾಗೆ ಶೋಧಿಸುವ ಕುತೂಹಲ ಮೂಡಿದಾಗ, ನಮ್ಮ ಯುವ ಪೀಳಿಗೆಯ ಸಮಸ್ಯೆಗಳು ಇನ್ನಷ್ಟು ಗಂಭೀರವಾದುವಲ್ಲವೇ, ಇವು ಹಿಂಸೆ ಅಸಹನೆಗಳಿಗೆ ಹೆಚ್ಚಿನ ದಾರಿ ತೋರಿಸುವಂಥವಲ್ಲವೇ ಎಂದೂ ಕಾಣುತ್ತಿದೆ. ಹಿಂದೆ ಹೇಳಿದಂತೆ ಎಲ್ಲಾ ಹಿಂಸೆಗೂ ಅಸಹನೆ ಮೂಲವೆಂದು ತಿಳಿದಾಗ ಭಾರತದಲ್ಲಿ ಅಸಹನೆ ಬೆಳೆಯುವ ಹಲವಾರು ರೀತಿಯ ಸಾಮಾಜಿಕ ಸ್ಥಿತಿಗಳನ್ನು ನಾವೇ ತಂದುಕೊಂಡಿದ್ದೇವೆ. ಪ್ರಾಥಮಿಕ ಶಿಕ್ಷಣವೂ ದೊರಕದ ಪ್ರತಿಶತ 60ರಷ್ಟು ಜನರು ತುಸುವಾದರೂ ಶಿಕ್ಷಣದ ಸಂಸ್ಕಾರ ದೊರಕುವಂತಾದವರನ್ನು ಯಾವ ರೀತಿ ನೋಡಬೇಕು ಎಂದು ನಾವು ಗಮನಿಸುವುದಿಲ್ಲ. ಜಾತಿ, ಉಪಜಾತಿಗಳ ವಿಶಿಷ್ಟತೆಯನ್ನು ಲೋಕಸತ್ತೆಯ ಹೆಸರಿನಿಂದಲೇ ಮೆರೆಸಿ, ಮೊದಲೇ ಭಾರತದ ಅನಿಷ್ಟವೆನಿಸಿರುವ ಜಾತೀಯತೆಯನ್ನು ಸಂಘರ್ಷದ ಹಾದಿಯಲ್ಲೇ ಮುಂದುವರಿಸಿ ಸ್ವಾರ್ಥ ಸಾಧಿಸುವ ರಾಜಕಾರಣಿಗಳು ಪ್ರಚೋದಿಸುವ ಅಸಹನೆ ನಮ್ಮನ್ನು ಎಲ್ಲಿಗೆ ಕೊಂಡೊಯ್ಯಬಹುದು ಎಂದು ಯೋಚಿಸುವುದಿಲ್ಲ. ನಾಯಿಕೊಡೆಗಳಂತೆ ಅಲ್ಲಲ್ಲಿ ಹುಟ್ಟಿಕೊಳ್ಳುವ 'ಸೇನೆ'ಗಳನ್ನು ನಿಯಂತ್ರಿಸಲು ಸಾಧ್ಯವಾಗದ ಆಡಳಿತ ಆಡಳಿತೆಯೇ ಎಂದು ಕೇಳುವ ಬುದ್ಧಿಯಾಗಲೀ, ಈ ಸೇನೆಗಳ ಹೆಸರೇ ಸೂಚಿಸುವುದು ಶಕ್ತಿಯ ಮೂಲಕ ಹಿಂಸೆ ಎಂದಲ್ಲವೇ ಎಂದು ಯಾರೂ ಕೇಳುವುದಿಲ್ಲ. ನಮ್ಮ ಅಸಮರ್ಪಕ ಶಿಕ್ಷಣ ವ್ಯವಸ್ಥೆಯಲ್ಲಿ 'ಅಸಹನೆ'ಯನ್ನು- ಎಲ್ಲ ವಿಧಗಳಲ್ಲೂ- ತಿರಸ್ಕರಿಸುವ, ಮಾನವೀಯ ನೈತಿಕತೆಯನ್ನು ಪ್ರಚೋದಿಸುವ ಪಠ್ಯಕ್ರಮವಿದೆಯೇ ಎಂದು ಯಾರೂ ಕೇಳುವುದಿಲ್ಲ. ನಮ್ಮ ಆಡಳಿತೆಯ ಅಧಿಕಾರ ವ್ಯವಸ್ಥೆ ಎಲ್ಲ ಹಂತಗಳಲ್ಲೂ ಲೋಕಸತ್ತೆಯನ್ನು ಅಣಕಿಸುವ ಅಸಹನೆಯನ್ನು ಪ್ರಚೋದಿಸುತ್ತ, ಮುಂದೆ ಹಿಂಸೆಯೇ ಪರಿಹಾರವೆಂದು ಜನ ಕಂಡುಕೊಳ್ಳುವಂತಾಗಬಹುದು ಎಂಬುದನ್ನು ಯೋಚಿಸುವುದಿಲ್ಲ. ನಮ್ಮ ಶಿಕ್ಷಣ ವ್ಯವಸ್ಥೆಯ ಕೊರತೆಗಳಿಂದಾಗಿ ಅರ್ಧಮರ್ಧ ಶಿಕ್ಷಣ ಪಡೆದವರೂ, ಅಶಿಕ್ಷಿತ ಜನ ಸಮುದಾಯವನ್ನು – ಇವರೇ ಬಹುಸಂಖ್ಯಾತರು– ಅಸಹನೆಯಿಂದ, ತಿರಸ್ಕಾರದಿಂದ ನೋಡುವ ಸ್ಥಿತಿ ಮುಂದೆ ಹಿಂಸೆಗೂ ಕಾರಣವಾಗಬಹುದು ಎಂದು ಯೋಚಿಸುವುದಿಲ್ಲ. ಮಾಧ್ಯಮಗಳಿಂದ ಪಶ್ಚಿಮದ ರಾಷ್ಟ್ರಗಳಂತೆ ದೊರಕುತ್ತಿರುವ ಹಿಂಸೆಗೆ ಕಾರಣವಾಗುವ ಪ್ರಚೋದನೆ ನಮ್ಮಲ್ಲಿ ಕೂಡ ಬೆಳೆಯುತ್ತಿದ್ದು, ಇದು ಸಾರ್ವತ್ರಿಕ ಹಿಂಸೆಗೂ ಕಾರಣವಾಗಬಹುದು ಎಂಬುದನ್ನು ಯಾರೂ ಯೋಚಿಸುವುದಿಲ್ಲ. ಲೋಕಸತ್ತೆಯ ಹೆಸರಿನಲ್ಲಿ ಕೊಲೆ, ಹಿಂಸೆ, ಅತ್ಯಾಚಾರಕ್ಕೆ ಕಾರಣರಾದವರೂ ರಾಜಕೀಯ ಆಡಳಿತೆಯಲ್ಲಿ ಸೇರಿಕೊಂಡಾಗ, ಅಂಥವರ ಸ್ವಾರ್ಥಕಾರಣವಾಗುವ ಹಿಂಸೆ ಮುಂದೆ ಯಾವ ರೂಪ ತಾಳಬಹುದು ಎಂದು ಯಾರೂ ಯೋಚಿಸುವುದಿಲ್ಲ. ಅಹಿಂಸೆಯ ಪ್ರವಾದಿಯೆನಿಸಿದ್ದು, ಹಿಂಸೆಯ ಸಂದರ್ಭಗಳಲ್ಲಿ ಪಶ್ಚಿಮದ ರಾಷ್ಟ್ರಗಳೂ ನೆನೆಸಿಕೊಳ್ಳುವ ಗಾಂಧಿಯನ್ನು ನಾವು ಎಂದೋ ಮರೆತಿದ್ದೇವೆ ಎನ್ನುವಂತಹ, ಹಿಂಸಾತ್ಮಕವೆನಿಸುವ ಸಾಮಾಜಿಕ ಸ್ಥಿತಿಯನ್ನು ನಾವು ಹುಟ್ಟು ಹಾಕಿದ್ದೇವೆಯೋ ಎಂಬ ಸಂದೇಹವನ್ನು ನಮ್ಮ ಸ್ವಾತಂತ್ರ್ಯದ 50 ವರ್ಷಗಳು ಮುಗಿದಾಗ ನಾವು ತಂದುಕೊಳ್ಳಬೇಕಾಗಿದೆ.

ಅಮೆರಿಕಾದ ಒಂದು ಶಾಲೆಯಲ್ಲಿ ನಡೆದ ಹತ್ಯಾಕಾಂಡಕ್ಕೆ ಕಾರಣಗಳನ್ನು ಹುಡುಕುವ ಚಿಂತನ ಗೋಜಲು ಗೋಜಲಾಗಿದ್ದರೂ ರಾಷ್ಟ್ರವ್ಯಾಪಿಯಂತ ಈ ಘಟನೆಗೆ ಜನ ಹಾಗೂ ವಿದ್ಯಾರ್ಥಿಗಳು ಪ್ರತಿಕ್ರಿಯಿಸಿದ ರೀತಿ ಅತಿಶಯವೆನಿಸುವಂತಿತ್ತು. ಅಲ್ಲಿ ವ್ಯಕ್ತವಾಗಿದ್ದುದು ಅಮೆರಿಕ ನಮ್ಮ ರಾಷ್ಟ್ರವೆಂಬ ರಾಷ್ಟ್ರಪ್ರಜ್ಞೆ. ಈ ಪ್ರಜ್ಞೆಯ ಹಿನ್ನೆಲೆಯಲ್ಲಿ ಕೆಲವು ವಿದ್ಯಾರ್ಥಿಗಳು, ರಾಷ್ಟ್ರದ ಅಧ್ಯಕ್ಷರು, ಹಿಂಸಾತ್ಮಕ ನಡವಳಿಕೆಯನ್ನು ಖಂಡಿಸಿ, ನಮ್ಮ ಯುವಪೀಳಿಗೆಗೆ ತಂದೆ ತಾಯಂದಿರು, ಸಹನೆ, ಇತರರ ಕುರಿತು ಅಸಹನೆಯಿರದ ಪ್ರೀತಿಯ ತಿಳಿವಳಿಕೆ ತಂದುಕೊಡಬೇಕು ಎಂದು ಬೋಧಿಸುತ್ತಲೇ ನ್ಯಾಟೋ ವಿಮಾನಗಳು ಯುಗೋಸ್ಲಾವಿಯಾದ ವಿರುದ್ಧ ಹಿಂಸಾತ್ಮಕ ಕಾರ್ಯಾಚರಣೆ ನಡೆಸುತ್ತಿರುವುದು ಆದರ್ಶವೇ ಎಂದು ಕೇಳಿದ್ದೂ ಇದೆ. ಟೀಕೆ, ತಿಳುವಳಿಕೆಗಳಿಂದ ಕೂಡಿದ ರಾಷ್ಟ್ರಪ್ರಜ್ಞೆ ಲೋಕಸತ್ತೆಗೆ ಅಗತ್ಯವಲ್ಲವೇ ಎಂದು ಭಾರತದಲ್ಲಿ ನಾವು ಯೋಚಿಸಬೇಕಾಗಿದೆ. ರಾಜಕಾರಣವೂ ಸೇರಿದಂತೆ, ಭಾರತದಲ್ಲಿ ಎಲ್ಲ ಕ್ಷೇತ್ರಗಳಲ್ಲೂ ನಾವು ಬೆಳೆಸುತ್ತಿರುವುದು ಅಸಹನೆಯನ್ನೇ. ಈ ಅಸಹನೆ ಹುಟ್ಟುಹಾಕುವ ಹಿಂಸೆ ಮುಂದಿನ ಶತಮಾನದಲ್ಲಿ ಯಾವ ರೂಪ ತಾಳಬಹುದು ಎಂದು ಹೇಳುವುದು ಕಷ್ಟ.

ಶ್ರೀ ವ್ಯಾಸರಾಯ ಬಲ್ಲಾಳ
ನಂ. 1064, 'ಉತ್ತರಾಯಣ', ಕುಮಾರಸ್ವಾಮಿ ಲೇಔಟ್,
1ನೇ ಘಟ್ಟ, ಬಿ. ಡಿ.ಎ ಪಾರ್ಕ್ ಹತ್ತಿರ, ಬೆಂಗಳೂರು- 560 078

(ಸಾಮಾನ್ಯನೊಳಗೊಬ್ಬ ಅಸಾಮಾನ್ಯ.. ಪುಟ 15ರಿಂದ)

ಬಿಟ್ಟುಬರಲು ಹೇಳಿದರು. ನಾನು ಮಿಲಿಟರಿಯಲ್ಲಿ ಡ್ರೈವರ್ ಆಗಿದ್ದೆ. ಅವರನ್ನು ಫೈರಿಂಗ್ ಲೈನ್ ಹತ್ತಿರ ಬಿಟ್ಟು ಬಂದೆ. ಅದೇ ಕೊನೆ, ಆಮೇಲೆ ನಾನು ಅವರನ್ನು ನೋಡಲಿಲ್ಲ. 1945ರಲ್ಲಿ ನಮ್ಮ ಸೇನೆ ಹಿನ್ನಡೆ ಅನುಭವಿಸಿತು. ಮೇ ತಿಂಗಳಿನಲ್ಲಿ ರಂಗೂನ್‌ನಲ್ಲಿ ನಮ್ಮ ಸೇನೆ ಸೋತು ನಾವೆಲ್ಲ ಆಗ ಮತ್ತೆ ಬ್ರಿಟಿಷರ ಕೈದಿಗಳಾದೆವು. ಆಗಲೇ ಸುಭಾಷ್ ಚಂದ್ರ ಬೋಸ್‌ರ ನಿಧನದ ಸುದ್ದಿ ತಲುಪಿತು.

ಪ್ರಶ್ನೆ : ಸುಭಾಷ್ ಚಂದ್ರ ಬೋಸ್ ಅವರ ನಿಧನದ ನಂತರ ಐ.ಎನ್.ಎ. ಸೈನಿಕರಾಗಿದ್ದ ನಿಮ್ಮ ಯೋಜನೆಗಳೇನಿದ್ದವು ?

ಉತ್ತರ: ನಾನು ಒಬ್ಬ ಸಾಮಾನ್ಯ ಸಿಪಾಯಿ ಯಾಗಿದ್ದೆ. ನಮ್ಮ ಐ.ಎನ್.ಎ. ನಾಯಕರು ತೆಗೆದುಕೊಳ್ಳುವ ತೀರ್ಮಾನದಂತೆ ಹೋಗಲು ಸಿದ್ಧನಾಗಿದ್ದೆ. ಆದರೆ 1945ರ ಡಿಸೆಂಬರ್‌ನಲ್ಲಿ ಬ್ರಿಟಿಷರು ನಮ್ಮನ್ನು ಬಂಧಿಸಿ ಕಲ್ಕತ್ತಾಕ್ಕೆ ತಂದು ಮಿಲಿಟರಿ ಕೋರ್ಟ್ ಮಾರ್ಶಲ್ ನಡೆಸಿದರು. ಆಗ ದೇಶದ ತುಂಬಾ ನಮ್ಮ ಬಿಡುಗಡೆಗೆ ಹೋರಾಟ ನಡೆದಿತ್ತು. ಮುಂದೆ ವಿಚಾರಣೆ ಮುಗಿದು 1946ರ ಫೆಬ್ರವರಿಯಲ್ಲಿ ನಮ್ಮ ಬಿಡುಗಡೆ ಯಾಯಿತು. ಆದರೆ ನಮ್ಮ ನಾಯಕರಿನ್ನೂ ಜೈಲ್‌ನಲ್ಲೇ ಇದ್ದರು. ಬೇರೆ ದಾರಿ ಕಾಣದೇ ನಾನು ಧಾರವಾಡಕ್ಕೆ ಬಂದೆ. ಧಾರವಾಡಕ್ಕೆ ಬಂದ ಮೇಲೆ ಪೋಲೀಸ್ ಇಲಾಖೆಯಲ್ಲಿ ಡ್ರೈವರ್ ಆಗಿ ಕೆಲಸ ಮಾಡಿ ನಿವೃತ್ತಿಯಾದೆ. ಆಗ ನನಗಿದ್ದ ಪೆನ್‌ಶನ್ (ಪೋಲೀಸ್ ಇಲಾಖೆಯ ಡ್ರೈವರ್ ಪೆನ್‌ಶನ್) ಸಾಲದೆ ಕುಟುಂಬ ನಿರ್ವಹಣೆ ಕಠಿಣವಾಗಿತ್ತು. ಮುಂದೆ ಹತ್ತುವರ್ಷ ಧಾರವಾಡದಲ್ಲಿ ರಿಕ್ಷಾ ಓಡಿಸಿದೆ. ಈಗ ವಯಸ್ಸಾಗಿದೆ. ಮಕ್ಕಳೂ ಸಣ್ಣಪುಟ್ಟ ಕೆಲಸ ಸೇರಿದ್ದಾರೆ, ಮನೆ ಯಲ್ಲಿದ್ದೇನೆ.

- ಈ ರೀತಿ ಒಬ್ಬ ಸಾಮಾನ್ಯ ಯೋಧನಾಗಿ ದೇಶದ ಸ್ವಾತಂತ್ರ್ಯಕ್ಕೆ ಹೋರಾಡಿದ ಹುಸೇನ್‌ಸಾಬ್ ಗೂಢವಾಲಾ ಮುಂದೆ ಜೀವನ ನಿರ್ವಹಣೆಗೆ ಆಟೋರಿಕ್ಷಾ ಓಡಿಸಿ ಬದುಕಬೇಕಾಯಿತು. ಇತ್ತೀಚೆಗೆ ರಾಜ್ಯ ಸರ್ಕಾರದ ನಿವೃತ್ತಿವೇತನ 750 ರೂ. (ಸ್ವಾತಂತ್ರ್ಯ ಯೋಧರಿಗಾಗಿ) ಬರುತ್ತಿದೆ. ಆದರೆ ಇವತ್ತಿನವರೆಗೂ ಕೇಂದ್ರ ಸರಕಾರದಿಂದ ಘೋಷಿಸಿದ ಪೆನ್‌ಶನ್ ಬಂದಿಲ್ಲ. ಹುಸೇನ್‌ಸಾಬ್ ಬಹುತೇಕ ಎಲ್ಲ ಅಧಿಕಾರಿಗಳಿಗೂ ರಾಜಕಾರಣಿಗಳಿಗೂ ಮನವಿ ಮಾಡಿದ್ದಾರೆ.

ತನ್ನಲ್ಲಿರುವ ದಾಖಲೆಗಳೆಲ್ಲವನ್ನೂ ಕಳಿಸಿ ಕೇಂದ್ರ ಸರಕಾರಕ್ಕೆ ಮನವಿ ಮಾಡಿದ್ದಾರೆ. ಆದರೆ ಇವತ್ತಿಗೂ ಆತನಿಗೆ ಬರಬೇಕಾದ ಪೆನ್‌ಶನ್ ಬಂದಿಲ್ಲ. ಅದರ ಬಗ್ಗೆ ಹುಸೇನ್‌ಸಾಬ್ ತೀರಾ ನೋವಿನಿಂದ ಹೇಳುತ್ತಿದ್ದಾರೆ. 'ಇಲ್ಲಿ ಬರೀ ಭ್ರಷ್ಟಾಚಾರ ತುಂಬಿದೆ. ನಾವು ಬ್ರಿಟಿಷರ ವಿರುದ್ಧ ಐ.ಎನ್.ಎ. ಸೇರಿದ್ದಕ್ಕಾಗಿ ಅವರೂ ನಮ್ಮನ್ನು ಹಚ್ಚಿಕೊಳ್ಳಲಿಲ್ಲ. ಇಂದು ನನಗೆ ದೆಹಲಿಗೆ ಹೋಗುವ ಶಕ್ತಿ ಇಲ್ಲ, [illegible] ಕೊಡುವ ಮನಸ್ಸಿಲ್ಲ. [illegible] ಪೆನ್‌ಶನ್ ಬಂದಿಲ್ಲ.' ದೇಶದಲ್ಲಿ ತುಂಬಿ [illegible] ಕೋಮುವಾದದ ಬಗ್ಗೆ ಕೇಳಿದರೆ ಮತ್ತೆ [illegible] ಯೋಧನಾಗುವ ಹುಸೇನ್‌ಸಾಬ್ '[illegible] ಬೋಸ್ ಬದುಕಿದ್ದರೆ [illegible]- ಪಾಕಿಸ್ತಾನ ಆಗುತ್ತಿರ ಲಿಲ್ಲ. ಈ ದೇಶ ಒಂದೇ ಆಗಿರುತ್ತಿತ್ತು' [illegible] ನಾಯಕನನ್ನು ನೆನಪಿಸಿಕೊಳ್ಳುತ್ತಾರೆ. ಇವತ್ತಿನ ರಾಜಕಾರಣ, ಭ್ರಷ್ಟಾಚಾರ, ಕೋಮುವಾದ ನೋಡಿ ನೊಂದುಕೊಂಡಿರುವ ಈ 72 ವರ್ಷದ [illegible] ಕೇಳಿದರೆ 'ನಮ್ಮ ಮಾತು ಯಾರು ಕೇಳ್ತಾರೀ. [illegible] ದೇಶಕ್ಕೆ [illegible] [illegible] ಕೇಂದ್ರ [illegible] ಮೂಲೆಯಲ್ಲಿ ಮನೆ ಮಾಡಿಕೊಂಡಿರುವ ಈ ಅಜ್ಜ ಯಾರಾದರೂ [illegible]ಸಿದರೆ ಇವತ್ತಿಗೂ ಬಸ್‌ನಲ್ಲಿ ಹೋಗಿ ಐ.ಎನ್.ಎ. ಬಗ್ಗೆ ಅಷ್ಟೇ ಅಭಿಮಾನದಿಂದ ಮಾತನಾಡಿ ಬರುತ್ತಾರೆ.

[illegible]
[illegible] 580 003

ಒತ್ತೆಯಾಳಿನ ಅಪಹರಣ

ಎರಡು ಸಾವಿರ ವರ್ಷದ ಹಿಂದಿನ ಮಾತು. ಆದರೆ ಇವತ್ತಿನ ಕತೆಯೂ ಇರಬಹುದು. ಆಗೊಬ್ಬ ಮನು ಎಂಬುವವನಿದ್ದ. ಈಗ ಅವನ ಪ್ರಭಾವ ಕಡಿಮೆ. ಆದರೆ ಏನೂ ಇಲ್ಲವೆನ್ನಲಾಗದು. ಆಗ್ಗೆ ಅವನು ಪ್ರಚಂಡ ಸಮಾಜ ನಿಯಾಮಕ. ಅವನು ಹೇಳಿದ್ದರಿಂದ ಜನ ನಿಯಮ ಪಾಲಿಸುತ್ತಿದ್ದರೋ, ಅಂತಹ ನಿಯಮಗಳು ರೂಢಿಯಲ್ಲಿದ್ದುದರಿಂದ ಅವನು ಹಾಗೆ ಹೇಳಿದನೋ ಗೊತ್ತಿಲ್ಲ. ಅಂತೂ ಅವನು ಕಟ್ಟುಪಾಡುಗಳನ್ನು ಬಲವಾಗಿ ಹೇರಿದ. ಅವನ್ನು ಮುರಿದವರು ಬಹಳ ಕಡಿಮೆ.

ಒಂದಷ್ಟು ಆನೆಗಳು ಗದ್ದೆಗೆ ನುಗ್ಗಿದ್ದುವು. ತೆನೆ ಹೊಡೆದಿದ್ದ ಪೈರೆಲ್ಲಾ ಧ್ವಂಸವಾಯಿತು. ಅದು ನಡೆದದ್ದು ರಾತ್ರಿಯಲ್ಲಿ. ಊರೆಲ್ಲಾ ಮಲಗಿದ್ದಾಗ. ಗದ್ದೆ ಕಾಯಲು ಸವಣ ಎಂಬ ಹುಡುಗನನ್ನು ನೇಮಿಸಿದ್ದರು. ಆನೆಗಳನ್ನು ನೋಡಿ ಊರಿನ ಕಡೆಗೆ ಓಡಿದ ಅವನು. ಅವರಪ್ಪನದೂ ಸೇರಿದಂತೆ ಎಲ್ಲರ ಗದ್ದೆಗಳೂ ಹಾಳಾದ ಮೇಲೆ ಊರಿನಲ್ಲಿ ತಿಳಿಸಿದರೆ ಏನು ಪ್ರಯೋಜನ? ಇನ್ನೇನು ಊರು ಸಿಕ್ಕಿತು ಎನ್ನುವಾಗ ರೈಖ್ವ ಸಿಕ್ಕಿದ. ಅಪರಪ್ಪ ಪಂತ. ಅವರಿಗೆ ಬೇರೆ ಹೊಲಗಳೂ ಇದ್ದುವು. ಅವರು ಕ್ಷತ್ರಿಯರು ಬೇರೆ. ಸ್ವಲ್ಪ ಅನುಕೂಲಸ್ಥರು. ಅವರ ಗದ್ದೆ ಹಾಳಾದರೆ ಹೊಲದ ಫಸಲು ಸಾಕಷ್ಟಿತ್ತು. ಸವಣನ ಮನೆಯವರಿಗೆ ಬೇರೇನೂ ಇರಲಿಲ್ಲ.

ತನ್ನ ಕೆಲಸ ಸರಿಯಾಗಿ ಮಾಡಲಿಲ್ಲವೆಂಬ ಆತಂಕ. ಅಪ್ಪ ಏನು ಮಾಡುತ್ತಾನೋ ಎಂಬ ಭಯ. ಜೀವರು ಸುರಿಸುತ್ತಾ ಸವಣ ಓಡುತ್ತಲೇ ಇದ್ದ. ನಿದ್ದೆ ಮಾಡದೆ ತನಗೆ ಹೇಳಿದ್ದಂತೆ ಅಪಾಯ ಬಂದಾಗ ಜೋರಾಗಿ ಜಾಗಟೆ ಬಾರಿಸಿದ್ದರೆ ಊರಿಂದ ಜನ ಬಂದು ಆನೆ ಹಿಂಡನ್ನು ಓಡಿಸುತ್ತಿದ್ದರು. ಆದರೆ ಈಗ?

ಮಗ ಹೇಳಿದ್ದು ಕೇಳಿ ಅಪ್ಪ ಬಹಳ ಖಿನ್ನನಾದ. ಮುಖ ಸಪ್ಪಗಾದರೂ ಸವಣನನ್ನು ಬಯ್ಯಲಿಲ್ಲ. ಹೊಡೆಯಲಿಲ್ಲ. ಅವನು ಗದ್ದೆಯ ಕಡೆಗೆ ಓಡಿದ. ಸುದ್ದಿ ಹರಡಿದ್ದೇ ತಡ ಊರಿನ ಜನರೆಲ್ಲಾ ಬ್ರಾಹ್ಮಣ ಪ್ರಮುಖನ ಮನೆಯ ಮುಂದೆ ನೆರೆದರು. ಬಿಳಿಗಡ್ಡದ ಮುದುಕರೆಲ್ಲಾ ಗಡ್ಡ ನೀವಳಿಸುತ್ತಾ ಹಿಂದೆ ನಡೆದಿದ್ದ ಅಂಥವೇ ಪ್ರಸಂಗಗಳನ್ನು ನಿಧಾನವಾಗಿ ಹೇಳಿಕೊಳ್ಳುತ್ತಿದ್ದರು. ಒಮ್ಮೆ ಆಲಿಕಲ್ಲು ಮಳೆ. ಇನ್ನೊಮ್ಮೆ ಬೆಂಕಿ, ಮತ್ತೊಮ್ಮೆ ನೆರೆ. ಅಂತೂ ಫಸಲಿನ ನಷ್ಟ ಆಗಲೂ ಆಗಿತ್ತು. ಆನೆಗಳು ಮಾತ್ರ ಯಾವಾಗಲೂ ಬಂದುದಿಲ್ಲ. ಹುಲಿ-ಚಿರತೆ ಬಂದು ಯಾವಾಗಲೋ ಹೆಂಗಸರು, ಮಕ್ಕಳನ್ನು ತಿಂದಿದ್ದುವಂತೆ. ಆದರೆ ಆನೆಗಳು ಸುಳಿದೇ ಇರಲಿಲ್ಲವಂತೆ!

ಅಪ್ಪ ಮರಳಿ ಬಂದ. ಒಂದು ಗಂಟೆಯಲ್ಲಿ ಅವನಿಗೆ ಹತ್ತು ವರ್ಷದಷ್ಟು ವಯಸ್ಸು ಜಾಸ್ತಿಯಾಗಿತ್ತು. ಅವನ ಕಣ್ಣು ಅಷ್ಟು ಬೇಗ ಗುಳಿ ಬಿದ್ದಿತ್ತು. ಕೈಗಳು ಹೇಗೋ ನೇತಾಡುತ್ತಿದ್ದುವು. "ನಡಿ ಹೋಗೋಣ" ಎಂದ. ಕೆಟ್ಟ ಮಕ್ಕಳನ್ನು ಬಲಿ ಕೊಡುತ್ತಾರೆಂದು ಕೇಳಿದ್ದ ಸವಣನಿಗೆ ಗಾಬರಿ. ಕೋಪವೇ ಇಲ್ಲದೆ ಮಗನ ತಲೆಯನ್ನು ಅಪ್ಪ ನೇವರಿಸಿದ. ಮಗನಿಗೆ ನಿರಾಳವಾಯಿತು.

"ನಿನ್ನ ವಯಸ್ಸಿನವನಾಗಿದ್ದಾಗ ಒಮ್ಮೆ ನಮ್ಮ ಫಸಲೆಲ್ಲಾ ಮಳೆಯಿಲ್ಲದೆ ಸುಟ್ಟು ಬೂದಿಯಾಗಿತ್ತು. ಅಪ್ಪ ತಾತ ಆಗ ನನ್ನನ್ನು ಹತ್ತಿರದ ಪಟ್ಟಣಕ್ಕೆ ಕೊಂಡೊಯ್ದ. ಬಡ್ಡಿಗೆ ಸಾಲ ಕೊಡುವ ಶ್ರೀಮಂತನೊಬ್ಬನಿಂದ ಹಣ ಪಡೆದು ಬಿತ್ತನೆ ಬೀಜ ತಂದಿದ್ದೆವು. ಅವನ ಮನೆ ಈಗಲೂ ನನಗೆ ಗೊತ್ತು" ಎಂದ ಅಪ್ಪ. 'ಬಡ್ಡಿಗೆ ಸಾಲ' ಎಂಬುದನ್ನು ಸವಣ ಮೊದಲು ಕೇಳಿದ್ದೇ ಆಗ. ಹಾಗೆಂದರೇನು? ಅದು ಮಂತ್ರವೋ ತಂತ್ರವೋ ಏನೋ ಇರಬೇಕೆಂದುಕೊಂಡು ಸುಮ್ಮನಾದ. ಇಲ್ಲದಿದ್ದರೆ ಪಟ್ಟಣದಲ್ಲಿ ಅವನಿಗೆ ಬಿತ್ತನೆ ಬೀಜ ಎಲ್ಲಿಂದ ಬರಬೇಕು!

ಅವನ ಮನೆಯ ಸುತ್ತ ಕಲ್ಲಿನ ಪೌಳಿ. ಒಳಗೆ ಹೋಗಲು ಕಬ್ಬಿಣದ ಬಾಗಿಲು. ಅವನ ಮೊದಲ ಮಾತೇ ಒರಟಾಗಿತ್ತು. ಈ ಬೋಳುತಲೆಯವನಿಗೆ ಎಂಥಾ ಪೊಗರು ಎಂದುಕೊಂಡ ಸವಣ. ಪೌಳಿಯ ಒಂದು ಕಡೆ ಒಬ್ಬ ಹುಡುಗ ಕಂಡ. ಕಬ್ಬಿಣದ ಬಾಣಲಿಯಲ್ಲಿ ಏನೋ ಬೇಯಿಸುತ್ತಿದ್ದಂತೆ ಕಂಡಿತು. ಮಂತ್ರವಾದಿಯ ಸಹಾಯಕ ಇವನು ಎನ್ನಿಸಿತು ಸವಣನಿಗೆ. ಹಾವು, ಹಲ್ಲಿ, ಕಪ್ಪೆ, ಎಲ್ಲಾ ಬೇಯಿಸಿ ಎಂಥದೋ ಕಷಾಯ ಮಾಡುತ್ತಿದ್ದಿರಬೇಕು. ಸವಣನನ್ನು ಹತ್ತಿರಕ್ಕೆ ಕರೆದ ಆ ಹುಡುಗ. ಹೋಗಿ ನೋಡಿದರೆ ಅವನೊಬ್ಬ ನರಪೇತಲ ನಾರಾಯಣ.

"ತಿನ್ನಲು ಏನಾದರೂ ಇದೆಯೇ?" ಎಂದ ಅವನು. ಅಮ್ಮ ಕೊಟ್ಟಿದ್ದ ರೊಟ್ಟಿಯ ಒಂದು ಚೂರನ್ನು ಸವಣ ಅವನಿಗೆ ಕೊಟ್ಟ. "ಈ ಹಾಳು ರಕ್ತ ಹೀರುವವನಿಗೆ ನನ್ನನ್ನು ಒತ್ತೆಯಾಳಾಗಿ ಬಿಟ್ಟಿದ್ದಾರೆ," ಎಂದ ಅವನು. ಕತೆಗಳಲ್ಲಿ ಬರುವ ರಾಕ್ಷಸರು, ಪಿಶಾಚಿಗಳು ಮನುಷ್ಯರ ರಕ್ತ ಹೀರುತ್ತಾರೆಂದು ಕೇಳಿದ್ದ ಸವಣನಿಗೆ ಆಶ್ಚರ್ಯ. "ಈ ರಕ್ತ ಹೀರುವವರು ಹೇಗಿರುತ್ತಾರೆ?" - ಸವಣ ಕೇಳಿದ. "ಈಗ ತಾನೆ ನೋಡಿದೆಯಲ್ಲ. ಹೆಂಗಸಿನ ಮಂಡಿಯಷ್ಟು ನುಣುಪು ಅವನ ತಲೆ. ಅವನ ಸೊಟ್ಟ ಮೂಗು ಕಾಣಲಿಲ್ಲವೇ?"



"ಅಂದರೆ, ಬಡ್ಡಿಗೆ ಸಾಲ ಕೊಡುವವನು ತಾನೆ?"– ಸವಣ ಕೇಳಿದ. ಆ ವೇಳೆಗೆ ಅಪ್ಪ ಹೊರಗೆ ಬಂದ. ಸ್ವಲ್ಪ ಖುಷಿಯಾಗಿದ್ದ. "ಬೀಜ ಸಿಕ್ಕಿತು. ಮತ್ತೆ ನಾಳೆ ಬಂದು ತೆಗೆದುಕೊಂಡು ಹೋಗೋಣ. ಬಳ್ಳಕ್ಕೆ ಒಂದೂವರೆ ಬಳ್ಳ, ಅಷ್ಟೇ," ಎಂದ. ಮತ್ತೆ ಅರ್ಥವಾಗದ ಮಾತು! ಅಪ್ಪ ತಿಳಿಯಹೇಳಿದ: "ಅವನು ಕೊಡುವ ಒಂದೊಂದು ಬಳ್ಳಕ್ಕೂ ಒಂದೂವರೆಯಷ್ಟು ಹಿಂದಕ್ಕೆ ಕೊಡಬೇಕು."

–ಓಹೋ, ರಕ್ತ ಹೀರುವವನು ಎಂದನಲ್ಲವೆ ಆ ಹುಡುಗ. ಸವಣನಿಗೆ ಸ್ವಲ್ಪ ಅರ್ಥವಾಯಿತು. ಅಪ್ಪ ಕೊಯ್ಲು ಮಾಡಿದ ನಂತರ ಇನ್ನು ಉಳಿಯುವುದೇನು! ಮಾರನೆಯ ದಿನ ಎಲ್ಲಾ ಮರೆತು ರೈಖ್ವನ ಜೊತೆ ಆಟವಾಡುತ್ತಿದ್ದ. ಹಿಂದಿನ ದಿನ ಪಟ್ಟಣಕ್ಕೆ ಹೋಗಿದ್ದುದನ್ನೆಲ್ಲಾ ಅವನಿಗೆ ಹೇಳಿದ.

"ನಮ್ಮಪ್ಪನೂ ಹೋಗಿದ್ದ. ಅವನೂ ಬೀಜ ಪಡೆದು ಬಂದ. ಮೂರು ಬಳ್ಳಕ್ಕೆ ನಾಲ್ಕು ಬಳ್ಳ" ಎಂದ ರೈಖ್ವ. "ಏಲಾ ಇವನ, ನಮ್ಮಪ್ಪ ಮಾತ್ರ ಏಕೆ ಜಾಸ್ತಿ ಕೊಡಬೇಕು? ಬಡ್ಡಿಗೆ ಸಾಲವೆಂದರೆ ಇದೇ ಏನು?"– ಸವಣ ಎಂದುಕೊಂಡ. ಪಂತನಿಗಿಂತಲೂ ಅಪ್ಪ ಬಡವ. ಆದರೂ ಅವನು ಜಾಸ್ತಿ ಕೊಡಬೇಕೆ?

ಮನೆಗೆ ಬಂದು ಸವಣ ಅಪ್ಪನಿಗೆ ಹೇಳಿದ. "ಎಲ್ಲಾದರೂ ಉಂಟೆ? ಪಾಪ. ರೈಖ್ವನಿಗೆ ಸರಿಯಾಗಿ ಗೊತ್ತಿಲ್ಲ" ಎಂದ ಅಪ್ಪ. ಹೇಗೂ ಇರಲಿ ಎಂದು ಪಂತನ ಬಳಿ ಹೋಗಿ ವಿಚಾರಿಸಿದ. ಹಿಂತಿರುಗಿದಾಗ ಅವನ ಮುಖ ಕಪ್ಪಿಟ್ಟಿತ್ತು. [illegible]

[illegible]." [illegible] ಅಪ್ಪ [illegible] [illegible] [illegible].

"[illegible] [illegible]? ರಾಜನಿಗೆ [illegible] [illegible] ಅವನು [illegible] ರಕ್ಷಕ. ಅವನು ಈ [illegible] ಆಗಗೊಡುವುದಿಲ್ಲ. ನೋಡುತ್ತಿರು. [illegible] [illegible] [illegible] [illegible] [illegible] [illegible] [illegible] [illegible] [illegible] ?"

ಅಪ್ಪನಿಗೆ ಅದು [illegible] ತರಲಿಲ್ಲ. "ಮತ್ತೆ ಆನೆಗಳು [illegible] ನೋಡಿಕೊಳ್ಳಲು [illegible] ಈ ಎಷ್ಟು ದೊಡ್ಡ [illegible]" ಎಂದನು.

ನಾಲ್ಕೈದು ದಿನ ಕಳೆಯಿತು. ಅಪ್ಪ-ಮಗ ರಾಜಧಾನಿಗೆ ಹೊರಟರು. ಅಬ್ಬಾ! ಎಷ್ಟು ದೊಡ್ಡ ಊರು. ಬಡ್ಡಿಗೆ ಸಾಲ ಕೊಡುವವನ ಊರಿಗಿಂತ ಭಾರಿ ದೊಡ್ಡದು. ಅಪ್ಪ 'ಅರಮನೆಗೆ' ಎಂದು ಬೇರೆ ಹೇಳಿದ್ದ. ಅದರ ಸುತ್ತ ಅದೆಷ್ಟು ಎತ್ತರದ ಗೋಡೆಗಳು! ಹೀಗಿದ್ದರೆ ಯಾವ ಆನೆಯೂ ನುಗ್ಗಲಾರದಲ್ಲವೇ ಎನಿಸಿತು ಸವಣನಿಗೆ. ಒಳಗೆ ಹೋಗಲು ಮಹಾದ್ವಾರವಿದ್ದಿತು. ಆದರೆ ಅಪ್ಪ-ಮಗನಿಗೆ ಅಲ್ಲಿ ಪ್ರವೇಶ ದೊರೆಯಲಿಲ್ಲ. ಭರ್ಜಿ ಹಿಡಿದಿದ್ದ ಕಾಲಾಳುಗಳು ಅವರನ್ನು ತಡೆದು ನಿಲ್ಲಿಸಿದರು. "ರಾಜನ ಹತ್ತಿರ ಕೆಲಸವಿದ್ದರೆ ಅವನು ನೇಮಿಸಿರುವ ನ್ಯಾಯಾಧೀಶನ ಹತ್ತಿರ ಹೋಗು, [illegible] ಬಳಿ ಇದ್ದಾನೆ," ಎಂದ ಒಬ್ಬ ಭಟ.

ಅಲ್ಲೋ! ಜನಜಂಗುಳಿ. ಎಲ್ಲರದೂ ಸಡಗರವೇ. ಅದೇನು ಕೂಗಾಟ! ಅದು ಬೇಕೇ, ಇದು ಬೇಕೇ, ಅದು ಕೊಡು, ಇದು ಕೊಡು, ಬೆಲೆ ಎಷ್ಟು– ಹೀಗೆ ಗಲಾಟೆ. ಸವಣನ ತಲೆ ಗರ್ರೆಂದು ಸುತ್ತಿತು. ಅದೇನು ಅಬ್ಬರ, ಅದೆಷ್ಟು ಥರಾವರಿ ಸರಕುಗಳು! ಅಪ್ಪನಿಂದ ಬೇರಾಗಿಬಿಡುವೆನೆಂಬ ದಿಗಿಲು ಅವನಿಗೆ. ಅಪ್ಪನ ಕೈ ಭದ್ರವಾಗಿ ಹಿಡಿದುಕೊಂಡ.

"ದಾರಿ ಬಿಡಿ, ದಾರಿ ಬಿಡಿ" ಎಂಬ ಕೂಗು. ಆಮೇಲೆ ನೂಕು ನುಗ್ಗಲು. ಎತ್ತಿನ ಬಂಡಿ. ಅಲ್ಲ, ದೊಡ್ಡ ಪಂಜರವೊಂದನ್ನು ಎಳೆಯುತ್ತಿದ್ದ ಎತ್ತುಗಳು. ಪಂಜರದಲ್ಲಿ ಜೀರ್ದಿಬಟ್ಟೆಯ ಧರ್ಮ ಪ್ರವರ್ತಕರು! ಕೆಲವರು ಸರಳುಗಳಲ್ಲಿ ಕೈಚಾಚಿ ಏನಾದರೂ ತಿನ್ನಲು ಕೊಡಿರೆಂದು ಬೇಡುತ್ತಿದ್ದರು.

"ಪ್ರಾಣಿಗಳನ್ನು ಕೂಡಿಹಾಕುವಂತೆ, ಇವರನ್ನೇಕೆ ಪಂಜರದಲ್ಲಿಟ್ಟಿದ್ದಾರೆ?" ಎಂದು ಸವಣ ಅಪ್ಪನನ್ನು ಕೇಳಿದ. "ಸುಮ್ಮನಿರು. ಜೋರಾಗಿ ಮಾತಾಡಬೇಡ. ಅವರು ಕಾನೂನನ್ನು ಮುರಿದಿದ್ದಾರೆ. ಅಪರಾಧಿಗಳು. ಬೇರೆಯವರಿಗೆ ಬುದ್ಧಿ ಬರಲೆಂದು ಇವರನ್ನು ನಗರದ ಸುತ್ತ ಸುತ್ತಿಸುತ್ತಿದ್ದಾರೆ" ಎಂದ ಅಪ್ಪ.

"ಒಳ್ಳೆಯದಾಯಿತು. ಬಡ್ಡಿಗೆ ಸಾಲ ಕೊಡುವುದರಲ್ಲಿ ಅನ್ಯಾಯ ಮಾಡಿರುವ ಆ ಬೊಕ್ಕ ತಲೆಯವ ನಾಳೆ ಪಂಜರ [illegible]" [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible]

ಮಾಡಿದ್ದೇನು? ಹಾಕಲಿ ಅವನನ್ನು ಪಂಜರದೊಳಗೆ; ಕಳ್ಳರು, ಪಾತಕಿಗಳು ಅವನಿಗೆ ಸರಿಯಾದ ಜೊತೆ."

ಅಪ್ಪ-ಮಗ ಕಡೆಗೂ ನ್ಯಾಯಾಧೀಶನಿದ್ದೆಡೆಗೆ ಬಂದರು. ಎತ್ತರದ ಜಾಗದಲ್ಲಿ ದೊಡ್ಡ ಪೀಠದಲ್ಲಿ, ವಿಲಕ್ಷಣವಾದ ಉಡುಪು ಧರಿಸಿ ಕೂತಿದ್ದ ಆತ. ಚಿನ್ನದ ಮೆರಗು, ವಜ್ರದುಂಗುರ ಎಲ್ಲಾ ಫಳಫಳಿಸುತ್ತಿತ್ತು. ಎರಡು ಕಡೆಯಲ್ಲೂ ಕಾರಕೂನರು ಬೆನ್ನು ಬಾಗಿಸಿ ಕುಳಿತು ಅವನು ಹೇಳುತ್ತಿದ್ದುದನ್ನು ತಾಳೆಗರಿಗಳ ಮೇಲೆ ಬರೆದುಕೊಳ್ಳುತ್ತಿದ್ದರು. ಅಪ್ಪನ ಸರದಿ ಬರಲು ಬಹಳ ಕಾಲವೇ ಹಿಡಿಯಿತು.

ನ್ಯಾಯಾಧೀಶ ಕೇಳಿದ: "ನೀನು ಯಾವ ಜಾತಿಯವನು?" ಉತ್ತರ: "ವೈಶ್ಯ". "ಏನು ನಿನ್ನ ಅಹವಾಲು?"– "ನನಗೆ ನ್ಯಾಯ ಬೇಕು. ಬಡ್ಡಿಗೆ ಸಾಲ



ಕೊಡುವವನು ನನಗೆ ಮೋಸ ಮಾಡಿದ್ದಾನೆ. ಇನ್ನೊಬ್ಬನಿಗೆ ಮೂರಕ್ಕೆ ನಾಲ್ಕು ಬಳ್ಳ, ನನಗೆ ಮಾತ್ರ ಒಂದಕ್ಕೆ ಒಂದೂವರೆ."

"ಆ ಇನ್ನೊಬ್ಬನಾರು?" ಉತ್ತರ: "ಪಂತ. ಅವನು ಕ್ಷತ್ರಿಯ."

"ಹಾಗಿದ್ದರೆ ಎಲ್ಲಾ ನ್ಯಾಯವಾಗಿಯೇ ಇದೆ. ಜಾತಿಗೆ ತಕ್ಕಂತೆ ಬಡ್ಡಿ ಎಂದು ನಿನಗೆ ತಿಳಿಯದೆ? ಅವನದು ತಪ್ಪಿದ್ದರೂ ನೀನು ಆಪಾದನೆ ಮಾಡುವಂತಿಲ್ಲ, ನಮ್ಮ ನಿಯಮದ ಪ್ರಕಾರ ಸಾಲ ಪಡೆದವನು ಸಾಲ ಕೊಟ್ಟವನ ವಿರುದ್ಧ ದೂರು ಸಲ್ಲಿಸುವಂತಿಲ್ಲ, ಗೊತ್ತಾಯಿತೆ? ನಮ್ಮ ಸಮಯ ಹಾಳು ಮಾಡಿದ್ದಕ್ಕೆ ದಂಡ ತೆರಬೇಕು. ಕೊಯ್ಲಿನ ನಂತರ ನಾಲ್ಕು ಬಳ್ಳ ನೆಲ್ಲು ತುಂಬಿಕೊಡಬೇಕು, ತಿಳಿಯಿತೆ?"

ಅಪ್ಪ ದಂಗಾಗಿ ಹೋದ. ಆನೆಯ ಮಾತೇ ಅವನಿಂದ ಹೊರಡಲಿಲ್ಲ. ಬಗ್ಗಿಯಲ್ಲಿ ಹಳ್ಳಿಗೆ ಹಿಂದಿರುಗಿದರು. ಕೊಯ್ಲಿನ ನಂತರ [illegible] ಮಾಡುತ್ತಿದ್ದಾಗ ಯಾವನೋ ತಾಳೆಗರಿ ಹಿಡಿದು ಬಂದ. "ಎಲ್ಲಿ ನಿನ್ನ ನಾಲ್ಕು ಬಳ್ಳ [illegible]?" ಎಂದ. ಅಪ್ಪ ಮರುಮಾತಾಡದೆ ತಲೆ ತಗ್ಗಿಸಿ [illegible] [illegible] [illegible] ಪಂಜರದಲ್ಲಿ ಹಾಕಿದರೇನು ಗತಿ? [illegible] [illegible] ಬಡ್ಡಿಗೆ ಸಾಲ ಕೊಟ್ಟವನಿಗೆ ಬೇರೆ ಕೊಡಬೇಕು. [illegible] [illegible]? ಕೊಡದಿರು [illegible] ಸರಿ "ಬಾಗಿಲು ಯಾರಿಗೂ ತೆಗೆಯಬೇಡಿ," [illegible] [illegible] ಅಪ್ಪ ಮನೆಯಿಂದ ಹೊರಬಿದ್ದ.

ಸಾಲ ಹಿಂದಿರುಗಿಸುವಂತೆ ಕೇಳಲು ಯಾರೂ ಬರಲಿಲ್ಲ. ಪ್ರಾರಬ್ಧ ಕಳೆಯಿತು ಎಂದುಕೊಂಡ ಅಪ್ಪ. ಸವಣ ಯಥಾಪ್ರಕಾರ ಹೊರಗೆ ಹೋಗುವುದು, ರೈಖ್ವನ ಜೊತೆ ಆಡುವುದು, ಎಲ್ಲಾ ಶುರುವಾಯಿತು. ಹೀಗಿರುವಾಗ ಒಂದು ದಿನ ಎತ್ತಿನ ಬಂಡಿಯೊಂದು ಬಂತು. ಗಾಡಿಯವನು ಯಾರನ್ನೋ ಹುಡುಕುತ್ತಿದ್ದಂತೆ ಕಂಡ. ದಾರಿ ತಪ್ಪಿರುವವನಿರಬೇಕೆಂದು ಸವಣ ಅವನಿಗೆ ಸಹಾಯ ಮಾಡಲು ಮುಂದಾದ. ಕೂಡಲೆ ಅವನು ಸವಣನ ಬಾಯಿ ಮುಚ್ಚಿ ಅವನನ್ನು ತರುಬಿಕೊಂಡು ಹೋದ. ಬಲವಂತವಾಗಿ ಗಾಡಿ ಹತ್ತಿಸಿದ. ಇದೆಲ್ಲಾ ಏನಾಗುತ್ತಿದೆಯೆಂದು ರೈಖ್ವ ತಿಳಿಯದಾದ. ಕೆಲವು ದಿನಗಳಾದ ಮೇಲೆ ಅಪ್ಪ ಸವಣನನ್ನು ಪಟ್ಟಣದಲ್ಲಿ ಕಂಡ. ಗಾಡಿಯವನು ಯಾರೆಂದು ಬೇರೆ ಹೇಳಬೇಕೆ? ಬಡ್ಡಿಗೆ ಸಾಲ ಕೊಟ್ಟಿದ್ದವನು. ಮನುವಿನ ನಿಯಮದ ಪ್ರಕಾರ ಹುಡುಗನನ್ನು ಒತ್ತೆಯಾಳು ಮಾಡಿಕೊಳ್ಳಲು ಅಪಹರಿಸಿ ತಂದಿದ್ದ.

ಸವಣ ಈಗ ಬೋಳುತಲೆಯವನ ಮನೆಯಲ್ಲಿ ಹತ್ತಾರು ಕಷ್ಟದ ಕೆಲಸಗಳನ್ನು ಮಾಡುತ್ತಾ ಸೊರಗಿ ಹೋಗಿದ್ದಾನೆ. ಹಿಂದೆ ಅವನು ಈ ಮನೆಯಲ್ಲಿ ಕಂಡಿದ್ದ ತೆಳ್ಳನೆಯ ಹುಡುಗನಂತೆ ಇವನೂ ತೆಳ್ಳಗಾಗಿದ್ದಾನೆ. ಎರಡು ವರ್ಷ ಕಳೆದರೂ ಅಪ್ಪನಿಗೆ ಸಾಲ ತೀರಿಸಲಾಗಲಿಲ್ಲ. ಸಾಲವೂ ಹೆಚ್ಚಾಗುತ್ತಿತ್ತು. ಹುಡುಗನಿಗೆ ಹಳ್ಳಿಯ ಆಟಗಳ ನೆನಪು ಸಹ ಮಾಸಿಹೋಯಿತು. ದಿನ ಅದೆಷ್ಟು ದೀರ್ಘ ಎನಿಸತೊಡಗಿತು. ಯಜಮಾನ ಕಟುವಾಗಿದ್ದನಾದರೂ 'ಹೊಲಸು' ಕೆಲಸ ಯಾವುದೂ ಸವಣನ ಪಾಲಿಗೆ ಬರುತ್ತಿರಲಿಲ್ಲ, ಅವನ್ನು ಮಾಡಲು ಶೂದ್ರ ಒತ್ತೆಯಾಳುಗಳಿದ್ದರು. ಅವರಿಗೆ ಇರಲು, ಉಣ್ಣಲು, ಬೇರೆ ಜಾಗವಿತ್ತು. ಸವಣನಿಗೆ ಅವರನ್ನು ಕಂಡರೆ ಹೊಟ್ಟೆಕಿಚ್ಚು. ಅವನೊಬ್ಬನೇ ಇದ್ದ, ಆದರೆ ಅವರು ಹಲವರಿದ್ದರು. ಮಾತನಾಡಲು ಸಹ ಇವನಿಗೆ ಯಾರೂ ಇಲ್ಲ. ಅವರ ಬಳಿ ಮಾತನಾಡಹೋದರೆ ಉಸ್ತುವಾರಿ ಸೇವಕನಿಂದ ಏಟು ಬೀಳುತ್ತಿತ್ತು.

ಕೆಲವೊಮ್ಮೆ ಬೊಕ್ಕತಲೆಯವನು ಸವಣನ ಬಳಿ ಬಂದು ಕೀರಲು ಧ್ವನಿಯಲ್ಲಿ ಹೇಳುತ್ತಿದ್ದ: "ನಿನಗೆ, ನಿಮ್ಮಪ್ಪನಿಗೆ ನಾನು ಊಟ ಕೊಡುತ್ತಿದ್ದೇನೆ. ನೀನು ಚೆನ್ನಾಗಿ ದುಡಿಯಬೇಕು ಕಣೋ."

ಆ ಹಾವು-ಹಲ್ಲಿ ಕಷಾಯವನ್ನು ಇವನಿಗೇ ಕುಡಿಸುವಂತಿದ್ದರೆ ಎಷ್ಟು ಮಜಾ, ಎಂದು ಸವಣ ಎಷ್ಟೋ ಸಲ ಅಂದುಕೊಂಡ. ಹರಕಲು ಚಾಪೆಯ ಮೇಲೆ ರಾತ್ರಿ ವೇಳೆ ಮಲಗಿ ಇವತ್ತು ಖಂಡಿತ ಆನೆಗಳು ಬಂದು ಈ ಹಾಳು ಮನೆಗೆ ಲಗ್ಗೆ ಇಡುತ್ತವೆ ಎಂದು ಮುಖ ಹಿಗ್ಗಿಸಿಕೊಳ್ಳುತ್ತಿದ್ದ. ಪೌಳಿಯನ್ನು ಕೆಡವಿ ಒಳನುಗ್ಗಿ, ಬೋಳುತಲೆಯವನನ್ನು ಸೊಂಡಿಲಿಗೆ ಸಿಕ್ಕಿಸಿಕೊಂಡು ನೆಲಕ್ಕೆ ಅಪ್ಪಳಿಸಿ, ಘೀಳಿಡುತ್ತಾ ಆನೆಗಳು ಮದದಿಂದ, ಮುದದಿಂದ ಅಡ್ಡಾಡುತ್ತವೆ. ಅವು ಘೀಳಿಟ್ಟು ಇಡೀ ಪಟ್ಟಣವನ್ನು ಜಾಗೃತಗೊಳಿಸುತ್ತವೆ. ತಾನೂ ಎದ್ದು ಹರ್ಷದಿಂದ ಜಾಗಟೆ ಬಾರಿಸಬಹುದು. ಅದನ್ನು ಯಾರು ತಾನೆ ತಪ್ಪಿಸಲು ಸಾಧ್ಯ!

–ಜಿ. ಆರ್.

(ಆಧಾರ)

ಜನಸಂಖ್ಯಾ ಆಸ್ಫೋಟ



—ಎಸ್. ಕಾವ್ಯ (ಯೂನಿಸೆಫ್ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಕಲಾಕೃತಿ)

ಒಗಟುಗಳಲ್ಲೇ ಉತ್ತರ ಅಡಗಿದೆ, ಪತ್ತೆಮಾಡಿ

1 ನಾನಿಲ್ಲದೆ ನೀವು ಬದುಕಲಾರಿರಿ,
ನನ್ನಲ್ಲಿ ಅಡಗಿದೆ ಪರಿಪರಿಯ ಸರ.

2 ನಾನು ನಿಮ್ಮ ಪ್ರೀತಿಯ ತರಕಾರಿ,
ನನ್ನಲ್ಲಿ ಅಡಗಿದೆ ಆಂಗ್ಲ ಭಾಷೆಯ ದಕ್ಷಿಣ.

3 ನಾನೊಂದು ಸಾಂಬಾರು ಪದಾರ್ಥ,
ನನ್ನಲ್ಲಿ ಅಡಗಿದೆ ಮೆಣಸು.

4 ನಾನೊಂದು ಹಣ್ಣು,
ನನ್ನಲ್ಲಿ ಅಡಗಿದ್ದಾಳೆ ಜಗನ್ಮಾತೆ ಸೀತೆ.

ಉತ್ತರ: *1. ಪರಿಸರ 2. ಸೌತೆಕಾಯಿ*
3. ಮೆಣಸಿನಕಾಯಿ 4. ಸೀತಾಫಲ.

ಪುಟ್ಟ ಪುಟ್ಟಿ ಕೇಳುವರು

"ಪುಟ್ಟ ಪುಟ್ಟಿ, ಆನಂದವಾಗಿ ಗಿಡಗಳ ಮೇಲೆ ಹಾರಾಡುತ್ತಿರೋ ಚಿಟ್ಟೇನಾ ಹಿಡೀಬಾರ್ದು."

"ಏಕೆ ಹಿಡೀಬಾರ್ದಮ್ಮ ?" ಪುಟ್ಟ ಪುಟ್ಟಿ ಕೇಳಿದ್ರು.

ಒಂದು ಚಿಟ್ಟೆ ಈ ಮಾತು ಕೇಳಿಸಿಕೊಂಡು 'ಇರಿ, ನಾನೇ ನಿಮಗೆ ಹೇಳ್ತೀನಿ' ಅಂತು.

'ಹೂವಿಂದ ಹೂವಿಗೆ ಹಾರ್ತಾ ಮಧುರಸ ಹೀರ್ತೀವಿ. ಜೊತೆಗೆ ಒಂದು ಹೂವಿನಿಂದ ಇನ್ನೊಂದು ಹೂವಿಗೆ ಪರಾಗರೇಣುಗಳನ್ನು ತೆಗೆದುಕೊಂಡು ಹೋಗಿ ಹಾಕ್ತೀವಿ. ಹೀಗೆ ಮಾಡೋದ್ರಿಂದ ಹೂವು ಗರ್ಭಧಾರಣೆ ಮಾಡಿ ಕಾಯಿ, ಹಣ್ಣು, ಬೀಜಗಳನ್ನು ಕೊಡುತ್ತೆ. ನಾವು ಈ ಕೆಲಸ ಮಾಡ್ದೆ ಇದ್ರೆ ನಿಮಗೆ ಕೆಲವು ಹಣ್ಣು ತರಕಾರಿ ಸಿಗೊಲ್ಲ. ಬೀಜಗಳು ಆಗದೇ ಇದ್ದರೆ ಆ ಸಸ್ಯಗಳ ಸಂತತಿ ಬೆಳೆಯೊಲ್ಲ. ಈಗ ಹೇಳಿ ನೀವು ನಮ್ಮನ್ನು ಸಾಯಿಸಿಬಿಟ್ರೆ!

'ನಿಮ್ಮ ಸುತ್ತಲೂ ಇರೋ ತರಕಾರಿ, ಹಣ್ಣಿನ ಗಿಡಗಳನ್ನು ಗಮನಿಸಿ. ನಾವು ಯಾವುಯಾವುದನ್ನು



ಪರಾಗಸ್ಪರ್ಶ ಮಾಡ್ತೇವಿ ಅಂತ ಪತ್ತೆಹಚ್ಚಿ.'

'ಚಿಟ್ಟೆಮರಿ ! ಚಿಟ್ಟೆಮರಿ ! ನೀನು ಇಷ್ಟೆಲ್ಲಾ ಉಪಕಾರ ಮಾಡ್ತೀಯಾ ಅಂತ ನಮಗೆ ಗೊತ್ತೇ ಇರ್ಲಿಲ್ಲ.'

ಹಾರು, ಹಾರು, ಹಾರಾಡು ಚಿಟ್ಟೆ,
ನಿನ್ನ ಬಣ್ಣ, ನಿನ್ನ ಅಂದ ಸವಿಯುತ
ಅಚ್ಚರಿಯಿಂದಲಿ ಆನಂದಿಸುವೆವು.

ಪರಿಸರ ಉಳಿಸಿ

ಸುತ್ತಮುತ್ತಲೆಲ್ಲಿ ನೋಡಿದರೂ ಪ್ರಕೃತಿ
ಪ್ರತಿಯೊಂದು ವಸ್ತುವಿಗೊಂದೊಂದು ಆಕೃತಿ

ಹೋಲಿಕೆಗಿದೆ ನಿನ್ನೊಡನೆ ಇನ್ನೇನು!
ನೀ ನೀಡುವ ಮುದದ ಸಮ ಮತ್ತೇನು!

ಬೆಟ್ಟ, ಗುಡ್ಡ, ನದಿ, ತೊರೆ
ಆಗುವುದಿಲ್ಲ ನಿಮಗಿದೆಲ್ಲ ಹೊರೆ

ಬೆಳೆಯುತಿಹೆವು ನಾವು ನಿನ್ನ ಮಡಿಲಲ್ಲಿ
ಎಲ್ಲರಿಗಿಂತ ಸುಂದರ ನೀ ಜಗತ್ತಲ್ಲಿ

ಹಾಳಾಗುತ್ತಿರುವೆ ನೀ ಮನುಜನಿಂದ
ನಿನ್ನ ಕಾಪಾಡಲು ಸಾಧ್ಯವೇ ನಮ್ಮಿಂದ

— ಬಿ. ಮೈತ್ರಿ

ಹೊಸತು ಎಲ್ಲರಿಗೂ
ಸದಾ ಬೇಕು ಜೀವನದಿ
ತುಂಬಿರಲು ಸಂತಸ॥

— ಎಸ್. ಅನ್ನಪೂರ್ಣ

ನಾನಾರೆಂದು ಹೇಳಿದರೆ ನೀವೇ ಜಾಣರು

1 ನಿನಗೆ ಬೇಡದ್ದು ಹೀರುವೆ
ಆಹಾರ ತಯಾರಿಸುವೆ
ನಿನಗೆ ತಂಪು ನೀಡುವೆ

2 ನಾನು ಉರಿಯಲಾರೆ
ನಾನು ಉರಿಸಲಾರೆ
ಉರಿಯನಾರಿಸಬಲ್ಲೆ

3 ನಾನೊಂದು ಸ್ವಯಂಪ್ರಭೆ
ಬೇಗುವೆ ನಿನ್ನ ಕೆಲಸಕಾರ್ಯಗಳಿಗಾಗಿ
ಮರೆಯಾಗುವೆ ನಿನ್ನ ವಿಶ್ರಾಂತಿಗಾಗಿ

4 ಭೂಮಂಡಲದ ಸುತ್ತಲೂ ವಾಯುಮಂಡಲ
ವಾಯುಮಂಡಲದ ಸುತ್ತಲೂ ನಾನು ಸುತ್ತುವರಿದಿರುವೆ
ನಿಮ್ಮ ಆಟಗಳಿಂದ ನನ್ನ ಛಿದ್ರಿಸಿದರೆ ತಿಳುಗೊಳಿಸಿದರೆ
ಎರಗುವುದು ವಿಪತ್ತು ನಿಮ್ಮ ಮೇಲೆ

ಉತ್ತರ: *1. ಸಸ್ಯ 2. ಇಂಗಾಲದ ಡೈಆಕ್ಸೈಡ್*
3. ಸೂರ್ಯ 4. ಓಜೋನ್

ಬಿ. ಕೃ. ಪ್ರಭಾ (ಎಸ್. ಕೆ. ಪ್ರಭಾ)

ದಿ ಸ್ಟೋರಿ ಆಫ್ ಆ್ಯನ್ ಫ್ರಾಂಕ್

- ಮಿರ್ಯಮ್ ಪ್ರೆಸ್ಲರ್. (ಮ್ಯಾಕ್‌ಮಿಲನ್ ಮಕ್ಕಳ ಪುಸ್ತಕಗಳು, 1999)

'ನನ್ನ ಮರಣಾನಂತರವೂ ನಾನು ಸದಾಕಾಲ ''ಬದುಕಿ''ರಲಿಚ್ಛಿಸುತ್ತೇನೆ. ಆದ್ದರಿಂದ ನನ್ನಲ್ಲಿ ಅಡಗಿರುವ ಸಕಲ ಭಾವನೆಗಳನ್ನೂ ಅಭಿವ್ಯಕ್ತಗೊಳಿಸುವಂತ ದೇವರು ನನಗೆ ಕರುಣಿಸಿರುವ ಈ ದಿವ್ಯ ವರಕ್ಕಾಗಿ ನಾನು ಅವನಿಗೆ ಕೃತಜ್ಞಳಾಗಿರುವೆನು.'


ಹದಿನಾಲ್ಕು ವರ್ಷದ ಆ್ಯನ್ ಫ್ರಾಂಕ್ ಈ ಮಾತುಗಳನ್ನು ತನ್ನ 'ದಿನಚರಿ'ಯಲ್ಲಿ ಬರೆಯುವಾಗ ದುರಂತ ಕಟಕಿಯೋ ಎಂಬ ರೀತಿಯಲ್ಲಿ ಆ ಮಾತುಗಳು ಸತ್ಯವಾಕ್ಯಗಳಾಗುತ್ತಿರುತ್ತವೆಂದು ಕನಸು ಮನಸಿನಲ್ಲೂ ಅವಳು ಎಣಿಸಿರಲಿಲ್ಲ. ತನ್ನ ಅಲ್ಪಾವಧಿಯ ಜೀವನದ ಈ ದುರಂತ ಕಥೆ ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ರಚಿತವಾದ ಒಂದು ಚಿರಂತನ ಕೃತಿಯಾಗಬಹುದೆಂಬ ಕಲ್ಪನೆಯೂ ಅವಳಿಗಿರಲಿಲ್ಲ.

ಆ್ಯನ್‌ಳ ಘೋರ ಕಥೆ (ಆ್ಯನ್ ಫ್ರಾಂಕ್‌ಳ ಡೈರಿ) ಜಗತ್ತಿನ ಹಲವು ಓದುಗರ ಕುತೂಹಲವನ್ನೂ ಸಂವೇದನೆಯನ್ನೂ ಕಲಕಿದಂತೆ, ಅದಕ್ಕೆ ಸಂಬಂಧಿಸಿದ ಕೆಲವು ಅಪೂರ್ವ ಕೃತಿಗಳ ಪ್ರಕಟಣೆಗೂ ಕಾರಣವಾಗಿದೆ. ಅವಳನ್ನು ನಿಜ ಜೀವನದಲ್ಲಿ ಚೆನ್ನಾಗಿ ಬಲ್ಲ, ಅವಳ ಜತೆ ಹೊಕ್ಕು ಬಳಸಿದ, ಹಲಕೆಲವು ಸಂವೇದನಾಶೀಲ ವ್ಯಕ್ತಿಗಳು ಅವಳ ಆತ್ಮಕಥೆಯಾದ ಈ 'ದಿನಚರಿ'ಗೆ ಪೂರಕವಾಗುವ ಹಾಗೂ ಅವಳ ಬಹುಮುಖಿ ವ್ಯಕ್ತಿತ್ವವನ್ನು ಪರಿಸ್ಫುಟಗೊಳಿಸಬಲ್ಲ, ಟಿಕೆ ಟಿಪ್ಪಣಿಗಳನ್ನೂ, ನೆನಪುಗಳನ್ನೂ ಜೀವನ ಚಿತ್ರಗಳನ್ನೂ ಇತ್ತೀಚಿನ ವರ್ಷಗಳಲ್ಲಿ ಪ್ರಕಟಿಸಿದ್ದಾರೆ.

ಅಂಥ ಇತ್ತೀಚಿನ ಕೃತಿಗಳಲ್ಲಿ ಒಂದು : ಜರ್ಮನ್ ಭಾಷೆಯಲ್ಲಿ ಮಿರ್ಯಮ್ ಪ್ರೆಸ್ಲರ್ ಎಂಬಾಕೆ ಬರೆದ Die Lebeusgeschichte der Anne Frank (1992). ಅದನ್ನು ಇಂಗ್ಲಿಷಿಗೆ The Story of Anne Frank ಎಂಬ ಹೆಸರಿನಲ್ಲಿ ಆ್ಯಂಥಿಯ ಬೆಲ್ ಅನುವಾದಿಸಿದ್ದಾರೆ. ಬಹುಕಾಲದ ಸಂಶೋಧನೆಯ ಫಲವಾಗಿ Anne Frank : The Diary of a Young Girl ಗ್ರಂಥದ ಸಂಸ್ಕೃತ ಆವೃತ್ತಿಯನ್ನು ಹೊರತಂದ ಮಿರ್ಯಮ್ ಪ್ರೆಸ್ಲರ್ [illegible] ಜರ್ಮನ್ ಭಾಷೆಗೆ [illegible] ಜೊತೆಗೆ ಆ್ಯನ್ ಫ್ರಾಂಕ್ ಜೀವನದ ಬಗ್ಗೆ [illegible] ಮಾತನಾಡ [illegible] ಜರ್ಮನಿಯಲ್ಲಿ [illegible].

[illegible] 'ದಿನಚರಿ' [illegible] ಜಗತ್ತಿನ [illegible] ಆ್ಯನ್ ಫ್ರಾಂಕ್‌ಳ ಅಂತರಂಗ- [illegible] ಗಾಢವಾದ [illegible] ಈ ಪುಸ್ತಕದಲ್ಲಿ [illegible]

ಅವಳ ಜೀವನದ ಅಗೋಚರ, ಆದರೆ ಪ್ರಸ್ತುತವೆನಿಸುವ ಸಂಕೀರ್ಣ, ವಿವರಗಳು ಇಲ್ಲಿವೆ. ಅವಳ ಬಾಲ್ಯದ ದಿನಗಳು ಅವಳ ಒಳನಾಡಿಗಳು ಹಾಗೂ ಕುಟುಂಬದವರೊಂದಿಗಿನ ಸಂಬಂಧಗಳು, ಫ್ರಾಂಕ್ ಕುಟುಂಬದವರು ನಾಟ್ಸಿಗಳ ಕಣ್ಣು ತಪ್ಪಿಸಿ 'ರಹಸ್ಯ ಗೃಹ'ದಲ್ಲಿ ಕಳೆದ ಕಡು ಭೀಕರ ದೀರ್ಘ ನರಕ ಸದೃಶ ದಿನಗಳು - ಇವುಗಳಿಗೆ ಸಂಬಂಧಿಸಿದ ಹಲವಾರು ಸೂಕ್ಷ್ಮಾತಿಸೂಕ್ಷ್ಮ ವಿವರಣೆಗಳು ಈ ಪುಸ್ತಕದಲ್ಲಿ



ಹಾಸುಹೊಕ್ಕಾಗಿ ಬಂದಿವೆ. ಎಲ್ಲಕ್ಕಿಂತ ಮಿಗಿಲಾಗಿ 'ದಿನಚರಿ' ಬರೆದು ಮುಗಿಸಿದ ಮೇಲೆ ಆ್ಯನ್ ಫ್ರಾಂಕ್‌ಳು ದಸ್ತಗಿರಿಯಾಗಿ, ಕಾನ್‌ಸನ್‌ಟ್ರೇಷನ್ ಕ್ಯಾಂಪನ್ನು ಸೇರಿದುದು, ಅಲ್ಲಿ ರೋಗಪೀಡಿತಳಾಗಿ, ಆಹಾರ, ವೈದ್ಯಕೀಯ ಇನ್ನಿತರ ಯಾವುದೇ ಪರಿಹಾರ ಸಿಕ್ಕದೆ ಅಸಹಾಯಕ ಸ್ಥಿತಿಯಲ್ಲಿ ಅವಳು ಸಾಯುವುದು - ಮುಂತಾದ, ಈವರೆಗೆ ಅಜ್ಞಾತವಾಗಿ ಉಳಿದಿದ್ದ, ಸಂಗತಿಗಳ ಮನಕರಗಿಸುವ ನಿರೂಪಣೆಗಳು ಈ ಪುಸ್ತಕದ ಸಾಹಿತ್ಯಕ ಮೌಲ್ಯವನ್ನು ಹೆಚ್ಚಿಸಿವೆ.


ಗ್ರಂಥಕರ್ತಳ ಮುನ್ನುಡಿಯ ಈ ವಾಕ್ಯಗಳು ಗಮನಾರ್ಹ: 'ಯಾವುದೇ ಜೀವನ ಚರಿತ್ರೆಯ ಸ್ವರೂಪ ಹೀಗಿದ್ದರೆ ಅದು ನನಗೆ ತುಂಬಾ ಹಿಡಿಸುತ್ತದೆ. ಒಂದು ವ್ಯಕ್ತಿಯ ಜೀವನ ಏನಾಗಬಹುದಾಗಿತ್ತು ಎನ್ನುವುದಕ್ಕಿಂತ ಹೆಚ್ಚಾಗಿ ಅದು ಹೇಗಿತ್ತು? ಅದು ಸಾಗಿದ ರೀತಿ ಯಾವುದು? ಇವು ನನಗೆ ಬಹುಮುಖ್ಯವಾಗುತ್ತವೆ. ಒಬ್ಬ ವ್ಯಕ್ತಿಗೆ ಬದುಕಿನಲ್ಲಿ ಏನೇನು ಅಗತ್ಯಗಳಿದ್ದವು, ಹಂಬಲ-ಕನಸುಗಳಿದ್ದವು, ಆ ವ್ಯಕ್ತಿಯ ವಿಶಿಷ್ಟ ಪ್ರತಿಭೆ ಹೇಗೆ ಬೆಳಕಿಗೆ ಬಂತು ಅಥವಾ ಕನಸಾಗಿಯೇ ಉಳಿಯಿತು, ವ್ಯಕ್ತಿ ತನ್ನ ಜೀವನದಲ್ಲಿ ಕೈಗೊಂಡ ನಿರ್ಧಾರಗಳು ಯಾವುವು, ಅವುಗಳನ್ನು ಪ್ರಚೋದಿಸಿದ ಪ್ರೇರಣೆಗಳಾದರೂ ಯಾವುವು? ಆ್ಯನ್ ಫ್ರಾಂಕ್‌ಳ ಜೀವನದ ಅವಲೋಕನದಲ್ಲಿ ನನ್ನನ್ನು ಸೆಳೆದ ಪ್ರಶ್ನೆಗಳಲ್ಲಿ ಕೆಲವು ಇವು. ಇವು ಸುಲಭ ಪರಿಹಾರಕ್ಕೆ ದಕ್ಕುವಂಥ ಪ್ರಶ್ನೆಗಳಲ್ಲ. ಆ್ಯನ್ ಫ್ರಾಂಕ್ ಹದಿನಾರು ತುಂಬುವ ಮೊದಲೇ ತೀರಿಕೊಂಡ ನತದೃಷ್ಟೆ. ಅವಳ ಬದುಕಿನಲ್ಲಿ ಉದ್ಭವಿಸಿದ ಘಟನೆಗಳು ಅವಳ ಯತ್ನವಿಲ್ಲದೆ, ಗತ್ಯಂತರವಿಲ್ಲದೆ, ಸಂಭವಿಸಿದಂಥವು. ಅವಳು ತಾನಾಗಿ ಸ್ವ ಇಚ್ಛೆಯಿಂದ ನಿರ್ಧಾರಗಳನ್ನು ಕೈಗೊಳ್ಳುವ ಸಂದರ್ಭಗಳೇ ಒದಗಲಿಲ್ಲ. ಅವಳು ಸ್ಥಿತಿವಂತ ಯಹೂದ್ಯರ ಮಧ್ಯಮ ವರ್ಗದ ಸಂಸಾರಕ್ಕೆ ಸೇರಿದ ಹುಡುಗಿ; ಅವಳಿಗಿನ್ನೂ ನಾಲ್ಕು ವರ್ಷ ಸಹ ಆಗಿರಲಿಲ್ಲ, ಆಗ ಹಿಟ್ಲರ್‌ನ ನಾಜಿ ಸರ್ಕಾರ ಅಧಿಕಾರಕ್ಕೆ ಬಂತು. ಅವಳ ಮಾತೃಭೂಮಿ ಅವಳನ್ನು ವಿನಾಶದ ಅಂಚಿಗೆ ನೂಕಿ ಅಂತಿಮವಾಗಿ ಅವಳ ದುರಂತ ಸಾವಿಗೂ ಕಾರಣವಾಯಿತು. ಆದ್ದರಿಂದ ಆ್ಯನ್‌ಳ ಜೀವನ ಕಥೆಯನ್ನು ಅವಳ ಕಾಲದ ಚರಿತ್ರೆಯ ಹಿನ್ನೆಲೆಯಲ್ಲೇ ವೀಕ್ಷಿಸುವುದು ಅನಿವಾರ್ಯ. ಪೀಡಿತರು-ಪೀಡಕರು ಎಂಬುದಾಗಿ ಸಮಾಜವು ಎರಡು ವರ್ಗವಾಗಿ ಒಡೆದುಹೋಗಿದ್ದ ಕಾಲ ಅದು. ಹೀಗಾಗಿ ಆ್ಯನ್‌ಳ ವ್ಯಕ್ತಿತ್ವದೊಡನೆ ನಾನು ನನ್ನನ್ನು ಗಾಢವಾಗಿ ತೊಡಗಿಸಿಕೊಳ್ಳುವುದು ನನಗೆ ಬಹುಮುಖ್ಯ. ಅವಳ 'ದಿನಚರಿ'ಯನ್ನು ಓದುವಾಗಲೆಲ್ಲ ಅವಳು ಜೀವಂತವಾಗಿ ನನ್ನ ಕಣ್ಣ ಮುಂದೆ ನಿಲ್ಲುತ್ತಾಳೆ. ಅವಳು ತನ್ನ ಸಂಗಾತಿ 'ಕಿಟ್ಟಿ'ಗೆ (ಅದು ಅವಳ 'ದಿನಚರಿ'ಗೆ ಆ್ಯನ್ ಕೊಟ್ಟ ಹೆಸರು) ಬರೆದ ಪತ್ರಗಳು ಓದುಗರಾದ ನಮಗೇ ನೇರವಾಗಿ ಬರೆದ ಹಾಗಿವೆ. ಅವು ನಮ್ಮ 'ಪ್ರತಿಕ್ರಿಯೆ' ಬಯಸುತ್ತವೆ-ನಾವು ಅವುಗಳ ಧ್ವನಿಗೆ ಓಗೊಡದೆ ಬೇರೆ ಮಾರ್ಗವೇ ಇಲ್ಲ. ಆ್ಯನ್ ಎಂಬ ಆ ಹುಡುಗಿ ಹೇಗೆ ತನ್ನ ವಾರಗೆಯ ಎಳೆಯರ ಪ್ರತಿನಿಧಿಯೋ ಎಂಬಂತೆ ಬೆಳೆಯುತ್ತಾ ಹೋಗುತ್ತಾಳೆಂಬುದು ನನಗೆ ಆಶ್ಚರ್ಯವನ್ನುಂಟು ಮಾಡುತ್ತದೆ. ಅವಳು ಜೀವನವನ್ನು ಏಕೆ ಅಷ್ಟು ರುದ್ರ ಗಂಭೀರವೆಂಬಂತೆ ಪರಿಭಾವಿಸಿದಳು ಎಂಬುದನ್ನು ನೋಡುವಾಗ ಕೆಲವೊಮ್ಮೆ ನನಗೆ 'ಕಿರಿಕಿರಿ'ಯಾಗುತ್ತದೆ – ಆದರೆ ಇನ್ನೂ ಕೆಲವು ಸಲ ಅವಳ ಗಾಂಭೀರ ಮನೋಧರ್ಮವನ್ನು ಕುರಿತು ವಿಚಾರ ಮಾಡುವಾಗ ನನಗೆ ಸಂತೋಷವೂ ಆಗುತ್ತದೆ. ಕೆಲವೊಮ್ಮೆ ಅವಳ ನನ್ನ ನಡುವೆ ಹಾಯಲಾಗದ ಅಂತರವಿದೆ ಎನಿಸುತ್ತದೆ – ಮತ್ತೆ ಮರುಕ್ಷಣವೇ

ಎಚ್. ಕೆ. ರಾಮಚಂದ್ರ ಮೂರ್ತಿ

ಅವಳು ನನ್ನ ಮಗಳೇನೋ ಅನ್ನುವಷ್ಟು ಆಪ್ತಳಾಗುತ್ತಾಳೆ.'

ಈ ಪುಸ್ತಕ ಓದುವಾಗ ಹಲವು ಸ್ವಾರಸ್ಯದ ಅಂಶಗಳು ನಮಗೆ ಗೋಚರವಾಗುತ್ತವೆ. ಉದಾಹರಣೆಗೆ ಆ್ಯನ್ ತನ್ನ 'ದಿನಚರಿ' ಬರೆಯುವಾಗ ನಡುವೆ ಸಾಕಷ್ಟು ಕಾಗದ ಸಿಕ್ಕದೆ ಅದನ್ನು ನಿಲ್ಲಿಸಿ ಬೇರೆ ಬೇರೆ ನೋಟ್ ಪುಸ್ತಕದ ಹಾಳೆಗಳಲ್ಲಿ ಬೇರೊಂದು ಎರಡನೆಯ ಮತ್ತು ಮೂರನೆಯ ಆವೃತ್ತಿ ತಯಾರಿಸಿದ್ದಳು. 1946ರಲ್ಲಿ ಅವಳ ತಂದೆ ಆಟೋ ಫ್ರಾಂಕ್ ಒಬ್ಬನೇ ಕಾನ್‌ಸೆನ್‌ಟ್ರೇಷನ್ ಕ್ಯಾಂಪಿನಲ್ಲಿ ''ಸಾಯದೆ'', ಬದುಕಿ, ಹಿಂತಿರುಗಿದಾಗ ಅವನ ಸಹೋದ್ಯೋಗಿ ಮಿಸ್ ಮೀಪ್ ಆ ಮೂರೂ ಆವೃತ್ತಿಗಳ ಹಾಳೆಗಳನ್ನು ಒಟ್ಟು ಸೇರಿಸಿ ಅವನಿಗೆ ಕೊಡುತ್ತಾಳೆ, ಆವರೆಗೆ ಫ್ರಾಂಕ್ 'ಡೈರಿ'ಯನ್ನು ಓದಿಯೇ ಇರಲಿಲ್ಲ. ಉಳಿದವರಿಗೂ ಸಹ ಆ್ಯನ್ ಏನು ಬರೆಯುತ್ತಿದ್ದಳೆಂಬುದರ ವಿವರಗಳು ತಿಳಿದಿರಲಿಲ್ಲ. ಅದನ್ನು ಓದಿ ಫ್ರಾಂಕ್ ಅತ್ಯಂತ ಭಾವಪರವಶನಾಗುತ್ತಾನೆ. ತನ್ನ ಮಗಳ ವ್ಯಕ್ತಿತ್ವದ ಪರಿಶುದ್ಧ, ಗಾಢ, ಅವ್ಯಕ್ತ ಆಯಾಮಗಳನ್ನು ಪ್ರಪ್ರಥಮವಾಗಿ ಗುರುತಿಸಿದ ಅವನು ಅಪಾರ ವೇದನೆ ಅನುಭವಿಸುತ್ತಾನೆ. ಹೊಸದಾಗಿ ಸಿಕ್ಕಿದ ಈ ಬೇರೆ ಬೇರೆ ಆವೃತ್ತಿಗಳಿಂದ ಚರಿತ್ರೆಯ ಹೊಸದೊಂದು ಅಧ್ಯಾಯವೇ ಬಾಯ್ದೆರೆದಂತಾಯಿತು. ಹಿಟ್ಲರನ ಆಕ್ರಮಣ ನಡೆದು 1940ನೆಯ ಮೇ ತಿಂಗಳಲ್ಲಿ ನೆದರ್‌ಲ್ಯಾಂಡ್ಸ್‌ನ ರಾಣಿ ಲಂಡನ್‌ಗೆ ಓಡಿಬಂದು ಶರಣಾರ್ಥಿಯಾಗಿ ನೆಲೆಸಿದಳು. ಆಗ ಅಲ್ಲೊಂದು ಹಂಗಾಮಿ ಡಚ್ ಸರ್ಕಾರ ಸ್ಥಾಪಿತವಾಯಿತು. 1944ನೆಯ ಮಾರ್ಚ್ 28ರಂದು ಡಚ್ ಪ್ರಜೆಗಳನ್ನುದ್ದೇಶಿಸಿ ಭಾಷಣ ಮಾಡಿದ ಆ ದೇಶದ ಶಿಕ್ಷಣಮಂತ್ರಿ ಹೀಗೆ ಹೇಳಿದ: ''ಕೇವಲ ಸರ್ಕಾರಿ ದಾಖಲುಗಳು, ಆಜ್ಞೆಗಳ ಆಧಾರದ ಮೇಲೆ ಇತಿಹಾಸ ರಚಿಸುವುದು ಸಾಧ್ಯವಿಲ್ಲ. ಈ ಕೆಲವು ಘೋರ ದಿನಗಳಲ್ಲಿ ಒಂದು ರಾಷ್ಟ್ರವಾಗಿ ನಾವು ಏನೆಲ್ಲಾ ಅನುಭವಿಸಿದೆವೆಂಬುದು ಸಂಪೂರ್ಣವಾಗಿ ನಮ್ಮ ಭಾವೀ ಪೀಳಿಗೆಗೆ ತಿಳಿಯಬೇಕಾದರೆ ನಾವು, ಜನಸಾಮಾನ್ಯರು ಬರೆದ ಡೈರಿಗಳು, ಪತ್ರಗಳು ಮತ್ತು ಗುಪ್ತವಾಗಿ ಅಲ್ಲಲ್ಲಿ ಪಾದ್ರಿಗಳೋ ಧಾರ್ಮಿಕ ಪ್ರವಚನಕಾರರೋ ಕೊಟ್ಟ ಭಾಷಣಗಳು, ಮುಂತಾದವನ್ನು ಜೋಪಾನವಾಗಿ ಸಂಗ್ರಹಿಸಲು ಸರ್ವ ಪ್ರಯತ್ನವನ್ನು ನಡೆಸಬೇಕು. ಅವುಗಳ ಮೂಲಕ ನಮ್ಮ ರಾಷ್ಟ್ರೀಯ ಹೋರಾಟದ ಘನತೆ ವೈಭವಗಳ ಸಂಪೂರ್ಣ ಚಿತ್ರ ಮುಂದಿನ ಸಂತತಿಯವರಿಗೆ ಸಿಕ್ಕಂತಾಗುತ್ತದೆ.''

ಹೀಗೆ ಹೇಳಿದ ಕೆಲವೇ ತಿಂಗಳುಗಳಲ್ಲಿ ಡಚ್ ರಾಷ್ಟ್ರೀಯ ಪತ್ರಾಗಾರವೊಂದು ಸ್ಥಾಪಿತವಾಯಿತು– 'ನೆದರ್‌ಲ್ಯಾಂಡ್ಸ್ ಸ್ಟೇಟ್ ಇನ್‌ಸ್ಟಿಟ್ಯೂಟ್ ಫಾರ್ ವಾರ್ ಡಾಕ್ಯುಮೆಂಟೇಷನ್' ಅದರ ಮೂಲಕ 1986ರಲ್ಲಿ "Diary of Anne Frank" ಗ್ರಂಥದ 'ವಿಶಿಷ್ಟ ಆವೃತ್ತಿ' ಸಿದ್ಧವಾಯಿತು. ಈ ಅಧಿಕೃತ 'critical edition' ಈಗ ಪ್ರಖ್ಯಾತ ಆಕರ ಗ್ರಂಥವಾಗಿದೆ.



An [illegible] in the Diary. This is a photograph [illegible] looked [illegible] the time. Then I might [illegible] present. I'm afraid I [illegible]
Anne Frank [illegible]


ಅಷ್ಟೇ ಅಲ್ಲ, ಅದು ಒಂದು ಪ್ರಮುಖ ಐತಿಹಾಸಿಕ ದಾಖಲಾಗಿರುವುದರ ಜೊತೆಗೆ ಎಳೆ ವಯಸ್ಸಿನ ಆ್ಯನ್ ಕೇವಲ ಕೆಲವೇ ತಿಂಗಳುಗಳ ಅವಧಿಯ ಆ ಅಸಾಧಾರಣ ಸನ್ನಿವೇಶಗಳ ನಡುವೆ, ಆಂತರಿಕ ಘರ್ಷಣೆಗಳಿಗೆ ಸಿಕ್ಕಿ ಹೇಗೆ ಒಬ್ಬ ಅನನ್ಯ ಬೌದ್ಧಿಕ, ಆಧ್ಯಾತ್ಮಿಕ ಪ್ರೌಢಿಮೆಯ ಸ್ತ್ರೀಯಾದಳೆಂಬುದರ ಚರಿತ್ರೆಯೂ ಹೌದು.

ಈ ಪುಸ್ತಕದ ಇನ್ನೊಂದು ರಸಮಯ ಭಾಗ : ಲೇಖಕಿ 'ಆ್ಯನ್‌ಫ್ರಾಂಕ್.' ಆ್ಯನ್‌ಳ ವ್ಯಕ್ತಿತ್ವವನ್ನು ಕುರಿತು ವಿಚಾರ ಮಾಡುವಾಗ ಕೇವಲ ಇತರರು ನೀಡುವ ನೆನಪುಗಳನ್ನೇ ಆಧಾರವಾಗಿ ಸ್ವೀಕರಿಸುವುದು ಸಾಧುವಲ್ಲ, ಸರಿಯೂ ಅಲ್ಲ. ಆದ್ದರಿಂದ ನಾನು, ಆ್ಯನ್ ತನ್ನ ಬಗ್ಗೆ ಏನೇನು ವಿವರಗಳನ್ನು ಕೊಟ್ಟಿದ್ದಾಳೋ ಆ ವಿವರಗಳನ್ನೇ ಅನುಸರಿಸಿ ಅವಳ ಕುರಿತ ಚಿಂತನ-ಮಂಥನ ನಡೆಸಿದ್ದೇನೆ ಎನ್ನುತ್ತಾರೆ ಪ್ರೆಸ್ಲರ್. 'ಅವಳು 'ದಿನಚರಿ' ಬರೆಯುತ್ತಾ ಹೋದಂತೆ ಒಬ್ಬ ಸರ್ವಶ್ರೇಷ್ಠ ಚಿಂತನಶೀಲಳಾದ ಲೇಖಕಿಯಾಗಿ ಅವಳು ಏಕಾಂಗಿಯಾದಳು. [illegible] ವೈವಿಧ್ಯಮಯ ರಾಗ ಭಾವಗಳನ್ನು [illegible] ಸಣ್ಣಪುಟ್ಟ ಘಟನೆಗಳ ವಿವರಗಳನ್ನು ಕಲಾತ್ಮಕವಾಗಿ [illegible] ಅವಳ [illegible] ಯಿಂದಾಗಿ ಅವಳು ಇಂದು ಒಬ್ಬ ಲೋಕಪ್ರಿಯ ಲೇಖಕಿಯಾಗಿ ಅಮರತ್ವ ಗಳಿಸಿದ್ದಾಳೆ... 'ಅವಳು ಕಂಡ ಕನಸು ನನಸಾಗಿದೆ.' ಅವಳು ತಾನು ಬರೆದುದೆಲ್ಲವನ್ನೂ ಖುಷಿಯಿಂದ, ಉತ್ಸಾಹದಿಂದ, ಭಾವೋದ್ವಿಗ್ನತೆಯಿಂದ, ಆಳವಾದ ವೈಚಾರಿಕ ಮನೋಭಾವದಿಂದ ಬರೆದಳು..... ಬರೆದುದನ್ನು ಹಲವು ಸಲ ತಿದ್ದಿದಳು. ಅವಳು ತನ್ನ ದಿನಚರಿಯಲ್ಲಿ 2900 ಸಲ ಶಬ್ದ, ವಾಕ್ಯ ಹಾಗೂ ವಾಕ್ಯ ವಿನ್ಯಾಸ-ಅನ್ವಯಗಳನ್ನು ತಿದ್ದಿರುವುದು ಸ್ಪಷ್ಟವಾಗಿದೆ.'

'ರಹಸ್ಯಗೃಹ'ದಲ್ಲಿ ವಾಸವಾಗಿದ್ದ 25 ಕರಾಳ ತಿಂಗಳುಗಳ ವರ್ಣನೆ, ಅಲ್ಲಿ ಅಡಗಿದ್ದ ಎಂಟು ವ್ಯಕ್ತಿಗಳ ಪರಸ್ಪರ ಕ್ರಿಯೆ, ದೇಹ ಬುದ್ಧಿಭಾವಗಳ ಅನುಸಂಧಾನ, ಪರಸ್ಪರ ಟೀಕೆ-ಖಂಡನೆಗಳ ನ್ಯಾಯಾನ್ಯಾಯ ವಿವೇಚನೆ, ಪ್ರಮುಖ 'ಪಾತ್ರ'ಗಳ ಮೌಲ್ಯಮಾಪನ- ಹೀಗೆ ಈ ಪುಸ್ತಕದ 18 ಕಾವ್ಯಮಯ ಅಧ್ಯಾಯಗಳಲ್ಲಿ ಈ ಶತಮಾನದ ಸುಮಾರು ಐದು ದಶಕಗಳ ರುಗ್ಣ ಯುರೋಪಿನ ಇತಿಹಾಸವೇ ಸುರುಳಿ ಬಿಚ್ಚಿಕೊಳ್ಳುವುದನ್ನು ನಾವು ಕಾಣುತ್ತೇವೆ.....

ಈ ಪುಸ್ತಕ ಓದಿದ ಮೇಲೆ ಜಗದ್ವಿಖ್ಯಾತ ಜಪಾನಿ ಚಲನಚಿತ್ರ ನಿರ್ಮಾಪಕ ಅಕಿರ ಕುರೋಸಾವನ ಮಾತುಗಳು ಮತ್ತೆ ಮತ್ತೆ ನನ್ನ ಕಿವಿಯಲ್ಲಿ ಮೊಳಗುತ್ತವೆ: 'ಮನುಷ್ಯನಾದವನು ಮಾನವ ಜೀವನದ ಯಾತನಾಮಯ, ಸುಂದರ, ಹಲವೊಮ್ಮೆ, ಅಸಂಬದ್ಧವೂ, ಹಾಸ್ಯಾಸ್ಪದವೂ ಆದ ಸಂದಿಗ್ಧಗಳ ಬಗ್ಗೆ ನೈತಿಕವಾದ ಕಳವಳ, ಚಿಂತನೆಗಳನ್ನುಳಿಸಿಕೊಳ್ಳಬೇಕು ಮತ್ತು ಈ ನಿರಾಶಾದಾಯಕ ಲೋಕದ ನಡುವೆಯೂ ಆಸೆ- ಭರವಸೆಗಳನ್ನು ಕಾಪಾಡಿಕೊಳ್ಳಲು ಹೋರಾಡುತ್ತಿರಬೇಕು. ಈ ಹೋರಾಟದಲ್ಲಿ ಮಾನವರೆಲ್ಲರೂ ಒಡಹುಟ್ಟಿದವರೆಂಬ ಭಾವನೆ ಉಳಿಸಿಕೊಂಡಿರಬೇಕು.....

ಶ್ರೀ ಎಚ್. ಕೆ. ರಾಮಚಂದ್ರಮೂರ್ತಿ
ನಂ. 209, [illegible]
[illegible]



ಪ್ರತಿಕ್ರಿಯೆ

ವೀಕ್ಷಿಸಿ
ಕ್ಷಣ ಕ್ಷಣ
ಬಣ್ಣ
[illegible]
ಮಾನವನ

ಜಾಳಿ
ನಕ್ಕಿತು
ಮುಸಿ ಮುಸಿ
[illegible]

- ಮ. ಶ್ರೀ. ಮುರಳಿಕೃಷ್ಣ

ವಿಶ್ವ ವ್ಯಾಪಾರ ಸಂಘಟನೆ
ಯಾರ ಪ್ರಯೋಜನಕ್ಕೆ?

ಜಗತ್ತಿನ ವ್ಯಾಪಾರ ಹಾಗೂ ವಾಣಿಜ್ಯ ವಿಷಯಗಳಿಗೆ ಸಂಬಂಧಿಸಿ ಎಲ್ಲ ದೇಶಗಳಿಗೂ ಅನ್ವಯವಾಗುವಂಥ ಹಾಗೂ ಅಂಗೀಕಾರಾರ್ಹವಾಗಬಹುದಾದ ಒಪ್ಪಂದ ಒಂದಕ್ಕೆ ಬರಲೋಸುಗ ಈಗ ಹಲವಾರು ವರ್ಷಗಳಿಂದ ಸಂಧಾನಗಳು ನಡೆಯುತ್ತಿದ್ದು, 1994ರಲ್ಲಿ ಉರುಗ್ವೆಯಲ್ಲಿ ಕಡೆಯ ಸುತ್ತಿನ ಮಾತುಕತೆಗಳು ನಡೆದವು. ಅಲ್ಲಿ 'ಗ್ಯಾಟ್' ಒಪ್ಪಂದವೊಂದಕ್ಕೆ ಸಹಿ ಹಾಕಲಾಯಿತು. ಭಾರತವೂ ಈ ಒಪ್ಪಂದಕ್ಕೆ ಸಹಿ ಹಾಕಿತು.

ಈ ಒಪ್ಪಂದಕ್ಕೆ ಭಾರತ ಸಹಿ ಹಾಕಿದುದು ತೀರ ಅಸಮರ್ಪಕ ಹಾಗೂ ದೇಶದ ಹಿತಕ್ಕೆ ಎಷ್ಟು ಮಾತ್ರವೂ ಅನುಕೂಲಕರವಲ್ಲ ಎಂದು ಅನೇಕರು ಅಭಿಪ್ರಾಯ ಪಟ್ಟಿದ್ದಾರೆ. ಇದಕ್ಕೆ ಮೂರು ಮುಖ್ಯ ಕಾರಣಗಳಿವೆ.

ಒಂದು. ಈ 1994ರ ಗ್ಯಾಟ್ ಒಪ್ಪಂದ ಅದಕ್ಕೆ ಮುನ್ನಿನ 1947ರ ಗ್ಯಾಟ್ ಒಪ್ಪಂದದಂತೆ ವಾಣಿಜ್ಯ ಹಾಗೂ ವ್ಯಾಪಾರ ವಿಷಯಗಳಿಗಷ್ಟೇ ಸೀಮಿತವಾಗಿರದೆ, ಸೇವಾ ಕಾರ್ಯಗಳು, ಬೌದ್ಧಿಕ ಆಸ್ತಿ ಹಕ್ಕುಗಳು, ವ್ಯಾಪಾರ ನೀತಿ ಪರಾಮರ್ಶೆ, ಸಂದಾಯ ಶಿಲ್ಕು ಇತ್ಯಾದಿ ವಿಷಯಗಳನ್ನೂ ಒಳಗೊಂಡು, ಬಡ ರಾಷ್ಟ್ರಗಳ, ಅದರಲ್ಲೂ ಅಭಿವೃದ್ಧಿಶೀಲ ದೇಶಗಳ, ಆಂತರಿಕ ವ್ಯವಹಾರಗಳಲ್ಲಿ ಕೈ ಹಾಕುವುದಕ್ಕೆ ಅನುಕೂಲ ಮಾಡಿಕೊಡುವಂತಹುದಾಗಿದೆ.

ಎರಡನೆಯದಾಗಿ, 1947ರ ಗ್ಯಾಟ್ ಒಪ್ಪಂದದ ಕಾರ್ಯಕಾರ ಮಂಡಳಿ ಪುಟ್ಟದಾಗಿದ್ದು ಸೀಮಿತ ಅಧಿಕಾರ ಹೊಂದಿದ್ದಲ್ಲಿ 1994ರ ಗ್ಯಾಟ್ ಒಪ್ಪಂದವು 'ವಿಶ್ವ ವ್ಯಾಪಾರ ಸಂಘಟನೆ' (World Trade Organisation - WTO) ಎಂಬ ಹೆಸರಿನೊಂದಿಗೆ ವಿಶ್ವ ವ್ಯವಹಾರಗಳ ನಿಗಾವಣೆ ಹಾಗೂ ವಿವಾದಗಳ ಇತ್ಯರ್ಥಗಳಂಥ ವಿಸ್ತೃತ ಅಧಿಕಾರಗಳನ್ನು ತನ್ನದಾಗಿಸಿಕೊಂಡಿದೆ. ಈ ಅಧಿಕಾರ 'ಅಂತಾರಾಷ್ಟ್ರೀಯ ಹಣಕಾಸು ನಿಧಿ' (IMF) ಹಾಗೂ 'ವಿಶ್ವ ಬ್ಯಾಂಕ್'ಗಳು ಪಡೆದಿರುವ ಅಧಿಕಾರಕ್ಕೂ ಹೆಚ್ಚಿನದಾಗಿದೆ. ಇದು ತೀರಾ ಆಕ್ಷೇಪಣೀಯ.

ಕೊನೆಯದಾಗಿ, ಈ ಒಪ್ಪಂದದೊಂದಿಗೆ ಇತರ ಅನೇಕ ಒಡಂಬಡಿಕೆಗಳಿಗೂ ಸಹಿ ಹಾಕಲಾಯಿತು. ಸಹಿ ಹಾಕುವ ಮುನ್ನ ಭಾರತ ಸರಕಾರ ಇವುಗಳನ್ನು ಸಾರ್ವಜನಿಕರ ಮುಂದಿರಿಸಲೇ ಇಲ್ಲ. ಅಷ್ಟೇ ಅಲ್ಲ, ಪಾರ್ಲಿಮೆಂಟಿನಲ್ಲೂ ವ್ಯಾಪಕ ಚರ್ಚೆಗೆ ಒಳಪಡಿಸಲಿಲ್ಲ. ದೇಶವನ್ನು ಈ ಒಪ್ಪಂದಕ್ಕೆ ಅಕ್ಷರಶಃ ಕಟ್ಟಿ ಹಾಕಲಾಯಿತು. ಇದರ ಪರಿಣಾಮಗಳನ್ನು ನಾವಾಗಲೇ ಕಾಣುತ್ತಿದ್ದೇವೆ. ಈ ಒಪ್ಪಂದಗಳಿಂದಾಗಿ ದೇಶದ ವ್ಯಾಪಾರ ಹಿತಗಳು ವರ್ಷೇ ವರ್ಷೇ ಬಾಧಿತಗೊಳ್ಳುತ್ತಿವೆ.

ಒಪ್ಪಂದದ ಮುಖ್ಯ ಭಾಗ ಕೇವಲ ಹತ್ತು ಪುಟಗಳನ್ನು ಒಳಗೊಂಡಿದೆ. ಆದರೆ ಅದಕ್ಕೆ ನಾಲ್ಕು ಅನುಬಂಧಗಳಿವೆ. ಇವುಗಳ ಗಾತ್ರ 210 ಪುಟಗಳಿಗೂ ಮೀರಿದೆ. ಇವಲ್ಲದೆ ಅನೇಕ ಕಾನೂನು ಸಂಬಂಧಿತ ನಿರ್ಧಾರಗಳೂ, ಘೋಷಣೆಗಳೂ ಇವೆ. ಇವೆಲ್ಲ ಒಪ್ಪಂದದ ಅವಿಭಾಜ್ಯ ಅಂಗಗಳು ಹಾಗೂ ಎಲ್ಲ ಸದಸ್ಯರೂ ಪಾಲಿಸಲೇಬೇಕಾದಂಥವು.

ಕೆಳಗಿನ ನಕಾಶೆಯಿಂದ ಕಂಡುಬರುವಂತೆ, 'ವಿಶ್ವ ವ್ಯಾಪಾರ ಸಂಘಟನೆ' (WTO) ವ್ಯಾಪಾರ ಹಾಗೂ ವ್ಯಾಪಾರ ಸಂಬಂಧಿತ ವಿಷಯ ಕುರಿತಂತೆ ಅಂತಾರಾಷ್ಟ್ರೀಯ ಒಪ್ಪಂದಗಳ ಅನುಷ್ಠಾನದ ಮೇಲ್ವಿಚಾರಣಾ ಸಂಸ್ಥೆ. ಒಂದೊಂದು ಅನುಬಂಧದಲ್ಲೂ ಅನೇಕ ಉಪ - ಒಪ್ಪಂದಗಳಿವೆ. ಸಹಿ ಹಾಕಿದ ದೇಶಗಳೆಲ್ಲಾ ಇವಕ್ಕೆ ಬದ್ಧವಾಗಿರಬೇಕು. ಅಷ್ಟೇ ಅಲ್ಲ, ಆ ದೇಶಗಳು ತಮ್ಮ ದೇಶೀಯ ನೀತಿ ನಿಯಮಗಳನ್ನು ಇವಕ್ಕನುಗುಣವಾಗಿ ಪರಿವರ್ತಿಸಿಕೊಳ್ಳಬೇಕು, ಅವುಗಳಲ್ಲಿ ತಿದ್ದುಪಾಟುಗಳನ್ನು ತರಬೇಕು. ಉದಾಹರಣೆಗೆ ತೆರಿಗೆಗಳು, ಸಹಾಯಧನಗಳು (ಸಬ್ಸಿಡೀಸ್) 'ವಿದೇಶಿ' ವಸ್ತುಗಳ, ಸೇವಾ ಕಾರ್ಯಗಳ ಹಾಗೂ ಬಂಡವಾಳದ ಪ್ರವೇಶಕ್ಕೆ ನಿರ್ಬಂಧಗಳು, ದೇಶೀಯ ಹಾಗೂ ವಿದೇಶೀ ಸಂಸ್ಥೆಗಳ ನಡುವೆ ಭೇದ ಭಾವ, ವಿದೇಶೀ ವಿನಿಮಯ ನಿಯಮಾವಳಿ, ಕೃತಿಸ್ವಾಮ್ಯ, ಟ್ರೇಡ್‌ಮಾರ್ಕ್ ಅಥವಾ ಸ್ವಾಮ್ಯ ಸನ್ನದು ನಿಯಮಾವಳಿ– ಇವೆಲ್ಲಾ ವಿಶ್ವ ವ್ಯಾಪಾರ ಸಂಘಟನೆಯ ಅಧಿಕಾರ ವ್ಯಾಪ್ತಿಯೊಳಗೆ ಬರುತ್ತವೆ. ಯಾವುದೇ ಸದಸ್ಯ ದೇಶ ತನ್ನ ಹಿತಕ್ಕೆ ಬಾಧಕ ಎಂದು ಎತ್ತುವ ಯಾವುದೇ ವಿಷಯವನ್ನೂ ಈ ಸಂಸ್ಥೆ ಪರಿಶೀಲನೆಗೆ ಎತ್ತಿಕೊಳ್ಳಬಹುದು. ಆ ವಿಷಯ ಜಗತ್ತಿನ ಎಲ್ಲ ದೇಶಗಳಿಗೂ ಸಂಬಂಧಿಸಿದುದಾಗಿರಬೇಕಿಲ್ಲ. ಒಂದೇ ದೇಶದ ವಿಶಿಷ್ಟ ಹಿತಕ್ಕೆ ಸೀಮಿತವಾಗಿದ್ದರೂ ವಿಶ್ವ ವ್ಯಾಪಾರ ಸಂಘಟನೆ ಅವನ್ನು ಪರಿಶೀಲಿಸಬಹುದು.

ಅಲ್ಲದೆ, ಗ್ಯಾಟ್-94 ಒಪ್ಪಂದದ ವಿವಿಧ ಕಟ್ಟುಪಾಡುಗಳನ್ನು ಸದಸ್ಯ ದೇಶಗಳು ಹೇಗೆ ಅನುಷ್ಠಾನಕ್ಕೆ ತರುತ್ತಿವೆ ಎಂಬುದನ್ನೂ ವಿಶ್ವ ವ್ಯಾಪಾರ ಸಂಘಟನೆ ಆಗಾಗ್ಗೆ ತನಿಖೆ ಮಾಡಬಹುದಾಗಿದೆ. ಆದರೆ

ಡಾ॥ ಕೆ. ಎಸ್. ಕೃಷ್ಣಸ್ವಾಮಿ
ಮಾಜಿ ಡೆಪ್ಯುಟಿ ಗವರ್ನರ್, ರಿಸರ್ವ್ ಬ್ಯಾಂಕ್

ಯಾವುದೇ ದೇಶದ ವ್ಯಾಪಾರ ಹಾಗೂ ಅದು ಬೇರೆ ದೇಶಗಳಿಗೆ ನೀಡಬೇಕಾದ ಸಂದಾಯಗಳ ನಡುವೆ ವ್ಯತ್ಯಾಸಗಳಿದ್ದೇ ಇರುತ್ತವೆ. ಒಂದೊಂದು ದೇಶವೂ ತನ್ನ ರಾಜಕೀಯ ಹಾಗೂ ಆರ್ಥಿಕ ಅಗತ್ಯಗಳಿಗೆ ತಕ್ಕಂತೆ ತನ್ನ ಆರ್ಥಿಕ ಹಾಗೂ ಹಣಕಾಸು ನೀತಿಗಳನ್ನು ರೂಪಿಸಿಕೊಂಡಿರುತ್ತದೆ. ಇವೆಲ್ಲಾ ಆಗಾಗ್ಗೆ ವಿಶ್ವ ವ್ಯಾಪಾರ ಸಂಸ್ಥೆಯ ತನಿಖೆಗೆ ಒಳಪಡುತ್ತವೆಂದರೆ, ವಾಸ್ತವವಾಗಿ ಆಂತರಿಕ ವ್ಯವಹಾರಗಳಲ್ಲಿ ಅನಪೇಕ್ಷಿತ ಹಸ್ತಕ್ಷೇಪವಾದಂತೆಯೇ ಆಗುತ್ತದೆ. ಈ ತನಿಖೆ ಮಾಡುವಾಗಲೂ ವಿಶ್ವ ವ್ಯಾಪಾರ ಸಂಘಟನೆ ಬಹುಪಕ್ಷೀಯ ವ್ಯವಸ್ಥೆಯ ಮೇಲೆ ಪ್ರಭಾವವನ್ನೇ ಗಮನದಲ್ಲಿಡುವುದರಿಂದ ಸದಸ್ಯ- ದೇಶದ ಬೆಳವಣಿಗೆ ಅಥವಾ ಸಂಕ್ಷೇಮ ಕಡೆಗಾಣಿಸಲ್ಪಡುವುದು, ದುಷ್ಪರಿಣಾಮಕ್ಕೊಳಗಾಗುವುದು ಖಂಡಿತ.

ಗ್ಯಾಟ್-94 ಒಪ್ಪಂದವು ಉದಾರೀಕರಣಕ್ಕೆ ಒಂದು ಸುಧಾರಿತ ವೇದಿಕೆ ರಚಿಸಿಕೊಡುತ್ತದೆ. ಬಹುಪಕ್ಷೀಯ ಒಪ್ಪಂದಗಳ ಅನುಷ್ಠಾನವನ್ನು ಖಚಿತಪಡಿಸಿಕೊಡುತ್ತದೆ ಎಂದು ಒಪ್ಪಂದ (ಪು.222) ಒತ್ತಿ ಹೇಳುತ್ತದೆ. ಬೇರೆ ಮಾತುಗಳಲ್ಲಿ ಇದರ ಅರ್ಥ– ಸದಸ್ಯ ದೇಶವೊಂದರ ಎಲ್ಲ ನೀತಿಗಳನ್ನೂ ಅವು 'ವಿಶ್ವ ವ್ಯಾಪಕತೆ' (ಗ್ಲೋಬಲೈಸೇಷನ್) ಹಾಗೂ "ವ್ಯಾಪಾರ ಉದಾರೀಕರಣ" (ಟ್ರೇಡ್ ಲಿಬರಲೈಸೇಷನ್) ಗಳಿಗೆ ಎಷ್ಟರಮಟ್ಟಿಗೆ ಉತ್ತೇಜನಕಾರಿ ಎಂಬ ಆಧಾರದ ಮೇಲೆ ಅವುಗಳ ಮೌಲ್ಯ ನಿರ್ಣಯಿಸಲಾಗುತ್ತದೆ. ಆದರೆ ಈ ಅಂತಾರಾಷ್ಟ್ರೀಯ ಸಂಸ್ಥೆಗಳಲ್ಲಿ ಅಮೇರಿಕ ಮತ್ತು ಐರೋಪ್ಯ ದೇಶಗಳ ಪ್ರಭಾವವೇ ಹೆಚ್ಚು ಎಂಬುದೇನೂ ರಹಸ್ಯವಲ್ಲ. ಆದ್ದರಿಂದ ಸದಸ್ಯ-ದೇಶವೊಂದರ ಯಾವ ನೀತಿ ಸರಿ ಎಂದು ವಿಶ್ವ ವ್ಯಾಪಾರ ಸಂಘಟನೆ ತೀರ್ಮಾನಿಸುತ್ತದೋ ಅದು ಈ ಪ್ರಭಾವೀ ವಿಕಸಿತ ರಾಷ್ಟ್ರಗಳು ಯಾವುದನ್ನು ಅನುಮೋದಿಸುತ್ತವೋ ಮತ್ತು ಯಾವುದನ್ನು ಇತರ ಸದಸ್ಯ ದೇಶಗಳು ಅನುಸರಿಸಬೇಕೆಂದು ಬಯಸುತ್ತವೋ, ಅದಷ್ಟೆ ಎಂಬುದರಲ್ಲಿ ಸಂದೇಹವಿಲ್ಲ.

ಪ್ರಸ್ತುತದಲ್ಲಿ ಜಗತ್ತಿನ 116 ದೇಶಗಳು ಹಾಗೂ ಐರೋಪ್ಯ ಸಮುದಾಯದ ದೇಶಗಳು ವಿಶ್ವ ವ್ಯಾಪಾರ ಸಂಘಟನೆಯ ಸದಸ್ಯರಾಗಿವೆ. ಇವೆಲ್ಲ ಕೊನೆಯ ಪಕ್ಷ ಎರಡು ವರ್ಷಗಳಿಗೊಮ್ಮೆ

ಒಪ್ಪಂದದ ರೂಪವನ್ನು ಸ್ಥೂಲವಾಗಿ ಹೀಗೆ ಚಿತ್ರಿಸಬಹುದು

ಅಂತಿಮ ಕಾಯಿದೆ - ಭಾಗ 1

- ವಿಶ್ವ ವ್ಯಾಪಾರ ಸಂಘಟನೆ (WTO) ಒಪ್ಪಂದ - ಭಾಗ 2
  - ವ್ಯಾಪಾರ ಹಾಗೂ ಸುಂಕಗಳಿಗೆ ಸಂಬಂಧಿಸಿದ ಸಾರ್ವತ್ರಿಕ ಒಪ್ಪಂದ (ಗ್ಯಾಟ್ - 1994) (ಅನುಬಂಧ - 1ಎ)
  - ವ್ಯಾಪಾರ ಹಾಗೂ ಸೇವಾಕಾರ್ಯಗಳಿಗೆ ಸಂಬಂಧಿಸಿದ ಸಾರ್ವತ್ರಿಕ ಒಪ್ಪಂದ (ಅನುಬಂಧ 2)
  - ವ್ಯಾಪಾರ ಸಂಬಂಧಿತ ಬೌದ್ಧಿಕ ಆಸ್ತಿ ಹಕ್ಕುಗಳು (ಟ್ರಿಪ್ಸ್) (ಅನುಬಂಧ 1ಸಿ) (ಗ್ಯಾಟ್ 1994)
  - ವಿವಾದ ಇತ್ಯರ್ಥ ಕಾನೂನುಗಳು (ಅನುಬಂಧ-2)
  - ವ್ಯಾಪಾರ ನೀತಿ ವಿಮರ್ಶೆ (ಅನುಬಂಧ-3)
  - ಬಹುಪಕ್ಷೀಯ ವ್ಯಾಪಾರ ಒಪ್ಪಂದಗಳು (ಅನುಬಂಧ- 4)
- ಕಾನೂನು ಸಂಬಂಧಿತ ನಿರ್ಧಾರಗಳು ಘೋಷಣೆಗಳು - ಭಾಗ 3 (ಅತ್ಯಲ್ಪಾಭಿವೃದ್ಧಿಗೊಂಡ ದೇಶಗಳ ಪರವಾಗಿ ಏರ್ಪಾಟು, ವ್ಯವಸ್ಥೆ, ಕ್ರಮ ಕೈಗೊಳ್ಳುವುದಕ್ಕೆ ಮುಖ್ಯವಾಗಿ ಸಂಬಂಧಿಸಿದುದು)

ಆಕರ: ಉರುಗ್ವೆ ಅಂತಿಮ ಸುತ್ತಿನ ಒಪ್ಪಂದದ ಪಠ್ಯಭಾಗ - 1994. ಪ್ರಕಾಶಕರು MVIRDC, ವಿಶ್ವ ವ್ಯಾಪಾರ ಕೇಂದ್ರ, ಮುಂಬಯಿ ಪು. [illegible]+256. ಬೆಲೆ ರೂ. 240.

ಸಭೆ ಸೇರಿ ಸದಸ್ಯ ರಾಷ್ಟ್ರಗಳು ಎತ್ತಿದ ಸಮಸ್ಯೆಗಳ ಬಗೆಗೆ ತೀರ್ಮಾನ ಕೈಗೊಳ್ಳುತ್ತವೆ. ನಡುವಿನ ಕಾಲದಲ್ಲಿ 'ಜನರಲ್ ಕೌನ್ಸಿಲ್' (ಇದರಲ್ಲೂ ಎಲ್ಲ ದೇಶಗಳ ಪ್ರತಿನಿಧಿಗಳೂ ಇರುತ್ತಾರೆ) ಗೆ ತೀರ್ಮಾನ ಕೈಗೊಳ್ಳುವ ಅಧಿಕಾರ. ವಿಶ್ವಸಂಸ್ಥೆಯಂತೆ ಈ ಸಂಸ್ಥೆಯಲ್ಲೂ ಒಂದೊಂದು ದೇಶಕ್ಕೂ ಒಂದೊಂದು ಓಟು. ಸರ್ವಸಮ್ಮತಿಯಿಂದ ನಿರ್ಧಾರ ಕೈಗೊಳ್ಳಲಾಗದಿದ್ದಾಗ ಬಹುಮತದಿಂದ ತೀರ್ಮಾನ. ಆದರೆ ವಿಶ್ವಸಂಸ್ಥೆಯಲ್ಲಿರುವಂತೆ ಈ ಸಂಸ್ಥೆಯಲ್ಲೂ 'ವಿಶೇಷಜ್ಞರ ಸಮಿತಿ'ಗಳದೇ ಮೇಲುಗೈ. ಈ 'ವಿಶೇಷಜ್ಞರ ಸಮಿತಿ' ಗಳಲ್ಲಿರುವವರು ಹೆಚ್ಚಾಗಿ ಪ್ರಭಾವೀ ವಿಕಸಿತ ದೇಶಗಳ ಪ್ರತಿನಿಧಿಗಳೇ.

ವ್ಯಾಪಾರ ವಿವಾದಗಳು, ವ್ಯಾಪಾರ ನೀತಿ– ಇವಕ್ಕೆ ಸಂಬಂಧಿಸಿದಂತೆ ವಿಶ್ವ ವ್ಯಾಪಾರ ಸಂಘಟನೆ ತನ್ನ ಸದಸ್ಯ ದೇಶಗಳ ಮೇಲೆ ಅಧಿಕಾರ ಚಲಾಯಿಸಬಲ್ಲುದು. ಬೇರೊಂದು ದೇಶ ಕೈಗೊಂಡ ಕ್ರಮಗಳಿಂದಾಗಿ ತನಗೆ ಲಭಿಸಬೇಕಾದ ಸೌಲಭ್ಯ ಲಭಿಸುತ್ತಿಲ್ಲ ಎಂದು ದೇಶವೊಂದು ದೂರು ಇತ್ತಾಗ ಯುಕ್ತ ತೀರ್ಮಾನ ಕೈಗೊಳ್ಳಲು 'ವಿವಾದ ಇತ್ಯರ್ಥ ಸಮಿತಿ'ಯೊಂದನ್ನು ರಚಿಸಲಾಗುತ್ತದೆ. ಈ ಸಮಿತಿ ಸಮಸ್ಯೆಯ ಕೂಲಂಕಷ ಪರಿಶೀಲನೆಗಾಗಿ ತಜ್ಞರುಗಳ ಪ್ರಾತಿನಿಧಿಕ ಸಮಿತಿಯೊಂದನ್ನು ಸ್ಥಾಪಿಸುತ್ತದೆ. ಸಮಸ್ಯೆಯ ಪರಿಹಾರ ಹನ್ನೆರಡು ತಿಂಗಳುಗಳ ಒಳಗೆ ಆಗಬೇಕು. ವಿವಾದ ಇತ್ಯರ್ಥಕ ಸಮಿತಿಯ ತೀರ್ಮಾನವೇ ಅಂತಿಮ. ಎಲ್ಲರೂ ಅದಕ್ಕೆ ಬದ್ಧ.

ವಿಶ್ವ ವ್ಯಾಪಾರ ಸಂಘಟನೆಯ ಕೇಂದ್ರ ಕಛೇರಿ ಸ್ವಿಟ್ಸರ್ಲೆಂಡ್‌ನ ಜಿನೀವಾ ನಗರದಲ್ಲಿದೆ. ವಿಶ್ವಸಂಸ್ಥೆಯ ಸಂಘಟನೆಗಳಂತೆ ಇದಕ್ಕೂ ವಿಶ್ವಮಾನ್ಯತೆ ಇದೆ. ಕಾರ್ಯ ನಿರ್ವಾಹಕರಲ್ಲಿ ಬಹು ದೇಶೀಯ ಪ್ರಾತಿನಿಧ್ಯವಿದೆ.

ಗ್ಯಾಟ್-47 ಒಪ್ಪಂದದಲ್ಲಿ ಅಭಿವೃದ್ಧಿಶೀಲ ದೇಶಗಳ ದೇಶೀಯ ಕೃಷಿ ಅಥವಾ ಎಳೆ ಕೈಗಾರಿಕಾ ಕ್ಷೇತ್ರಗಳಲ್ಲಿ ವಿದೇಶೀ ಸ್ಪರ್ಧೆಯ ವಿರುದ್ಧ ರಕ್ಷಣಾ ಕ್ರಮಗಳನ್ನು ರೂಪಿಸಲಾಗಿದ್ದಿತು. ಆದರೆ ಗ್ಯಾಟ್-94ರಲ್ಲಿ ಇಂಥ ಯಾವ ವಿಶೇಷ ಸೌಲಭ್ಯವೂ ಇಲ್ಲ. ಹಾಗಾಗಿ ಅಲ್ಪಾಭಿವೃದ್ಧಿಗೊಂಡ ದೇಶಗಳೂ ಅಮೆರಿಕ, ಪಶ್ಚಿಮ ಯೂರೋಪ್ ಹಾಗೂ ಜಪಾನ್ ದೇಶಗಳಿಗೆ ವಸ್ತು ಹಾಗೂ ಸೇವಾ ಕಾರ್ಯಗಳಲ್ಲಿ ಮುಕ್ತ ವ್ಯಾಪಾರಕ್ಕೂ ವಿದೇಶೀ ಪೈಪೋಟಿಗೂ ಸಮಾನ ಸೌಲಭ್ಯ ಒದಗಿಸಿಕೊಡಬೇಕಾಗಿದೆ. ಒಂದು ಉದಾಹರಣೆ ನೋಡುವುದಾದರೆ, ಇದರ ಫಲವಾಗಿ ಭಾರತ ವಿದೇಶೀ ವಸ್ತುಗಳ ಮೇಲಿನ ಸುಂಕಗಳನ್ನು ಕಡಿಮೆ ಮಾಡಬೇಕು, ವಿದೇಶೀ ವಸ್ತುಗಳು ಅಧಿಕ ಪ್ರಮಾಣಗಳಲ್ಲಿ ಪ್ರವೇಶಿಸುವುದರ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕಬೇಕು, ವಿನಿಮಯ ನಿಯಂತ್ರಣಗಳನ್ನು ಸುಲಭಗೊಳಿಸಬೇಕು, ಪ್ರತ್ಯಕ್ಷ ಹಾಗೂ ಪರೋಕ್ಷ ವಿದೇಶೀ ಬಂಡವಾಳ ಹೂಡಿಕೆಯ ಮೇಲಿನ ಅಡೆತಡೆಗಳನ್ನು ನಿರ್ಮೂಲ ಮಾಡಬೇಕು, ಇತ್ಯಾದಿ. ಇದರಿಂದ ಸ್ಥಳೀಯ ಆರ್ಥಿಕತೆಯು ಹೇಗೆ ವಿರುಪೇರಾಗುತ್ತದೆಂಬುದು ಸ್ಪಷ್ಟವೇ ಇದೆ.

ಭಾರತ ಸರಕಾರ 1991-92ರ ನಂತರ ಶ್ರೀ ನರಸಿಂಹರಾವ್ ನೇತೃತ್ವದಲ್ಲಿ ''ಆರ್ಥಿಕ ಸುಧಾರಣೆಗಳ'' ಭಾಗವಾಗಿ ಈ ಹಲವಾರು ಕ್ರಮಗಳನ್ನಾಗಲೇ ಕೈಗೊಂಡಿದೆ. ಆದರೆ ಈ ಸುಧಾರಣಾ ನೀತಿಯೇ 'ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ' (IMF) ಹಾಗೂ 'ವಿಶ್ವಬ್ಯಾಂಕ್' (ವರ್ಲ್ಡ್ ಬ್ಯಾಂಕ್) ಗಳು ಹಾಕಿದ ಷರತ್ತುಗಳನ್ನು ಪೂರೈಸಲೆಂದೇ ಕೈಗೊಂಡ ಕ್ರಮ, ಎಂಬುದು ಸುವಿದಿತ. ಇವುಗಳ ಜೊತೆಗೆ ಈಗ 'ವಿಶ್ವ ವ್ಯಾಪಾರ ಸಂಸ್ಥೆ' (WTO) ಕೂಡ ಮುಕ್ತ ವ್ಯಾಪಾರ ಹಾಗೂ ಉದಾರೀಕರಣಕ್ಕಾಗಿ ಹೆಚ್ಚು ಬಹಿರಂಗವಾಗಿಯೇ ಒತ್ತಡ ಹಾಕತೊಡಗಿದೆ. ನಮ್ಮ ಚಿಕ್ಕ ಉದ್ದಿಮೆಗಳು ಮುಚ್ಚಿಹೋಗುವುದಕ್ಕೆ ಇದೂ ಕಾರಣವಾಗುತ್ತದೆ.

ಗ್ಯಾಟ್-94 ಒಪ್ಪಂದಕ್ಕೆ ಸದಸ್ಯ ದೇಶಗಳ ಶಾಸಕಾಂಗ ಸಭೆಗಳು ಅನುಮೋದನೆ ನೀಡಬೇಕೆಂಬ ನಿಯಮವಿದೆ. ಭಾರತದ ಪ್ರಸಂಗದಲ್ಲಿ ಅಂತಿಮ ಒಪ್ಪಂದದ ಕೆಲವು ಅನುಬಂಧಗಳಿಗೂ ಪಾರ್ಲಿಮೆಂಟ್ ಒಪ್ಪಿಗೆ ನೀಡಿದೆ. ಆದರೆ 'ವ್ಯಾಪಾರ ಸಂಬಂಧಿತ ಬೌದ್ಧಿಕ ಆಸ್ತಿ ಹಕ್ಕುಗಳ'ಂಥ (ಟ್ರಿಪ್ಸ್) ಕೆಲವು ಅನುಬಂಧಗಳಿಗೆ ಒಪ್ಪಿಗೆ ನೀಡಿಲ್ಲ. ಟ್ರಿಪ್ಸ್ ಬಗೆಗಂತೂ ಭಾರತದಲ್ಲಿ ವಿಶೇಷ ವಿರೋಧವಿದೆ. ಇದನ್ನು ಜಾರಿಗೆ ತರಲು 1970ರ ಪೇಟೆಂಟ್ಸ್ ಆಕ್ಟ್‌ನ ಬದಲು ಹೊಸ ಶಾಸನ ಮಾಡಬೇಕಾಗಿ ಬರುತ್ತದೆ. ವಿದೇಶೀ ಬಹುರಾಷ್ಟ್ರೀಯ ಕಾರ್ಪೋರೇಷನ್‌ಗಳು ನಮ್ಮ ದೇಶದ ನೈಸರ್ಗಿಕ ಸಂಪತ್ತನ್ನು ಲೂಟಿ ಮಾಡುವುದನ್ನು ತಪ್ಪಿಸಲೂ, ವಿಶೇಷವಾಗಿ ತಳಿ ಬೀಜಗಳು, ಔಷಧೀಯ ಗಿಡ ಮೂಲಿಕೆಗಳು, ಕೃಷಿ-ರಾಸಾಯನಿಕಗಳು ಇತ್ಯಾದಿಗಳನ್ನು ಅವುಗಳ ಶೋಷಣೆಯಿಂದ ಸಂರಕ್ಷಿಸಲೂ ಹೊಸ ಕಾಯಿದೆ ಮಾಡುವ ಅಗತ್ಯ ಉಂಟಾಗಿದೆ. ನಾವಿನ್ನೂ ಒಂದು ಸೂಕ್ತ 'ಪೇಟೆಂಟ್ಸ್' (ಸ್ವಾಮ್ಯ ಸನ್ನದು) ಬಿಲ್ ರೂಪಿಸಿ ಪಾರ್ಲಿಮೆಂಟಿನಲ್ಲಿ ಅದಕ್ಕೆ ಅನುಮೋದನೆ ಪಡೆಯಬೇಕಾಗಿದೆ. ನಮ್ಮ ಮೂಲ ಆವಶ್ಯಕತೆಗಳನ್ನು ಪೂರೈಸುವಂಥ ಹಾಗೂ ಭಾರತ ಸರಕಾರ ಅವಸರದಿಂದ 1994ರಲ್ಲಿ ಸಹಿ ಹಾಕಿದ 'ಟ್ರಿಪ್ಸ್' ಒಪ್ಪಂದಕ್ಕೆ ಅನುಗುಣವಾದಂಥ 'ಸಸ್ಯ ಸಂರಕ್ಷಣಾ ಕಾಯಿದೆ'ಯೊಂದನ್ನೂ ಸಿದ್ಧಗೊಳಿಸಬೇಕಾಗಿದೆ. ಇದನ್ನು ನಾವು ತಾಂತ್ರಿಕವಾಗಿ 1999ರ ಜೂನ್ ಮುಗಿಯುವ ಮುನ್ನ ಮಾಡಬೇಕಾಗಿದೆ. ಆದರೆ ಚುನಾಯಿತ ಪಾರ್ಲಿಮೆಂಟ್ ಇಲ್ಲದೆ,



ರಾಷ್ಟ್ರಾಧ್ಯಕ್ಷರ ಆರ್ಡಿನೆನ್ಸ್ ಮೂಲಕ ಇದನ್ನು ಆಗುಮಾಡುವುದು ಈಗ ಅಸಂಭವ.

ಅದೇ ರೀತಿ 2004ರ ಜೂನ್ ಕೊನೆಗೆ ಮುನ್ನ 'ಉತ್ಪನ್ನ ಪೇಟೆಂಟ್' ರಕ್ಷಣೆಯ ಕಾಯಿದೆಯನ್ನು (ಈಗಿರುವುದು ಪ್ರಕ್ರಿಯೆ ರಕ್ಷಣೆಯ ಕಾಯಿದೆ) ಕೃಷಿ-ರಾಸಾಯನಿಕ ಹಾಗೂ ಔಷಧೀಯ ಕೈಗಾರಿಕೆಗಳಿಗೂ ಅನ್ವಯವಾಗುವಂತೆ ವಿಸ್ತರಿಸಬೇಕಾಗಿದೆ. ಉದಾಹರಣೆಗೆ, ಔಷಧವೊಂದು ಈಗಾಗಲೇ ತಯಾರಾಗಿದ್ದರೆ ಅದನ್ನು ಅಥವಾ ಅಂಥದನ್ನು ಬೇರೊಂದು ರೀತಿಯಲ್ಲಿ ತಯಾರಿಸಲು ಅಡ್ಡಿಯಿಲ್ಲ. ಆದರೆ ಇನ್ನು ಮುಂದೆ ಆ ಪದಾರ್ಥದ ಬಗೆಗಿನ ಸಂಶೋಧನೆಗೆ ಅವಕಾಶವೇ ಇರುವುದಿಲ್ಲ. ಮೊದಲ ತಯಾರಕನಿಂದಲೇ ನಾವದನ್ನು ಕೊಳ್ಳಬೇಕು. ಹಾಗಿದ್ದಾಗ ಅವನು ಹೇಳಿದ್ದೇ ಬೆಲೆ. ವಿಶ್ವ ವ್ಯಾಪಾರ ಸಂಸ್ಥೆಯ ಯಾವುದೇ ಸದಸ್ಯ ದೇಶದಲ್ಲಿ 'ಉತ್ಪನ್ನ ಪೇಟೆಂಟ್' ದಾಖಲಿಸಿದ ಸಂಸ್ಥೆ ಭಾರತದಲ್ಲೂ ಅದಕ್ಕೆ ಮಾನ್ಯತೆ ಪಡೆಯಲು ಅರ್ಜಿ ಸಲ್ಲಿಸಬಹುದಾದಂಥ ವ್ಯವಸ್ಥೆಯೊಂದನ್ನು 1999 ಹಾಗೂ 2004ರ ನಡುವೆ ಜಾರಿಗೆ ತರಬೇಕಾಗಿದೆ. ಅಂಥ ಸಂಸ್ಥೆಗಳಿಗೆ ಆ ಉತ್ಪನ್ನಕ್ಕೆ [illegible] ಮಾರುಕಟ್ಟೆ ಹಕ್ಕು ಒದಗಿಸಬೇಕಾಗಿದೆ. [illegible] ಪೇಟೆಂಟುಗಳಿಗೆ ಮಾನ್ಯತೆ ನೀಡಿದ ಕೂಡಲೇ ಆ ಉತ್ಪನ್ನವನ್ನು ಅಥವಾ [illegible] ಅನುಷಂಗಿಕ ಉತ್ಪನ್ನಗಳನ್ನು [illegible] ಪೇಟೆಂಟ್ ಪಡೆದಿರುವ ಸಂಸ್ಥೆಗೆ [illegible]

ಇದುವರೆಗೂ ಭಾರತದಲ್ಲಿ ಪೇಟೆಂಟ್ ರಕ್ಷಣೆಯ ಅವಧಿ ಗರಿಷ್ಠ 14 ವರ್ಷಗಳವರೆಗಿದೆ. ಆದರೆ 'ಟ್ರಿಪ್ಸ್' ಒಪ್ಪಂದದ ಫಲವಾಗಿ ಈ ಅವಧಿಯನ್ನು 20 ವರ್ಷಗಳಿಗೆ ವಿಸ್ತರಿಸಬೇಕಾಗಿದೆ.

ಭಾರತವು ವಿಶ್ವವ್ಯಾಪಾರ ಸಂಘಟನೆಯ ಸದಸ್ಯತ್ವ ಪಡೆದಿರುವುದು ಭಾರತೀಯ ಆರ್ಥಿಕತೆಯ ಅನೇಕ ವಿಭಾಗಗಳನ್ನು ಬಹುರಾಷ್ಟ್ರೀಯ ಕಾರ್ಪೋರೇಷನ್‌ಗಳ ಅಥವಾ ಹೊರದೇಶಗಳ ಅಂಥವೇ ಪ್ರಬಲ ಸಂಸ್ಥೆಗಳ ಸ್ಪರ್ಧೆಗೆ ಈಡುಮಾಡಿದೆ ಅಥವಾ ಬೇಗನೆಯೇ ಈಡು ಮಾಡಲಿದೆ. ಇದೀಗ ಭಾರತದಲ್ಲಿ ರೈತಾಪಿ ಜನ ಸಹಾಯಧನ (ಸಬ್ಸಿಡಿ), ಕೃಷಿ ಉತ್ಪನ್ನಗಳ ಸಾರ್ವಜನಿಕ ಕೊಳ್ಳಿಕೆ (ಪ್ರೊಕ್ಯೂರ್‌ಮೆಂಟ್), ತೆರಿಗೆ ವಿನಾಯಿತಿ ಇತ್ಯಾದಿಗಳ ಸೌಲಭ್ಯ ಪಡೆದಿದ್ದಾರೆ. ಆದರೆ ಇವೆಲ್ಲ ಪಕ್ಷಪಾತೀಯವಾದವು, ತಾವು ಸರಬರಾಜು ಮಾಡುವುದಕ್ಕೆ ಅಡ್ಡಿ ಉಂಟುಮಾಡುತ್ತವೆ ಎಂದು ವಿದೇಶಿ ಸಂಸ್ಥೆಗಳು ಅಥವಾ ರೈತರು ಈಗ ಆಕ್ಷೇಪಣೆ ಎತ್ತಬಹುದು. ಅದೇ ರೀತಿ ಇದುವರೆಗೂ ಭಾರತದಲ್ಲಿ ಬ್ಯಾಂಕಿಂಗ್, ಇನ್ಶೂರೆನ್ಸ್ ಹಾಗೂ ಸೇವಾಸೌಲಭ್ಯ ಕೈಗಾರಿಕೆಗಳು ಹೊರ ದೇಶಗಳ ಮುಕ್ತ ಪೈಪೋಟಿಯಿಂದ ಹೊರಗಿವೆ. ಇವನ್ನು ಸಮತೆಯ ಸಪದಲ್ಲಿ ವಿದೇಶೀ ಸಂಸ್ಥೆಗಳಿಗೂ ತೆರೆದಿರಿಸಿದಲ್ಲಿ, ಸಣ್ಣ ಪ್ರಮಾಣದ ಹಾಗೂ ಹಿಂದುಳಿದ ತಾಂತ್ರಿಕತೆಯ ದೇಶೀಯ ಸಂಸ್ಥೆಗಳು ಹೊಡೆತ ತಿನ್ನುವುದು ಖಂಡಿತ.

ಅಷ್ಟೇ ಅಲ್ಲ, ಭಾರತದಲ್ಲಿ ಬಾಸುಮತಿ ಅಕ್ಕಿ, ಬೇವಿನ ಉತ್ಪನ್ನ ಇತ್ಯಾದಿಗಳೂ ಅವುಗಳ ತಯಾರಿಕಾ ವಿಧಾನಗಳೂ ದೀರ್ಘಕಾಲದಿಂದ ಸಾರ್ವಜನಿಕ ವಲಯದಲ್ಲಿ ಅಸ್ತಿತ್ವದಲ್ಲಿವೆ. ಈಗ ಇವುಗಳ ಪೇಟೆಂಟನ್ನು ವಿದೇಶೀ ಸಂಸ್ಥೆಯೊಂದು ಪ್ರಶ್ನಿಸಿದಲ್ಲಿ ಈ ವಿವಾದವನ್ನು ವಿಶ್ವ ವ್ಯಾಪಾರ ಸಂಸ್ಥೆಯ 'ವಿವಾದ ಪರಿಹಾರಕ ಸಮಿತಿ'ಗೆ ಒಯ್ಯಲು ಅಷ್ಟು ಮಟ್ಟಿಗಿನ ಆಡಳಿತೀಯ ಹಾಗೂ ಹಣಕಾಸು ತಾಕತ್ತು ನಮ್ಮ ಜನರಿಗಿಲ್ಲ. ಪ್ರತಿಫಲ ಪಡೆಯುವ ಸೌಲಭ್ಯಗಳು ಎಲ್ಲರಿಗೂ ಸಮಾನ ಎಂದು ತಾತ್ವಿಕವಾಗಿ ವಿಶ್ವ ವ್ಯಾಪಾರ ಸಂಘಟನೆ ಘೋಷಿಸಿದ್ದರೂ ಅವನ್ನು ಪಡೆಯುವುದು ಅತಿ ದುಬಾರಿಯಾದುದರಿಂದ ಬಡ ರಾಷ್ಟ್ರಗಳು ಕಾರ್ಯತಃ ಅವುಗಳಿಂದ ವಂಚಿತವಾಗುತ್ತವೆ.

ವಿಕಸಿತ ದೇಶಗಳಲ್ಲಿ ಉತ್ಪನ್ನಗಳ ಉತ್ಪಾದನೆ ಅತಿಯಾಗಿ ಹೆಚ್ಚುತ್ತಿದೆ. ಆ ದೇಶಗಳ ಒಳ ಮಾರುಕಟ್ಟೆ ತೀರ ಸೀಮಿತವಾಗಿದೆ. ಹಾಗಾಗಿ ಅವುಗಳಿಗೆ ಅಲ್ಪಾಭಿವೃದ್ಧಿ ದೇಶಗಳ ಮಾರುಕಟ್ಟೆ ಅತ್ಯಗತ್ಯವಾಗಿದೆ. ಇದು ಅಲ್ಪಾಭಿವೃದ್ಧಿ ದೇಶಗಳ ಉತ್ಪಾದನೆ ಹಾಗೂ ಉದ್ಯೋಗ ಪರಿಸ್ಥಿತಿಯ ಮೇಲೆ ಎಂಥ ಪ್ರತಿಕೂಲ ಪ್ರಭಾವ ಉಂಟುಮಾಡುತ್ತದೆ ಎಂಬುದು ಸ್ಪಷ್ಟ. ಆರಂಭದಲ್ಲಿ ಇದು ಪ್ರತಿಕೂಲವೆನಿಸಬಹುದು, ಆದರೆ ದೀರ್ಘಕಾಲಿಕವಾಗಿ ಪ್ರಯೋಜನಕಾರಿ ಎಂದೂ ವಾದಿಸುವುದುಂಟು. ಆದರೆ ಇದು ಎಷ್ಟು ದೀರ್ಘಕಾಲಿಕ? ಅದು ಆಗುವವರೆಗೂ ಬಡಜನರ ಹಾಗೂ ನಿರುದ್ಯೋಗಿಗಳ ಗತಿ ಏನು? ಈ ಪ್ರಶ್ನೆಗಳಿಗೆ [illegible] ಉತ್ತರ [illegible].

[illegible]

(...)

ಡಾ॥ ಕೆ. ಎಸ್. ಕೃಷ್ಣಸ್ವಾಮಿ. [illegible]
[illegible]

ಬಂದೂಕಿನ ಚೆಲ್ಲಾಟ

ಇತ್ತೀಚಿನ ದಿನಗಳಲ್ಲಿ ಬಂದೂಕಿನ ಸಂಸ್ಕೃತಿ ಶ್ರೀಮಂತ ಹಾಗೂ ಪ್ರತಿಷ್ಠಿತರ ಕುಟುಂಬಗಳಲ್ಲಿ ವ್ಯಾಪಕವಾಗಿ ಹಬ್ಬಿದೆ. ವಿ.ಐ.ಪಿ ಜನರ ಮಕ್ಕಳ ನಡುವೆ ಡಿಸ್ಕೋ-ಪಾಪ್ ಸಂಸ್ಕೃತಿಯ ಜೊತೆಗೆ ಬಂದೂಕಿಗೂ ಪ್ರಮುಖ ಸ್ಥಾನ. ಚಂಡೀಗಡದಲ್ಲಿ ಸರ್ಕಾರಿ ಮಾದರಿ ಶಾಲೆಯೊಂದಿದೆ. ಉನ್ನತ ದರ್ಜೆಯ ಶಿಕ್ಷಣಕ್ಕೆ ಹೆಸರಾದದ್ದೆಂದು ಕೊಚ್ಚಿಕೊಳ್ಳುವ ಈ ಶಾಲೆಯಲ್ಲಿ ಓದುವ ಮಕ್ಕಳೆಲ್ಲಾ ವಿ.ಐ.ಪಿ.ಗಳೆನಿಸಿಕೊಂಡ ಕುಟುಂಬಗಳಿಂದ ಬಂದವರೇ. ಶಾಲೆಗೆ ಬರುವ ಈ ಮಕ್ಕಳ ನೆರಳಿಗೆ ಬಂದೂಕುಧಾರಿ ಅಂಗರಕ್ಷಕರ ದೊಡ್ಡ ಪಡೆ! ಇಂತಹ ಶಾಲೆಗೆ ಸಾಮಾನ್ಯ ಪೋಷಕರು ತಮ್ಮ ಮಕ್ಕಳನ್ನು ಕಳುಹಿಸಬೇಕಾದರೆ ನಾಲ್ಕು ಬಾರಿ ಯೋಚಿಸಬೇಕಿದೆ. ಏಕೆಂದರೆ ಇಲ್ಲಿಯ ವಿ.ಐ.ಪಿ. ಮಕ್ಕಳಿಗೆ ಯಾವುದೇ ಸಂಭ್ರಮದ ಆಚರಣೆ, ಸಡಗರಗಳಿಗೂ ಬಂದೂಕಿನಿಂದ ಗುಂಡು ಹಾರಿಸುವುದು ಮೋಜಿನ ಸಂಗತಿ. ಅದು ಮದುವೆಯಿರಬಹುದು, ಇಲ್ಲವೇ ನೃತ್ಯ ಅಥವಾ ಡಿಸ್ಕೊ, ಏನೇ ಆಗಿರಲಿ ಬಂದೂಕು ಇದ್ದೇ ತೀರಬೇಕು. ಈ ಆಮೋದವು ಅತ್ಯಂತ ವಿರು ನೆಲೆಗೆ ಹೋದಾಗ ನಡೆಯುವ ಗುಂಡಿನ ಆಟದ ಪರಿಣಾಮ ಚಿಕ್ಕ ಪುಟ್ಟ ಏಟಿನ ಗಾಯದಿಂದ ಹಿಡಿದು ರಕ್ತಪಾತದವರೆಗೂ ಕೊನೆಗೊಂಡದ್ದಿದೆ. ಆದರೂ ಇವೆಲ್ಲಾ ಮೊಕದ್ದಮೆಗಳು ನೋಂದಾಯಿತವಾಗುತ್ತದೆಂದೇನೂ ಅಲ್ಲ.

ಹರಿಯಾಣದ ಗೃಹ ಸಚಿವ ಮಣೀರಾಮ್ ಗೋದಾರನ ಸಂಬಂಧಿ ಮನೋಜ್ ಗೋದಾರ, ಮಾಜಿ ಪಂಜಾಬಿನ ಸಚಿವ ಭಗವಾನ್ ಆರೋರಾರ ಪುತ್ರ, ಹರಿಯಾಣ ಶಾಸಕ ವಿದ್ಯಾವತಿ ಬೆನಿವಾಲ್‌ನ ಸಂಬಂಧಿ ಅಮನ್ ಬೆನಿವಾಲ್, ಪಂಜಾಬಿನ ಮಾಜಿ ಮುಖ್ಯಮಂತ್ರಿ ಬಿಯಾಂತ್ ಸಿಂಗ್‌ನ ಮೊಮ್ಮಗ ಗುರ್‌ಕೀರ್ತ್ ಸಿಂಗ್....., ಹೀಗೆ ಪಟ್ಟಿ ಬಹಳ ದೊಡ್ಡದು. ವಿ.ಐ.ಪಿ.ಗಳ ಮಕ್ಕಳ ಮೇಲೆ ಮೊಕದ್ದಮೆಗಳು ಸಾಲು ಸಾಲಾಗಿಯೇ ಇವೆ. ಹೀಗೆ ಬಂದೂಕಿನ ನೆರಳಲ್ಲಿ, ಅದರ ನಡುವೆಯೇ ರಾಜಕಾರಣಿಗಳ, ಮಂತ್ರಿ, ಮಹೋದಯರ ಮಕ್ಕಳು, ಮೊಮ್ಮಕ್ಕಳ ಜೀವನ ಸಾಗಿದೆ. ಇದೀಗ ಈ ಪಟ್ಟಿಗೆ ಮತ್ತೊಂದು ಸೇರ್ಪಡೆ ದೆಹಲಿಯ ಮಾಜಿ ಮಾಡೆಲ್ ಜೆಸ್ಸಿಕಾ ಲಾಲ್ ಗುಂಡೇಟಿನಿಂದ ಕೊಲೆಯಾದದ್ದು. ಜೆಸ್ಸಿಕಾ ಲಾಲ್‌ಳ ಕೊಲೆಯ ನಂತರ ಚಂಡೀಗಢದ ಪೊಲೀಸರು ಕೇಂದ್ರಾಡಳಿತ



ಕ್ಕೊಳಪಟ್ಟ ಪ್ರಾಂತ್ಯದ ಎಲ್ಲ ಪಿಸ್ತೂಲುಧಾರಿಗಳ ಲೈಸೆನ್ಸ್‌ನ್ನು ಪುನರ್ ಪರಿಶೀಲಿಸುವ ನಿರ್ಧಾರ ತಳೆದಿದ್ದಾರೆ. ಅದರಲ್ಲೂ ವಿಶೇಷವಾಗಿ ಮೂವತ್ತೈದರ ವಯೋಮಾನಕ್ಕಿಂತ ಕೆಳಗಿನ ಪಿಸ್ತೂಲ್‌ಧಾರಿ ಯುವಕರು ವಿ.ಐ.ಪಿ. ಕುಟುಂಬದವರೇ ಆಗಿದ್ದಾರೆಂಬುದನ್ನು ಗಮನಿಸಿದರೆ ಈ ತೀರ್ಮಾನದ ಮಹತ್ವ ಗೊತ್ತಾಗುತ್ತದೆ.

ಮೇಲುವರ್ಗದ ಜನರ ಕುಡಿತ-ಕುಣಿತದ ಜೀವನವೂ ಈ ಬಂದೂಕು ಸಂಸ್ಕೃತಿಯ ಭಾಗವಾಗೇ ಇದೆ, ಅಂತಸ್ತಿನ, ಪ್ರತಿಷ್ಠೆಯ ಸಂಕೇತವಾಗಿದೆ. ಸಾಮಾನ್ಯವಾಗಿ ಈ ಬಾರ್‌ಗಳಿಗೆ ವಿಧಿಸಿರುವ ನಿಯಮಗಳನ್ನು ಗಾಳಿಗೆ ತೂರಿ ಖಾಸಗಿ ಪಾರ್ಟಿಗಳನ್ನು ನಡೆಸಿಕೊಳ್ಳುವ ಮಂದಿಗೇನೂ ಕಡಿಮೆಯಿಲ್ಲ. ಇಪ್ಪತ್ತೈದು ವರ್ಷ ವಯಸ್ಸಿನವರಿಗಿಂತ ಮೇಲ್ಪಟ್ಟ ವಯಸ್ಸಿನ ವರಿಗೆ ಮಾತ್ರ ಎಂಬ, ಹಾಗೂ ಲೈಸೆನ್ಸ್ ಪಡೆದು, ಬೇಗ ಪಬ್ ಗಳನ್ನು ಮುಚ್ಚಬೇಕೆನ್ನುವ ಕಾನೂನು ಸಮ್ಮತ ಬಾರ್‌ಗಳಿಗಿಂತ ಭಿನ್ನವಾಗಿ ನಡೆಯುವ ಖಾಸಗಿ ಪಾರ್ಟಿಗಳು ಆಧುನಿಕತೆಯ ಎಲ್ಲ ದುಷ್ಟ ಲಕ್ಷಣಗಳನ್ನು ಮೈಗೂಡಿಸಿಕೊಂಡು ಅನಿಷ್ಟಕಾರಕ ವಾಗಿ ಬೆಳೆಯತೊಡಗಿವೆ. ಮೆಹರೋಲಿಯ ಫಾರಂ ಮನೆಗಳು ಮತ್ತು ಟ್ಯಾಮರಿಂಡ್ ಕೋರ್ಟ್ ರೆಸ್ಟೋರೆಂಟ್‌ಗಳು ಇಂತಹ ಒಂದೆರಡು ಉದಾಹರಣೆಗಳಷ್ಟೇ. ಇನ್ನೂ ಎಲ್ಲೆಲ್ಲಿ ಏನೇನು ನಡೆಯುತ್ತಿರಬೇಕೆಂಬುದನ್ನು ನಾವು ಊಹಿಸಿಕೊಳ್ಳಬೇಕು.

ಈ ಶೋಕಿಯ ಪ್ರಪಂಚದ ನಿಶೆಯ ರಾತ್ರಿಗಳು ಯಾವ ಕಾನೂನಿಗೂ ಹೆದರುವುದಿಲ್ಲ. ರಾಜಾರೋಷವಾಗಿ ನಡೆಯುವ ಮೇಲುವರ್ಗದ ಜನರ ಅಭಿರುಚಿಯನ್ನು ಆ ಪಾರ್ಟಿಗಳ ಸ್ವರೂಪವೇ ಬಯಲು ಮಾಡುತ್ತದೆ. "ಕೆಂಪು, ಕಿತ್ತಳೆ, ಹಸಿರು ಪಾರ್ಟಿ," 'ಹೇರ್ ಪಾರ್ಟಿ', 'ವ್ಯಾಂಪ್ಸ್

ಡಾ॥ ಎಸ್. ಗಾಯತ್ರಿ

ಮತ್ತು ವಿಲನ್ ಪಾರ್ಟಿ', 'ಪಿಂಪ್ಸ್ ಮತ್ತು ಪ್ರಾಸ್ಟಿಟ್ಯೂಟ್ ಪಾರ್ಟಿ',- ಇದೇ ರೀತಿ ಹೊಸ ಹೊಸ ರೀತಿಯ ಶೋಧನೆಗಳೊಂದಿಗೆ ವರ್ಣಮಯ, ವೈವಿಧ್ಯಮಯ ಪಾರ್ಟಿಗಳು ಐಷಾರಾಮದ ಜನರ ಲೋಕವನ್ನು ಬೇರೆಯದೇ ಶೈಲಿಯಲ್ಲಿ ರೂಪಿಸಿವೆ. ಅರುಣ್ ಅಹುಜಾನ ಬಾಲಿವುಡ್ ಪಾರ್ಟಿಗೆ ಆಹ್ವಾನವು CD ಯಲ್ಲಿ ಬಂದಿತೆಂದರೆ ಈ ಪಾರ್ಟಿಯ ಅಟ್ಟಹಾಸ ಎಷ್ಟಿರಬಹುದು!

ಈ ಹಿನ್ನೆಲೆಯಲ್ಲಿ ದೆಹಲಿ ತಾರೆ ಜೆಸ್ಸಿಕಾ ಲಾಲ್‌ಳ ಕೊಲೆ ಹಲವಾರು ಪ್ರಶ್ನೆಗಳನ್ನು ನಮ್ಮ ಮುಂದಿಡುತ್ತದೆ. ರಾಜಧಾನಿ ದೆಹಲಿಯ ಕುತುಬ್ ಕೊಲ್ಯಾಂಡೋ ಕಾಂಪ್ಲೆಕ್ಸ್‌ನಲ್ಲಿ ಪ್ರತಿ ಗುರುವಾರದ ರಾತ್ರಿಗಳು 'ನಿಶೆಯ ರಾತ್ರಿ'ಗಳು. ಮೋಜಿನ ಬದುಕಿನ ಮಿನುಗುತಾರೆಗಳಿಗೆ ತಮ್ಮ ಖಾಸಗಿ ಪಾರ್ಟಿಗಳನ್ನು ಮಾಡಿಕೊಳ್ಳುವ ತಾಣ ಇದು. ಏಪ್ರಿಲ್ 30ರಂದು ರಾತ್ರಿ ಮೂವತ್ತನಾಲ್ಕು ವರ್ಷ ವಯಸ್ಸಿನ ಮಾಜಿ ಮಾಡೆಲ್ ಜೆಸ್ಸಿಕಾ ಲಾಲ್ ತನ್ನ ಅಂಗರಕ್ಷಕ ಅರ್ಜುನ್‌ನೊಂದಿಗೆ ಕುಡಿಯುತ್ತಾ ಖುಷಿಯಾಗಿ [illegible] ಜೊತೆ ಆ ಬಾರ್‌ನ [illegible] ... [illegible] ಸೇರಿದ್ದಳು. [illegible] ... [illegible] ಮುಗಿಸುವ ವೇಳೆಗೆ [illegible] ರಾತ್ರಿ 1.15 ಆಗಿತ್ತು. ಆಗ ಅಲ್ಲಿಗೆ ಬಂದ [illegible] ... ಮನು ಶರ್ಮ ತನ್ನ [illegible] ... [illegible]

ಹೆಚ್ಚಿನ ಡ್ರಿಂಕ್ಸ್ ಬೇಕೆಂದು ಆಗ್ರಹಪಡಿಸಿದ. ಆ ವೇಳೆಗಾಗಲೇ ಬಾರ್ ಮುಚ್ಚಿಯಾಗಿತ್ತೆಂದು ಹೇಳಿ ಡ್ರಿಂಕ್ಸ್ ಕೊಡಲು ಸಾಧ್ಯವಿಲ್ಲವೆಂದಳು, ಮಾಲಿನಿ. ಮಾತು ಚರ್ಚೆಯಾಗಿ, ಚರ್ಚೆ ವಾಗ್ಯುದ್ಧವಾಗಿ ಕೊನೆಗೆ ದೊಡ್ಡ



ಗಲಾಟೆಯೇ ನಡೆಯಿತು. ಕುಡಿಯುತ್ತಿದ್ದ ಮೂವರಲ್ಲಿ ಮಾಲಿನಿ, 'ಇದರ ಒಂದು ಗುಟುಕನ್ನು ಕುಡಿದು ಸಾವಿರ ರೂ. ತೆತ್ತು ಇಲ್ಲಿಂದ ತೊಲಗಬಹುದು,' ಎನ್ನಲು ಉರಿದೆದ್ದ ಮನು ಶರ್ಮ ತನ್ನಲ್ಲಿದ್ದ 22 ಪಿಸ್ತೂಲನ್ನು ಹೊರತೆಗೆದು ಜೆಸ್ಸಿಕಾಳತ್ತ ಗುರಿಯಿಟ್ಟ. ತಕ್ಷಣ ಅಲ್ಲಿಂದ ಪರಾರಿಯಾದ. ಮನು ಓಡಿ ಪರಾರಿಯಾದರೂ ಅವನ ಗೆಳೆಯರಾದ ಅಮರ್ ದೀಪ್ ಸಿಂಗ್ ಗಿಲ್ ಮತ್ತು ಆಲೋಕ್ ಖನ್ನನನ್ನು ಪೊಲೀಸರು ಬಂಧಿಸಿದರು. ಕೊಲೆ ನಡೆದ ನಂತರ ಈ ಇಬ್ಬರು ಸ್ನೇಹಿತರು ತಮ್ಮ ಟಾಟಾ ಸಫಾರಿಯಲ್ಲಿ ಮನು ಶರ್ಮನಿಗೆ ತಪ್ಪಿಸಿಕೊಂಡು ಹೋಗಲು ನೆರವಾಗಿದ್ದರೆಂಬುದು ಪೊಲೀಸರ ದೂರು. ಇವರ ಜೊತೆಗೆ ಜನತಾಂತ್ರಿಕ್ ಬಹುಜನ ಸಮಾಜ ಪಕ್ಷದ ನೇತಾರ ಡಿ.ಪಿ. ಯಾದವ್‌ನ ಮಗ ವಿಕಾಸ್ ಯಾದವ್‌ನನ್ನೂ ಮನು ಶರ್ಮನ ಜೊತೆಗಿದ್ದನೆಂಬ ಕಾರಣದಿಂದ ಬಂಧಿಸಿದರು.

ಕುಡಿತದ ಅಮಲಿನ ಉದ್ವೇಗಕ್ಕೆ ಬಲಿಯಾದ ಜೆಸ್ಸಿಕಾ ಎಂತಹ ವ್ಯಕ್ತಿಯಾಗಿದ್ದಳು? ಅವಳೆಂದೂ ನಂಬರ್ ಒನ್ ಮಾಡೆಲ್ ಆಗಿರದಿದ್ದರೂ ರೋಹಿತ್ ಬಾಲಾನ ಕೆಲವು ಪ್ರದರ್ಶನಗಳಲ್ಲಿ ಭಾಗವಹಿಸಿದ್ದಳು. ವೃತ್ತಿಯಿಂದ ನೃತ್ಯಗಾತಿಯಾಗಿದ್ದ ಜೆಸ್ಸಿಕಾ ಮತ್ತು ಬಾಲ್‌ರ ಜೋಡಿ ತಮ್ಮ ಪ್ರದರ್ಶನಕ್ಕೆ 'ಯುರೋಪ್ ಪ್ರವಾಸ'ದ ಬಹುಮಾನವನ್ನೂ ಪಡೆದಿದ್ದರು. ಜೆಸ್ಸಿಕಾ 'ನಮಸ್ತೆ ಇಂಡಿಯಾ'ದ ಕೆಲವು ಸಂಚಿಕೆಗಳಲ್ಲಿ ಭಾಗವಹಿಸಿದ್ದಳು. ಕೆಲವು ವರ್ಷಗಳ ಹಿಂದೆ ಚಿತ್ರತಾರೆ ಮನೋಜ್ ಕುಮಾರ್‌ನ ಮಗ ಕುನಾಲ್ ಗೋಸ್ವಾಮಿಯೊಂದಿಗೆ ಅವಳ ವಿವಾಹ ನಿಶ್ಚಯವಾಗಿತ್ತಾದರೂ ಈ ಸಂಬಂಧ ಮುರಿದುಬಿದ್ದಿತು. ಜೆಸ್ಸಿಕಾ ಪಾರ್ಟಿ ಜೀವನಕ್ಕೆ ಎಷ್ಟೊಂದು ಮನಸೋತಿದ್ದಳೆಂದರೆ ಪ್ರತಿ ದಿನ ಒಂದಲ್ಲ ಒಂದು ಪಾರ್ಟಿಯಲ್ಲಿ ತಪ್ಪದೆ ಭಾಗವಹಿಸುತ್ತಿದ್ದಳು. ಏಪ್ರಿಲ್ 30ರಂದು ಅವಳಿದ್ದ ಪಾರ್ಟಿಯಲ್ಲಿ ಮಾಡೆಲ್ ಸಚಿನ್ ಖುರಾನ, ಫೋಟೊಗ್ರಾಫರ್ ರೋನಿ ಕೌಲ್ ಮತ್ತು ಹಾಲಿವುಡ್ ತಾರೆ ಸ್ಟೀಫನ್ ಸೀಗಲ್ ಮುಂತಾದವರೆಲ್ಲಾ ಭಾಗವಹಿಸಿದ್ದರೂ ಘಟನೆ ನಡೆಯುವ ಮುನ್ನವೇ ಅವರೆಲ್ಲಾ ಹೊರಟುಹೋಗಿದ್ದರು.

ಮಾಜಿ ಕೇಂದ್ರ ಸಚಿವ ವಿನೋದ್ ಶರ್ಮರ ಪುತ್ರ ಮನು ಶರ್ಮ, ಅವರ ಕುಟುಂಬದ ವಲಯಗಳು ಪ್ರಸ್ತಾಪಿಸುವಂತೆ ಅತ್ಯಂತ ಜವಾಬ್ದಾರಿ ಯುವಕ.

(47ನೇ ಪುಟಕ್ಕೆ ಮುಂದುವರಿಯುವುದು)

ಹಾವು ಹರಿದಾಡುತಾವ

ಅರೆ! ಪಾಕಿಸ್ತಾನ್ ಟಿವಿ-

ಟಿವಿಯ ರಿಮೋಟ್ ಒತ್ತುತ್ತಾ ಹೋದಂತೆ ಇಣುಕಿದ ಪಿಟಿವಿ (ಪಾಕಿಸ್ತಾನ್ ಟಿವಿ) ಕಂಡು ಉದ್ಗಾರ ಎತ್ತಿದವರ ಮುಖ ಸ್ವಲ್ಪಹೊತ್ತಿಗೇ ಆಶ್ಚರ್ಯ ಮುದ್ರೆಯಿಂದ ಜಾರಿ ಗುಮಾನಿಯನ್ನು ಧರಿಸಿಕೊಂಡಿತು.

ಸರಿ ಬಿಡಿ ಗುಲ್ಬರ್ಗಾದಲ್ಲಿ ಅಲ್ಲದೆ ಇನ್ನೆಲ್ಲಿ ಪಿಟಿವಿ ಬರುತ್ತೆ? ಎಂದು ಮತ್ತೆ ತಮಗೆ ತಾವೇ ಸಮಾಧಾನ ಮಾಡಿಕೊಂಡರು.

ಟೋಪಿ, ಗಡ್ಡ, ಬುರ್ಖಾ, ಪಠಾಣ್ ಉಡುಪಿಗೆ ಈಗ ಮತ್ತೊಂದು ಟ್ರೇಡ್‌ಮಾರ್ಕ್ ಸೇರಿಕೊಂಡಿದೆ. ಅದೇ - ಪಿಟಿವಿ.

ಇದೇ ರೀತಿಯ ಉದ್ಗಾರಗಳು ಹಲವು ದಿಕ್ಕಿನಿಂದ ಕೇಳಿಬರುತ್ತಲೇ ಇವೆ. ಉದ್ಗಾರ ಎತ್ತಿದವರ ಮಾತು ಬೇರೆಯಾದರೂ ಹೂರಣ ಒಂದೇ.

ಗುಲ್ಬರ್ಗಾದಲ್ಲಿ ಮತ್ತೆ ಮಾಧ್ಯಮ ಸಂಚಾರಕೈಗೊಂಡಿದ್ದಾಗ ದೂರದಲ್ಲಿ ಕಾಣಿಸುತ್ತಿದ್ದ ಡಿಶ್ ಆ್ಯಂಟೆನಾ ತೋರಿಸಿದವರೊಬ್ಬರು 'ನೋಡಿ ಅದು ಏಕೆ ಇದೆ ಗೊತ್ತಾ' ಎಂದು ಪ್ರಶ್ನಿಸಿದರು. ಮಂಗಳೂರಿನಲ್ಲಿ ದುಡ್ಡಿದ್ದವರ ಮನೆಯಲ್ಲೆಲ್ಲಾ ಈ ರೀತಿ ಪ್ರತ್ಯೇಕ ಡಿಶ್ ಕಂಡಿದ್ದ, ಆಳವಾದ ಕಣಿವೆಯಲ್ಲಿ ಎತ್ತರವಾದ ಗುಡ್ಡಗಳಲ್ಲಿ ಸರಿಯಾಗಿ ಇಮೇಜ್ ದಕ್ಕುವುದಿಲ್ಲವೆಂದು ಡಿಶ್‌ಗೆ ಮೊರೆಹೋಗಿದ್ದ ನೂರಾರು ಮನೆಗಳನ್ನು ಕಂಡಿದ್ದ ನನಗೆ ಈ ಪ್ರಶ್ನೆಯನ್ನು ಕೇಳಿದಾಗಲೂ ಕಂಡದ್ದು ಡಿಶ್ ಮಾತ್ರ.

ಆದರೆ ಪ್ರಶ್ನೆ ಅಷ್ಟು ಸರಳವಾಗಿರಲಿಲ್ಲ. 'ಗುಲ್ಬರ್ಗಾದಲ್ಲೇ ಡಿಶ್ ಇಷ್ಟು ಇರೋದು ಯಾಕೆ ಗೊತ್ತಾ? ಪಾಕಿಸ್ತಾನ್ ಟಿವೀನೆ ಬೇಕು ಇವರಿಗೆ' -ಮಾತು ಮುಂದುವರೆಯಿತು.

ಪಾಕಿಸ್ತಾನ ಮತ್ತು ಭಾರತದ ನಡುವಿನ ಹತೋಟಿರೇಖೆ ಕೇವಲ ಕಾಶ್ಮೀರದಲ್ಲಿದೆ ಎಂಬುದು ಈಗ ಸುಳ್ಳಾಗಿಹೋಗಿದೆ. ಎಷ್ಟೊಂದು ಮನೆಗಳಲ್ಲಿ, ಎಷ್ಟೊಂದು ಮನಸ್ಸುಗಳಲ್ಲಿ ಈ ಹತೋಟಿ ರೇಖೆಯನ್ನು ಎಳೆಯಲಾಗಿದೆ ಎಂದರೆ ಈ ಗೆರೆಯನ್ನು ಅತಿಕ್ರಮಿಸಿ ಆ ಕಡೆಗೆ ನುಗ್ಗುವ ಆ ಗೆರೆಯನ್ನು ಅತಿಕ್ರಮಿಸಿ ಈ ಕಡೆಗೆ ನುಗ್ಗುವವರು ಗಲ್ಲಿ ಗಲ್ಲಿಗಳಲ್ಲಿ ಕಾಣಸಿಗುತ್ತಾರೆ. ಈ 'ಅತಿಕ್ರಮಣ' ಮಾತ್ರ ಸುದ್ದಿಯಾಗದೆ, ಸದ್ದುಮಾಡದೇ ನಡೆಯುತಲೇ ಇರುತದೆ.

ನನಗೆ ಇದು ನೆನಪಾದದ್ದು 'ಇಂಡಿಯಾ ಟುಡೇ'ಯ ಇತ್ತೀಚಿನ ಸಂಚಿಕೆಯಲ್ಲಿ ರವಿಶಂಕರ್ ಬರೆದ ಬರಹ ಓದಿ.

ಪ್ರತಿ ಬಾರಿ ಭಾರತ-ಪಾಕಿಸ್ತಾನ ಕ್ರಿಕೆಟ್ ಪಂದ್ಯ ನಡೆದರೆ ಸಾಕು ಭಾರತದ ಮುಸ್ಲಿಮರು ಹೃದಯದಾಳದಲ್ಲಿ ಪಾಕಿಸ್ತಾನದ ಪರವಾಗಿಯೇ ಇದ್ದಾರೆ ಎಂಬ ಹಾವು ಹುತ್ತ ಬಿಟ್ಟು ಮೆತ್ತಗೆ ಹೊರಬರುತ್ತದೆ. ಈ ಹಾವು ಎಷ್ಟು ಮರಿ ಹಾಕಿದೆಯೆಂದರೆ ಸಿಕ್ಕ ಸಿಕ್ಕ ಕಡೆ ಇವು ತೆವಳುತ್ತಲೇ ಇರುತವೆ.

ವಾಸಿಂ ಅಕ್ರಂ ಸಚಿನ್ ತೆಂಡುಲ್ಕರ್‌ನ್ನು ಔಟ್ ಮಾಡಿದರೆ, ಕುಂಬ್ಳೆ ಬೌಲಿಂಗ್‌ನಲ್ಲಿ ಮೊಯಿನ್ ಖಾನ್ ಸಿಕ್ಸರ್ ಎತ್ತಿದರೆ, ಕಾಶ್ಮೀರದಲ್ಲಿ ಬಾಂಬ್ ಸ್ಫೋಟಿಸಿದರೆ, ಪಠಾಣ ಉಡುಪು ತೊಟ್ಟು ಗಡ್ಡ ಬಿಟ್ಟ ಉಗ್ರಗಾಮಿಯ ಚಿತ್ರ ಪತ್ರಿಕೆಗಳಲ್ಲಿ ಪ್ರಕಟವಾದರೆ, ಈ ಹಾವುಗಳು ದೇಶಾದ್ಯಂತ ಹರಿದಾಡಲು ಆರಂಭಿಸುತವೆ.

ಈಗ ಈ ಎಲ್ಲಾ ಪಟ್ಟಿಗೆ 'ಪಿಟಿವಿ' ಸೇರಿಕೊಂಡಿದೆ. ಮಾಧ್ಯಮದಲ್ಲಿಯೇ ಹತ್ತಾರು ವರ್ಷ ಕೆಲಸ ಮಾಡುತ್ತಿರುವವರಿಗೂ ಪಾಕಿಸ್ತಾನ ಟಿವಿ ಭಾರತದಲ್ಲಿ 'ಹತ್ತರಲ್ಲಿ ಒಂದು' ಎಂಬಂತೆ ಎಲ್ಲಾ ಚಾನೆಲ್‌ಗಳು ಆರಂಭವಾದಾಗಲೇ ಆರಂಭವಾಯಿತು ಎಂಬುದೇ ಗೊತ್ತಿಲ್ಲ. ಪಿಟಿವಿಗೆ ಡಿಶ್ ಹಾಕಿಕೊಳ್ಳಲೇ ಬೇಕಿಲ್ಲ. ಇಡೀ ಭಾರತದಲ್ಲಿ ಕೇಬಲ್ ಆಪರೇಟರ್‌ಗಳು ನಾವು ಚೌಕಾಸಿ ಮಾಡಿ ನೀಡುವ ಐವತ್ತೋ ಎಪ್ಪತ್ತೋ ರೂಪಾಯಿಗಳಿಗೆ ನೀಡುವ ಚಾನಲ್‌ಗಳ ಕುಟುಂಬದಲ್ಲಿ ಪಿಟಿವಿಯೂ ಒಬ್ಬಸದಸ್ಯ ಎಂಬುದು ಗೊತ್ತಿಲ್ಲ.

ಅಷ್ಟೇ ಅಲ್ಲ, ಭಾರತದಲ್ಲಿ ಜೀ ಟೀವಿಯಂತೆಯೇ ಪಿಟಿವಿ ಸಹಾ ಜನಪ್ರಿಯ. ಇದನ್ನು ನೋಡುವ ಸಾವಿರಾರು ಮಂದಿ ಕೈಗೆ ಮೆಹಂದಿ ಹಾಕಿಕೊಂಡಿಲ್ಲ, ಗಡ್ಡ ಬಿಟ್ಟಿಲ್ಲ, ಪಠಾಣ್ ಉಡುಪು ತೊಟ್ಟಿಲ್ಲ, ಬುರ್ಖಾ, ಟೋಪಿ ಏನೂ ಇಲ್ಲ ಎಂಬುದೇ ಗೊತ್ತಿಲ್ಲ.

ಜಿ. ಎನ್. ಮೋಹನ್

ಈಗ ಪಾಕಿಸ್ತಾನ ಟಿವಿ (ಪಿಟಿವಿ) ಯನ್ನು ನಿಷೇಧಿಸಲಾಗಿದೆ. ಪಾಕಿಸ್ತಾನ ಸರ್ಕಾರ ಸಹ ಬಿಬಿಸಿ, ಸಿಎನ್‌ಎನ್, ಸುದ್ದಿಗಳಿಗೆ ತನ್ನ ಟಿ.ವಿ.ಯಲ್ಲಿ ತಡೆಹಾಕಿದೆ.

ಕಾರ್ಗಿಲ್ ಕದನ ಈಗ ಕಾಶ್ಮೀರದ ಹಿಮಬೆಟ್ಟಗಳಲ್ಲಿ ಮಾತ್ರ ನಡೆಯುತ್ತಿಲ್ಲ. ಮಾಧ್ಯಮದ ಅಂಗಳದಲ್ಲಿಯೂ ಭೂಮಾರ್ಗವಾಗಿ ಆಕಾಶಮಾರ್ಗವಾಗಿ ಜರುಗುತ್ತಿದೆ.

'ಚುಮ್ಮಾ ಚುಮ್ಮಾ ದೇ ದೇ' ಹಾಡನ್ನು ಕ್ರೀಡಾಂಗಣ ಬಿಟ್ಟು ಹೊರ ಬಂದ ನಂತರವೂ ಭಾರತ-ಪಾಕಿಸ್ತಾನ ಎಂಬ ಭೇದವಿಲ್ಲದೆ ಕ್ರಿಕೆಟ್ ಆಟಗಾರರು ಹಂಚಿಕೊಂಡಿದ್ದರು. ಅದೇ ರೀತಿ ನುಸ್ರತ್ ಫತೇ ಆಲೀಖಾನ್‌ನ ಜಾದೂ ಕಂಠವನ್ನು ರಾತ್ರಿಯಿಡೀ ಆಟಗಾರರು ಹೊದ್ದುಕೊಂಡಿದ್ದರು. ಆದರೆ ಈಗ ದಿಢೀರ್ ಭಾರತ-ಪಾಕಿಸ್ತಾನ ನಡುವಣ 'ಸಹರಾ ಕಪ್' ರದ್ದುಮಾಡಲು ಅದೇ ಆಟಗಾರರು ಕರೆ ನೀಡುತ್ತಿದ್ದಾರೆ. 'ಅಹುದಹುದು' ಎಂದು ಎಷ್ಟೋ ಗೋಣುಗಳು ಸಮ್ಮತಿ ಸೂಚಿಸಿವೆ.

ಕ್ರಿಕೆಟ್‌ನಲ್ಲಿ ಆಗುತ್ತಿರುವುದು ಈಗ ಮಾಧ್ಯಮ ಲೋಕದಲ್ಲಿಯೂ ಆಗುತ್ತಿದೆ. ಕ್ರಿಕೆಟ್‌ಗೆ ಸಹರಾ ಕಪ್ ಆದರೆ ಮಾಧ್ಯಮ ಲೋಕಕ್ಕೆ ಪಿ.ಟಿ.ವಿ.

ಪಾಕಿಸ್ತಾನ ಟಿ.ವಿ. ಸಜ್ಜನ ಎಂದೇನೂ ಭಾವಿಸಬೇಕಾಗಿಲ್ಲ. ಹಾಗೆಯೇ ದೂರದರ್ಶನ ಸಹಾ. ವಾರ್ತಾವಲ್ಲಿ, ಬಿಬಿಸಿ, ಸಿಎನ್‌ಎನ್, ನೂರೆಂಟು ಸುದ್ದಿ ಸಂಸ್ಥೆಗಳು ಎಲ್ಲವೂ ನಮ್ಮ ದೇಶದ ಪ್ರಶ್ನೆ ಬಂದಾಗ ಇತರರ ಮೇಲೆ ಪೂತ್ಕರಿಸುತ್ತಲೇ ಬಂದಿವೆ. ಪಾಕಿಸ್ತಾನದಲ್ಲಿ [illegible] ಗೆದ್ದರೆ [illegible] ಎಂದು ಯಾರೂ ಭಾವಿಸಿಲ್ಲ. ಆದರೂ ಭಾರತದಲ್ಲಿ ಪಿಟಿವಿ ಆದರೆ ಕ್ರಿಕೆಟ್‌ನಲ್ಲಿ ಆಗಿದ್ದು [illegible] ಆಗುತ್ತಿದೆ. ಬಿಬಿಸಿ, ಸಿಎನ್‌ಎನ್‌ನ್ನು ಯಾವುದೇ ಮುಚ್ಚುಮರೆಯಿಲ್ಲದ ನಿಷ್ಪಕ್ಷಪಾತ ಎಂದು [illegible] ಎಂದರೆ [illegible] ಎಂದು [illegible] ಬೇಕಾದರೆ ಗೆಲ್ಲಲಿ. ಪಾಕಿಸ್ತಾನ ಮಾತ್ರ ಸೋಲಲಿ ಎಂಬಂತೆ.

ಆದರೆ ಈ ಎಲ್ಲಕ್ಕಿಂತ ಕುತೂಹಲಕರವೆಂದರೆ ದೇಶದ ಗಡಿಗಳನ್ನು ಅಳಿಸಿಹಾಕಲು ನುಸ್ರತ್ ಫತೇ ಅಲೀಖಾನ್, ಆಶಾ ಭೋಂಸ್ಲೆ, ಆರ್. ಡಿ. ಬರ್ಮನ್, ಜೀ ಟಿವಿ, ಪಿಟಿವಿಗಳು ಯಶಸ್ವಿಯಾಗಿವೆ. ದೆಹಲಿ-ಲಾಹೋರ್ ಬಸ್ ಹೊರಡುವ ಮುನ್ನವೇ ನುಸ್ರತ್ ಫತೇ ಅಲೀಖಾನ್, ಆಶಾ ಭೋಂಸ್ಲೆ ಹಾಡುಗಳು ಗಡಿದಾಟಿ ಹೋಗಿದ್ದವು ಎಂಬುದನ್ನು ಮರೆಯುವಂತಿಲ್ಲ. ನುಸ್ರತ್ ಫತೇ ಆಲೀಖಾನ್‌ರಿಂದ ಹಿಡಿದು ಯಾವ ಪಾಕಿಸ್ತಾನಿಯೂ ಭಾರತದಲ್ಲಿ ಹಾಡಬಾರದು, ಆಡಬಾರದು ಎಂದು ಶಿವಸೇನೆ ಫರ್ಮಾನು ಹೊರಡಿಸಿತು.

ಈಗ ಭಾರತದಲ್ಲಿ ಹಪಹಪಿಸುತ್ತಿದ್ದ ಮನಸ್ಸುಗಳು ಪಿಟಿವಿಯನ್ನು ನಿಷೇಧಿಸಿವೆ. ಇದರಿಂದಾಗಿ ದಶಕಗಳುದ್ದಕ್ಕೂ ಭಾರತ ಮತ್ತು ಪಾಕಿಸ್ತಾನದ ನಡುವೆ ಸೇತುವೆಯನ್ನು ಕಟ್ಟುತ್ತಿದ್ದವರಿಗಂತೂ ನಿರಾಸೆಯಾಗಿದೆ. ಭಾರತದಲ್ಲಿ ಸುತ್ತಿ ಪತ್ರಿಕಾಗೋಷ್ಠಿಗಳನ್ನು ನಡೆಸಿದ ಈ ಎರಡೂ ದೇಶಗಳ ಪತ್ರಕರ್ತರು ಪತ್ರಿಕೆಗಳ ಪುಟಗಳಲ್ಲಿ ಎರಡೂ ದೇಶದ ಬಗ್ಗೆ ನಂಬುಗೆ ಮೂಡಿಸುವ ಸುದ್ದಿಗಳಿಗೆ ಒಂದಿಷ್ಟಾದರೂ ಜಾಗ ಮೀಸಲಿಡುವಂತೆ ಆಗ್ರಹಿಸಿದ್ದರು. ಧಾರಾಕಾರವಾಗಿ ಪರಸ್ಪರ ದೇಶಗಳ ವಿರುದ್ಧ ಹಾವು ಹರಿದಾಡುವ ಪತ್ರಿಕೆಯ ಪುಟಗಳಲ್ಲಿ ಸೌಹಾರ್ದದ ಪಾರಿವಾಳಗಳನ್ನು ಹಾರಿಸಬೇಕು ಎಂಬ ಕಳಕಳಿ ಈ ಎರಡೂ ದೇಶಗಳವರದಾಗಿತ್ತು.

ಮನೆ ಕಟ್ಟುವಾಗ ನಡುವಿನ 'ಹತೋಟಿಗೆರೆ' ಪ್ರಶ್ನೆ ಎರಡೂ ಮನೆಯ ಬಾಂಧವ್ಯವನ್ನು ಮುರಿದುಹಾಕುವುದನ್ನು ಕಂಡಿರುವ ನಾವು ಎರಡು ದೇಶಗಳ ಹತೋಟಿ ರೇಖೆ ಸುಲಭವಾಗಿ ಪರಿಹರಿಸುವ ವಿಷಯ ಎಂದು ಭಾವಿಸಿಲ್ಲ. ಆದರೆ ಇದಕ್ಕೆ ಮಾಧ್ಯಮ, ಆಟ, ಹಾಡು, ಕುಣಿತಗಳು ಬಲಿಯಾಗಬಾರದಿತ್ತು. ಬದಲಿಗೆ ಇವೆಲ್ಲವೂ ಎಲ್ಲವನ್ನೂ ಮರೆಸಬೇಕಿತ್ತು.

ಭಾರತದ ಹಿಮಗುಡ್ಡಗಳಲ್ಲಿ ದೇಶ ರಕ್ಷಿಸಲು ಹಿಂದೂಗಳಂತೆ ಮುಸ್ಲಿಮರೂ ಇದ್ದಾರೆ. ಜೈ ಹಿಂದ್ ಮಿಡಿಯುತ್ತಿರುವ ಆ ಮನಗಳು ಪ್ರಾಣವನ್ನೂ ತೆರುತ್ತಿವೆ. 'ದೇಶಪ್ರೇಮ ಎಂಬುದು ಮುತ್ಸದ್ದಿಗಳ ಕೊನೆಯ ಆಶ್ರಯತಾಣವಾಗಿರಬಹುದು. ಆದರೆ ಒಬ್ಬ ಸೈನಿಕನಿಗೆ ಅದೇ ಕೊನೆಯ ತಾಣ ಹಾಗೂ ಒಂದೇ ಆಶ್ರಯತಾಣ' ಎನ್ನುತ್ತಾರೆ ರವಿಶಂಕರ್ 'ಇಂಡಿಯಾ ಟುಡೇ' ಯಲ್ಲಿ.

'ಹಾಡು-ಹರಡಬೇಕು, ಮಾತು ಮರೀಬೇಕು' ಎನ್ನುತ್ತಾರೆ. ಹಾವು ಹರಿದಾಡುವ ಜಾಗಗಳಲ್ಲಿ ಆ ಬದಲು ಹಾಡು ಹರಡಬೇಕಿತ್ತು.

ಜಿ. ಎನ್. ಮೋಹನ್
ನಂ. 10-3-54, 'ಶ್ರೀನಿಕೇತನ', [illegible]
ಕಲ್ಬುರ್ಗಿ - 585 102

(ಪುಟ 46ರಿಂದ ಮುಂದುವರಿದುದು)

ಪಾರ್ಟಿಗಳನ್ನು ವ್ಯವಸ್ಥೆ ಗೊಳಿಸುವುದು ಅವನ ನೆಚ್ಚಿನ ಹವ್ಯಾಸ. ಅವರದೇ ಒಡೆತನದ ಚಂಡೀಗಢದ ಹೋಟೆಲ್ ಪಿಕಡಿಲ್ಲಿಯಲ್ಲಿ ಕ್ರಿಕೆಟ್ ತಾರೆಯರಿಗೆ, ಚಿತ್ರತಾರೆಯರಿಗೆ ಪಾರ್ಟಿಗಳನ್ನು ವ್ಯವಸ್ಥೆಗೊಳಿಸಿದ್ದ. ಇಂತಹ ಖಯಾಲಿಯ ಮನುಷ್ಯ ಮನು ಶರ್ಮನಿಗೆ ಏಪ್ರಿಲ್ 30ರಂದು ಆದದ್ದಾದರೂ ಏನು? ಅದು ಬರೀ ಕುಡಿತದ ಅಮಲಿನ ಗಮ್ಮತ್ತೇ? ಇಲ್ಲವೇ ತನ್ನ ಬೇಡಿಕೆಗೆ ಮನ್ನಣೆ ದೊರಕದೇ ಹೋದುದಕ್ಕೆ ಉಂಟಾದ ಅಹಂನ ಘಾತವೇ?

ಈ ಘಟನೆಯಿಂದಾಗಿ ಚಂಡೀಗಢದ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಮನುವಿನ ತಂದೆ ವಿನೋದ್ ಶರ್ಮ ಸೋನಿಯಾ ಗಾಂಧಿಯ ಅಣತಿಯ ಮೇರೆ ರಾಜೀನಾಮೆ ಕೊಡಬೇಕಾಗಿ ಬಂತು. ತನ್ನ ಮಗ [illegible] ತನ್ನ ರಾಜಕೀಯ ಭವಿಷ್ಯವನ್ನು ಬಲಿಕೊಡಬೇಕಾಗಿ ಬಂದುದಕ್ಕೆ ತಂದೆ ಪರಿತಪಿಸಲಾರಂಭಿಸಿದ.

ಈ ಎಲ್ಲ ಘಟನೆಗಳು ನಮ್ಮ ದೇಶದ ಸ್ಥಿತಿಗತಿಯ ಕೈಗನ್ನಡಿಯಂತಿವೆ. ಹಣ, ಅಧಿಕಾರಗಳ ಮದದಿಂದ ಮೆರೆಯುವ ರಾಜಕಾರಣಿಗಳು ತಮ್ಮ ಮಕ್ಕಳನ್ನು ರಾಜಿ ಮಾಡಿಕೊಳ್ಳುವುದು ಒಂದಾದರೆ ಜನಸಾಮಾನ್ಯರಿಗೆಂದು ರೂಪಿತವಾದ ಕಾನೂನಿನ ಬಲೆಗೆ ಸಿಕ್ಕದೆ ಇವರೆಲ್ಲಾ ತಪ್ಪಿಸಿಕೊಳ್ಳುವುದರಲ್ಲಿ ವಿಜೇತರಾಗುವುದು ಮತ್ತೊಂದು ವಾಸ್ತವ. ಒಂದು ಕಡೆ ಬಡವರ [illegible] ಕುಡಿತದ ವಿರುದ್ಧದ ಆಂದೋಲನ [illegible] ಮತ್ತೊಂದೆಡೆ ಸಿರಿವಂತರ [illegible] ಲಿಂಗಭೇದವಿಲ್ಲದೆ ಕಾನೂನು [illegible] ಒಡ್ಡುತಿವೆ ಈ ವರ್ಗಕ್ಕೆ [illegible]

ಡಾ|| ಎಸ್. ಗಾಯತ್ರಿ, ನಂ. 108 [illegible]
[illegible]

ಆಧುನಿಕ ಭಾರತೀಯ ವಿಜ್ಞಾನದ ರೂವಾರಿ ಜಗದೀಶ ಚಂದ್ರ ಬೋಸ್ (1858-1937)

ಅನೇಕಬಾರಿ ಈ ಉದ್ಗಾರ ಕೇಳಿಬಂದಿದೆ : ಭಾರತದಲ್ಲಿ ವಿಜ್ಞಾನ ಮುಗ್ಗಟ್ಟಿಗೆ ಸಿಲುಕಿದೆ, ಎಂದು. ಗುಣಾತ್ಮಕ ದೃಷ್ಟಿಯಿಂದ ನೋಡಿದರೆ ಭಾರತವು ವಿಶ್ವದ ವಿಜ್ಞಾನದ ದಿಗಂತವನ್ನು ವಿಸ್ತರಿಸುವುದರಲ್ಲಿ ಮಹತ್ವದ ಸ್ಥಾನವನ್ನು ಹೊಂದಿಲ್ಲ, ಹೊಚ್ಚ ಹೊಸ ಆಯಾಮಗಳನ್ನು ಕಲ್ಪಿಸುವುದರಲ್ಲಿ ನಮ್ಮ ಪಾತ್ರ ಕಿರಿದು. ಹೋಗಲಿ, ದೇಶದ ಅಭಿವೃದ್ಧಿಗಾದರೂ ಗಣನೀಯ ಕೊಡುಗೆ ಇದೆಯೇ ಎಂದರೆ ಅದರಲ್ಲೂ ವಿಜ್ಞಾನದ ಸೋಲು ಕಣ್ಣಿಗೆ ರಾಚುತ್ತದೆ. ಅಂದರೆ, ವಿಜ್ಞಾನದ ವಿಕಾಸಕ್ಕೆ ಏನನ್ನೂ ನೀಡಲು ನಾವು ಅಸಮರ್ಥರು ಎಂದಲ್ಲ. ಪ್ರಾಚೀನ ಕಾಲದಲ್ಲಿ ನಮ್ಮ ಗಣಿತ ಹಾಗೂ ಇಂದು ಹೊರದೇಶಗಳಿಗೆ ತೆರಳಿರುವ ಭಾರತದವರ ಯಶಸ್ಸನ್ನು ಗಮನಿಸಿದರೆ ಇದು ತಿಳಿಯುತ್ತದೆ.

ಸ್ವಾತಂತ್ರ್ಯಾನಂತರ ಭಾರತದಲ್ಲಿ ವಿಜ್ಞಾನ-ತಂತ್ರಜ್ಞಾನಗಳ ಕ್ಷೇತ್ರದಲ್ಲಿ ಹೂಡಲಾಗಿರುವ ಹಣ ಕಡಿಮೆಯೇನಲ್ಲ. ಅಗಾಧವಾದ ಮಾನವ ಸಂಪನ್ಮೂಲ ವಿಜ್ಞಾನ ಮತ್ತು ಇಂಜಿನಿಯರಿಂಗ್ ವಿಭಾಗಗಳಲ್ಲಿ ವೃದ್ಧಿಯಾಗಿದೆ. ಇಷ್ಟೆಲ್ಲಾ ಇದ್ದಾಗ್ಯೂ ನಿರೀಕ್ಷಿತ ಮಟ್ಟದಲ್ಲಿ ಫಲ ಏಕೆ ದೊರೆತಿಲ್ಲ ಎಂಬುದು ಬಹಳ ಚರ್ಚೆಗೆ ಬಂದಿದೆ. ಇದಕ್ಕೆ ಸಮಗ್ರ ಉತ್ತರ ನೀಡುವುದು ಕಷ್ಟ. ಆದರೆ ಉತ್ತರ ಕಂಡುಕೊಳ್ಳಲು ನಮ್ಮ ನಡುವೆ ಕೆಲಕಾಲ ಉಜ್ವಲವಾಗಿ ಪ್ರಕಾಶಮಾನಕ್ಕೆ ಬಂದ ವಿಜ್ಞಾನದ ಬೆಳವಣಿಗೆಯತ್ತ ದೃಷ್ಟಿ ಹಾಯಿಸಬಹುದು.

ಆ ಕಾಲವನ್ನು ಕ್ರಿ.ಶ. ಸುಮಾರು 1890ರಿಂದ 1945ರವರೆಗೆ ಎಂದು ಗುರುತಿಸಬಹುದು. ಅಂದಿಗೆ ವಿಜ್ಞಾನದ ಬೆಳವಣಿಗೆಗಾಗಲಿ ಅಧ್ಯಯನಕ್ಕಾಗಲಿ ಬೇಕಾದ ಸೌಕರ್ಯಗಳು, ಸಲಕರಣೆಗಳು ಇರಲೇ ಇಲ್ಲವೆನ್ನಬಹುದು. ಆಸಕ್ತಿಯುಳ್ಳವರಂತೂ ಬೆರಳೆಣಿಕೆಯಷ್ಟಿದ್ದರು. ಹೀಗಾಗಿ, ಆ ಮಹತ್ವದ ಕಾಲದ ಬ್ರಿಟಿಷ್ ವಸಾಹತುಶಾಹಿ ಆಡಳಿತದಲ್ಲಿ ವಿಜ್ಞಾನವು ಬೆಳೆಯುವುದಕ್ಕೆ ಯಾವ ರೀತಿಯ ಪ್ರೋತ್ಸಾಹವನ್ನೂ ನೀಡದೇ ಇದ್ದರೂ ಬಂದು ಮಾತ್ರ ಅಂತ ಗಮನಾರ್ಹವಾಗಿದೆ: [illegible]

ಅವರ ಬದುಕು ಮತ್ತು ಕೊಡುಗೆಗಳನ್ನು ವಿಮರ್ಶೆಯ ವಿಷಯವನ್ನಾಗಿ ಮಾಡಿಕೊಂಡರೆ ಹೆಚ್ಚು ಸೂಕ್ತವೆನಿಸುತ್ತದೆ.

ನಮ್ಮ ಸ್ವಾತಂತ್ರ್ಯ ಸಮರ ತನ್ನ ಗಟ್ಟಿತನ ಮತ್ತು ನಿರ್ದಿಷ್ಟ ರೂಪುರೇಷೆಗಳನ್ನು ಪಡೆದುಕೊಂಡದ್ದು 19ನೆಯ ಶತಮಾನದ ಕಡೆಯ ಭಾಗದಲ್ಲಿಯೇ. ಸಂಗೀತ, ಕಲೆ, ನಾಟ್ಯಶಾಸ್ತ್ರ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಭಾರತೀಯ ಸಂಸ್ಕೃತಿ ತನ್ನ ಸಂಪದ್ಭರಿತ ಪರಂಪರೆಯ ಹಿನ್ನೆಲೆಯಲ್ಲಿ ಹೊಸ ದಿಕ್ಕುಗಳನ್ನು ಅರಸಲು ಇಟ್ಟ ದಿಟ್ಟ ಹೆಜ್ಜೆಗಳ ಕಾಲವೂ ಕೂಡ ಅದು. ವಸಾಹತುಶಾಹಿ ಮತ್ತು ಪರಕೀಯರ ದಬ್ಬಾಳಿಕೆಯ ವಿರುದ್ಧ ಸಾರಿದ ಸಂಘರ್ಷದಲ್ಲಿ ಜೊತೆ ಜೊತೆಗೆ ತನ್ನದೇ ಆದ ಭಾರತೀಯತೆಯನ್ನು ಗುರುತಿಸಿಕೊಳ್ಳುವ ಪ್ರಯತ್ನ ಸ್ವಾತಂತ್ರ್ಯ ಸಮರಕ್ಕೆ ಒಂದು ಹೊಸ ಇಂಬು ಕೊಟ್ಟಿತು ಎನ್ನಬಹುದು. ಬೋಸರ



ಜೀವನಕ್ರಮ ಈ ಆಗು ಹೋಗುಗಳೆಲ್ಲವನ್ನೂ ಪ್ರತಿಬಿಂಬಿಸುತ್ತದೆ.

ಆಗಿನ ಕಾಲದ ಪ್ರಚಂಡ ಬೆಳವಣಿಗೆಗಳಿಂದ ಪ್ರಭಾವಿತರಾದ ಬೋಸರ ತಂದೆ ಭಗವಾನ್ ಚಂದ್ರ ಢಾಕಾದ ಹತ್ತಿರದ ಹಳ್ಳಿಯಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟ್. ಈತ ಅನಾಥ ಮತ್ತು ಕೆಳಮಟ್ಟದ ಕಾರ್ಮಿಕ ಮಕ್ಕಳಿಗೆ ಮಾತೃಭಾಷೆಯಾದ ಬಂಗಾಳಿಯಲ್ಲಿ ವಿದ್ಯಾರ್ಜನೆ ನೀಡುವುದನ್ನು ತಮ್ಮ ಬದುಕಿನ ಮುಖ್ಯ ಚಟುವಟಿಕೆಯನ್ನಾಗಿ ಮಾಡಿ ಕೊಂಡಿದ್ದು ಒಂದು ವೈಶಿಷ್ಟ್ಯ. ಮಗನನ್ನು ಕಳಿಸಿದ್ದು ಅದೇ ಮಕ್ಕಳು ಓದುತ್ತಿದ್ದ ಶಾಲೆಗೆ. ಬಾಲಕ ಬೋಸ ಶಾಲೆಗೆ ಹೋಗುತ್ತಿದ್ದದ್ದು ಜೈಲುವಾಸ ಅನುಭವಿಸಿ ಬಂದಿದ್ದ ಒಬ್ಬ ಮಾಜಿ ಕೈದಿಯ ಹೆಗಲೇರಿ. ಬಹುಶಃ ಇವೆಲ್ಲವೂ ಅವರ ನಂತರದ ಜೀವನ ಶೈಲಿ ಮತ್ತು ಸೈದ್ಧಾಂತಿಕ ಚಿಂತನೆಗಳ ಮೇಲೆ ಹೆಚ್ಚಿನ ಪರಿಣಾಮ ಬೀರುವುದಕ್ಕೆ ಕಾರಣವಾಗಿರಬೇಕು.

ಡಾ|| ಸಂಜಯ್ ಬಿಸ್ವಾಸ್

ಬಾಲ್ಯದಲ್ಲಿ ಹಿಂದು, ಮುಸ್ಲಿಮ್ ಎರಡೂ ಕೋಮಿನ ಮೀನುಗಾರರ ಮಕ್ಕಳ ಜೊತೆಯಲ್ಲಿ ಒಡನಾಟ ಅವರಿಗಿತ್ತು. ಹಳ್ಳಿಯ ಸುತ್ತಲಿನ ಕಾಡು ಮೇಡುಗಳಲ್ಲಿ ಸುತ್ತಾಟವು ನಿಸರ್ಗದ ವೈಚಿತ್ರ್ಯಗಳತ್ತ ಬಿಚ್ಚುಗಣ್ಣಿನ ನೋಟ ಹಾಯಿಸಲು, ಕೌತುಕದಿಂದ ಬೆಚ್ಚಿಬೀಳುವ ಅವಕಾಶ ಅವನಿಗೆ ಕಲ್ಪಿಸಿಕೊಟ್ಟಿತು. ಇಲ್ಲಿಂದ ಮೊದಲಾದ ಕುತೂಹಲ ಮತ್ತು ಅಪರಿಮಿತ ಆಸಕ್ತಿ ಅವರು ತಮ್ಮ ಇಡೀ ಬದುಕನ್ನೇ ಸಸ್ಯಶಾಸ್ತ್ರದ ಸಂಶೋಧನೆಗೆ ಮುಡಿಪಾಗಿಡಲು ಕಾರಣವಾಯಿತು. ಈ ನಿಟ್ಟಿನಲ್ಲಿ ಅವರು ಪಡೆದ ಮೊದಲ ಅನುಭವಗಳು ಅವರ ಚಿಂತನೆಗಳನ್ನು ಭೌತವಸ್ತುಗಳ ಸ್ವತಂತ್ರ ಅಸ್ತಿತ್ವವನ್ನು ಅರ್ಥೈಸುವತ್ತ ಒಯ್ಯಲು ಒಂದು ಪ್ರಭಾವಯುತವಾದ ಅಂಶವಾಯಿತೆಂಬುದನ್ನು ನಾವು ಮರೆಯಲಾಗದು.

ಜಗದೀಶ ಚಂದ್ರ ಬೋಸರು ಇಂಗ್ಲೆಂಡಿನಲ್ಲಿ ಉಚ್ಚ ಶಿಕ್ಷಣ ಪಡೆದ ದಿನಗಳಲ್ಲಾಗಲಿ, ನಂತರದ ತಮ್ಮ ಸಂಶೋಧನಾ ಜೀವನದಲ್ಲಿಯಾಗಲಿ ಸಸ್ಯಶಾಸ್ತ್ರ, ಭೌತಶಾಸ್ತ್ರದ ಕ್ಷೇತ್ರಗಳಲ್ಲಿ ಪ್ರಬುದ್ಧವಾದ ಮತ್ತು ತರ್ಕಬದ್ಧವಾದ ಹೊಸ ವಿಷಯಗಳನ್ನು ಮಂಡಿಸುತ್ತಾ ಎಲ್ಲಾ ಬೆಳವಣಿಗೆಗಳಿಗೂ ''ವೈವಿಧ್ಯತೆಯಲ್ಲಿ ಏಕತೆ''ಯ ಅಂತಿಮ ಸ್ಥಿತಿಯನ್ನು ತಲುಪುವುದೆಂಬ ವಾದವನ್ನು ಪ್ರತಿಪಾದಿಸಿದರು. ಅಂತೆಯೇ ಹೊಸ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಲು ಕಾರಣರಾದರು. ಸಂಶೋಧನೆಗೂ ಜನಸಾಮಾನ್ಯರ ವೈಜ್ಞಾನಿಕ ಆಶೋತ್ತರಗಳಿಗೂ ಬೋಸರು ಒಂದು ಸೇತುವೆಯೇ ಆದರೆಂದರೆ ಅತ್ಯುಕ್ತಿಯಾಗದು.

ಜನಸಾಮಾನ್ಯರ ಬಗ್ಗೆ, ಬಡಬಗ್ಗರ ಬಗ್ಗೆ ಅವರಿಗಿದ್ದ ಕಾಳಜಿ ಅಷ್ಟಿಷ್ಟಲ್ಲ. ಪ್ರಖ್ಯಾತ ವಿಜ್ಞಾನಿ, ಸಂಶೋಧಕರೆಂದು ಹೆಸರು ಗಳಿಸಿ ಭಾರತಕ್ಕೆ ಹಿಂತಿರುಗಿದಾಗ ಅವರು ನೇರವಾಗಿ ತೆರಳಿದ್ದು ಅವರ ಸ್ವಗ್ರಾಮಕ್ಕೆ, ಬೆರೆತದ್ದು ಸಾಮಾನ್ಯ ಗ್ರಾಮೀಣರ ಜೊತೆ, ಮಾತಿನಲ್ಲಿ ಬಳಸಿದ್ದು ತಮ್ಮ ಮಾತೃಭಾಷೆ ಬಂಗಾಳಿಯನ್ನು. ಅವರು ತವರೂರಿಗೆ ಮರಳಿ ಬಂದ ಸಂದರ್ಭದಲ್ಲಿ ಆ ಹಳ್ಳಿಯ ಹಿತೈಷಿಗಳು ಏರ್ಪಡಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಬೋಸ್ ಹೀಗೆನ್ನುತ್ತಾರೆ: ''ಬದುಕಿನ ಸಂಘರ್ಷದಲ್ಲಿ ಕೆಳವರ್ಗದ ದುರ್ಬಲ ಜೀವಿಗಳು ನಾಶವಾಗುತ್ತವೆ ಎನ್ನುವುದನ್ನು ನಾನು ಡಾರ್ವಿನ್ನಿಂದ ಕಲಿತೆ. ಇದು ಮಾನವನಿಗೂ ಅನ್ವಯಿಸುತ್ತದೆ ಎಂದು ನನಗೀಗ ತೋರುತ್ತದೆ. ಬಡಬಗ್ಗರು ಹೀನ ಪರಿಸ್ಥಿತಿಯನ್ನು

> ಸಸ್ಯ ಸಂವೇದನಾ ವಿಭಾಗವಲ್ಲಿ ಉದ್ದಾಮ ಸಂಶೋಧಕರಾಗಿ ಕೀರ್ತಿ ಗಳಿಸಿದ ಜೆ. ಸಿ. ಬೋಸ್ ಈಗ ಬಾಂಗ್ಲಾದೇಶದಲ್ಲಿರುವ ಮೈಮೆನ್‌ಸಿಂಗ್‌ಗೆ ಸೇರಿದವರು. ಭೌತಶಾಸ್ತ್ರದಲ್ಲೂ ಉಚ್ಚಮಟ್ಟದ ಸಂಶೋಧಕರಾಗಿ ತಮ್ಮ ಪ್ರಯೋಗಗಳಿಗೆ ಬೇಕಾದ ಉಪಕರಣಗಳನ್ನು ಹಲವು ವೇಳೆ ಅವರೇ ಸಿದ್ಧಪಡಿಸಿಕೊಂಡಿದ್ದು ಅವರ ಒಂದು ವೈಶಿಷ್ಟ್ಯ. ನಂತರದ ಕಾಲದಲ್ಲಿ ಸಿ.ವಿ. ರಾಮನ್ ಸಹ ಅದೇ ಹಾದಿಯಲ್ಲಿ ಮುನ್ನಡೆದರು. ರೇಡಿಯೋ ತರಂಗಗಳು, ಸಸ್ಯಗಳ ಸೂಕ್ಷ್ಮ ಸಂವೇದನೆ, ಸಸ್ಯಗಳಲ್ಲಿ ನೀರಿನ ಮೇಲ್ಮುಖ ಸಾಗಣೆ, ಮುಂತಾದ ಕ್ಷೇತ್ರಗಳಲ್ಲಿ ಅಪಾರ ಹೆಗ್ಗಳಿಕೆಗಳು ಭಾರತೀಯ ವಿಜ್ಞಾನಕ್ಕೆ ಭದ್ರವಾದ ಅಡಿಪಾಯವನ್ನೊದಗಿಸಿ ಬೇರೆ ಸಂಶೋಧಕರಿಗೆ ಆತ್ಮವಿಶ್ವಾಸ ದೊರಕಿಸಿಕೊಟ್ಟವು. ವಿಜ್ಞಾನವನ್ನು ಸಮಾಜ ವಿಜ್ಞಾನದ ಚೌಕಟ್ಟಿನಲ್ಲಿಟ್ಟು ವಿಜ್ಞಾನದ ಫಲವು ಜನಸಾಮಾನ್ಯರಿಗೆ ಮುಟ್ಟಲು ಎಂತಹ ಕ್ರಮಗಳು ಅಗತ್ಯವೆಂಬುದನ್ನು ಒತ್ತಿಹೇಳಿದ ಬೋಸ್ ಆಧುನಿಕ ಭಾರತೀಯ ವಿಜ್ಞಾನದ ಆದ್ಯ ಪ್ರವರ್ತಕರು. ಸಂಶೋಧನೆಯ ಮಜಲುಗಳು ಈಗ ಬಹುವಾಗಿ ವಿಸ್ತರಿಸಿವೆ. ಆದರೆ, ಬೋಸ್ ಅವರ ಸಾಮಾಜಿಕ ಪ್ರಜ್ಞೆ, ನೈತಿಕ ಸ್ಥೈರ್ಯ ಮತ್ತು ಸ್ವಾವಲಂಬನೆಯ ಆಶಯ ಹಿಂದೆಂದಿಗಿಂತಲೂ ಹೆಚ್ಚಾಗಿ ಇಂದು ವಿಜ್ಞಾನದ ಕ್ಷೇತ್ರದಲ್ಲಿ ಪುನರವತರಿಸಬೇಕಾಗಿದೆ.

ಮುಟ್ಟದಷ್ಟೂ ಶ್ರೀಮಂತರು ಹೆಚ್ಚು ಹೆಚ್ಚಾಗಿ ತಮ್ಮ ಸ್ಥಾನಗಳನ್ನು ಭದ್ರಪಡಿಸಿ ಕೊಳ್ಳುತ್ತಾರೆ, ಕೊಬ್ಬುತ್ತಾರೆ. ನಾವು ಮತ್ತು ನೀವು ವಿದ್ಯಾವಂತರಾಗಿ, ಉತ್ತಮ ಸ್ಥಿತಿಯಲ್ಲಿರುವುದಾದರೂ ಹೇಗೆ? ಹಸಿವು, ಬಡತನ, ರೋಗರುಜಿನಗಳಿಂದ ನರಳುತ್ತಿರುವ ಹಳ್ಳಿಯ ಜನಸಾಮಾನ್ಯರು ದುಡಿದ ಉತ್ಪಾದನೆಯಿಂದಲೇ ನಮಗೆ ಈ ಅಂತಸ್ತು, ಸೌಕರ್ಯಗಳು ಲಭಿಸಿವೆ. ಇಂದು ಅಸ್ಥಿಪಂಜರಗಳಂತೆ ಬಡವಾಗಿರುವವರು ತಮ್ಮ ದುಡಿಮೆಯಿಂದ ದೇಶದ ಉತ್ಪಾದನೆಗೆ ಕಾರಣರಾಗಿದ್ದಾರೆ. ಇದರಿಂದಲೇ ರಾಷ್ಟ್ರ ಮುಂದೆ ಸಾಗುತ್ತಿದೆ. ಅವರ ಜರ್ಜರಿತ ಎಲುಬುಗಳ ಬೂದಿಯೇ ಮೇಲ್ವರ್ಗದ ಜನರಿಗೆ ಅಗತ್ಯವಾಗಿ ರುವ ಜಮೀನು ಮತ್ತು ಬೇರೆ ರೀತಿಯ ಆಸ್ತಿಯನ್ನು ಗಟ್ಟಿಮಾಡಿ ಕೊಡಲು ಕಾರಣವಾಗುತ್ತಿದೆ. ಇದೆಂತಹ ದುರಂತ!''

ತಮ್ಮ ತಂದೆಯವರಿಂದ ಪ್ರಭಾವಿತರಾದ ಜಗದೀಶಚಂದ್ರ ಬೋಸರು ವಿಜ್ಞಾನವನ್ನು ಬೋಧಿಸುವ ಮತ್ತು ನಿಜ ಜೀವನದಲ್ಲಿ ಅಳವಡಿಸಿಕೊಳ್ಳುವ ಕ್ರಿಯೆ ಮಾತೃಭಾಷೆಯಲ್ಲಿಯೇ ಆದರೆ ಉತ್ತಮ ಎಂದು ತಮ್ಮ ಜೀವನದುದ್ದಕ್ಕೂ ಪ್ರತಿಪಾದಿಸಿದರು. ಜೀವನದಲ್ಲಿ ಬರುವ ಸಮಸ್ಯೆಗಳನ್ನು ಎದುರಿಸುವುದಕ್ಕಾಗಲಿ, ಬಾಳನ್ನು ಹಸನಾಗಿಸುವುದಕ್ಕಾಗಲಿ ಜನಸಾಮಾನ್ಯರು ವಿಜ್ಞಾನವನ್ನು ಬಳಸ ಬೇಕಾದ ಪ್ರಾಮುಖ್ಯತೆಯ ಅರಿವು ಅವರಿಗಿತ್ತು. ಮಾನವನ ಸರ್ವತೋಮುಖ ಏಳಿಗೆಗೆ ವಿಜ್ಞಾನವು ಒಬ್ಬ ವ್ಯಕ್ತಿ ಬಾಲ್ಯದಿಂದಲೂ ಬೆಳೆಯುವ ಸಾಂಸ್ಕೃತಿಕ ಚೌಕಟ್ಟಿನ ಒಂದು ಅವಿಭಾಜ್ಯ ಅಂಗವಾಗಿರಬೇಕೆನ್ನುವುದು ಅವರ ವಾದ.

ಅಜ್ಜಿ ಪುಟ್ಟ ಮಗುವಿಗೆ ಕಥೆಗಳನ್ನು ಹೇಳುವುದು ಮಾತೃಭಾಷೆಯಲ್ಲಿ. ಆ ಪುಟಾಣಿ ಸುತ್ತಲಿನ ಮರಗಳನ್ನು, ಪ್ರಾಣಿಗಳನ್ನು, ಹಣ್ಣು ಗಳನ್ನು ತೋರಲು ಮಾತಿನಲ್ಲಿ ಗುರುತಿಸುವುದು ತನ್ನ ತಾಯಿಯ ಭಾಷೆಯಲ್ಲಿ. ಹೀಗೆಯೇ ಎಲ್ಲರೂ ತಮ್ಮ ತಮ್ಮ ನೆಲದ ಭಾಷೆಯಲ್ಲಿಯೇ ವಿಜ್ಞಾನವನ್ನು ಕಲಿತರೆ ಎಷ್ಟು ಚೆನ್ನ ಎನ್ನುತ್ತಾರೆ ಜಗದೀಶ್ ಚಂದ್ರ ಬೋಸ್. ವಿಜ್ಞಾನವನ್ನು ಕುರಿತು ಆತ ಮಾಡಿದ ಅನೇಕ ಪ್ರತಿಷ್ಠಿತ ಭಾಷಣಗಳೆಲ್ಲಾ ಬಂಗಾಳಿಯಲ್ಲಿಯೇ. ಆತ ಪ್ರಯೋಗಶಾಲೆಯಲ್ಲಿ ಉಪಯೋಗಿಸಿದ ಉಪಕರಣಗಳಿಗೆಲ್ಲಾ ಬಂಗಾಳಿ ಹೆಸರುಗಳೇ! ಇಂದಿನ ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ಜರುಗುತ್ತಿರುವ ವಿದ್ಯಮಾನಗಳ ಹಿನ್ನಲೆಯಲ್ಲಿ ನೋಡಿದರೆ ಇದು ಎಷ್ಟು ಪ್ರಸ್ತುತ!

ಭಾರತೀಯ ಸಂದರ್ಭದಲ್ಲಿ ವಿಶೇಷವಾಗಿ ಗಮನಿಸಬೇಕಾದ್ದೆಂದರೆ ಪ್ರಾಚೀನ ಕಾಲದಲ್ಲಿ ಇದ್ದಿರಬಹುದಾದ ವೈಜ್ಞಾನಿಕ ಪರಂಪರೆಯನ್ನು ಗುರುತಿಸುವಲ್ಲಿ ಬೇರೆ ಬೇರೆ ಕಾಲಘಟ್ಟಗಳಲ್ಲಿನ ವಿಜ್ಞಾನಿಗಳ ಸಮೂಹವು ವಿಭಿನ್ನ ದೃಷ್ಟಿಕೋನ ಗಳನ್ನು ಹೊಂದಿರುವುದು. ವಿಜ್ಞಾನದ ಹುಟ್ಟು ಗ್ರೀಸಿನಲ್ಲಿ ಮಾತ್ರವೇ ಅಲ್ಲ, ಅದರ ಪ್ರಮುಖ ಪ್ರತಿಪಾದಕರು ಯೂರೋಪಿಯನ್ನರು ಮಾತ್ರವೇ ಅಲ್ಲ, ಭಾರತ ಮತ್ತು ಇತರ ಪುರಾತನ ನಾಗರೀಕತೆ ಗಳಲ್ಲಿಯೂ ಕೂಡ ಅದ್ಭುತವಾದ ವೈಜ್ಞಾನಿಕ ಪರಂಪರೆಗಳು ಇದ್ದವು. ಅಲ್ಲದೆ, ಸೂಕ್ತವಾದ ವಾತಾವರಣವನ್ನು ಮತ್ತೊಮ್ಮೆ ಒದಗಿಸಿದ್ದೇ ಆದರೆ ವಿಜ್ಞಾನ ಮತ್ತು ಸಂಸ್ಕೃತಿಗಳೆರಡೂ ನಮ್ಮ ದೇಶದಲ್ಲಿ ಮತ್ತೆ ವಿವಿಧ ಪ್ರಕಾರಗಳಲ್ಲಿ ಪ್ರಜ್ವಲಿಸುವುದರಲ್ಲಿ ಆಶ್ಚರ್ಯವೇನಿಲ್ಲ. ಇದನ್ನು ಜಗದೀಶ ಚಂದ್ರರು ಅತ್ಯಂತ ಕಳಕಳಿಯಿಂದ ಪದೇ ಪದೇ ವಿಜ್ಞಾಪಿಸುತ್ತಾರೆ ಮತ್ತು ತಮ್ಮದೇ ಹೆಗ್ಗಳಿಕೆ ಗಳಿಂದ ಅದನ್ನು ಸಾಬೀತು ಮಾಡಿ ತೋರಿಸಿದ್ದಾರೆ. ಅವರ ಅನೇಕ ಸಮಕಾಲೀನ ವಿಜ್ಞಾನಿಗಳು ಸಂಸ್ಕೃತವನ್ನು ಕಲಿಯುವುದರ ಮೂಲಕ ಪುರಾತನ ಗ್ರಂಥಗಳನ್ನು ಭಾಷಾಂತರಿಸಿ ಮಾನವ ಸಂಸ್ಕೃತಿಯ ಏಕತೆಯನ್ನು ಸಾರಿದರು. ಭಿನ್ನ ಪರಂಪರೆಗಳಲ್ಲಿ ಮಾನವನ ಚಿಂತನೆ ಮತ್ತು ಸೃಷ್ಟ್ಯಾತ್ಮಕತೆ ಹೇಗೆ ಸರಿಸುಮಾರು ಒಂದೇ ರೀತಿಯಲ್ಲಿ ವಿಕಾಸವಾಗಿದೆ ಎಂಬುದನ್ನು ಅವರೆಲ್ಲಾ ಎತ್ತಿ ಹಿಡಿದರು. ವಿಶ್ವ ಸಮುದಾಯದಲ್ಲಿ ಭಾರತ ತನ್ನ ಹೆಮ್ಮೆಯ ಸ್ಥಾನವನ್ನು ಮತ್ತೊಮ್ಮೆ ಪಡೆಯಲು ಸಾಧ್ಯವಿದೆ. ಸಿ. ವಿ. ರಾಮನ್, ಬ್ರಜೇಂದ್ರನಾಥ ಸೀಲ್, ಸೇನ್ ಗುಪ್ತ, ಮತ್ತಿತರ ವಿಜ್ಞಾನಿಗಳು ಆ ಪರಂಪರೆಯ ಔಚಿತ್ಯವನ್ನು ರುಜುವಾತು ಪಡಿಸಲು ದುಡಿದಿದ್ದಾರೆ. ಬೋಸರು ಇದಕ್ಕೆ ಹೊರತಲ್ಲ. ಭಾರತದ ಪುರಾತನ ಪರಂಪರೆ ಹಾಗೂ ಭವ್ಯತೆಯ ಹಿನ್ನೆಲೆಯಲ್ಲಿ ಆಧುನಿಕ ಸಂದರ್ಭದಲ್ಲಿನ ಅಗತ್ಯಗಳನ್ನು ಗುರುತಿಸಿಕೊಂಡು ಇಡೀ ಜನತೆಯ ಅಭಿವೃದ್ಧಿಗೆ ವಿಜ್ಞಾನವನ್ನು ಬಳಸಬೇಕೆನ್ನುವ [illegible] ಘೋಷಣೆಗೆ ಜಗದೀಶ ಚಂದ್ರ ಬೋಸರ ಜೀವನವೇ ಒಂದು ಸಾಕ್ಷಿ.

ವಿಜ್ಞಾನದಲ್ಲಿ ಹೊಸತು

ನಡೆದಾಡುವ ಕಂಪ್ಯೂಟರ್

ನಡೆದಾಡುವ ಕಂಪ್ಯೂಟರ್ ಎಂದರೆ ಆಶ್ಚರ್ಯವಾಗಬಹುದು. ಆದರೆ ಕೆನಡಾದ ವಿಜ್ಞಾನಿಗಳಿಗೆ ಇದೇನೂ ಹೊಸತಲ್ಲ. ಅವರಾಗಲೇ ಮನುಷ್ಯರು ಧರಿಸಿ ಓಡಾಡುವಂತಹ ಕಂಪ್ಯೂಟರ್ ಬಟ್ಟೆಯನ್ನು ತಯಾರಿಸಿದ್ದಾರೆ. ಸಾಮಾನ್ಯವಾಗಿ ವ್ಯಾಯಾಮಪಟುಗಳು ಧರಿಸುವ ಜರ್ಕಿನ್ ನಮೂನೆಯಲ್ಲಿರುವ ಆ ಬಟ್ಟೆಯನ್ನು ತಯಾರಿಸುವಾಗಲೇ ವಿದ್ಯುನ್ಮಾನ ತಂತಿಜಾಲವನ್ನು ಹೆಣಿಗೆಯ ಮೂಲಕ ಅಳವಡಿಸಿರಲಾಗುತ್ತದೆ. ಅಷ್ಟೇ ಅಲ್ಲ, ಆ ಬಟ್ಟೆಯಲ್ಲಿರುವ ವಿದ್ಯುನ್ಮಾನ ತಂತಿಜಾಲ ಅದನ್ನು ಧರಿಸಿರುವವರ ಮಿದುಳಿನ ಜೊತೆ ಸ್ಪಂದಿಸುತ್ತದೆ. ಹಾಗೆಂದೇ ಬಟ್ಟೆಯಲ್ಲಿ ಹುದುಗಿರುವ ಕಂಪ್ಯೂಟರ್ ಬಿಡಿಭಾಗಗಳು ಮಾನವನ ಮಿದುಳಿಗೇ ಹೊಂದಿಕೊಂಡಂತಹ ಅಂಗವಾಗಿರುತ್ತದೆ.

ಆ ಬಟ್ಟೆಯಲ್ಲಿ ಕಂಪ್ಯೂಟರ್ ವ್ಯವಸ್ಥೆಯಂತೆ ಒಂದು ಮಿನಿ ಟಿ.ವಿ. ಪರದೆ ಇರುವ ಮಾನಿಟರ್, ಕೀ ಬೋರ್ಡ್ ಮತ್ತು ಮೌಸ್‌ಗಳನ್ನು ಅನುಕರಿಸುವಂತಹ ಗುಂಡಿಗಳೂ ಸೇರಿಕೊಂಡಿವೆ. ಜೊತೆಗೆ ಇಂಟರ್‌ನೆಟ್ ಜಾಲದ ವ್ಯವಸ್ಥೆಯೂ ಇದೆ. ಇಷ್ಟೂ ಸಾಲದೆಂಬಂತೆ ಮಿನಿ ಕ್ಯಾಮರಾಗಳು, ಎರಡು ಮೈಕ್ರೋಫೋನ್‌ಗಳು ಮಾತ್ರವಲ್ಲದೆ ರೇಡಾರ್ ವ್ಯವಸ್ಥೆಯೂ ಇರುತ್ತದೆ. ಆ ಬಟ್ಟೆಯ ಮೂಲಕ ವೈರ್‌ಲೆಸ್ ಸಂದೇಶವನ್ನು ಕಳುಹಿಸಬಹುದಾಗಿದೆ.

ಆ ಬಟ್ಟೆಯನ್ನು ಧರಿಸುವ ಮನುಷ್ಯನ ಎದುರಿಗೆ ಅವನ ವೈರಿಯೊಬ್ಬ, ಅಷ್ಟೇಕೆ ಕೊಲೆಗಾರನೇ ಬರುತ್ತಿದ್ದಾನೆ ಎಂದಿಟ್ಟುಕೊಳ್ಳೋಣ. ಆಗ ಆ ಮನುಷ್ಯನ ಹೃದಯದ ಬಡಿತ ಏರುವುದು ಸಹಜ. ಹಾಗಾದ ತಕ್ಷಣ ಮಿನಿಕ್ಯಾಮರಾಗಳು ಎದುರಿಗೆ ಬಂದ ಮನುಷ್ಯನ ಫೋಟೊ ಹಿಡಿದು ಬಟ್ಟೆಯಲ್ಲಿರುವ ಕಂಪ್ಯೂಟರಿನಲ್ಲಿ ಸಂಗ್ರಹಿಸುತ್ತವೆ. ಹಾಗೆ ಸಂಗ್ರಹಿಸಿದ ಫೋಟೋವನ್ನು ಇಂಟರ್‌ನೆಟ್ ಜಾಲದಲ್ಲಿ ವಿಶ್ವದಾದ್ಯಂತ ಕಳುಹಿಸಬಹುದು. ಕೊಲೆಗಾರರನ್ನು ಕಂಡುಹಿಡಿಯಲು ಈ ವ್ಯವಸ್ಥೆ ಸಹಕಾರಿಯಾಗಿದೆ. ತಂಪು-ಕನ್ನಡಕಗಳಲ್ಲಿಯೂ ಹೀಗೆ ದೃಶ್ಯಗಳನ್ನು ಸೆರೆಹಿಡಿಯುವ ವ್ಯವಸ್ಥೆಯನ್ನು ಇತ್ತೀಚೆಗೆ ಅಳವಡಿಸಲಾಗಿದೆ. ಈ ಕಂಪ್ಯೂಟರ್ ಮಿದುಳಿನ [illegible] ಮೂಲಕ ಸಂಪರ್ಕ ಸಾಧಿಸುವುದರಿಂದ, ಆ [illegible] ಹೀಗೆ 'ನಡೆದಾಡುವ ಕಂಪ್ಯೂಟರ್' ತಂತ್ರಜ್ಞಾನ ಇತ್ತೀಚೆಗೆ [illegible]

ಹಸಿರು ಇಲಿಗಳ ಸೃಷ್ಟಿ

ವಿಜ್ಞಾನಿಗಳು ಹಸಿರು ಬಣ್ಣದಿಂದ ಕಂಗೊಳಿಸುವ ಇಲಿಗಳನ್ನು ಸೃಷ್ಟಿಸಿದ್ದಾರೆ. ಸಾಮಾನ್ಯವಾಗಿ ಜೆಲ್ಲಿ ಮೀನುಗಳಲ್ಲಿ ಇರುವ ಒಂದು ಬಗೆಯ ವಂಶವಾಹಿಗಳು ಆ ಜಲಚರವನ್ನು ಹಸಿರು ಬಣ್ಣದಿಂದ ಕಂಗೊಳಿಸಲು ಉದ್ದೀಪನಗೊಳಿಸುತ್ತವೆ. ಆ ವಂಶವಾಹಿಗಳನ್ನು ಮೀನಿನಿಂದ ಬೇರ್ಪಡಿಸಿ ತೆಗೆದು, ಇಲಿಗಳ ಭ್ರೂಣಗಳಲ್ಲಿ ಸೇರಿಸಿ, ಹಸಿರು ಬಣ್ಣದ ಇಲಿಗಳನ್ನು ತಯಾರಿಸಲಾಗಿದೆ. ಈ ಪ್ರಯೋಗದಲ್ಲಿ ಮೊದಲು ಇಲಿಯ ವೀರ್ಯವನ್ನು ಶೈತ್ಯೀಕರಿಸಿ ನಂತರ ಒಣಗಿಸಲಾಗುತ್ತದೆ. ನಂತರ ಜೆಲ್ಲಿ ಮೀನಿನ ವಂಶವಾಹಿಗಳನ್ನು ಆ ವೀರ್ಯದಲ್ಲಿ ಸೇರಿಸಲಾಗುತ್ತದೆ. ಆ ಬದಲಾದ ವೀರ್ಯವನ್ನು ಭ್ರೂಣ ಸ್ಥಳಾಂತರ ತಂತ್ರಗಳಿಂದ ಹೆಣ್ಣು ಇಲಿಯಲ್ಲಿ ಸೇರಿಸಲಾಗುತ್ತದೆ.

ಕೈವಾರ ಗೋಪೀನಾಥ್

ಇದು ಇಲಿಗಳಿಗೆ ಒಂದರಂತೆ ಅವು ಯಶಸ್ವೀ ಪ್ರಯೋಗಕ್ಕೆ ಒಳಗಾದವು. ಪ್ರಯೋಗಶಾಲೆಗಳಲ್ಲಿ ಸೃಷ್ಟಿಯಾದ ಭ್ರೂಣಗಳಲ್ಲಿ ಶೇ. 80 ಭಾಗ ಹೊಸ ಹಸಿರು ವಂಶವಾಹಿಗಳನ್ನು ಸ್ವೀಕರಿಸಿದವು. ಹಸಿರು ಇಲಿಗಳ ಮುಂದಿನ ಸಂತತಿಯೂ ಹಸಿರು ಬಣ್ಣದಿಂದಲೇ ಕಂಗೊಳಿಸುತ್ತವೆ ಎಂಬುದಾಗಿ ಈ ಯಶಸ್ವೀ ಪ್ರಯೋಗಗಳನ್ನು ವರದಿ ಮಾಡಿದ ಪತ್ರಿಕೆ ತಿಳಿಸಿದೆ.

ಕೃತಕ ಕೈಗಳ ಸೃಷ್ಟಿ

ಇಂಗ್ಲೆಂಡಿನ ಬ್ರಾಡ್‌ಫರ್ಡ್ ವಿಶ್ವವಿದ್ಯಾಲಯದ ಸಂಶೋಧಕರು ಅತ್ಯಂತ ಉನ್ನತ ತಂತ್ರಜ್ಞಾನದಿಂದ ಪೂರಕವಾದ ಕೃತಕ ಕೈಯನ್ನು ತಯಾರಿಸಿದ್ದಾರೆ. ಸಾಮಾನ್ಯ ಮನುಷ್ಯನ ಕೈ ನಿರ್ವಹಿಸುವ ಕಾರ್ಯಗಳಲ್ಲಿ ಶೇ. 80 ಭಾಗದ ಕೆಲಸವನ್ನು ಈ ಕೃತಕ ಕೈಯ್ಯಿಂದ ನಿರ್ವಹಿಸಬಹುದು.

ಅನೇಕ ಕೀಲುಗಳು ಹಾಗೂ ಬೆರಳುಗಳನ್ನು ಅಳವಡಿಸಲಾಗಿರುವ, ಮಾನವರ ಕೈಯನ್ನೇ ಎಲ್ಲ ರೀತಿಯಲ್ಲಿ ಅನುಕರಿಸುವ, ಈ ಕೃತಕ ಕೈ ಅಂಗವಿಕಲರಿಗೆ ವರದಾನವಾಗಿದೆ. ದೇಹದಲ್ಲಿರುವ ರಜ್ಜುಗಳ ಚಲನೆಯಿಂದ ಉತ್ತೇಜಿತಗೊಂಡು, ಕೈ ಚಲನೆಯನ್ನು ಅನುಕರಿಸುವ ವ್ಯವಸ್ಥೆ ಈ ಕೈಯಲ್ಲಿದೆ. ಆ ಕೃತಕ ಕೈಯ್ಯಿನ ಮುಷ್ಟಿಯ ಹಿಡಿತ ಸಾಮಾನ್ಯ ಮಾನವನ ಕೈಗಳ ಮುಷ್ಟಿಯ ಹಿಡಿತಕ್ಕಿಂತ ಬಲವಾಗಿದೆ ಎಂಬುದಾಗಿ ವರದಿಯಾಗಿದೆ.

ಟಿ.ವಿ. ಕಂಪ್ಯೂಟರ್ ಆಗಬಹುದೇ ?

ಕಂಪ್ಯೂಟರ್ ಖರೀದಿಸಬೇಕಾದರೆ ಬಹಳ ದುಬಾರಿಯಾಗುತ್ತದೆ. ಮನೆಯಲ್ಲಿರುವ ಟಿವಿ ತೆರೆಯನ್ನೇ ಕಂಪ್ಯೂಟರ್ ಆಗಿ ಏಕೆ ಉಪಯೋಗಿಸಬಾರದು ? ಈ ಯೋಚನೆ ಬರುವುದು ಸಹಜ. ಈ ಸಮಸ್ಯೆಗೆ ಬೆಂಗಳೂರಿನ ವಿ.ಎಕ್ಸ್.ಎಲ್. ಇನ್‌ಸ್ಟ್ರುಮೆಂಟ್ಸ್ ಕಂಪೆನಿ ಪರಿಹಾರವನ್ನು ಕಂಡುಹಿಡಿದಿದೆ. ಸಾಮಾನ್ಯವಾಗಿ ಎಲ್ಲರ ಮನೆಯಲ್ಲೂ ಉಪಗ್ರಹ ಚಾನಲ್‌ಗಳ ಸಂಪರ್ಕ ಕೇಬಲ್ ಜಾಲದ ಮೂಲಕ ಸಾಧಿಸಲಾಗಿರುತ್ತದೆ. ಆ ಕೇಬಲ್ ಜಾಲವನ್ನು 'ನೆಟಿಕಾ' ಎಂಬ ಉಪಕರಣದ ಮೂಲಕ ಹರಿಸಿದರೆ, ಟಿವಿ ತೆರೆಯನ್ನು ಕಂಪ್ಯೂಟರ್ ಆಗಿಯೂ ಉಪಯೋಗಿಸಬಹುದು.

ಕೀಬೋರ್ಡ್ ಮತ್ತು ಮೌಸ್ ಸಂಪರ್ಕ ಜೋಡಿಸಿದಾಗ ಇಂಟರ್‌ನೆಟ್ ಮತ್ತು ಈ-ಮೇಲ್ ಸೇರಿದಂತೆ ಕಂಪ್ಯೂಟರಿನ ಎಲ್ಲ ಪ್ರಕ್ರಿಯೆಗಳನ್ನೂ ನಡೆಸಬಹುದು. ವಿಡಿಯೋ ಆಟಗಳನ್ನೂ ಆಡಬಹುದು. ಕಂಪ್ಯೂಟರ್ ವ್ಯವಸ್ಥೆ ಬೇಡವೆಂದಾಗ, ಉಪಗ್ರಹ ಚಾನಲ್‌ಗಳಿಂದ ಮಾಮೂಲಿನಂತೆ ಮನರಂಜನೆ ಪಡೆಯಬಹುದು. ಕಂಪ್ಯೂಟರ್ ಇದ್ದಾಗ, ಇಂಟರ್‌ನೆಟ್ ಸಂಪರ್ಕಕ್ಕೆ ದೂರವಾಣಿ ಸಂಪರ್ಕ ಅವಶ್ಯಕವಾಗಿದೆ. ಆದರೆ ಈ ವ್ಯವಸ್ಥೆಗೆ ಟೆಲಿಫೋನ್ ಇರಬೇಕಾಗಿಲ್ಲ !

ಕೈವಾರ ಗೋಪೀನಾಥ್, 'ರಾಜಕಮಲ್' ನಂ.276,
5ನೇ ಮುಖ್ಯರಸ್ತೆ, 10ನೇ ಅಡ್ಡರಸ್ತೆ, ನರಸಿಂಹರಾಜ ಕಾಲೋನಿ
ಬೆಂಗಳೂರು - 560 019

'ಕೋಡಗನ ಕೋಳಿ ನುಂಗಿತ್ತ'

ಕರ್ನಾಟಕ ಸರ್ಕಾರದ ಪಠ್ಯಪುಸ್ತಕ ನಿರ್ದೇಶನಾಲಯವು ಏಳನೇ ತರಗತಿಯ ವಿದ್ಯಾರ್ಥಿಗಳಿಗಾಗಿ ತಯಾರಿಸಿರುವ ಕನ್ನಡ ಪ್ರಥಮ ಭಾಷೆಯ ಪಠ್ಯಪುಸ್ತಕದ ಪದ್ಯಭಾಗದಲ್ಲಿ ಸಂತ ಶಿಶುನಾಳ ಶರೀಫರ 'ಕೋಡಗನ ಕೋಳಿ ನುಂಗಿತ್ತ' ಎಂಬ ತತ್ವ ಪದವಿದೆ. ಇದನ್ನು ಕರ್ನಾಟಕದಾದ್ಯಂತ ಏಳನೇ ತರಗತಿಯ ಮಕ್ಕಳು ಅಭ್ಯಾಸ ಮಾಡುವುದಿರಲಿ, ಪಾಠ ಹೇಳುವ ಅಧ್ಯಾಪಕರು ಹೇಗೆ ಅರ್ಥಮಾಡಿಸುತ್ತಾರೋ ತಿಳಿಯದು. ಕವಿ ಕಾವ್ಯ ವಿಚಾರದ ನಂತರ ಎರಡು ಪ್ಯಾರಗಳಲ್ಲಿ ಈ ತತ್ವಪದದ ಬಗ್ಗೆ ಸಾಂಪ್ರದಾಯಿಕ ವಿವರಣೆಯನ್ನು ಕೊಡಲಾಗಿದೆ. ಮೂಗಿಗಿಂತ ಮೂಗುತಿ ಭಾರ ಎಂಬಂತೆ ಈ ವಿವರಣೆ ಮಕ್ಕಳ ಪಾಲಿಗೆ ಎಷ್ಟು ಕಠಿಣವಾಗಿದೆಯೆಂದರೆ 'ಕೋಡಗನ ಕೋಳಿ ನುಂಗಿತ್ತ' ಎಂಬ ಚಮತ್ಕಾರದ ಪದವೇ ಮಕ್ಕಳ ಮನಸ್ಸನ್ನು ಸುಲಭವಾಗಿ ಆಕ್ರಮಿಸಿಕೊಂಡು ಮುದ ನೀಡುತ್ತದೆ. ಈ ಪದ್ಯದ ಭಾವಾರ್ಥ ಮಕ್ಕಳಿಗೆ ತಿಳಿಯಲಿ, ಬಿಡಲಿ ಆದರೆ ಒಂದನ್ನೊಂದು ನುಂಗುತ್ತಾ ಸಾಗುವ ಚಮತ್ಕಾರವು ಎಳೆಯರಿಗೆ ಸಹಜವಾದ ನುಂಗುವ ಬುದ್ಧಿಗೆ ಸವಾಲೆಸೆದು, ಬಗೆಹರಿಯದ ಒಗಟಿನಂತೆ ಕಾಡುತ್ತಾ ಮನಸ್ಸಿನಲ್ಲೆ ಉಳಿದುಬಿಡುತ್ತದೆ. ಈ ಮಾತುಗಳನ್ನು ನಾನು ಊಹಿಸಿಕೊಂಡು ಬರೆಯುತ್ತಿಲ್ಲ. ನನ್ನ ಮಕ್ಕಳಲ್ಲಿ ಒಬ್ಬಳು ಆರನೇ ತರಗತಿಗೆ, ಒಬ್ಬ ಏಳನೇ ತರಗತಿಗೆ ಈ ವರ್ಷ ಪ್ರವೇಶ ಪಡೆದಿದ್ದಾರೆ. ನಾನು ಆಗಾಗ ಗುನುಗುತ್ತಿದ್ದ 'ಕೋಡಗನ ಕೋಳಿ ನುಂಗಿತ್ತ' ಎಂಬ ಪದವನ್ನು ಮೊದಲೇ ಕೇಳಿಸಿಕೊಂಡಿದ್ದ ನನ್ನ ಮಕ್ಕಳಿಗೆ ಇದೀಗ ತಮ್ಮ ಪಠ್ಯಪುಸ್ತಕದಲ್ಲೆ ಆ ಹಾಡನ್ನು ಕಂಡು ಖುಷಿಯಾಗಿರಬೇಕು. ನನಗೆ ತಂದು ತೋರಿಸಿದರು ಕೂಡ. ಈಗ ಸುಮ್ಮನಿರಲು ನನ್ನ ಮನಸ್ಸೊಪ್ಪದೆ ನೆನಪಿನ ಶಕ್ತಿಯಿಂದ 'ಕೋಡಗನ ಕೋಳಿ ನುಂಗಿತ್ತ' - ಎಂದು ಆಂಗಿಕ ಚಲನೆಗಳ ಸಹಿತ ಹಾಡುತ್ತಾ ಮಕ್ಕಳ ಖುಷಿಯೊಂದಿಗೆ ಸ್ಪಂದಿಸಿದೆ. ಹೀಗೆ ಸ್ಪಂದಿಸುತ್ತಿರಬೇಕಾದರೆ ನನ್ನ ಮನಸ್ಸಿನಲ್ಲಿ ಶರೀಫರ ಹಾಡನ್ನೇ ಅನುಕರಣೆ ಮಾಡಿ ಮಕ್ಕಳಿಗೆ ಪರಿಚಿತವಾದ ವಿವರಗಳನ್ನು ಸೇರಿಸಿ ಹಾಡಿದರೆ ಹೇಗೆ? ಎನಿಸಿತು.

ನನ್ನ ಮಕ್ಕಳು ಓದುತ್ತಿರುವ ಶಾಲೆಯಲ್ಲಿ ಮಲ್ಲಪ್ಪ ಎಂಬ ಗೇಟ್‌ಕೀಪರ್ ಇದ್ದಾನೆ. ಶಾಲೆಯ ಬೆಲ್ ಹೊಡೆದ ನಂತರ ಮುಖ್ಯದ್ವಾರದ ಬಳಿ ನಿಂತು ಮಕ್ಕಳೆಲ್ಲರನ್ನು ಒಳಗೆ ಬಿಟ್ಟುಕೊಳ್ಳುವ ಮಲ್ಲಪ್ಪ, ನಂತರ ಗೇಟು ಮುಚ್ಚಿ ಶಿಸ್ತಿನ ಸಿಪಾಯಿಯಂತೆ ನಿಂತುಬಿಡುತ್ತಾನೆ. ಶಾಲೆಯ ಆವರಣದೊಳಗೆ ಪ್ರಾರ್ಥನೆಯ ಪೂರ್ವ ಸಿದ್ಧತೆಗಳು ಆರಂಭವಾಗುತ್ತವೆ. ಅಧ್ಯಾಪಕರೆಲ್ಲ ಧಳಾಯಿಸುತ್ತಾ ಮಕ್ಕಳನ್ನು ಸಾಲಾಗಿ ನಿಲ್ಲಿಸುತ್ತಾರೆ. ತಡವಾಗಿ ಬಂದ ಮಕ್ಕಳು ಈ ಹಂತದಲ್ಲಿ ಒಳಗೆ ಬಂದು ಸೇರಿಕೊಳ್ಳುವಂತಿಲ್ಲ. ಬೆನ್ನ ಮೇಲೆ ಮಣಭಾರದ ಸ್ಕೂಲ್ ಬ್ಯಾಗು ಹೊತ್ತು ಗೇಟಿನಿಂದ ಆಚೆಯೇ ನಿಂತಿರಬೇಕಾಗುತ್ತದೆ. ಪ್ರಾರ್ಥನೆ ಮುಗಿದ ಬಳಿಕ ಗೇಟು ತೆರೆದು, ಲೇಟು ಲತೀಫರನ್ನು ಒಳಗೆ ಬಿಟ್ಟುಕೊಳ್ಳುವುದು ಈ ಶಾಲೆಯ ಪದ್ಧತಿಯಾಗಿದೆ. ಇದನ್ನು ಗಮನಿಸಿದ್ದ ನಾನು ಇದನ್ನೇ ಹಾಡು ಕಟ್ಟಿ ಹೇಳಿದೆ:

ಮಲ್ಲಪ್ಪ ಗೇಟು ನುಂಗಿ
ಗೇಟು ಸ್ಕೂಲಾ ನುಂಗಿ
ಓದಲು ಬಂದ ಮಕ್ಕಳನ್ನೆಲ್ಲ ಬ್ಯಾಗೇ ನುಂಗಿತ್ತ
ನೋಡವ್ವ ತಂಗಿ, ಕೋಡಗನ ಕೋಳಿ ನುಂಗಿತ್ತ...

ಇದನ್ನು ಕೇಳಿದೊಡನೆ ನನ್ನ ಮಕ್ಕಳ ಕಣ್ಣುಗಳಲ್ಲಿ ಒಂದು ಬಗೆಯ ಮಿಂಚು ಸುಳಿದು ಶಿಶುನಾಳ ಶರೀಫರ ಹಾಡಿನ ಚಮತ್ಕಾರವನ್ನು ಗ್ರಹಿಸಿದವರಂತೆ ಸಂತಸಪಟ್ಟರು. ಆರನೇ ತರಗತಿಯ ನನ್ನ ಮಗಳು ಒಂದು ಹೆಜ್ಜೆ ಮುಂದುವರೆದು ನನ್ನಂತೆಯೇ ಅನುಕರಣೆ ಮಾಡುತ್ತಾ ವಿಶ್ವಕಪ್-99 ರ ಹುರುಪಿನಲ್ಲಿ "ಸಚಿನ್ ಬ್ಯಾಟು ಬಾಲು ನುಂಗಿತ್ತ, ನೋಡವ್ವ ತಂಗಿ" - ಎಂದು ಹಾಡಿದಳು. ನಾನು ಅದನ್ನು ಕೊಂಚ ಪರಿಷ್ಕರಿಸುತ್ತಾ:

ಸಚಿನ್ ಬ್ಯಾಟು ಬಾಲು ನುಂಗಿ
ಶ್ರೀನಾಥ್ ಬಾಲು ವಿಕೆಟು ನುಂಗಿ
ನೋಡುತ್ತಿದ್ದ ಜನಗಳನ್ನೆಲ್ಲ ಟಿ.ವಿ. ನುಂಗಿತ್ತ
ನೋಡವ್ವ ತಂಗಿ, ಕೋಡಗನ ಕೋಳಿ ನುಂಗಿತ್ತ.....

ಎಂದು ಹೇಳಿದಾಗ ಸ್ಫೋಟಗೊಂಡ ಮಕ್ಕಳ ಕೇಕೆ ಅಡುಗೆ ಮನೆಯಲ್ಲಿದ್ದ ಮಡದಿಯ ಕಿವಿಗೂ ಬಿದ್ದು ಉಲ್ಲಾಸದ ತಾಂಡವಕ್ಕೆ ಕಾರಣವಾಯಿತು. ಶಿಶುನಾಳ ಶರೀಫರ ಚಮತ್ಕಾರ ಮತ್ತೆ ಮತ್ತೆ ಮರುಹುಟ್ಟು ಪಡೆಯುವ ಬಗೆಗೆ ನಮ್ಮ ಸಲ್ಲಾಪವೇ ಪ್ರತ್ಯಕ್ಷ ಸಾಕ್ಷಿಯಾಗುಳಿಯಿತು.

ವಿ. ಚಂದ್ರಶೇಖರ ನಂಗಲಿ

ಒಂದೆರೆಡು ದಿನ ಕಳೆದ ಮೇಲೆ ನನ್ನ ಮಗನನ್ನು ಕರೆದು 'ಕೋಡಗನ ಕೋಳಿ ನುಂಗಿತ್ತ' ಹಾಡನ್ನು ಅವನಿಗೆ ವಿವರಿಸಿ ಹೇಳಿದೆ. ಈ ಸಂದರ್ಭದಲ್ಲಿ ಪಠ್ಯ ಪುಸ್ತಕದ ಟಿಪ್ಪಣಿ ನನಗೆ ಅಸಹನೀಯವಾದದ್ದಲ್ಲದೆ ನಿರರ್ಥಕವೆನಿಸಿತು. ಹಾಸ್ಯಪ್ರಜ್ಞೆಗೆ ಹೆಸರಾದ ಅ. ರಾ. ಮಿತ್ರ ಅವರ ಅಧ್ಯಕ್ಷೀಯ ಸಮಿತಿ ಒಪ್ಪಿಕೊಂಡು ಮುದ್ರಿಸಿರುವ ಟಿಪ್ಪಣಿ ಹೀಗಿದೆ:

"..........ಎಲ್ಲ ಕನ್ನಡಿಗರ ಬಾಯಲ್ಲಿ ನಲಿಯುವ ಶರೀಫ ಸಾಹೇಬರ ಒಂದು ಪದ 'ಕೋಡಗನ ಕೋಳಿ ನುಂಗಿತ್ತ'. ಇದು ತನ್ನ ನಾದ ಸೌರಭದಿಂದ ಹಾಗೂ ಅಸಂಭವನೀಯ ಘಟನಾವಳಿಗಳ ಮೇಳದಿಂದ ನಮ್ಮ ಮನಸ್ಸನ್ನು ಸೆಳೆಯುತ್ತದೆ. ('ಇತ್ತೀಚೆಗೆ ಈ ಪದ್ಯದ ಕರ್ತೃವಿನ ಬಗೆಗೆ ಭಿನ್ನಾಭಿಪ್ರಾಯವು ವ್ಯಕ್ತವಾಗಿದೆ' - ಎಂಬ ಸಾಲು ಸೇರಿಸಲ್ಪಟ್ಟಿದೆ). ಬೆಡಗಿನ ಸೊಗಡಿನಿಂದ ಕೂಡಿದ ಈ ಗೀತೆ ಅಬಾಲವೃದ್ಧರಿಗೆ ಶಾಬ್ದಿಕ, ಮಾರ್ಮಿಕ, ಆಧ್ಯಾತ್ಮಿಕ ಸಂಪತ್ತುಗಳ ಪದರುಗಳನ್ನು [illegible] ಚೇತೋಹಾರಿಯಾಗಿ ಸಾಗುತ್ತದೆ.

ದೊಡ್ಡವರಿಗೆ ತತ್ವಸಂಪತ್ತಿನಿಂದಾಗಿ ಮೆಚ್ಚಿಗೆಯಾಗುವ ಈ ಪದ್ಯವು ಮಕ್ಕಳಿಗೆ ನಾದಸಂಪತ್ತಿನಿಂದಾಗಿ ಮೆಚ್ಚಿಕೆಯಾಗಿದೆ.

ನೋಡಲು ಸಣ್ಣದಾದ ಗುರುವಿನ ಪಾದವು ತನ್ನಂತಹ ದೊಡ್ಡ ಗಾತ್ರದ ಶಿಷ್ಯನನ್ನೇ ನುಂಗಿಬಿಟ್ಟಿತು (ಸೆಳೆದುಕೊಂಡಿತು) ಎನ್ನುವ ವಿಸ್ಮಯವನ್ನು ನಿರೂಪಿಸುವುದಕ್ಕಾಗಿ ಇಲ್ಲಿ ಕವಿ ಆಶ್ಚರ್ಯ ಹುಟ್ಟಿಸುವಂಥ ನಡೆಯಲಾರದ ಘಟನೆಗಳನ್ನು ನಡೆಯಿತು ಎಂಬಂತೆ ಹೇಳಿದ್ದಾರೆ. ಕೋಳಿಯು ಕೋಡಗ (ಮಂಗ)ನನ್ನು ನುಂಗುವುದು ಎಷ್ಟು ಆಶ್ಚರ್ಯಕರವೋ ಅಷ್ಟೇ ವಿಸ್ಮಯಕರವಾದದ್ದು –ಗುರುವಿನ ಪಾದ ತನ್ನನ್ನು ಸೆಳೆದುಕೊಂಡದ್ದು– ಎಂಬುದು ಇಲ್ಲಿನ ಪಲ್ಲವಿಯ ಭಾವಾರ್ಥ. ಉಳಿದ ಉಪಮೆಗಳ ಅರ್ಥವಾದರೂ ಇದೇ. ಒಬ್ಬ ಮಹಿಳೆಗೆ (ಯಾವುದೇ ಕೇಳುಗನಿಗೆ) ಈ ಆಶ್ಚರ್ಯಗಳನ್ನು ಕವಿ ನಿರೂಪಿಸುತ್ತಿದ್ದು ತಟಕ್ಕನೆ ತಾನೇ ಹೇಗೆ ಗುರುವಿನ ಹಿಡಿತಕ್ಕೆ ಸಿಕ್ಕಿದೆನೆಂಬುದನ್ನು ಹೇಳುತ್ತಿದ್ದಾನೆ.

ಆಡಲು ಬಂದ ಪಾತರದವಳ ಮದ್ದಳೆ ನುಂಗಿತ್ತ - ನರ್ತನದಲ್ಲಿ ನರ್ತಕಿಯದೇ ಪ್ರಧಾನ ಪಾತ್ರ. ಮದ್ದಳೆ ಸಣ್ಣದು. ಆದರೆ ಪ್ರತಿಭಾಶಾಲಿಯಾದ ಮದ್ದಲೆಗಾರ ಅದ್ಭುತವಾಗಿ ಮದ್ದಳೆ ನುಡಿಸಿ ನರ್ತನದ ಗತಿಯನ್ನು ತಪ್ಪಿಸಬಲ್ಲ. ಆದ್ದರಿಂದ ಮದ್ದಳೆಯು ನರ್ತಕಿಯನ್ನು ನುಂಗಬಲ್ಲದು...

ಮಗ್ಗದಾಗಿರುವ ಅಣ್ಣನ ಕುಣಿಯು ನುಂಗಿತ್ತ - ನೇಕಾರರು ಮಗ್ಗವಾಡಿಸುವಾಗ ಕಾಲನ್ನು ಇಳಿಬಿಡಲು ತಯಾರಿಸಿದ ಗುಂಡಿ. ಅದು ನೇಕಾರನನ್ನೇ ನುಂಗುತ್ತದೆ ಎಂಬ ಭಾವ....."

ಅರ್ಥವಿವರಣೆಯೆಂಬ ಈ ಕಪಟ ನಾಟಕಕ್ಕೆ ಏನು ಹೇಳೋಣ ? ಇಂಥ ಟಿಪ್ಪಣಿಗಳಿಂದ ಮಕ್ಕಳು ಕಲಿಯುವುದು ಏನನ್ನು ? ನಾದಸೌರಭ, ಅಸಂಭವನೀಯ ಘಟನಾವಳಿಗಳ ಮೇಳ, ಕರ್ತೃವಿನ ಬಗೆಗೆ ಭಿನ್ನಾಭಿಪ್ರಾಯ, ಬೆಡಗಿನ ಸೊಗಡು, ಆಧ್ಯಾತ್ಮಿಕ/ ತತ್ವಸಂಪತ್ತು - ಇಂಥ ಪದಪುಂಜಗಳಿಗೆ ಕನ್ನಡ ಎಂ. ಎ. ವಿದ್ಯಾರ್ಥಿಗಳು ಕೂಡ ಕಕ್ಕಾಬಿಕ್ಕಿಯಾಗುವಾಗ ಇನ್ನು ಏಳನೇ ತರಗತಿಯ ಕಂದರ ಪಾಡೇನು ? ಈ ಟಿಪ್ಪಣಿಗಳನ್ನು ಯಾರೂ ಗಮನಿಸುವುದಿಲ್ಲ ಎಂಬುದು ಬೇರೆ ಮಾತು. ಆದರೆ, ಮಕ್ಕಳಿಗೆ ಮನಮುಟ್ಟುವಂತೆ ಹೇಳುವುದು ಹೇಗೆ ? ಎಂಬ ಚಿಂತನೆಗೆ ಮನಸ್ಸು ತೊಡಗಿದಾಗ ಮೂಡಿಬಂದ ವಿಚಾರಗಳಿವು:

ಕೋಡಗ, ಕೋಳಿ, ಆಡು, ಆನೆ - ಇವು ಹೊರ ಜಗತ್ತಿನ ಪ್ರಾಣಿಗಳೆಂಬುದು ಬೇರೆ ಮಾತು... ಆದರೆ ಈ ಹಾಡಿನಲ್ಲಿ ಮನುಷ್ಯರ ಒಳಜಗತ್ತಿನ ವಿವಿಧ ಭಾವಗಳನ್ನು ಪ್ರಾಣಿಗಳೊಂದಿಗೆ ಹೋಲಿಸಿದ್ದಾರೆ. 'ಕೋಡಗ' ಎಂದರೆ ಚಪಲತೆ. [illegible]

[illegible]

[illegible] ಭಾವದ ಪ್ರತಿನಿಧಿ ಸರ್ವಜ್ಞತೆಗೆ ತನ್ನನ್ನು ಅರ್ಪಿಸಿಕೊಂಡವನು ಮೊದಲು ಗೆಲ್ಲಬೇಕಾದ್ದು ಅಹಂಭಾವವನ್ನು. ಈ ಭಾವನೆಯನ್ನೇ 'ಆಡು ಆನೆಯ ನುಂಗಿ' ಎಂಬ ನುಡಿ [illegible].

ನಮ್ಮ ಮನಸ್ಸು [illegible], ಅನೇಕದಿಂದ ಪಾರಾಗಿ ಕೋಳಿಯ ಎಚ್ಚರಿಕೆ ಮತ್ತು ಆಡಿನ ಸರ್ವಜ್ಞತೆಗಳಿಗೆ ಒಲಿಯಬೇಕು. ಇದರಿಂದ ಭಿನ್ನಭಾವಗಳು, ವಾದ ಭೇದಗಳೆಲ್ಲ ಅಳಿದು ಏಕಭಾವದ ಶೋಧನೆ ಸಾಧ್ಯವಾಗುತ್ತದೆ.. ಎರಡಳಿದು ಒಂದಾಗುವ ನೆಲೆಯನ್ನು ಈ ಹಾಡಿನಲ್ಲಿ ಬಗೆ ಬಗೆಯ ನಿದರ್ಶನಗಳಿಂದ ನಿರೂಪಿಸಲಾಗಿದೆ; ಅಡ್ಡಕಸುಬಿಗಳು ಸುಣ್ಣ ಬಳಿದರೆ [illegible] ಗೋಡೆಯೆಲ್ಲ ತೇಪೆಗಳಾಗಿ ಗೋಡೆ ಮತ್ತು ಸುಣ್ಣಗಳ ಪ್ರತ್ಯೇಕತೆ ಕಣ್ಣಿಗೆ ರಾಚುತ್ತದೆ. ಆದರೆ ಅಸಲು ಕಸುಬುದಾರ ಸುಣ್ಣಬಳಿದರೆ ಗೋಡೆ-ಸುಣ್ಣ ಒಂದರೊಳಗೊಂದು ಬೆರೆತು ಒಟ್ಟುನೋಟ ಉಜ್ವಲವಾಗಿ ಪ್ರಕಾಶಮಾನವಾಗಿರುತ್ತದೆ. 'ಗೋಡೆ ಸುಣ್ಣವ ನುಂಗಿ' ಎಂಬ ಮಾತಿಗೆ ಎರಡಳಿದು ಒಂದಾಗುವುದು ಎಂಬುದೇ ಸರಿಯಾದ ಗ್ರಹಿಕೆ. ಇದೇ ವಿವರಣೆ ನರ್ತಕಿಗೂ ಅನ್ವಯಿಸುತ್ತದೆ. ನೃತ್ಯಕ್ಕೂ ತಾಳ-ಮೇಳಕ್ಕೂ ಇರಬೇಕಾದ ಅನ್ಯೋನ್ಯತೆಯನ್ನು ಗಮನಿಸಿದರೆ ಇವುಗಳ ಅದ್ವೈತ ಸಂಬಂಧ ಭಾವಗೋಚರವಾಗುತ್ತದೆ. ಶ್ರಮಜೀವಿಗಳ ನಡುವೆಯಿಂದ ಮೂಡಿಬಂದ ಶಿಶುನಾಳ ಶರೀಫರು ಅದ್ವೈತ ವಿಚಾರವನ್ನು ದುಡಿಮೆಯ ರೂಪಕಗಳಿಂದಲೇ ಮನದಟ್ಟು ಮಾಡಿಕೊಟ್ಟಿದ್ದಾರೆ. ದುಡಿಮೆಯೇ ಧ್ಯಾನವೆಂಬ ತತ್ವಜ್ಞಾನವು ಶ್ರಮಜೀವಿಗಳ ತತ್ವಜ್ಞಾನವಾಗಿದೆ. ಶರೀಫರು ಈ ಹಾಡಿನಲ್ಲಿ ದುಡಿಮೆಯಿಂದ ದೂರ ಸಿಡಿದ ಅಮೂರ್ತವಾದ ಅದ್ವೈತ ತತ್ವವನ್ನು ಪ್ರತಿಪಾದಿಸುತ್ತಿಲ್ಲ, ಬದಲಿಗೆ ದುಡಿಮೆಯಲ್ಲೆ ಅಡಗಿರುವ ಅದ್ವೈತ ಸಂಬಂಧವನ್ನು ಗುರುತಿಸಿದ್ದಾರೆ.

ಕಾಯಕದಲ್ಲಿ ನಿರತರಾದಾಗ ಕಾಯಕ ಮತ್ತು ಕಾಯಕಿ ನಡುವೆ ಭಿನ್ನ ಭಾವನೆಯಿರುವುದಿಲ್ಲ. ಒರಳಿನಲ್ಲಿ ಲಯಬದ್ಧವಾಗಿ ಒನಕೆ ಕುಣಿಯುತ್ತಿರಬೇಕು. ಕೊಂಚ ಲಯ ತಪ್ಪಿದರೂ ಕಲ್ಲಿಗೆ ಒನಕೆ ಬಡಿದು ಕೆಲಸ ಕೆಡುತ್ತದೆ. ಒನಕೆಯನ್ನು ಒಂದೊಂದು ಏಟಿಗೂ ನುಂಗುತ್ತಿರಬೇಕು. ಒಮ್ಮೆ ಎಡಗೈಯಲ್ಲಿ ಒಮ್ಮೆ ಬಲಗೈಯಲ್ಲಿ ಒನಕೆಯನ್ನು ಎತ್ತಿ ಒರಳಿನಲ್ಲಿ ಕುಕ್ಕುತ್ತಿದ್ದರೆ ನೋಡುಗರ ಕಣ್ಣಿಗೆ ಒರಳಿನ ರಂಗದಲ್ಲಿ ಒನಕೆಯ ನಾಟ್ಯದರ್ಶನವಾಗುತ್ತದೆ. 'ಬೀಸುಕಲ್ಲು' ಬೀಸುವಾಗ ಗೂಟ ಕಿತ್ತು ಬಂದರೆ, ಬೀಸುವ ರಭಸಕ್ಕೆ ಗೂಟದ ಕೈ ಬೀಸುತ್ತಿರುವ ಮುಖಕ್ಕೆ ಬಡಿದು ರಂಪ ಮಾಡುತ್ತದೆ. ಗೂಟ ಕಿತ್ತು ಬರದಂತೆ ಬೀಸುವುದೂ ಒಂದು ಕಲೆ. ಇದು ಸಾಧ್ಯವಾಗಬೇಕಾದರೆ ಬೀಸುಕಲ್ಲು ಗೂಟವನ್ನು ನುಂಗಿಬಿಟ್ಟಿದೆಯೇನೋ ಎಂಬಂತೆ ಉಪಾಯವಾಗಿ ಬೀಸುವ ಕೌಶಲ್ಯವಿರಬೇಕು. ಕಾಯಕ ನಿಷ್ಠೆಯನ್ನು ಹೇಳುವ ಈ ರೂಪಕಗಳು ಎರಡಳಿದು ಒಂದಾಗುವ ಕಾರ್ಯಮಗ್ನತೆಯನ್ನೂ ಚೆನ್ನಾಗಿ ಬಿಂಬಿಸುತ್ತವೆ. ಇದನ್ನು 'ದುಡಿಮೆಯ ಅದ್ವೈತ' ಎನ್ನಬೇಕು. ಆದರೆ ಕೈಲಾಗದ ಮುದುಕಿಯೊಬ್ಬಳು (=ದುರ್ಬಲ ಚಿತ್ತವುಳ್ಳವರು) ಕುಟ್ಟಲು ಬಂದರೆ ಕೆಲಸವಾದೀತೆ? ಜಿಡದೆ ಮತ್ತೆ ಮತ್ತೆ ಮುತ್ತಿಕೊಳ್ಳುವ ನೊಣವೊಂದು ಸಾಕು ಮುದುಕಿಯ ಕಾರ್ಯ ಭಂಗಕ್ಕೆ! ಇದುವರೆಗೆ ಕಾರ್ಯಸಿದ್ಧಿಗೆ ಬಳಕೆಯಾದ ನುಂಗುವ ಕ್ರಿಯೆ ಇಲ್ಲಿ ಕಾರ್ಯಭಂಗಕ್ಕೂ ಬಳಕೆಯಾಗುವುದನ್ನು ಗಮನಿಸಬೇಕು. ಶರೀಫಜ್ಜನ ಒಂದೊಂದು ಮಾತಿನಲ್ಲಿ ದುಡಿಮೆಯ ತೀವ್ರತೆ ಮತ್ತು ದುಡಿಮೆಯ ಹಗರಣಗಳೆರಡೂ ಬೆರೆತುಹೋಗಿವೆ.

ಕವಿಯ ಹನಿ ಶಾಯಿ

ಕಾಮಗಾರನ ಬೆವರೆಂದೂ ಒರಲದ ಸತ್ವವ
ಅವನ ಬರಿಯ ಉದರವೆಂದೂ ಒರಲದ ಸತ್ವವ
ಅವನ ಕಣ್ಣ ಹನಿಗಳೆಂದೂ ಒರಲದ ಸತ್ವವ
ಅವನ ದುಡಿವ ಹಿಡಿಗಳೆಂದೂ ಒರಲದ ಸತ್ವವ-
ಬಿಡಿಸಲು ಬಂದೀತೆ ಎಂದೆಂದಿಗೆ
ಕವಿಯ ಲೇಖನಿಯ ಹನಿ ಶಾಯಿಗೆ

ವರವರ ರಾವ್

ಅನುವಾದ: **ಎಸ್. ಗುರುದತ್**

ಮುಂದೆ ಬರುವ ನೇಯ್ಗೆ ಮತ್ತು ಕೃಷಿಯ ರೂಪಕಗಳು ಕೂಡ ಕಾರ್ಯಮಗ್ನತೆಯನ್ನೇ ಹೇಳುತ್ತಿದ್ದು ದುಡಿಮೆಯಲ್ಲಿ ಮುಳುಗಿಹೋದ ಅಣ್ಣಂದಿರ ಹಸ್ತಚಳಕವನ್ನು ವರ್ಣಿಸುತ್ತವೆ. ಕಾರ್ಯಜೀವನಕ್ಕೆ ಸಂಬಂಧಪಟ್ಟ ಈ ಕಾರ್ಯಮಗ್ನತೆ ಅಥವಾ ಎರಡಳಿದು ಒಂದಾಗುವ ನೆಲೆ ಅಂತರಂಗದ ಸಾಧನೆಗೂ ಅನ್ವಯಿಸುತ್ತದೆ. ಈ ಹಾಡಿನ ಸತ್ವ ಅಥವಾ ಸಸ್ಪೆನ್ಸ್ ಇರುವುದು ಕೊನೆಯಲ್ಲಿ!

ಗುಡ್ಡ ಗಂವ್ಹರ ನುಂಗಿ
ಗಂವ್ಹರ ಇರಿವೆ ನುಂಗಿ
ಗುರುಗೋವಿಂದನ ಪಾದ ಆತ್ಮ ನುಂಗಿತ್ತ

ದೂರದಲ್ಲೊಂದು ಗುಡ್ಡ, ಆ ಗುಡ್ಡದಲ್ಲೊಂದು ಗುಹೆ. ಆ ಗುಹೆಯೊಳಗಿರುವ ಗುರು-ಶಿಷ್ಯರಿಬ್ಬರು ತಮ್ಮ ಇರುವನ್ನೆ ಮರೆತಿದ್ದಾರೆ. ಗುರುಗೋವಿಂದಭಟ್ಟ ಮತ್ತು ಶಿಷ್ಯ ಶಿಶುನಾಳ ಶರೀಫರು ತಂತಮ್ಮ ಸಾಂಸ್ಥಿಕ ಧರ್ಮಗಳಿಂದ ಬಹಿಷ್ಕೃತರಾದವರು. ಲೋಕಜೀವನದ ಕಟ್ಟುಪಾಡುಗಳಿಗೆ ಒಳಪಡದ ಮಹಾನ್ ಸಂತರು ಎಲ್ಲ ಕಾಲ-ದೇಶಗಳಲ್ಲಿ ಜಾತಿಪದ್ಧತಿ ಮತ್ತು ಸಾಂಸ್ಥಿಕಧರ್ಮದ ಸಮಾಜಕ್ಕೆ ಸಿಂಹಸ್ವಪ್ನವಾಗಿದ್ದಾರೆ. ಇಂಥ ಅಪೂರ್ವ ಗುರು-ಶಿಷ್ಯರ ಅನ್ಯೋನ್ಯ ಸಂಬಂಧವನ್ನು ಕೊನೆಸಾಲು ಅದ್ಭುತವಾಗಿ ಹೇಳುತ್ತಿದೆ. ಗುರು ಶಿಷ್ಯರೆಂಬ ಭಿನ್ನಭಾವ ಅಳಿಸಿಹೋಗಿ ಇಬ್ಬರೂ ಏಕಭಾವದ ನೆಲೆಯಲ್ಲಿ ವಿಹರಿಸುವ ಪರಿ ಇಲ್ಲಿದೆ. "ಗೋವಿಂದ ೨.... ಗುರುವಿನ ಪಾದ ನನ್ನನೆ ನುಂಗಿತ್ತ" - ಎಂಬ ಪಾಠಾಂತರವೂ ಲಭ್ಯವಿದ್ದು ಇದು ಕೂಡ ಪರಿಣಾಮ ರಮಣೀಯವಾಗಿದೆ.

ಕೊನೆಯಲ್ಲೊಂದು ಪ್ರಶ್ನೆ: ಪಠ್ಯ ಪುಸ್ತಕದಲ್ಲಿ ಸ್ಥಾನಗಿಟ್ಟಿಸಿ ಕರ್ನಾಟಕದಾದ್ಯಂತ ಪ್ರಸಾರದಲ್ಲಿರುವ ಈ ಹಾಡಿನ ಟಿಪ್ಪಣಿಯನ್ನು ತಡೆಯಲಾದೀತೆ? ಪರೀಕ್ಷಾ ಪದ್ಧತಿಯ ಜಡತ್ವವನ್ನು ಗಮನಿಸಿದರೆ ಇದುವರೆಗೆ ವಿವರಿಸಿದ ಹೊಸಬಗೆಯ ನಿರೂಪಣೆ ಮಕ್ಕಳಿಗೆ ಬೇಕೆ? ಬೇಡವೆ? ಇದನ್ನು ಸಹೃದಯರಾದ ವಾಚಕರೇ ನಿರ್ಣಯಿಸಬೇಕು.

ಶ್ರೀ ವಿ. ಚಂದ್ರಶೇಖರ ನಂಗಲಿ
3284, ಪಿ.ಸಿ. ಬಡಾವಣೆ, ಕೋಲಾರ - 563 101

ಹೊಸ ವೇಷದಲ್ಲಿ ಶ್ರೀನಾಥ್

ಹಿರಿಯ ನಟ ಶ್ರೀನಾಥ್ ಇತ್ತೀಚೆಗೆ ಭಾರತೀಯ ಜನತಾ ಪಕ್ಷಕ್ಕೆ ಸೇರಿದ್ದಾರೆ. ಅವರೊಂದಿಗೆ ಇನ್ನೂ ಕೆಲವು ನಟರು [illegible] ವದಂತಿ ಇದೆ. ಇದೇನು ಮಹಾ! ಚುನಾವಣೆ ಹತ್ತಿರ ಬಂದಾಗ ಹೀಗೆಲ್ಲಾ ಆಗುವುದುಂಟು. ಎಂದು ಹೇಳುತ್ತಾ ಕೆಲವು ರಾಜಕೀಯ ನಾಯಕರು ನಾಲಿಗೆ ಕಚ್ಚಿಕೊಳ್ಳುತ್ತಾರೆ. ಪಕ್ಷಕ್ಕೆ ಸೇರಿದ ನಂತರ ಜೋಳಿಗೆ ಹಿಡಿದು ಕಾರ್ಗಿಲ್ ಹುತಾತ್ಮರಿಗಾಗಿ ಲಕ್ಷಗಟ್ಟಲೆ ಹಣ ಕೂಡಿಸಿದ್ದಾರಂತೆ ಶ್ರೀನಾಥ್. ಬೇರೆ ಕೆಲವು ನಟ-ನಟಿಯರಂತೆ ಇವರೂ ಪೂರ್ತಿಯಾಗಿ [illegible] ತೆರೆಗೆ ತೆತ್ತಿದ್ದಾರೋ ಇಲ್ಲವೋ [illegible]

[illegible] ಮಾರುಹೋಗಿದ್ದರಂತೆ. ಈಗ ಅದನ್ನು ತಮಗೆ [illegible] ಪಕ್ಷಕ್ಕೆ ಸೇರುವುದಾಗಿ ಹೇಳಿದ್ದಾರೆ. [illegible] ಮಾಡಿಬಿಡಬಹುದೆಂಬ ಭಯವನ್ನು ಆ ಮೂಲಕ ತೊರೆದಿದ್ದಾರೆ ಎನ್ನಬಹುದೆ?

ಶಿಸ್ತಿನಿಂದ ಟೋಫನ್ (ಕೃತಕ ಕೇಶದ ಟೋಪಿ) ಧರಿಸುವ ಶ್ರೀನಾಥ್ ಇದಕ್ಕೆ ಮುಂಚೆ ಯಾವ ಪಕ್ಷಗಳಿಗಾದರೂ ಟೋಫನ್ ಹಾಕಿದ್ದರೆ ಆ ಪಕ್ಷಗಳು ಖುಷಿಪಡ[illegible]. ತಮ್ಮ ವಿರೋಧಿ ಪಕ್ಷಕ್ಕೂ ಆ ಸೌಲಭ್ಯ [illegible], ಎಂದು. ಆದರೆ ಇದರಲ್ಲಿ ಒಂದು [illegible] 'ಹೃದಯ' [illegible] ಶ್ರೀನಾಥ್. [illegible] ! [illegible] ಶ್ರೀನಾಥ್ [illegible] !

ಗ್ರಹಣಗಳ ಅಧ್ಯಯನ- ಏಕೆ ?

ಭೂಮಿ ಮತ್ತು ಚಂದ್ರರ ಸತತ ಓಟದ ನೇರ ಪರಿಣಾಮವೇ 'ಗ್ರಹಣ'. ಪಠ್ಯ ಪುಸ್ತಕಗಳಿಂದ ಕಲಿತ ಮಾಹಿತಿಯಂತೆ ಸೂರ್ಯಗ್ರಹಣವಾಗಲೀ, ಚಂದ್ರಗ್ರಹಣವಾಗಲೀ ಸರಳವಾದ ಅನುಭವ ಅಷ್ಟೇ. ಈ ಸತ್ಯ ಅರಿವಾದದ್ದು ಸಾವಿರಾರು ವರ್ಷಗಳ ಹಿಂದೆಯೇ. ಆದರೂ ಆ ಅನುಭವದ ಸ್ವಾರಸ್ಯ ಇಂದೂ ತನ್ನ ಆಕರ್ಷಣೆಯನ್ನು ಕಳೆದುಕೊಂಡಿಲ್ಲ.

ಪೂರ್ಣ ಸೂರ್ಯಗ್ರಹಣವನ್ನು ಕಂಡು ಅನುಭವಿಸಿದವರು ಆ ಆನಂದವನ್ನು ಹಂಚಿಕೊಳ್ಳದೇ ಇರಲಾರರು. ಆದ್ದರಿಂದಲೇ ಎರಡು ಸಾವಿರ ವರ್ಷದ ಹಿಂದಿನ ಒಂದು ಮಡಕೆ ಚೂರಿನ ಮೇಲೆ ಗ್ರಹಣದ ಚಿತ್ರ ದೊರಕಿದೆ. ತದನಂತರದಲ್ಲಿ ಕತೆಗಳಲ್ಲಿ, ಕಾವ್ಯಗಳಲ್ಲಿ, ಶಿಲಾಶಾಸನಗಳಲ್ಲಿ ಗ್ರಹಣ ಪ್ರವೇಶ ಗಿಟ್ಟಿಸಿಕೊಂಡಿದೆ. ಶೇ. 40ರಷ್ಟು ಶಿಲಾಶಾಸನಗಳು ಗ್ರಹಣದ ಘಟನೆಯನ್ನು ಉಲ್ಲೇಖಿಸುವವು ಎಂಬುದು ಉತ್ಪ್ರೇಕ್ಷೆಯಲ್ಲ. ಗ್ರಹಣದಂದು ದಾನಧರ್ಮ ನಡೆಸಬೇಕೆಂಬ ಸತ್ಸಂಪ್ರದಾಯ ಇದಕ್ಕೆ ಕಾರಣ. ಆ ದಿನ ಅಗ್ನಿಪ್ರವೇಶ ಮಾಡಿದಲ್ಲಿ ಮೋಕ್ಷ ದೊರಕುವುದೆಂಬ ನಂಬಿಕೆ ಇನ್ನೊಂದು ಕಾರಣ. ಹೀಗೆ ಬೇರೆ ಬೇರೆ ಜನಾಂಗಗಳಲ್ಲೂ ಗ್ರಹಣದ ದಾಖಲೆಗಳು ದೊರಕಿವೆ. ಇವುಗಳಲ್ಲಿ ಅತ್ಯಂತ ಹಳೆಯದು ಕ್ರಿ.ಪೂ. 763ರ ಜೂನ್ 15ರ ಗ್ರಹಣದ ದಾಖಲೆ. ಇದು ಅಸ್ಸೀರಿಯದ ಮಡಕೆ ಚೂರಿನ ಮೇಲೆ ದೊರಕಿದೆ. ಇಂತಹದೇ ಚೂರುಗಳು ಬ್ಯಾಬಿಲಾನ್‌ನಲ್ಲಿ ದೊರಕಿವೆ. ಕ್ರಿ.ಪೂ. 323 ಹಾಗೂ ಕ್ರಿ. ಪೂ. 319ರ ಗ್ರಹಣದ ದಾಖಲೆಗಳಿವು. ಕ್ರಿ.ಶ. 100ರಲ್ಲಿ ಬ್ಯಾಬಿಲಾನ್ ನಗರ ಪಾಳು ಬಿದ್ದಿತು. ಅನೇಕ ಶತಮಾನಗಳ ನಂತರ ನಡೆಸಿದ ಉತ್ಖನನದಲ್ಲಿ ಈ ಚೂರುಗಳು ಸಿಕ್ಕಿದವು.

ಈ ಎಲ್ಲ ದಾಖಲೆಗಳಲ್ಲಿ ಒಂದೇ ಬಗೆಯ ಸಮಯ ಗಣನೆಯ ವಿಧಾನ ಕಂಡುಬರುತ್ತದೆ. ಅಸ್ತಮಾನ ಮತ್ತು ಉದಯಗಳಿಂದ ಸಮಯ ಗಣನೆ ನಡೆದಿದೆ. ಉದಾಹರಣೆಗೆ ಮಧ್ಯಾಹ್ನದ ನಂತರ ಸೂರ್ಯಗ್ರಹಣವಾಯಿತೆನ್ನಿ. ಅದರ ಆರಂಭದಿಂದ ಸೂರ್ಯಾಸ್ತದವರೆಗಿನ ಅವಧಿಯನ್ನು ದಾಖಲು ಮಾಡಲಾಗಿದೆ. ಆದರೆ ಮಧ್ಯಾಹ್ನಕ್ಕೆ ಮುಂಚೆಯೇ ಸೂರ್ಯಗ್ರಹಣವಾಗಿದ್ದರೆ, ಸೂರ್ಯೋದಯದಿಂದ ಅದರ ಆರಂಭದ ಕಾಲವನ್ನು ಅಳೆಯಲಾಗಿದೆ. ಚಂದ್ರಗ್ರಹಣದಲ್ಲಿಯೂ ಹೀಗೆ ಉದಯ ಮತ್ತು ಅಸ್ತಮಾನಗಳಿಂದ ಗ್ರಹಣದ ಅವಧಿಯನ್ನು ಗುರುತಿಸಲಾಗಿದೆ. ಇದಕ್ಕೆ ಅವರು ಬಳಸುತ್ತಿದ್ದುದು ಜಲಗಡಿಯಾರಗಳನ್ನು. ''ಉಸ್'' (us) ಎಂಬುದು ಕಾಲಗಣನೆಯ ಮಾಪಕ - ಇಂದಿನ ನಾಲ್ಕು ನಿಮಿಷಗಳಿಗೆ ಸಮ.

ಈ ವಿಶಿಷ್ಟ ಪದ್ಧತಿಯ ಕಾರಣ ದಾಖಲಾದ ಎಲ್ಲ ಗ್ರಹಣಗಳ ಸಮಯಗಳನ್ನು ಕರಾರುವಾಕ್ಕಾಗಿ ತಿಳಿಯುವುದು ಸಾಧ್ಯವಾಗಿದೆ. ಇಂದಿನ ಕಾಲಗಣನೆಗೆ ಪರಿವರ್ತಿಸುವ ಕಾರ್ಯ ಸುಗಮವಾಗಿದೆ.




ಚೀನಾದ ಗ್ರಹಣದ ದಾಖಲೆಗಳು ವೈಜ್ಞಾನಿಕ ರೀತಿಯಲ್ಲಿ ದಾಖಲಾಗಿವೆ. ಇವುಗಳಲ್ಲಿ ಅತ್ಯಂತ ಹಳೆಯದಕ್ಕೆ ಮಾತ್ರ ಒಂದು ಘಟನೆಯ ಉಲ್ಲೇಖವಾಗಿದೆ. ಹೈ ಮತ್ತು ಹೋ ಎಂಬಿಬ್ಬರು ಖಗೋಳಜ್ಞರು ಚಂದ್ರ ಸೂರ್ಯರು ಒಟ್ಟಿಗೆ ಬರುವುದನ್ನು (ಗ್ರಹಣವನ್ನು) ಮುಂಚಿತವಾಗಿ ರಾಜನಿಗೆ ತಿಳಿಸದೆ ದ್ರೋಹ ಮಾಡಿದ್ದರಿಂದ ಮರಣ ದಂಡನೆಗೆ ಒಳಗಾದರಂತೆ. ಇದರ ಕಾಲ ನಿಖರವಾಗಿ ತಿಳಿದಿಲ್ಲ.


ಚೀನಾದ ಇತರ ದಾಖಲೆಗಳಲ್ಲಿ ಗ್ರಹಣದ ಸಮಯ ಅತ್ಯಂತ ನಿಖರವಾಗಿ ದಾಖಲಾಗಿದೆ. ಹೀಗೆ ಹಿಂದಿನ ಈ ಎಲ್ಲ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಕೆಲವು ಹೊಸ ಸಂಗತಿಗಳು ಬೆಳಕಿಗೆ ಬರುತ್ತವೆ. ಕ್ರಿ. ಪೂ. 181ರ ಮಾರ್ಚ್ 4ರಂದು ನಡೆದ ಗ್ರಹಣ ಪೂರ್ಣ ಗ್ರಹಣವಾಗಿತ್ತೆಂದು ಚೀನೀ ದಾಖಲೆ ತಿಳಿಸುತ್ತದೆ. ಇಂದು ಲಭ್ಯವಿರುವ ಕಂಪ್ಯೂಟರ್‌ಗಳನ್ನು ಬಳಸಿ, ಲೆಕ್ಕ ಹಾಕಿದಾಗ ಈ ಗ್ರಹಣದ ನೆರಳು ಚೀನಾದ ಮೂಲಕ ಹಾದಿರಲಿಲ್ಲ ಎಂಬ ಅಂಶ ವ್ಯಕ್ತವಾಗುತ್ತದೆ. ಹಾಗಾದರೆ ದಾಖಲೆ ಸುಳ್ಳೇ? ಲೆಕ್ಕ ತಪ್ಪೇ?

ಕ್ರಿ. ಪೂ. 136ರ ಏಪ್ರಿಲ್ 15ರ ಗ್ರಹಣದ ದಾಖಲೆ ದೊರಕಿದ್ದು ಬ್ಯಾಬಿಲಾನ್‌ನಲ್ಲಿ. ಕಂಪ್ಯೂಟರ್ [illegible] ನೆರಳು [illegible] ಯುರೋಪಿನ ಮೇಲೆ. ಇಲ್ಲೂ ಅದೇ ಸಮಸ್ಯೆ.

ದಾಖಲೆಗಳ ಸತ್ಯಾಸತ್ಯತೆಯನ್ನು ಪರೀಕ್ಷಿಸುವ ಮೊದಲು ಗ್ರಹಣದ ಸಮಯವನ್ನು ಹೇಗೆ ಲೆಕ್ಕ ಹಾಕುತ್ತಾರೆಂದು ತಿಳಿಯೋಣ. ಇದಕ್ಕೆ ಸೂರ್ಯ-ಚಂದ್ರರ ನಿಖರವಾದ ಸ್ಥಾನ ನಿರ್ದೇಶಕಗಳು ಅವಶ್ಯಕ. ಅವನ್ನು ತಿಳಿಯಲು ಇಂದು ಲಭ್ಯವಿರುವ ಮಾಹಿತಿಯನ್ನೇ [illegible] ಮಾಹಿತಿ [illegible] ಪರಿಭ್ರಮಣಾವಧಿ [illegible] ಇರುವಂತೆಯೇ [illegible]

ಈ [illegible] ತಿಳಿದಿದೆ. [illegible] ಅವತರಣ [illegible] ವೃತ್ತ ಸಮಾಗುತಿರಬಹುದು ಎಂಬುದನ್ನು [illegible] [illegible]





ಭೂಮಿಯ ಆವರ್ತನದ
ಕಾರಣ ಭರತ ಚಂದ್ರನಿಗಿಂತ
ಮುಂದಿರುತ್ತದೆ


ಭೂಮಿಯ ಗತಿ (ಅಂದರೆ ದಿನದ ಅವಧಿ) ನಿಧಾನವಾಗುತ್ತಿದೆ ಎಂದು ತಿಳಿಯಿತು. ಇದು ಎಷ್ಟು ಹೆಚ್ಚಾಗಿರಬಹುದು ? ಈ ಸಂಗತಿಯನ್ನು ಬೆಳಕಿಗೆ ತಂದವೇ ಈ ಗ್ರಹಣಗಳು. 100 ವರ್ಷಗಳಿಗೆ 1.78 ಮಿಲಿ ಸೆಕೆಂಡ್‌ಗಳಷ್ಟು ಹೆಚ್ಚುತ್ತಿದೆ ಎಂಬ ಅಂಶವೂ ಇದರಿಂದ ತಿಳಿಯಿತು.

ಇವಕ್ಕೆ ಕಾರಣವೇನಿರಬಹುದು ?

ಸೂರ್ಯನ ಹೊರತಾಗಿ ಭೂಮಿಯ ಮೇಲೆ ಸಾಕಷ್ಟು ಗುರುತ್ವ ಪ್ರಭಾವ ಬೀರಬಲ್ಲ ಕಾಯವೆಂದರೆ ಚಂದ್ರ ಮಾತ್ರ. ಚಂದ್ರನಿಗೂ ಅಂಬುಧಿಗೂ ನಂಟು ಇದ್ದುದು

ಡಾ॥ ಬಿ. ಎಸ್. ಶೈಲಜಾ

ಬಸವಣ್ಣನವರ ಕಾಲಕ್ಕೇ ಸಾಮಾನ್ಯ ಜ್ಞಾನವಾಗಿದ್ದ ವಿಷಯ. ಚಂದ್ರ ನೆತ್ತಿಯ ಮೇಲಿದ್ದಾಗ ಭರತ ಆಗುವುದಿಲ್ಲ; ನೆತ್ತಿ ತಲುಪುವ ಸ್ವಲ್ಪ ಮುಂಚೆಯೇ ಆಗುತ್ತದೆ ಎಂಬುದು ನಾವಿಕರೆಲ್ಲರಿಗೆಲ್ಲಾ ತಿಳಿದ ವಿಷಯವೇ. ಚಂದ್ರನ ಸೆಳೆತಕ್ಕೆ ಒಳಗಾಗಿ ಮೇಲೆದ್ದ ನೀರಗೋಡೆಯನ್ನು ಭೂಮಿ ತಿರುಗುವಾಗ ಮುಂದಕ್ಕೆ ಎಳೆದೊಯ್ಯುತ್ತದೆ. ಇದು ಮೇಲ್ನೋಟಕ್ಕೆ ಸ್ಪಷ್ಟ ಎನಿಸಬಹುದು. ಆದರೆ ನೀರು ಮತ್ತು ಭೂತಲಗಳ ಘರ್ಷಣೆಯ ಪರಿಣಾಮ ಅರಿವಾಗುವುದು ಶತಮಾನಗಳ ಅವಧಿಯಲ್ಲಿ.



ಭರತ ಇಳಿತಗಳಿಗೆ ಚಂದ್ರನೇ ಕಾರಣ. ಅಮಾವಾಸ್ಯೆಯಂದು ಗರಿಷ್ಠ; ಅರ್ಧಚಂದ್ರ ದಿನಗಳಲ್ಲಿ ಕನಿಷ್ಠ

ನ್ಯೂಕುಂಬ್ ಎಂಬಾತ ನೂರು ವರ್ಷಗಳಷ್ಟು ಹಿಂದೆಯೇ ಗ್ರಹಗಳ ಚಲನೆಯ ವಿವರಗಳನ್ನು ಪ್ರಕಟಿಸಿದ. ಅದನ್ನು ಮುಂದಿನ ದಿನಗಳಿಗೆ ಲೆಕ್ಕ ಹಾಕಲು ಸೂತ್ರಗಳನ್ನೂ ತಯಾರಿಸಿದ. ಇಂದು ಎಲ್ಲ ಅಲ್ಮನಾಕ್ (ಪಂಚಾಂಗ ಎಂಬ ಪದ ಉಪಯೋಗಿಸಿದರೆ ಭಾರತೀಯರ ಸೂತ್ರಗಳು ಎಂಬ ಕಲ್ಪನೆ ಬರಬಹುದು! ಆದ್ದರಿಂದ ಅದನ್ನು ಬಳಸಿಲ್ಲ) ಗಳಲ್ಲಿ ಅನುಸರಿಸುತ್ತಿರುವ ಸೂತ್ರಗಳು ಇವೇ. ಸೂರ್ಯ ಮತ್ತು ಗ್ರಹಗಳ ಚಲನೆಗೆ ಆತನ ಸೂತ್ರಗಳು ಕರಾರುವಾಕ್ಕಾದ ಫಲಿತಾಂಶ ಕೊಡುತ್ತವೆ. ಚಂದ್ರನ ವಿಷಯದಲ್ಲಿ ಮಾತ್ರ ತೊಡಕಾಗುತ್ತದೆ.

ಇಂದು ಈ ವ್ಯತ್ಯಾಸ ಭರತ ಇಳಿತಗಳ ಕಾರಣ ಭೂ ಆವರ್ತನಾವಧಿಯಲ್ಲಿ ಉಂಟಾಗುವ ಏರುಪೇರಿನಿಂದ ಉಂಟಾದದ್ದು ಎಂದು ತಿಳಿದುಬಂದಿದೆ. ಗ್ರಹಣಗಳ ದಾಖಲೆಗಳಿಂದ ಇದನ್ನು ಅಳೆಯುವುದೂ ಸಾಧ್ಯವಾಗಿದೆ. ಭೂಮಿಯನ್ನು ಇದು ನಿಧಾನಗೊಳಿಸುತ್ತಿರುವುದು ಒಂದಂಶವಾದರೆ, ಚಂದ್ರನನ್ನು ಶತಮಾನಕ್ಕೆ ನಾಲ್ಕು ಮೀ.ಗಳಷ್ಟು ದೂರಕ್ಕೆ ತಳ್ಳುತ್ತಿರುವುದು ಇನ್ನೊಂದಂಶ. ಇದು ಹೀಗೆಯೇ ಮುಂದುವರೆದರೆ ಹತ್ತು ಲಕ್ಷ ವರ್ಷಗಳ ನಂತರ ದಿನಕ್ಕೆ 47 ಗಂಟೆಗಳಾಗಬಹುದು. ಚಂದ್ರನ ಪರಿಭ್ರಮಣಾವಧಿಯೂ ಅದೇ ಆಗಿ ಭೂಮಿಯ ಒಂದು ಭಾಗಕ್ಕೆ ಮಾತ್ರ ಚಂದ್ರ ದರ್ಶನದ ಲಾಭ. ಉಳಿದವರಲ್ಲಿ ಕೆಲವರಿಗೆ ಯಾವಾಗಲೂ ಚಂದ್ರದರ್ಶನವೇ ಇಲ್ಲದಂತಾಗಿಬಿಡಬಹುದು.


ಅದೇನೇ ಇರಲಿ, ಗ್ರಹಣಗಳ ದಾಖಲೆಗಳು ಇಂತಹದೊಂದು ರಹಸ್ಯವನ್ನು ಬಯಲುಮಾಡಿ ಕಗ್ಗಂಟನ್ನು ಬಿಡಿಸಿವೆ ಎಂಬುದಂತೂ ನಿಜ. ಈ ದಾಖಲೆಗಳಲ್ಲಿ ಗ್ರಹಣ ಸಮಯವನ್ನು ನಿಖರವಾಗಿ (ಅಂದಿನ ತಾಂತ್ರಿಕ ಪ್ರಗತಿಗೆ ತಕ್ಕಂತೆ) ಸೂಚಿಸಿದ್ದಾರೆ ಎಂಬುದು ಗಮನಿಸಬೇಕಾದ ಸಂಗತಿ. ತಮ್ಮ ಸೀಮಿತ ಅವಕಾಶದಲ್ಲೇ ಪ್ರಾಯೋಗಿಕ ವಿವರಗಳನ್ನು ಪ್ರಾಮಾಣಿಕವಾಗಿ ಬರೆದಿಟ್ಟಿರುವ ಕಾರಣ ಇಂದು ಈ ಬಗೆಯ ಅಧ್ಯಯನ ಸಾಧ್ಯವಾಗಿದೆ.

ಈ ದೃಷ್ಟಿಯಿಂದ ಅಂದಿನ ಸಮಕಾಲೀನ ಭಾರತೀಯರ ಕೊಡುಗೆ ಏನು ? ಕೆಲವು ಶಾಸನಗಳ ದಾಖಲೆಗಳನ್ನು ಕಂಡಾಗ ಆಕಾಶ ನೋಡಿ ಬರೆದರೋ, ಜೋಯಿಸರನ್ನು ಕೇಳಿ ಬರೆದರೋ ಎಂದು ಅನುಮಾನ ಉಂಟಾಗುತ್ತದೆ. ತಾಳೆಗರಿಗಳಲ್ಲಿ ದೊರಕುವ ಗ್ರಂಥಗಳಲ್ಲಿ ಹೆಚ್ಚಿನವು ಪಠ್ಯಪುಸ್ತಕ ಅಥವಾ ವ್ಯಾಖ್ಯಾನಗಳಾಗಿದ್ದು ತತ್ಕಾಲೀನ ವೀಕ್ಷಣೆಗಳಿಗೆ ಮಹತ್ವ ಕೊಟ್ಟಿಲ್ಲ. ಹಾಗಾಗಿ ಇವುಗಳಿಂದ ಗ್ರಹಣದ ಅವಧಿ, ಸಮಯ ಅಂತಿರಲಿ. ಕಂಡಿತ್ತೇ ಇಲ್ಲವೇ ಎಂದೂ ಖಚಿತವಾಗಿ ಹೇಳುವಂತಿಲ್ಲ. ಎಂಥ ವಿಪರ್ಯಾಸ!

ಡಾ॥ ಬಿ. ಎಸ್. ಶೈಲಜಾ
ಜವಹರಲಾಲ್ ನೆಹರು ತಾರಾಲಯ

ಆಗಸ್ಟ್ 11ರ ಪೂರ್ಣ ಸೂರ್ಯಗ್ರಹಣ

ನಾಲ್ಕು ವರ್ಷಗಳ ಹಿಂದೆ ಒದಗಿದಂತಹ ಅಪೂರ್ವ ಅವಕಾಶವೊಂದು ಈಗ ಪುನಃ ಒದಗಿ ಬಂದಿದೆ. ಚಂದ್ರನ ನೆರಳು ಭಾರತದ ಮೂಲಕವೇ ಹಾದುಹೋಗಲಿದೆ. ಪೂರ್ಣತೆಯ ವೀಕ್ಷಣೆಗೆ ಅವಕಾಶ ಇರುವ ಪ್ರದೇಶಗಳೆಂದರೆ ಗುಜರಾತ್, ಮಹಾರಾಷ್ಟ್ರ ಒರಿಸ್ಸಾದ ಸ್ವಲ್ಪ ಭಾಗ. (ನಕ್ಷೆ ಪುಟ 53) ಮಾನ್‌ಸೂನ್‌ನ ಆರ್ಭಟ ಜೋರಾಗಿರುವುದರಿಂದ ಕಛ್ ಪ್ರದೇಶದಿಂದ ವೀಕ್ಷಣೆ ಸಾಧ್ಯ ಎಂದೆನ್ನಿಸಿಕೊಳ್ಳಬಹುದು. ಕಳೆದೆರಡು ಬಾರಿ ಅನುಭವಿಸಿದ (1980 ಮತ್ತು 1995) ಹಗಲು ಕತ್ತಲಾಗುವ ರೋಮಾಂಚ ದೃಶ್ಯ ಈ ಬಾರಿ ಭಾರತದಲ್ಲಿ ಯಾರಿಗೂ ದೊರೆಯಲಾರದು. ಇದಕ್ಕೆ ಮಾನ್‌ಸೂನ್ ಕಾರಣವಲ್ಲ. ಸೂರ್ಯಾಸ್ತಕ್ಕೆ



ಸ್ವಲ್ಪ ಮುಂಚೆ ಆರಂಭವಾಗುವುದರಿಂದ ಈ ಅನಾನುಕೂಲ. ಆದರೆ ಇದನ್ನು ಅನುಕೂಲಕ್ಕೆ ಪರಿವರ್ತಿಸಿಕೊಳ್ಳಬಹುದು. ಸೂರ್ಯಾಸ್ತ ವೀಕ್ಷಿಸುವುದು ನಿರಪಾಯಕಾರಿ ಅಲ್ಲವೇ? ಆದ್ದರಿಂದ ಆ ದಿನವೂ ಯಾವ ಪೂರ್ವಸಿದ್ಧತೆಯೂ ಬೇಕಿಲ್ಲದ ಸೂರ್ಯಾಸ್ತವನ್ನು ವೀಕ್ಷಿಸಬಹುದು- ಸುರಕ್ಷಿತವಾಗಿ! ಖಗೋಳ ವೈಜ್ಞಾನಿಕ ಪ್ರಯೋಗಗಳಿಗೆ ಮಾತ್ರ ಈ ಅವಕಾಶ ನಿಷ್ಪ್ರಯೋಜಕ. ಜನಸಾಮಾನ್ಯರಿಗೆ ಸದವಕಾಶ! ಸೂರ್ಯಾಸ್ತಕ್ಕೆ ಮುಂಚೆ ಸೂರ್ಯನನ್ನು ಬರಿಗಣ್ಣಿನಿಂದ ನೋಡಬಾರದು.

ಕ್ಯಾಮೆರಾ ಇದ್ದವರು ಹಿಂದಿನ ಕೆಲವು ದಿನಗಳಲ್ಲಿ ಸೂರ್ಯಾಸ್ತದ ಚಿತ್ರಗಳನ್ನು ತೆಗೆದು ಎಕ್ಸ್‌ಪೋಷರ್ ವಿವರಗಳನ್ನು ಕಂಡುಹಿಡಿದುಕೊಳ್ಳುವುದು ಒಳ್ಳೆಯದು. ಸೂರ್ಯಾಸ್ತ ವೀಕ್ಷಣೆ ಸಾಧ್ಯವಾಗುವಂತಹ ಜಾಗವನ್ನು ಆಯ್ದುಕೊಳ್ಳುವುದೂ ಅತಿ ಮುಖ್ಯ. ಮೋಡ, ಮಳೆ ಇಲ್ಲದಿದ್ದರೆ ಮಾತ್ರ ಇದೊಂದು ಸುವರ್ಣಾವಕಾಶ.

ಚಂದ್ರನಿಂದ ಮಾರ್ಗದರ್ಶನ


ಡಾ॥ ಬಿ. ಎಸ್. ಶೈಲಜಾ

ಆಗಸ್ಟ್ 1999

ಮೈಮರೆತು ಮಲಗಿದಾಗ ನಿದ್ರಾಭಂಗವಾದರೆ ಸಿಟ್ಟು ಬರುವುದು ಸಹಜವೇ. ಗಣಪತಿಗಾದದ್ದೂ ಇದೇ ಇರಬೇಕು. ಮಲಗಿದ್ದ ಆತನ ಡೊಳ್ಳು ಹೊಟ್ಟೆಯ ಮೇಲೆ ದೋಣಿ ಮಾಡಿಟ್ಟು ಅದು ಮೇಲೆ ಕೆಳಗೆ ಆಡುವುದನ್ನು ಚಂದ್ರ ಗಮನಿಸುತ್ತಿದ್ದಾನೋ ಏನೋ.

ಇಂಥದೊಂದು ಕಲ್ಪನೆ ಬರಬೇಕಾದರೆ ರಾತ್ರಿ (ಮೋಡ, ಮಳೆ ಇಲ್ಲದಾಗ) ತಲೆ ಎತ್ತಿ ಆಕಾಶ ನೋಡಿ. ದಕ್ಷಿಣ ದಿಕ್ಕಿಗೆ ಮುಖ ಮಾಡಿ ನಿಂತು ಸ್ವಲ್ಪ ತಲೆ ಎತ್ತಿ. ಮಲಗಿದ ಗಣಪತಿ, ತಲೆಯಿಂದ ಜಾರಿದ ಕಿರೀಟ, ಅದರಲ್ಲೊಂದು ಫಳಗುಟ್ಟುವ ರತ್ನ, ಡೊಳ್ಳು ಹೊಟ್ಟೆಯ ಮೇಲೆ ದೋಣಿ- ಎಲ್ಲವೂ ಅಲ್ಲಿವೆ.

ತಲೆ ಎತ್ತಿ ನೋಡಿದ್ದಾಯಿತಲ್ಲ. ಈಗ ಅತ್ತಿತ್ತ ದೃಷ್ಟಿ ಹರಿಸಿ, ಆಕಾಶ ದರ್ಶನದ ಪಾಠ ಆರಂಭವಾಯಿತು. ಗಣಪತಿಯ ಸೊಂಡಿಲನ್ನೇ ವೃಶ್ಚಿಕ ರಾಶಿ ಎನ್ನುತ್ತಾರೆ. ಅಲ್ಲಿಯ ಪ್ರಕಾಶಮಾನವಾದ ಕೆಂಪು ನಕ್ಷತ್ರ- ಗಣಪತಿಯ ಹಣೆಯಲ್ಲಿ (ಪೂಜೆಗೆ ಹಚ್ಚಿದ) ಕುಂಕುಮದ ಹಾಗಿದೆಯಲ್ಲ ಅದು ಜ್ಯೇಷ್ಠಾ (ಅಂಟಾರೆಸ್). ದೋಣಿಯೇ ಧನುರಾಶಿ. ಜಾರಿಬಿದ್ದ ಕಿರೀಟವೇ ತುಲಾ ರಾಶಿ. ಅದರಲ್ಲಿಯ ಫಳಗುಟ್ಟುವ ಕೆಂಪುಕಾಯವೇ ಮಂಗಳ ಗ್ರಹ.



ಇತರ ರಾಶಿಗಳ ಪರಿಚಯ ಮಾಡಿಕೊಳ್ಳಲು ಚಂದ್ರನನ್ನೇ ಮಾರ್ಗದರ್ಶಿಯನ್ನಾಗಿ ಮಾಡಿಕೊಳ್ಳೋಣ. ತಿಂಗಳ ಮೊದಲ ದಿನಗಳಲ್ಲಿ ಈ ಮಾರ್ಗದರ್ಶಿ ಬೆಳಗಿನ ಜಾವ ಸಿಗುತ್ತಾನೆ. ನಾಲ್ಕನೆಯ ತಾರೀಖು ಗುರುಗ್ರಹದ ಸಮೀಪ ಇದ್ದರೆ, 5ರಂದು ಶನಿಗ್ರಹದ ಸಮೀಪ ಇರುತ್ತಾನೆ. 6ನೆಯ ತಾರೀಖು ರೋಹಿಣಿಯೊಡನೆ ಕಣ್ಣಾಮುಚ್ಚಾಲೆ ಆಟ ಆಡುತ್ತಾನೆ. ಕ್ರಮೇಣ ಪೂರ್ವಕ್ಕೆ ಸರಿದು ಆಗಸ್ಟ್ 11ರ ಅಮಾವಾಸ್ಯೆಯ ದಿನ ಸೂರ್ಯನನ್ನೇ ಮುಚ್ಚಿಬಿಡುತ್ತಾನೆ. ಅಪೂರ್ವ ಅವಕಾಶದ ಈ ಸೂರ್ಯಗ್ರಹಣ ಒಂದು ವಿಶೇಷ ಸನ್ನಿವೇಶ.

ಒಂದೆರಡು ದಿನ 'ರಜಾ'ದ ನಂತರ ಪುನಃ ಈ ಮಾರ್ಗದರ್ಶಿ ಸಂಜೆಯ ಆಕಾಶದಲ್ಲಿ ಹಾಜರ್. ಕಳೆದೆರಡು ತಿಂಗಳಿಂದ ಸಂಜೆ ಫಳಗುಟ್ಟುತ್ತಿದ್ದ ಶುಕ್ರಗ್ರಹ ಈಗ ಪಶ್ಚಿಮದಂಚಿಗೆ ಸರಿದಿದೆ. 12ರಂದು ಚಂದ್ರ, ಶುಕ್ರ ಜೋಡಿ. ಆದರೆ ಬಿದಿಗೆಯ ಚಂದ್ರನನ್ನು ಹುಡುಕುವುದು ಸುಲಭವೇನಲ್ಲ.

18ರಂದು ಮಂಗಳ ಮತ್ತು ಚಂದ್ರ ಜೋಡಿ. 21ರಂದು ಗಣಪತಿಯ ಬಲಗಿವಿಯ ಮೇಲೆ ಕುಳಿತ ಚಂದ್ರ ಮರುದಿನ ಒಫಿಯೂಕಸ್‌ಗೆ ಜಾರುತ್ತಾನೆ.

26ರಂದು ಹುಣ್ಣಿಮೆಯ ಬೆಳಕಿನಲ್ಲಿ ಎಲ್ಲ ನಕ್ಷತ್ರಗಳೂ ಮಂಕು. ಆದರೆ ಚಂದ್ರನಿಗಿಂತ ಸ್ವಲ್ಪ ಮೇಲೆ ಮಿನುಗುವುದೇ ಶ್ರವಣ ನಕ್ಷತ್ರ.

ಹುಣ್ಣಿಮೆಯ ನಂತರದ ದಿನಗಳಲ್ಲಿ ಸಂಜೆ ಚಂದ್ರನ ಬೆಳಕಿಲ್ಲ. ವೃಶ್ಚಿಕ, ಧನು ರಾಶಿಗಳಿಂದ ಹೊರಟು ಉತ್ತರದ ಸಿಗ್ನಸ್ ಪುಂಜದವರೆಗೂ ಹಾಸಿದಂತಿರುವ ಆಕಾಶಗಂಗೆಯನ್ನು ನೋಡಲು ಇದು ಪ್ರಶಸ್ತವಾದ ಸಮಯ. ಉತ್ತರ ದಿಕ್ಕಿಗೆ ನಿಂತರೆ ಪಶ್ಚಿಮದಲ್ಲಿ ಮುಳುಗುತ್ತಿರುವ ಸಪ್ತರ್ಷಿ ಮಂಡಲ ಕಾಣುತ್ತದೆ. ಈಶಾನ್ಯದಲ್ಲಿ ಸಿಗ್ನಸ್ (ಉತ್ತರ ಶಿಲುಬೆ, ರಾಜಹಂಸ) ಕಾಣುತ್ತದೆ.


ಉತ್ತರ ದಿಕ್ಕಿನಲ್ಲಿ ಪ್ರಕಾಶಮಾನವಾಗಿ ಕಾಣುವ ಕೆಂಪುತಾರೆ ಸ್ವಾತಿ. ಇದು ಬೂಟಿಸ್ ನಕ್ಷತ್ರಪುಂಜಕ್ಕೆ ಸೇರಿದೆ. ಇನ್ನೊಂದು ಪ್ರಕಾಶಮಾನವಾದ ನಕ್ಷತ್ರಪುಂಜ ಹರ್ಕುಲೆಸ್. ನಕ್ಷೆಯನ್ನು ಬಳಸಿ ಇದನ್ನು ಗುರುತಿಸಬಹುದು. ನಕ್ಷೆಯಲ್ಲಿ ಪೂರ್ವ- ಪಶ್ಚಿಮಗಳನ್ನು ಗುರುತಿಸಿರುವ ಬಗೆಯನ್ನು ಗಮನಿಸಿ. ಈ ನಕ್ಷೆಯನ್ನು ನೀವು ಮೇಲೆತ್ತಿ ಹಿಡಿದು ಕೆಳಗಿನಿಂದ ನೋಡುವಂತೆ ರಚಿಸಲಾಗಿದೆ.

ಶುಕ್ರಗ್ರಹ ತಿಂಗಳ ಮೊದಲವಾರ ಸಂಜೆ ಕಾಣುತ್ತದೆ. 20ರಂದು ಸೂರ್ಯನ ಸಮೀಪ ಹಾದು ತಿಂಗಳ ಕೊನೆಯವಾರ ಬೆಳಗಿನ ಜಾವ ಹಾಜರಾಗುತ್ತದೆ.

ಹೆಸರಾಂತ ಪರ್ಸಿಯೈಡ್ ಉಲ್ಕಾವೃಷ್ಟಿ ಆಗಸ್ಟ್ 12ರಂದು ಗರಿಷ್ಠ ಮುಟ್ಟಲಿದೆ. ಆದ್ದರಿಂದ ಆ ರಾತ್ರಿಯ ಮೂರ್‍ನಾಲ್ಕು ರಾತ್ರಿ ಆಚೀಚೆ (ಮೋಡ ಅವಕಾಶ ಕೊಟ್ಟಾಗಲೆಲ್ಲಾ) ಆಕಾಶವನ್ನು ಗಮನಿಸುತ್ತಿದ್ದರೆ ಉಲ್ಕೆಗಳು ಕಾಣುವುದು ಖಚಿತ.

ಲೀ ಎಂಬ ಧೂಮಕೇತು ಸೂರ್ಯನನ್ನು ಸಮೀಪಿಸಿದೆ. ಅದರ ಇದರ ನೋಟ ಬೈನಾಕ್ಯುಲರ್‌ಗಳಿಂದ ಮಾತ್ರ ಲಭ್ಯ

ಆಗಸ್ಟ್ (ಸುಮಾರು 7.30)



ನಭಾವಲೋಕನ, ಬಿ.ಎಸ್.ಎಸ್.

ಬದಲಾಗುತ್ತಿರುವ ಬೆಟ್ಟದ ಬದುಕು

ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ನಾನು ಬಿಳಿಗಿರಿರಂಗನ ಬೆಟ್ಟಕ್ಕೆ ಹೋಗಿಬಂದ ಮೇಲೆ ನಾಲ್ಕೈದು ಬಾರಿ ಮತ್ತೆ ಹೋಗಿದ್ದೇನೆ. ಈ ಅವಧಿಯಲ್ಲಿ ಬೆಟ್ಟದ ಜೀವನಕ್ರಮದಲ್ಲಾಗಿರುವ ಬದಲಾವಣೆಗಳನ್ನು ಕುತೂಹಲದಿಂದ ಗಮನಿಸುತ್ತಾ ಬಂದಿದ್ದೇನೆ. ವಾಸ್ತವವಾಗಿ ನಮ್ಮ ನಾಡಿನ ಇತರ ಪಟ್ಟಣ ಅಥವಾ ನಗರ ಪ್ರದೇಶಗಳಲ್ಲಿ ಆಗುತ್ತಿರುವ ಕ್ಷಿಪ್ರಗತಿಯ ಬದಲಾವಣೆಗಳು ಇಲ್ಲಿ ಆಗಿಲ್ಲವೆಂದೇ ಹೇಳಬಹುದು. ಹಗಲು ಹೊತ್ತಿನ ಏಳೆಂಟು ತಾಸುಗಳ ಹೊರತು ಉಳಿದಂತೆ ಬೆಟ್ಟದ ಜನಜೀವನ ತೀರಾ ಮಂದಗತಿಯಲ್ಲಿ ಮೌನವಾಗಿ ಸಾಗುತ್ತದೆ. ವಿದ್ಯುತ್, ದೂರವಾಣಿ, ಅಂಚೆ, ಸಾರಿಗೆ ಸೌಕರ್ಯ, ಹೋಟೆಲ್, ಅಂಗಡಿಗಳು, ಪ್ರವಾಸಿ ಮಂದಿರ, ಪೊಲೀಸ್ ಸ್ಟೇಷನ್- ಮುಂತಾದ ನಾಗರಿಕ ಸೌಲಭ್ಯಗಳು ಒಂದೊಂದಾಗಿ ಕಾಣಿಸಿಕೊಂಡಿವೆ ಯಾದರೂ ಬೇರೆ ಊರುಗಳಲ್ಲಿರುವಂತೆ ಇದರ ಅಬ್ಬರ ಕಣ್ಣಿಗೆ ರಾಚುವಂತಿಲ್ಲ. ಇದೊಂದು ಯಾತ್ರಾಸ್ಥಳವಾಗಿ ರುವುದರಿಂದ ದಿನವೂ ಇಲ್ಲಿಗೆ ಬರುವ ಹೋಗುವ ಜನರಿಂದಾಗಿ ಸಹಜ ವಾಗಿಯೇ ಪ್ರವಾಸಿ ತಾಣವೊಂದರಂತೆ ಇದು ಕಾಣುತ್ತದೆಯಾದರೂ, ಕೇವಲ ಮನರಂಜನೆಗಾಗಿ ಇಲ್ಲಿಗೆ ಯಾವ ಪ್ರವಾಸಿಗಳೂ ಬರುವುದಿಲ್ಲ. ನೂರಾರು ವರ್ಷಗಳಿಂದಲೂ ಈ ಪ್ರದೇಶದ ವಿಶಿಷ್ಟ ಸಂಗತಿಗಳೆಂದರೆ, ಬಿಳಿಗಿರಿ ರಂಗನಾಥ ಸ್ವಾಮಿಯ ಗುಡಿ, ಬೆಟ್ಟದ ಸುತ್ತಮುತ್ತ ಹಲವಾರು ಮೈಲಿಗಳ ಫಾಸಲೆಯಲ್ಲಿ ಕಾಡಿನಲ್ಲಿ ವಾಸಿಸುತ್ತಿರುವ ಸೋಲಿಗರು ಮತ್ತು ಕಾಡಿನ ವನ್ಯಜೀವಿ ಪರಿಸರ - ಅದರಲ್ಲೂ ಮುಖ್ಯವಾಗಿ ಹಿಂಡುಹಿಂಡಾಗಿ ಜೀವಿಸುತ್ತಿರುವ ಆನೆಗಳು.

ಕರ್ನಾಟಕದ ಪ್ರಾಚೀನ ಶ್ರೀವೈಷ್ಣವ ಕೇಂದ್ರಗಳಲ್ಲಿ ಬಿಳಿಗಿರಿರಂಗನ ಬೆಟ್ಟವೂ ಒಂದು. ತಮಿಳುನಾಡಿನಿಂದಲೂ ಸಾಕಷ್ಟು ಸಂಖ್ಯೆಯಲ್ಲಿ ಭಕ್ತಾದಿಗಳು ಇಲ್ಲಿಗೆ ನಡೆದು ಕೊಳ್ಳುತ್ತಾರೆ. ರಂಗನಾಥನ ಅರ್ಚಕರೆಲ್ಲಾ ತಮಿಳು ಕನ್ನಡಿಗರು. ಜನಪದ ಐತಿಹ್ಯದ ಪ್ರಕಾರ ರಂಗನಾಥ ಸ್ವಾಮಿಗೆ ಸೋಲಿಗ ಬುಡಕಟ್ಟಿನೊಂದಿಗೆ ರಕ್ತ ಸಂಬಂಧವುಂಟು. ಇವರು ಈ ದೈವವನ್ನು ತಮ್ಮ ಭಾವಮೈದುನನೆಂದೇ ಹೇಳಿಕೊಳ್ಳುತ್ತಾರೆ. ಸೋಲಿಗ ಕನ್ಯೆಯೊಬ್ಬಳನ್ನು ಆತ ಮೆಚ್ಚಿ ಮದುವೆಯಾದನೆಂದು ಅವರ ನಂಬಿಕೆ. ಇಂದಿಗೂ ರಂಗನಾಥ ಸ್ವಾಮಿಯ ಜಾತ್ರೆ, ಉತ್ಸವಗಳ ಕಾಲದಲ್ಲಿ ಧಾರ್ಮಿಕ ಆಚರಣೆಗಳಲ್ಲಿ ಸೋಲಿಗ ಪ್ರತಿನಿಧಿಗಳಿಗೆ ವಿದ್ಯುಕ್ತವಾದ ಕರ್ತವ್ಯ-ಹಕ್ಕುಗಳು ಉಳಿದುಕೊಂಡುಬಂದಿವೆ. ದೇವರ ಗುಡಿಯಲ್ಲಿ ರಂಗನಾಥನ ದೊಡ್ಡ ಚರ್ಮದ ಪಾದುಕೆಗಳಿದ್ದು, ಇದನ್ನು ಸ್ವಾಮಿಗೆ ಹೊಲಿದುಕೊಡುವ ಅಸ್ಪೃಶ್ಯ ಭಕ್ತರಿಗೂ ವಿಶೇಷ ದಿನಗಳಲ್ಲಿ ದೇವಸ್ಥಾನದ ಪ್ರಾಕಾರಕ್ಕೆ ಪ್ರವೇಶವುಂಟು. ಇವೆಲ್ಲಾ ನೂರಾರು ವರ್ಷಗಳಿಂದಲೂ ನಡೆದುಬಂದಿರುವ ಸಂಪ್ರದಾಯವಾಗಿದ್ದು, ಇತ್ತೀಚಿನ ಕಾನೂನುಗಳಿಂದಾದ ಮಾರ್ಪಾಟುಗಳಲ್ಲ. ಈ ದೈವಕ್ಕೆ ಸಂಬಂಧಿಸಿದಂತೆ ಪ್ರಚಲಿತವಾಗಿರುವ ನಂಬಿಕೆಗಳು, ಐತಿಹ್ಯ, ಆಚರಣೆಗಳನ್ನು ಕಣ್ಣಿಟ್ಟು ನೋಡಿದರೆ ಬಹುಶಃ ಬಿಳಿಗಿರಿ ರಂಗನೊಬ್ಬ ಆದಿಯ ಬುಡಕಟ್ಟು ದೈವವಾಗಿದ್ದರೂ ಇರಬಹುದೆಂಬ ಸಂಗತಿ ಗೋಚರಿಸುತ್ತದೆ. ಈ ಮಾತು ಬಿಳಿಗಿರಿರಂಗನ ಬೆಟ್ಟಕ್ಕೆ ಸಮೀಪದಲ್ಲೇ ಇರುವ ಮಲೆಯ ಮಹದೇಶ್ವರನಿಗೂ ಅನ್ವಯಿಸುತ್ತದೆ. ಆದರೆ ಹಲವು ಶತಮಾನಗಳ ಹಿಂದೆಯೇ ಈ ಧಾರ್ಮಿಕ ಕೇಂದ್ರಗಳ ಸೂತ್ರ ಮೇಲು ಜಾತಿ-ವರ್ಗಗಳ ಕೈಗೆ ಸೇರಿಹೋಗಿರು ವಂತಿದೆ. ವಾಕ್ ಸಂಪ್ರದಾಯಕ್ಕೆ ಸೇರಿದ ಅನೇಕ ಬುಡಕಟ್ಟು ದೈವಗಳು ಹೀಗೆ ಸಂಸ್ಕೃತೀಕರಣಗೊಂಡು ನೂತನ ಪುರಾಣ-ನಾಮಗಳೊಂದಿಗೆ ಚರಿತ್ರೆಯಲ್ಲಿ ಸೇರಿಹೋಗಿರುವ ಹಲವು ಉದಾಹರಣೆಗಳಿವೆ. ಆದರೆ ಮೂಲ ಕುರುಹುಗಳನ್ನು ನಂಬಿಕೆ, ಆಚರಣೆ, ಐತಿಹ್ಯಗಳ ಆಧಾರದ ಮೇಲೆ ಊಹಿಸಬೇಕಾಗುತ್ತವೆ. ಇದು ತೀರಾ ವಿವಾದಾಸ್ಪದ ವಿಚಾರವಾಗುವುದರಿಂದ ಯಾರೂ ಪ್ರಯತ್ನಿಸುವುದಿಲ್ಲ.

ಚಾರಿತ್ರಿಕವಾಗಿ ಬಿಳಿಗಿರಿ ರಂಗನ ಕ್ಷೇತ್ರ ಪ್ರಾಚೀನವಾಗಿದ್ದು, ಹೊಯ್ಸಳ ದೊರೆ ವಿಷ್ಣುವರ್ಧನನೇ ಈ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿಸಿದ ಬಗೆಗೆ ಆಧಾರಗಳಿವೆ. ಹದಿನೇಳನೇ ಶತಮಾನದ ತಾಮ್ರ ಶಾಸನವೊಂದರ ಪ್ರಕಾರ ಹದಿನಾಡ ಅರಸು ಮುದ್ದುರಾಜನು ಈ ದೇವರ ಸೇವೆಗಾಗಿ [illegible] ಬಿಟ್ಟಿದ್ದಾನೆ. ದಿವಾನ್ ಪೂರ್ಣಯ್ಯನವರಿಗೆ ಯಳಂದೂರು ತಾಲ್ಲೂಕು ಜಹಗೀರಾಗಿ ಮೈಸೂರು [illegible] ದೊರೆತಾಗ, ಈ ದೇವರ ಸೇವೆಗಾಗಿ ಎರಡು ಹಳ್ಳಿಗಳ ಆದಾಯವನ್ನು ಬಿಟ್ಟುಕೊಟ್ಟಿದ್ದಾರೆ. ಬೆಟ್ಟದ ಬುಡದಲ್ಲಿ ತುಳಸಮ್ಮನ ಗುಡಿ, ಬೆಟ್ಟಕ್ಕೆ ಹತ್ತುವ ಮಧ್ಯದಲ್ಲಿ ಕನಕದಾಸನ ಗವಿ, ಬೆಟ್ಟದ ಮೇಲೆ ರಂಗನಾಥಗುಡಿ ಇವೆ. ವಸಿಷ್ಠ ಮುನಿಯೇ ಈ ದೇವರನ್ನು ಪ್ರತಿಷ್ಠಿಸಿದನೆಂಬ ಪುರಾಣವೂ ಉಂಟು.

ಬಿಳಿಗಿರಿರಂಗನ ಬೆಟ್ಟ



ಬೆಟ್ಟದ ಮೇಲೆ ನಿಂತು ನೋಡಿದರೆ, ಕಣ್ಣಿಗೆ ಹಬ್ಬವಾಗುವಂತೆ ನಿಸರ್ಗ ಸೌಂದರ್ಯ ಗೋಚರಿಸುತ್ತದೆ. ಅತ್ತ ತಮಿಳುನಾಡಿನ ನೀಲಗಿರಿಯವರೆಗೆ ಹಬ್ಬಿರುವ ಪರ್ವತಸಾಲು, ದಟ್ಟವಾದ ಕಾಡು; ಮತ್ತೊಂದು ದಿಕ್ಕಿನಲ್ಲಿ ಬಯಲಿನಲ್ಲಿ ಗದ್ದೆ, ತೋಟ, ಹೊಲಗಳು, ಕೆರೆ-ಕಟ್ಟೆ-ಜಲಾಶಯಗಳು, ಕಾವೇರಿ-ಕಬಿನಿ ನದಿಗಳು ಹೀಗೆ ಯಾತ್ರಾರ್ಥಿಗಳಲ್ಲದವರಿಗೂ ಇಲ್ಲಿನ ನಿಸರ್ಗ ರಮಣೀಯತೆ ಆಕರ್ಷಿಸುತ್ತದೆ. ಬೆಟ್ಟಕ್ಕೆ ಹತ್ತು ಮೈಲಿಗಳ ದೂರದಲ್ಲಿ ದಟ್ಟಕಾಡಿನಲ್ಲಿ ಚಿಕ್ಕ ಹೊಳೆಯೊಂದು ಹರಿಯುತ್ತಿದ್ದು, ಅಲ್ಲಿ ಬೃಹದಾಕಾರದ ಒಂದು ಸಂಪಿಗೆ ಮರವಿದೆ. ಅನೇಕ ಶಿವಲಿಂಗಗಳು, ದೇವರ ಮೂರ್ತಿಗಳಿವೆ. ದೊಡ್ಡ ಸಂಪಗೆಯ ಮೂರು ಕೊಂಬೆಗಳು ತ್ರಿಮೂರ್ತಿ- ಬ್ರಹ್ಮ, ವಿಷ್ಣು, ಶಿವ - ಎಂದು ಜನ ನಂಬಿದ್ದಾರೆ. ದೊಡ್ಡ ಸಂಪಗೆ ತಲುಪಲು ಕಾಲುದಾರಿಯ ಹೊರತು ಬೇರೆ ರಸ್ತೆಯಿಲ್ಲ. ದಟ್ಟ ಕಾಡಿನ ನಡುವೆ ಹಳ್ಳಗಳನ್ನು ದಾಟಿ ಪೊದೆಗಳ ನಡುವೆ ನುಸುಳಿ ಅಪರಿಚಿತರು ಹೋಗಲು ಸಾಧ್ಯವೇ ಇಲ್ಲ. [illegible] ಅದ್ಭುತವಾದ ನಿಸರ್ಗ ರಮ್ಯ ತಾಣವನ್ನು ನೋಡಲು ಸಾಧ್ಯವಾಗುತ್ತದೆ. [illegible]

ಕೆ. ಮರುಳಸಿದ್ದಪ್ಪ

ಬಗೆಯ ಪಕ್ಷಿಗಳೂ, ಹಾವು ಮುಂತಾದ ಕೀಟ ಪ್ರಪಂಚದೊಡನೆ ಸಮೃದ್ಧವಾಗಿ ಜಿಗಣೆಗಳಿವೆ. ಮಳೆಗಾಲದಲ್ಲಿ ಇಲ್ಲಿ ಹೋಗುವುದು ಅತ್ಯಂತ ಪ್ರಯಾಸದ ವಿಚಾರ. ಆದರೆ ಬೇಸಿಗೆಯಲ್ಲಿ ಸ್ಥಳೀಯರ ನೆರವು ಪಡೆದು, ನೀರಿನ ತಾಣಗಳಾದ ಕೆರೆ ಕಟ್ಟೆಗಳ ಸಮೀಪ ಸಂಜೆಯಲ್ಲಿ ಅಡಗಿ ಕುಳಿತರೆ ಎಲ್ಲಾ ಬಗೆಯ ಪ್ರಾಣಿಗಳನ್ನೂ ಕ್ಷೇಮವಾಗಿ ನೋಡಬಹುದು. ಇತ್ತೀಚೆಗೆ ಹೆಚ್ಚಾಗುತ್ತಿರುವ ಕಾಡುಗಳ್ಳರು ಮತ್ತು ಗ್ರಾನೈಟ್ ಖದೀಮರು ಇಲ್ಲಿನ ಪ್ರಾಣಿಗಳಿಗೆ, ಮರ, ಗಿಡಗಳಿಗೆ ಕಂಟಕಪ್ರಾಯರಾಗಿದ್ದಾರೆ. ಇಲ್ಲಿನ ಬುಡಕಟ್ಟು ಜನಾಂಗದವರನ್ನೂ ಆಸೆ, ಆಮಿಷಗಳ ಮೂಲಕ ಹಾಳುಮಾಡಿದ್ದಾರೆ. ಇದಕ್ಕೆ ಪ್ರತಿಯಾಗಿ ಹಲವು ಸಾಮಾಜಿಕ ಸಂಘಟನೆಗಳೂ ಈ ಪ್ರದೇಶದಲ್ಲಿ ಎಚ್ಚರಗೊಂಡಿವೆ.

ಕಳೆದ ಮೂರು ದಶಕಗಳಿಂದಲೂ ಒಂದು ಹೊಸ ಸಾಮಾಜಿಕ ವಾತಾವರಣ ಕ್ರಮೇಣ ಬೆಟ್ಟದ ಪ್ರದೇಶದಲ್ಲಿ ರೂಪು ಹೊಂದಿ ಬೆಳೆಯುತ್ತಿದೆ. ಬಿಳಿಗಿರಿರಂಗನ ಬೆಟ್ಟದ ಸೋಲಿಗರ ಬದುಕಿಗೆ ಹೊಸ ದಿಕ್ಕನ್ನು ತೋರಿಸುವ ಗುರಿ ಹೊಂದಿರುವ ಸಾಮಾಜಿಕ ಕಾರ್ಯಕರ್ತರ ಶ್ರದ್ಧೆ ಮತ್ತು ನಿಷ್ಠೆಯಿಂದಾಗಿ ಇಂತಹ ವಾತಾವರಣ ಜಾಗೃತಗೊಳ್ಳಲು ಸಾಧ್ಯವಾಯಿತು. ಮೊದಲು ವಿದೇಶಿ ಸ್ವಯಂಸೇವಾ ಸಂಸ್ಥೆಯೊಂದರ ಆಶ್ರಯದಲ್ಲಿ ಸ್ಥಳೀಯ ಬುಡಕಟ್ಟು ಜನಾಂಗದವರಿಗಾಗಿ ವೈದ್ಯಕೀಯ ಸೌಲಭ್ಯ ಕಲ್ಪಿಸಲಾಯಿತು. ಇಂತಹ ಒಂದು ವಿದೇಶೀ ಸಂಘಟನೆಗಾಗಿ ಕೆಲಸ ಮಾಡಲು ಬಿಳಿಗಿರಿರಂಗನ ಬೆಟ್ಟಕ್ಕೆ ಹೋದ ಡಾ|| ಸುದರ್ಶನ್, ಮುಂದೆ ತಮ್ಮ ಸಂಗಡಿಗರೊಂದಿಗೆ 'ವಿವೇಕಾನಂದ ಗಿರಿಜನ ಕೇಂದ್ರ'ವನ್ನು ಕಟ್ಟಿ ಬೆಳೆಸಿದರು. ಇಂದು ವಿದೇಶಿ ಸ್ವಯಂಸೇವಾ ಸಂಸ್ಥೆಯಲ್ಲದೆ ರಾಷ್ಟ್ರದ ಬಹುದೊಡ್ಡ ಉದ್ಯಮಿಯ ಹೆಸರಿನ ಸಾಮಾಜಿಕ ಸೇವಾ ಸಂಘವಿದೆ; ಮತ್ತು ಬುಡಕಟ್ಟು ಜನರ ಅಭ್ಯುದಯಕ್ಕಾಗಿ ಸರ್ಕಾರಿ ಕೃಪಾಪೋಷಿತ ಸಹಕಾರಿ ಸಂಘಗಳಿವೆ. ಆದರೆ 'ವಿವೇಕಾನಂದ ಗಿರಿಜನ ಕೇಂದ್ರ', ಇವೆಲ್ಲಾ ಪ್ರಯತ್ನಗಳಿಗಿಂತ ಭಿನ್ನವಾಗಿ ಮಾನವೀಯ ಒಳನೋಟ ಗಳಿಂದ ಕೂಡಿದ ಸಂಸ್ಥೆಯಾಗಿದೆ. ಈ ಸಂಸ್ಥೆ ಗಿರಿಜನರಿಗಾಗಿ ಬೆಟ್ಟದಲ್ಲಿ ಸುಸಜ್ಜಿತ ಆಸ್ಪತ್ರೆ, ಶಾಲೆ, ಕಾಲೇಜು, ವಿದ್ಯಾರ್ಥಿನಿಲಯ ನಡೆಸುತ್ತಿರುವುದಲ್ಲದೆ ಮೂಲ ನಿವಾಸಿಗಳ ಜೀವನ ಕ್ರಮ, ವೈದ್ಯಕೀಯ ವಿಚಾರಗಳು, [illegible] ಗಿಡಮೂಲಿಕೆಗಳು- ಇವನ್ನೆಲ್ಲಾ [illegible] [illegible] [illegible] [illegible] 'ವಿವೇಕಾನಂದ ಗಿರಿಜನ ಕೇಂದ್ರ' [illegible] [illegible] [illegible] [illegible] [illegible]

ಡಾ|| ಸುದರ್ಶನ್ ನೇತೃತ್ವದ ಮತ್ತೊಂದು ಸೇವಾಸಂಸ್ಥೆ ಆಯುರ್ವೇದ ಗಿಡ ಮೂಲಿಕೆಗಳ ಸಂಶೋಧನೆ ಮತ್ತು ಉತ್ಪಾದನಾ ಕಾರ್ಯದಲ್ಲಿ ನಿರತವಾಗಿದೆ. ಸೋಲಿಗ ಯುವಕರಿಗಾಗಿ ಉದ್ಯೋಗ ತರಬೇತಿ ಹಾಗೂ ಮಾರ್ಗದರ್ಶನ ಕೇಂದ್ರ, ಜೇನು ಸಂಗ್ರಹಣೆ-ಮಾರಾಟ, ಬೆತ್ತದ ವಸ್ತುಗಳ ತಯಾರಿಕೆ, ಮುದ್ರಣಾಲಯ, ಕಾಡಿನ ಉತ್ಪನ್ನಗಳ ಸಂಸ್ಕರಣೆ ಮತ್ತು ಮಾರಾಟದ ವ್ಯವಸ್ಥೆಯನ್ನೂ, ಕೇಂದ್ರ ಹಮ್ಮಿಕೊಂಡಿದೆ. ಸುತ್ತಣ ಹಲವು ಪೋಡುಗಳಲ್ಲಿ ವಾಸಿಸುತ್ತಿರುವ ಗಿರಿಜನರಿಗೆ ವಸತಿಗಳನ್ನು ಕಟ್ಟಿಸಿ ಕೊಡುವುದು, ಬೇಸಾಯ ಉಪಕರಣಗಳ ಸಲುವಾಗಿ ನೆರವು - ಹೀಗೆ ಹಲವು ನಿಟ್ಟಿನಿಂದ ಅವರ ಬದುಕಿಗೆ ನೆರವಾಗುತ್ತಿರುವ ಈ ಸಂಸ್ಥೆಯ ನಿಸ್ವಾರ್ಥ ಸೇವೆಯನ್ನು ಗುರುತಿಸಿ ಹಲವು ಮೂಲಗಳಿಂದ ಧನಸಹಾಯ ಬರುತ್ತಿದ್ದು, ಇವೆಲ್ಲವನ್ನೂ ಡಾ|| ಸುದರ್ಶನ್ ದಕ್ಷತೆಯಿಂದ ನಿರ್ವಹಿಸಿಕೊಂಡು ಬಂದಿದ್ದಾರೆ.

ಡಾ|| ಸುದರ್ಶನ್ ಮತ್ತು ಅವರ ಸಂಗಡಿಗರ ಮತ್ತೊಂದು ಸಾಧನೆ, ಸೋಲಿಗರಿಗೆ ತಮ್ಮ ಹಕ್ಕುಗಳ ಬಗೆಗೆ ಅರಿವು ಮೂಡಿಸಿರುವುದು. ಸ್ವಭಾವತಃ ಈ ಬುಡಕಟ್ಟು ಜನ ಕೀಳರಿಮೆಯಿಂದ ಬಳಲಿದವರಲ್ಲ. ನಾಡಿನ ಜನ ಮತ್ತು ಕಾಡಿನ ಜನ ಸಮಾನರೆಂದೇ ಅವರ ತಿಳಿವಳಿಕೆ. ನಾಗರಿಕ ಸವಲತ್ತುಗಳಿಂದ ವಂಚಿತರಾಗಿದ್ದರೂ ಅವರಿಗೆ ಅದರ ಅಗತ್ಯವೂ ಗೊತ್ತಿರಲಿಲ್ಲ. ಈಗೀಗ ಸಾಮಾಜಿಕ ಸಂಘಟನೆಗಳ ಪ್ರಯತ್ನದಿಂದಾಗಿ ಅವರಿಗೆ ಈ ಸವಲತ್ತುಗಳು ದಕ್ಕುತ್ತಿವೆ. ಅವರೂ ಕಾಡಿನ ಉತ್ಪನ್ನಗಳ ಮೇಲೆ ತಮಗಿರುವ ಹಕ್ಕನ್ನು ಪ್ರತಿಪಾದಿಸಬಲ್ಲ ಧೈರ್ಯ ವಹಿಸಿದ್ದಾರೆ.

ಕಾಡಿನಲ್ಲಿ ವಾಸಿಸುತ್ತಿದ್ದ ಗಿರಿಜನರಿಗೆ ಊರಿನ ಸಂಪರ್ಕ ಬಂದ ಮೇಲೆ ಆಗಿರುವ ಒಳಿತಿನಂತೆಯೇ ಕೆಡಕುಗಳೂ ಇವೆ. ಹೊರಗಿನ ನಾಗರಿಕ ಪ್ರಪಂಚದಿಂದ ಬರುವ ಕಾಡುಗಳ್ಳರು, ಗ್ರಾನೈಟ್ ಖದೀಮರು - ಇವರಿಗೆಲ್ಲಾ ಕೆಲವು ಗಿರಿಜನರೇ ಮಧ್ಯವರ್ತಿಗಳು. ಏಕೆಂದರೆ ಕಾಡಿನ ರಹಸ್ಯ ಗಿರಿಜನರಿಗೆ ಗೊತ್ತಿರುವಂತೆ ಬೇರೆಯವರಿಗೆ ತಿಳಿಯದು. ಅಲ್ಲದೆ ಮಾಡಿದ ಕೊಳ್ಳೆಯನ್ನು ದಟ್ಟ ಅರಣ್ಯದ ದುರ್ಗಮ ಸ್ಥಳಗಳಿಂದ ರಹಸ್ಯವಾಗಿ ಸಾಗಿಸಲೂ ಇವರ ನೆರವೇ ಬೇಕು. ಇದೆಲ್ಲವನ್ನೂ ಮಾಡಿಕೊಳ್ಳುತ್ತಿರುವ ಕೆಲವು ಗಿರಿಜನರಿಗೆ ನಾಗರಿಕರು ಪ್ರತಿಯಾಗಿ ತಮ್ಮ ಕೆಲವು ಹವ್ಯಾಸಗಳನ್ನು ಕಲಿಸಿದ್ದಾರೆ. ಕುಡಿತ, ಮಾದಕ ವಸ್ತುಗಳ ಸೇವನೆಯ ವ್ಯಸನಗಳೂ ಹೆಚ್ಚುತ್ತಿವೆ. ಇದನ್ನು ತಡೆಯಲು ಹೊರಗಿನ ಸಾಮಾಜಿಕ ಕಾರ್ಯಕರ್ತರಿಗೂ ಗಿರಿಜನರಿಗೂ ಘರ್ಷಣೆಗಳಾಗಿರುವ ಪ್ರಕರಣಗಳೂ ಉಂಟು.

ಬಿಳಿಗಿರಿರಂಗನ ಬೆಟ್ಟದ ಪ್ರಶಾಂತ ವಾತಾವರಣ ಮತ್ತು ಶುದ್ಧ ಹವೆಯಿಂದ ಆಕರ್ಷಿತರಾಗಿ ಕೆಲವು ಆಧ್ಯಾತ್ಮ ಜೀವಿಗಳೂ ಬೆಟ್ಟವನ್ನು ತಮ್ಮ ವಾಸಕ್ಕೆ ಆರಿಸಿಕೊಂಡಿದ್ದಾರೆ. ನಾಲ್ಕು ದಶಕಗಳ ಹಿಂದೆ ಸ್ವಾಮಿ ನಿರ್ಮಲಾನಂದರು ಇಲ್ಲಿ ಬಂದು ಆಶ್ರಮ ಸ್ಥಾಪಿಸಿದರು. ಹತ್ತಾರು ವರ್ಷಗಳ ಕಾಲ ಮೌನ ವ್ರತವನ್ನು ಪಾಲಿಸಿಕೊಂಡು ಬಂದಿದ್ದ ಅವರು ಇತ್ತೀಚೆಗೆ ಪ್ರಾಯೋಪವೇಶದಿಂದ ಸಮಾಧಿ ಹೊಂದಿದರು. ಇಪ್ಪತ್ತೈದು ವರ್ಷಗಳ ಹಿಂದೆ ನಾನು ಮೊದಲು ನೋಡಿದಾಗ ಲಾಂಟಾನ ಪೊದೆಗಳ ನಡುವೆ ಹುದುಗಿದ್ದ ಆಶ್ರಮ ಈಗ ಸುಂದರವಾಗಿ ಅಚ್ಚುಕಟ್ಟಾಗಿ ರೂಪುಹೊಂದಿದೆ. ಇತ್ತೀಚೆಗೆ ಮೈಸೂರಿನ ರಾಮಕೃಷ್ಣ ಮಠದವರು ಒಂದು ಕುಟೀರವನ್ನು ಕಟ್ಟಿಸಿ, ಸನ್ಯಾಸಿಗಳು ವಾಸವಾಗಿದ್ದಾರೆ. 'ವಿವೇಕಾನಂದ ಗಿರಿಜನ ಕೇಂದ್ರ'ದ ಸಂಘಟಕರಲ್ಲಿ ಹೆಚ್ಚಿನವರು ರಾಮಕೃಷ್ಣಾಶ್ರಮದಲ್ಲಿ ಬೆಳೆದು, ಈಗಲೂ ಈ ಸಂಸ್ಥೆಯೊಂದಿಗೆ ನಿಕಟ ಸಂಪರ್ಕವಿರಿಸಿ ಕೊಂಡಿದ್ದಾರೆ. ಹೀಗೆ ಬೆಟ್ಟದಲ್ಲಿ ಆಧ್ಯಾತ್ಮದ ವಾತಾವರಣ ವೊಂದು ನಿರ್ಮಾಣಗೊಳ್ಳುತ್ತಿರುವ ಸುಳಿವು ಹಿಡಿದ ಕೆಲವು ಮಧ್ಯಮ ವರ್ಗದ ಆಧ್ಯಾತ್ಮ ಪ್ರಿಯರು ಇಲ್ಲಿ ಚಿಕ್ಕ ಚಿಕ್ಕ ಕುಟೀರಗಳನ್ನು ಕಟ್ಟಿಕೊಂಡು ವಾಸಿಸತೊಡಗಿದ್ದಾರೆ. ಮೈಸೂರು ಮುಂತಾದ ಪಟ್ಟಣಗಳ ಶ್ರೀಮಂತರು, ಮಠಾಧಿಪತಿಗಳು ಇಲ್ಲಿ ಭೂಮಿಯನ್ನು ಕೊಂಡು ಬೇಲಿ ಹಾಕಿಸಿಕೊಂಡಿದ್ದಾರೆ. ಕೆಲವರು ಈಗಾಗಲೇ ಕಾಫಿ, ಏಲಕ್ಕಿ, ಮೆಣಸಿನ ತೋಟಗಾರಿಕೆಗೆ ತೊಡಗಿದ್ದಾರೆ. ಹೀಗೆ ಇಪ್ಪತ್ತೈದು ವರ್ಷಗಳ ಹಿಂದೆ ಕೇವಲ ಯಾತ್ರಾಸ್ಥಳವಾಗಿದ್ದ ಬಿಳಿಗಿರಿ ರಂಗನ ಬೆಟ್ಟದ ಪರಿಸರ, ಇಂದು ಆರ್ಥಿಕವಾಗಿ ಬದಲಾಗುತ್ತಿದೆ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಸ್ವರೂಪ ಪಡೆಯುತ್ತಿದೆ. ಆದರೆ ಇನ್ನೂ ಅದೊಂದು ಪ್ರವಾಸಿ ತಾಣವಾಗಿಲ್ಲ. ಬಹುಶಃ ವೀರಪ್ಪನ್ ರೀತಿಯ ಕಾಡುಗಳ್ಳರು ಮತ್ತು ನಿರಾತಂಕವಾಗಿ ಸಮೃದ್ಧವಾಗಿ ಜೀವಿಸುತ್ತಿರುವ ಕಾಡು ಪ್ರಾಣಿಗಳ ಭಯದಿಂದ ಪ್ರವಾಸಿಗರು ಇನ್ನೂ ಇತ್ತ ಕಣ್ಣು ಹಾಕಿಲ್ಲ. ಇದು ಇಲ್ಲಿ ವಾಸಿಸುತ್ತಿರುವವರ ಮತ್ತು ಬೆಟ್ಟಕ್ಕೆ ಆಗಾಗ ಹೋಗಿಬರುತ್ತಿರುವ ನಮ್ಮಂತಹವರ ಅದೃಷ್ಟವೆಂದೇ ತಿಳಿಯಬೇಕಾಗಿದೆ. ಗೋವಾ, ಹಂಪೆ, ಉದಕಮಂಡಲದಂತಹ ಸುಂದರ ಪ್ರದೇಶಗಳಿಗೆ ಒದಗಿರುವ ದುರ್ಗತಿಯನ್ನು ನೆನೆದರೆ, ಇಲ್ಲಿ ಇನ್ನೂ ಹೆಚ್ಚು ಹೆಚ್ಚಾಗಿ ಕಾಡುಪ್ರಾಣಿಗಳು ವೃದ್ಧಿಸಲಿ, ಎಂದೇ ನಾವು ಹಾರೈಸಬೇಕಾಗಿದೆ. ಲೋಕೋಪಯೋಗಿ ಇಲಾಖೆಯವರ ಒಂದು ಸುಸಜ್ಜಿತ ಅತಿಥಿ ಗೃಹವಿದ್ದರೂ ಅಲ್ಲಿ ರಾಜಕೀಯ ನಾಯಕರು ಮತ್ತು ದೊಡ್ಡ ಅಧಿಕಾರಿಗಳನ್ನು ಬಿಟ್ಟರೆ ಇತರರಿಗೆ ಅವಕಾಶವಿಲ್ಲ. ಅರಣ್ಯ ಇಲಾಖೆಯ ಅತಿಥಿ ಗೃಹವೂ ಇದೇ ಮಾದರಿಯದು. ಪ್ರವಾಸಿಗರಿಗಾಗಿ ಸರ್ಕಾರ ಒಂದು ದೊಡ್ಡ ಹೋಟೆಲ್ ಕಟ್ಟಿಸಲು ಹೋಗಿ, ಅದು ಅರ್ಧಕ್ಕೆ ನಿಂತಿದೆ. ಯಾವ ವಿವಾದವೋ, ಅಂತೂ ಹತ್ತು ವರ್ಷಗಳಿಂದ ಅರ್ಧ ಕಟ್ಟಿನಿಂತ ಕಟ್ಟಡದ ಸುತ್ತ ಲಾಂಟಾನ ಬೆಳೆದಿದೆ.

ಡಾ|| ಕೆ. ಮುರುಳಸಿದ್ದಪ್ಪ, ನಂ. 137, 12ನೇ ತಿರುವು
ಜೆ.ಪಿ.ನಗರ, 2ನೇ ಹಂತ, ಬೆಂಗಳೂರು- 560 078



ಮಾಸ್ತಿ ಮೂವತ್ತು ಕತೆಗಳು

ಆಯ್ಕೆ: ಯಶವಂತ ಚಿತ್ತಾಲ

ಪುಟಗಳು : 322 ಬೆಲೆ : ರೂ. 150

ಪ್ರಿಸಂ ಬುಕ್ಸ್ ಪ್ರೈ ಲಿ. : ನಂ. 53/2, ಬಸವನಗುಡಿ ರಸ್ತೆ, ಬೆಂಗಳೂರು - 560 019

ಮಾಸ್ತಿ ಕನ್ನಡದ ಆಸ್ತಿ ಎಂಬ ಮಾತಿಗೆ ಅನುಗುಣವಾಗಿ, ಕನ್ನಡ ಸಾಹಿತ್ಯಕ್ಕೆ ಮಾಸ್ತಿಯವರು ನೀಡಿರುವ ಕೊಡುಗೆ ಅಪಾರ.

ಮಾಸ್ತಿಯವರ ಹಲವು ಕತೆಗಳ ಪೈಕಿ ಚಿತ್ತಾಲರು ಈ ಮೂವತ್ತನ್ನು ಆಯ್ಕೆ ಮಾಡಿದ್ದೇಕೆಂದು ಪ್ರಸ್ತಾವನೆಯಲ್ಲಿ ತಿಳಿಸುತ್ತಾರೆ. ಇಲ್ಲಿ ಸಮೀಕ್ಷೆಗೊಳಪಟ್ಟಿರುವ ಮಾಸ್ತಿಯವರ ಕತೆಗಳು ಮನುಷ್ಯನ ಬಗೆಗಿನ ನಮ್ಮ ತಿಳಿವನ್ನು ಹೆಚ್ಚಿಸುಂತಹವುಗಳು ಎಂದು ಅಭಿಪ್ರಾಯಪಡುತ್ತಾರೆ.

ವಜ್ರವ್ಯಾಮೋಹ

ಡಾ॥ ವಿರುಪಾಕ್ಷ ಕೆ. ಬಣಕಾರ

ಪುಟ : 160 ಬೆಲೆ : ರೂ. 55

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ ಲಿ., ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು- 1



ಇದೊಂದು ಸಾಹಸಮಯ ಕಾದಂಬರಿ. ಭುಜಗಡ ಸಂಸ್ಥಾನದ ರಾಜರುಗಳ ಪರಂಪರೆಯ ಆಸ್ತಿ 'ಅಮರಜ್ಯೋತಿ' ಎಂಬ ವಜ್ರ. ಇದು ಸುಪ್ರಸಿದ್ಧ ಕೊಹಿನೂರ್ ವಜ್ರಕ್ಕೆ ಸಮನಾದದು. ಸಂಸ್ಥಾನದ ವಾರಸುದಾರರ ಕೈ ತಪ್ಪಿದ ಇದನ್ನು ಅನ್ವೇಷಿಸುತ್ತಾ, ಅದನ್ನು ವಶಪಡಿಸಿಕೊಳ್ಳುವಲ್ಲಿ ಯಾರು ಸಫಲರಾದರು ಎಂಬುದನ್ನು ರೋಚಕವಾಗಿ ನಿರೂಪಿಸಲಾಗಿದೆ. ಈ ಅಮೂಲ್ಯ ವಜ್ರವನ್ನು ಅರಸುತ್ತ ನಡೆಸುವ ಸಮುದ್ರ ಪರ್ಯಟನ ಸಂದರ್ಭದ ಘಟನೆಗಳು ರೋಮಾಂಚಕಾರಿಯಾಗಿವೆ.

ಕಡಲ ತೀರದ ಒಂದು ಗ್ರಾಮದ ಕಥೆ

ತಮಿಳು : ತೋಪ್ಪಿಲ್ ಮುಹಮದ್ ಮೀರಾನ್

ಅನುವಾದ: ಶೇಷನಾರಾಯಣ

ಪುಟಗಳು : 224 ಬೆಲೆ : ರೂ. 80

ನವಕರ್ನಾಟಕ ಪಬ್ಲಿಕೇಷನ್ಸ್ (ಪ್ರೈ)ಲಿ., ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು - 560 001



ಮೊದಲನೇ ಮಹಾಯುದ್ಧ ಮುಗಿದ ಸಮಯ. ಕಡಲ ತೀರದ ಆ ಗ್ರಾಮದ ಬದುಕು ಭಾರತದ ಬೇರೆ ಯಾವುದೇ ಗ್ರಾಮಕ್ಕಿಂತ ಭಿನ್ನವಾಗಿರಲಿಲ್ಲ. ಶೋಷಣೆ, ಮೂಢನಂಬಿಕೆ, ಅಸಹಾಯಕತೆ ಎಂದಿಗೂ ತಮ್ಮೊಡನೆ ಇರುವಂಥವೇ ಎಂದೇ ಜನರು ಬಾಳುತ್ತಿದ್ದರು. ಉಸಿರು ಕಟ್ಟಿಸುವ ಅಂಥ ವಾತಾವರಣದಿಂದ ಬಿಡಿಸಿಕೊಳ್ಳಲು ಕೆಲವರಾದರೂ ಪ್ರಯತ್ನಿಸುತ್ತಿದ್ದರು....



ವಾಸ್ತು ಎಷ್ಟು ವಾಸ್ತವ ?

ಲೇ: ಪ್ರೊ॥ ಬಿ. ವಿ. ವೀರಭದ್ರಪ್ಪ

ಪುಟಗಳು : 88 ಬೆಲೆ : ರೂ. 20

ನವಕರ್ನಾಟಕ ಪಬ್ಲಿಕೇಷನ್ಸ್ (ಪ್ರೈ) ಲಿ., ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು- 1

ವಾಸ್ತು ಎಂಬ ಗುಮ್ಮನ ಮೂಲಕ ಮನೆಯವರ ನೆಮ್ಮದಿಯನ್ನು ಒಂದೇ ಕ್ಷಣದಲ್ಲಿ ಕೆಡಿಸಿಹಾಕುವ ವಾಸ್ತು ಪಂಡಿತರ ಸಂಖ್ಯೆ ಹೆಚ್ಚುತ್ತಿರುವ ಈ ದಿನಗಳಲ್ಲಿ, ವಾಸ್ತುವಿಗೆ ಆರೋಪಿಸಲಾಗುತ್ತಿರುವ ಹಲವು ಅನಿಷ್ಟ ಅಂಶಗಳ ಬಗ್ಗೆ ಎಲ್ಲರೂ ತಿಳಿದುಕೊಳ್ಳಬೇಕಾದ ಅಗತ್ಯವನ್ನು ಮನಗಂಡು ಈ ಕೃತಿ ರಚಿಸಲಾಗಿದೆ. ಪುಕ್ಕಟೆ ಸಲಹೆಗಳಿಗೆ ಕಿವಿಗೊಡದೆ, ನಿಮ್ಮ ವಿವೇಚನೆಗೆ ಆದ್ಯತೆ ನೀಡಿ ಎಂಬುದು ಇದರ ಸಂದೇಶ.



ನೆನಪಿನ ಗಣಿಯಿಂದ

ಲೇ: ಎಂ. ಗೋಪಾಲಕೃಷ್ಣ ಅಡಿಗ

ಪುಟಗಳು : 190 ಬೆಲೆ : ರೂ : 110

ಪ್ರಿಸಂ ಬುಕ್ಸ್ ಪ್ರೈ ಲಿ., ನಂ. 53/2, ಬಸವನಗುಡಿ ರಸ್ತೆ, ಬೆಂಗಳೂರು - 560 019

ಕವಿ ಗೋಪಾಲಕೃಷ್ಣ ಅಡಿಗರ ಅನುಭವ ಕಥನ. ಅವರ ನೆನಪಿನ ಗಣಿಯಿಂದ ಹೆಕ್ಕಿದ ಲೇಖನಗಳು. ಅವರ ಬಾಲ್ಯದಿಂದ ಕೊನೆಯವರೆಗೆ ಓದುಗರನ್ನು ತಮ್ಮ ಅನುಭವದ ಗುಂಗಿನೊಂದಿಗೆ ತಿರುಗಾಡಿಸುತ್ತಾರೆ. ಅವರ ಕವಿತೆಗಳಂತೆಯೇ ಸಾಹಿತ್ಯಾಸಕ್ತರಿಗೆ ಇಲ್ಲಿರುವ ಗದ್ಯ ಲೇಖನಗಳೂ ಖುಷಿ ಕೊಡುತ್ತವೆ.

ಲೇಖಕರು ಮತ್ತು ಪ್ರಕಾಶಕರ ಗಮನಕ್ಕೆ

ಈ ವಿಭಾಗದಲ್ಲಿ ಒಳ್ಳೆಯ ಪುಸ್ತಕಗಳನ್ನು ಓದುಗರಿಗೆ ಪರಿಚಯಿಸಲಾಗುತ್ತದೆ. ಇದು ಪುಸ್ತಕದ ವಿಮರ್ಶೆಯಲ್ಲ. ಪುಸ್ತಕ ಕಳಿಸಿಕೊಡಿ. ಆಯ್ಕೆ ನಮ್ಮದು.

ಧರ್ಮ ಮತ್ತು ವೈಚಾರಿಕತೆ

ಲೇ: ಪ್ರೊ॥ ಬಿ. ವಿ. ವೀರಭದ್ರಪ್ಪ

ಪುಟ : 88 ಬೆಲೆ : ರೂ. 20

ನವಕರ್ನಾಟಕ ಪಬ್ಲಿಕೇಷನ್ಸ್ (ಪ್ರೈ) ಲಿ., ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು- 560 001



ಧರ್ಮ ಮತ್ತು ವೈಚಾರಿಕತೆ ಪರಸ್ಪರ ಸಂಬಂಧವಿಲ್ಲದ, ಬದಲು ಸದಾ ಸಂಘರ್ಷಿಸುವ ಎರಡು ಪ್ರತ್ಯೇಕ ವಿಚಾರಗಳಾದರೂ, ಅವನ್ನು ಅನ್ಯೋನ್ಯವಾಗಿ ಸಮನ್ವಯಗೊಳಿಸಿದಲ್ಲಿ ಅದು ಮಾನವ ವಿಕಾಸ, ಸಂತೃಪ್ತಿ ಮತ್ತು ಕಲ್ಯಾಣಗಳ ಸಾಧನೆಗೆ ಸಹಾಯಕವಾಗಬಹುದು. ಧರ್ಮವನ್ನು ವೈಚಾರಿಕ [illegible] ಬಲಪಡಿಸಲು ಸಾಧ್ಯವಿದೆ [illegible] ಧಾರ್ಮಿಕ ವ್ಯಕ್ತಿಗಳು, ವೈಚಾರಿಕ[illegible] ಹಿನ್ನೆಲೆಯಲ್ಲಿ [illegible] ಕೃತಿ.

[illegible]

ಆಟ-ಮಾರಾಟ

ಐವತ್ತರ ದಶಕದಲ್ಲಿ ಭಾರತದ ಕ್ರಿಕೆಟ್ ತಂಡ ಯಾವಾಗಲೂ ಅಪಜಯವನ್ನೇ ಅನುಭವಿಸುವುದನ್ನು [illegible] ಆಗುತ್ತಿತ್ತು. ಕ್ರಿಕೆಟನ್ನು [illegible]. ಅವರ ಆಟದಲ್ಲಿ ಅವರನ್ನು [illegible] ಎಂಟು ಧ್ವಜ[illegible]. ಅರವತ್ತರ ದಶಕದಲ್ಲಿ ನನ್ನ ಗೆಳೆಯ ಇಂಗ್ಲೆಂಡಿಗೆ ಓದಲು ಹೋದವರು, ಮೊದಲಿಗೆ ಗಮನಿಸಿದ್ದು ಆ ದೇಶದಲ್ಲಿ ಜನಪ್ರಿಯ ಆಟ ಫುಟ್‌ಬಾಲ್, ಕ್ರಿಕೆಟ್ ಅಲ್ಲ, ಎಂದು. ಇದನ್ನು ತಿಳಿದಾಗ ಸ್ವಲ್ಪ ನಿರಾಸೆ ಆಯಿತು. ಕಾರಣ, ಆಗಷ್ಟೇ ನಮ್ಮ ಕ್ರಿಕೆಟ್ ನೈಪುಣ್ಯ ವೃದ್ಧಿಯಾಗುತ್ತಿದ್ದು ಇಂಗ್ಲೆಂಡನ್ನು ಸೋಲಿಸುವ ಸಾಧ್ಯತೆ ಕಂಡುಬಂದಿತ್ತು. ಏನೋ ಮೋಸ ಹೋದಂತೆ ಅನಿಸಿತು.

ಕ್ರಿಕೆಟ್ ಆಟದಲ್ಲಿ ಅಂದಿನ ಕಣ್ಮಣಿ ಗಾರ್‌ಫೀಲ್ಡ್ ಸೋಬರ್. ಆತ ಬ್ಯಾಟ್ ಮಾಡುವ ಮೊದಲೇ, ಈ ದಿಕ್ಕಿನಲ್ಲೇ, ಹೀಗೇ ಮುಂದಿನ ಚೆಂಡನ್ನು ಬಾರಿಸುತ್ತೇನೆ ಎಂದು ಹೇಳಬಲ್ಲವನಾಗಿದ್ದ. ಆತನ ಭಾವ ಭಂಗಿ, ಆಟವಾಡುವ ವೈಖರಿಯಲ್ಲಿ ಒಂದು ಮೋಹಕತೆ ಇತ್ತು. ಚೆಂಡನ್ನು ಅವನು ನುಡಿಸುತ್ತಿದ್ದ, ಮಾತನಾಡಿಸುತ್ತಿದ್ದ, ಮುದ್ದು ಮಾಡುತ್ತಿದ್ದ. ಇಂದಿನ ಅತ್ಯುತ್ತಮ ಆಟಗಾರರಲ್ಲೂ ವೇಗಕ್ಕೆ, ದೈಹಿಕ ದೈತ್ಯ ಶಕ್ತಿಗೆ, ಉಪಯೋಗಿಸುವ ಸಲಕರಣೆಯ ತಾಂತ್ರಿಕ ಜಟಿಲತೆಗೆ ಪ್ರಾಧಾನ್ಯತೆಯಿರುವಂತೆ, ಕಲಾಕೌಶಲ್ಯಕ್ಕಿಲ್ಲ ಎನಿಸುತ್ತಿದೆ.


ಪ್ರಾಸಂಗಿಕವಾಗಿ, ಜ್ಞಾಪಕ ಬರುವ ಮತ್ತೊಂದು ಸಂಗತಿ: ಹಿಂದೊಮ್ಮೆ ಅಂತರರಾಷ್ಟ್ರೀಯ ಫುಟ್‌ಬಾಲ್ ಆಟದಲ್ಲಿ ಭಾಗವಹಿಸುವ ಅರ್ಹತೆ ಪಡೆದರೂ, ನಾವು ಬರಿಗಾಲಿನಲ್ಲಿ ಆಡುವವರೆಂದು ಅವಕಾಶ ದೊರೆಯಲಿಲ್ಲ!

ಹಾಕಿ ಆಟ ಮೂಲತಃ ಭಾರತದ್ದು. ಯಾವಾಗಲೂ ನಮ್ಮ ತಂಡವೇ ಜಯಿಸುತ್ತಿದ್ದು ಹೆಮ್ಮೆ ಎನಿಸುತ್ತಿತ್ತು. ಆಟ ಅಂತರರಾಷ್ಟ್ರೀಯವಾಗಿ ಬೆಳೆದಂತೆಲ್ಲಾ ನಮ್ಮ ತಂಡ ಹಿಂದೆ ಬೀಳುತ್ತಾ ಬಂದದ್ದನ್ನೂ ಗಮನಿಸಿದ್ದೇವೆ. ನಾವು ಆಡುತ್ತಿದ್ದ ಆಟದ ರೀತಿ, ಸಲಕರಣೆಗಳು, ಮೈದಾನ ಎಲ್ಲಾ [illegible]. [illegible] ಕಲಾತ್ಮಕ ರೀತಿ [illegible]. [illegible] ಆಟದಲ್ಲಿ ಕಲೆಗಿಂತ [illegible], [illegible] ವೇಗ, ದೈಹಿಕ ದೈತ್ಯ ಸಾಮರ್ಥ್ಯ ನಿರ್ಣಾಯಕ [illegible] ಎಂದು [illegible] ಕಾರಣ ನೀಡುತ್ತಾರೆ. ಹಾಗಿದ್ದರೆ, ಇನ್ನೂ [illegible]ವರೆಗೆ ನಮ್ಮವರೇ [illegible] ಪಾಕಿಸ್ತಾನದ ತಂಡದ ಸಾಧನೆಗೆ ಕಾರಣವೇನು? [illegible] ಪ್ರತಿಯೊಂದು ಕ್ಷೇತ್ರದಲ್ಲೂ ಅವರು ಜಯಿಸಿ, ಭಾರತಕ್ಕಿಂತ ಉತ್ತಮಿಕೆಯನ್ನು ಸಾರುವುದು ಅವರ ಹೊಸ ರಾಷ್ಟ್ರದ ರಾಷ್ಟ್ರೀಯ ಅಗತ್ಯವಿರಬಹುದೇನೋ?

ಕ್ರೀಡೆ ಮನೋಲ್ಲಾಸಕ್ಕೆ. ಮಾನವನ ಮಾನಸಿಕ, ಬೌದ್ಧಿಕ, ದೈಹಿಕ ಸಾಮರ್ಥ್ಯಗಳ ಪ್ರದರ್ಶನವಾಗಿ ದರ್ಶಕರಿಗೆ [illegible] ನೀಡುವುದಕ್ಕೆ. ಆದರೆ ಇಂದು ಕೇವಲ ಸ್ಪರ್ಧೆ, [illegible]-[illegible] ಪ್ರಧಾನವಾಗಿರುವಂತಿದೆ. [illegible]

ನಮ್ಮ ಆರ್ಥಿಕ ವ್ಯವಸ್ಥೆಯು ಬಂಡವಾಳ, ವ್ಯಾಪಾರ, ಸ್ಪರ್ಧೆ, ಲಾಭಗಳ ಸ್ವರೂಪ ಪಡೆದಂತೆಲ್ಲಾ, ಕಲೆ, ಸಾಹಿತ್ಯ, ಕ್ರೀಡೆಗಳಲ್ಲೂ ಇದು ಕಾಣಿಸಿಕೊಳ್ಳುತ್ತಾ ಹೋಗುತ್ತದೆ. ಲಾಭ ಮಾತ್ರ ಸಾಧನೆಯ ಅಳತೆಗೋಲಾದಾಗ ಪಾಶವೀ ಮನೋವೃತ್ತಿಯು ಮಾನವೀಯ ಅಂಶಗಳನ್ನು ಹಿಂದಕ್ಕೆ ಒತ್ತರಿಸುತ್ತದೆ. ಎರಡು ತಂಡಗಳ ನಡುವಿನ ಯಾವ ಸಂಪರ್ಕವೂ, ಮೇಲುಗೈಗಾಗಿ ನಡೆಯುವ ಕೋಳಿ ಕಾಳಗವಾಗಿ ಪರಿವರ್ತನೆಯಾಗುವುದೇ ವಿನಾ ಅಂಥ

ಏಕಲವ್ಯ



ಮುಖವಿಲ್ಲದ ಸರಕು ಮಾರಾಟದ ಆಟಗಾರ

ಸಂದರ್ಭಗಳು ಮನುಷ್ಯ-ಮನುಷ್ಯರ ನಡುವಿನ ಸ್ನೇಹಬಾಂಧವ್ಯ ಮತ್ತಷ್ಟು ಬೆಳೆಯಲು ಒದಗಿಬಂದ [illegible] ಸಂದರ್ಭಗಳಾಗುವುದಿಲ್ಲ.

ಸಂಗೀತದಲ್ಲಿ ಈ ಬದಲಾವಣೆಯನ್ನು ಇದೇ ಕಾಲದಲ್ಲಿ ಗಮನಿಸಬಹುದು. ಮೈಸೂರು ರಾಜರ ಅರಮನೆ ಸಂಗೀತಗಾರರಿಗೆ ಆಶ್ರಯ ನೀಡುತ್ತಿತ್ತು. ಅಲ್ಲಿ ನಡೆಯುವ ಕಛೇರಿಗಳಿಗೆ ಸಮಾಜದ ಪ್ರತಿಷ್ಠಿತರಿಗೆ ಮಾತ್ರ ಆಹ್ವಾನ. ರಾಜರ ದರ್ಬಾರು ಮಾಯವಾದಂತೆ ಮೈಸೂರಿನ ಬೀದಿಬೀದಿಯ ಮೂಲೆ ರಾಮಮಂದಿರಗಳಲ್ಲಿ ಮಹಾ ಮಹಾ ವಿದ್ವಾಂಸರು ಸಹಸ್ರಾರು ಜನರ ಮುಂದೆ ಗಂಟೆಗಟ್ಟಲೆ ಬಿಟ್ಟಿ ಕಛೇರಿ ಮಾಡಿ, ಅವರ ಕರತಾಡನದಿಂದ ತೃಪ್ತರಾಗುತ್ತಿದ್ದರು. ಈಗ ಮಹಾ ಮಹಾ ವಿದ್ವಾಂಸರು ಪಂಚತಾರಾ ಹೋಟೆಲುಗಳಲ್ಲಿ ಲಕ್ಷಾಂತರ ರೂಪಾಯಿ ಪಡೆದು, ಸಂಗೀತ ತಿಳಿಯದ ಶ್ರೀಮಂತರಿಗಾಗಿ ಹಾಡುತ್ತಾರೆ. ಸಾಧಾರಣ ಜನಕ್ಕೆ ಕ್ಯಾಸೆಟ್ಟೇ ಗತಿ! ಅಥವಾ ಅದೂ ಇಲ್ಲ. ಸುಬ್ಬಲಕ್ಷ್ಮಿಯವರು ಹಾಡುವ ಕಡೆಗೆ ಯಶವಂತಪುರದ ಕೊಳಚೆ ಪ್ರದೇಶದವನು ಹೋಗಲಾರ, ಅವನಿರುವೆಡೆಗೆ ಬಂದು ಆಕೆ ಹಾಡಲಾರಳು!

ಆಟವಾಗಲಿ, ಸಾಹಿತ್ಯವಾಗಲಿ, ಕಲೆಯಾಗಲಿ, ಉದ್ಯೋಗಪತಿಗಳ ಕೈಗೊಂಬೆಯಾದಾಗ, ಅವರ ಸರಕುಗಳನ್ನು ಮಾರುವ ಮಧ್ಯವರ್ತಿಯಾದಾಗ, ಅದರ ದುರಂತವೂ ಆರಂಭವಾಗುತ್ತದೆ. ಅಂತರರಾಷ್ಟ್ರೀಯವಾಗಿ ಖ್ಯಾತಿ ಗಳಿಸಿ, ನಮ್ಮ ಜನರಿಂದ ಹೊಗಳಿಸಿಕೊಂಡಿರುವ ನಮ್ಮ ಕೆಲವು ಹಿರಿಯ ಆಟಗಾರರು, ತಮ್ಮ ಹಣವನ್ನೆಲ್ಲಾ ವಿದೇಶಗಳಲ್ಲಿಡುವ ಪರಿಪಾಠ ಈ ದುರಂತದ ಒಂದು ಮುಖವಷ್ಟೇ. ಮತ್ತೊಂದು ಮುಖ ಅಡಿಯಿಂದ ಮುಡಿಯವರೆಗೆ ಬಹುರಾಷ್ಟ್ರೀಯ ಕಂಪೆನಿಗಳ ಹೆಸರು-ಸರಕುಗಳನ್ನು ಅಂಟಿಸಿಕೊಂಡ ಆಟಗಾರನ ಚಿತ್ರ. ಅದಕ್ಕಿಂತಲೂ ಹೊಲಸಾದ ವ್ಯಕ್ತಿಚಿತ್ರವನ್ನು ಕಲ್ಪಿಸಿಕೊಳ್ಳಲಾಗುವುದಿಲ್ಲ.

ಒಲಿಂಪಿಕ್ಸ್ ಸ್ಪರ್ಧೆಯನ್ನು ಪುನರಾರಂಭಿಸಿದಾಗ, ಅದರ ಮಹೋನ್ನತ ಉದ್ದೇಶ ದೇಶ ವಿದೇಶಗಳ ಜನರ ನಡುವೆ ಸೌಹಾರ್ದದ ಸೇತುವೆ ಕಟ್ಟುವುದು ಎಂದಾಗಿತ್ತು. ಇದರಿಂದ ಯುದ್ಧ ಭೀತಿ ಕಮ್ಮಿಯಾದೀತು ಎಂಬ ಆಶಯ. ಸ್ಪರ್ಧೆಗೆ ಒಂದು ಅರ್ಥವಿದೆ. ನಮ್ಮ ಓಟ ಮತ್ತಷ್ಟು ಚುರುಕಾಗಬೇಕಾದರೆ, ನಮ್ಮಷ್ಟೇ ಸಮರ್ಥರೊಡನೆ ಸ್ಪರ್ಧಿಸಬೇಕು. ದೈಹಿಕ ಸಾಮರ್ಥ್ಯದ ಮಿತಿಯನ್ನು ಗುರುತಿಸುವ ಹೊಸ ಸಾಧನೆಗಳು ಮಾನವರನ್ನೆಲ್ಲಾ ಹರ್ಷಗೊಳಿಸುತ್ತದೆ.

ಅಂದರೆ ಮಾನವನ ಸಾಮರ್ಥ್ಯದ ಇತಿಮಿತಿಯನ್ನು ಗುರುತಿಸುವ ಆಟಗಳದ್ದೇ ಒಂದು ವೈಖರಿ. ಅವುಗಳಲ್ಲಿನ ಸಾಧನೆಯು ಒಂದು ರೀತಿಯಲ್ಲಿ ಇಡೀ ಮಾನವ ಕುಲದ ಸಾಧನೆ ಎನಿಸಿ, ಎಲ್ಲರಿಗೂ ಸಂತಸ ನೀಡಬಲ್ಲುದು. ಮಿಕ್ಕ ಆಟಗಳಲ್ಲಿ ಆಟಕ್ಕಿಂತ ಗೆಲ್ಲುವುದೇ ಮುಖ್ಯವಾಗಿ Killer Instinct (ಕೊಲ್ಲುವ ಸ್ವಭಾವ) ಮುಂತಾದ ಪಾಶವೀ ಪ್ರವೃತ್ತಿಗಳಿಗೆ ಮೆರುಗುಕೊಡುತ್ತಾರೆಯೇನೋ. ಈ ಎರಡನೆಯದು ಆಧುನಿಕ ಅರ್ಥವ್ಯವಸ್ಥೆಯ ಅಕ್ರಮ ಸಂತಾನ. ಅಪರೂಪವಾಗಿ ಕೆಲವೊಮ್ಮೆ ಸೋತ ತಂಡದವನಿಗೇ ''ಪಂದ್ಯಪುರುಷ'' ಪ್ರಶಸ್ತಿ ದೊರೆತಾಗ ನನಗೆ ಸಂತೋಷವಾಗುತ್ತದೆ. ಕಾರಣ, ಆ ಪಂದ್ಯವು ಫಲಿತಾಂಶವನ್ನು ಮೀರಿ, ಒಟ್ಟಾರೆ ಸಂತೋಷ ಕೊಟ್ಟಿರುತ್ತದೆ.

ಸ್ವಾಗತಾರ್ಹವಾದ ಒಂದು ಪ್ರಜಾಪ್ರಭುತ್ವವಾದಿ ತೀರ್ಪು

ಸಾರ್ವಜನಿಕರ ಹಿತವನ್ನು ಕಾಯಲು ನ್ಯಾಯಾಲಯಗಳ ಮೊರೆಹೋಗುವುದು ಈಚಿನ ದಿನಗಳಲ್ಲಿ ಹೆಚ್ಚಿದೆ. ಅದು ಪ್ರಜ್ಞಾವಂತಿಕೆ ಹೆಚ್ಚಿರುವುದರ ಸೂಚನೆ, ನಾಗರಿಕ ಸಮುದಾಯ ಜೀವನದ ಬಗೆಗಿನ ಕಾಳಜಿ, ಎಂದರೆ ತಪ್ಪಾಗುವುದಿಲ್ಲ. ಆದರೆ ಸಮಾಜಕ್ಕೆ ಅಗತ್ಯವಾದ ಕಾನೂನನ್ನು ರಚಿಸಿ ಅದನ್ನು ಅನುಷ್ಠಾನಕ್ಕೆ ತರುವುದರಲ್ಲಿ ನಾವೆಲ್ಲಾ ಸೋತಿದ್ದೇವೆ, ನಮ್ಮ ವ್ಯವಸ್ಥೆಯಲ್ಲಿ ಲೋಪ ಕಾಣಿಸಿಕೊಂಡಿದೆ ಎಂಬುದು ಇದರರ್ಥ. ಇಡೀ ಸಮಾಜದ ಒಳಿತನ್ನು ಕಾಯ್ದುಕೊಳ್ಳಲು ಅದರ ಪ್ರತಿನಿಧಿಗಳು ಮಧ್ಯಪ್ರವೇಶ ಮಾಡಬೇಕೆಂದು ನಿರೀಕ್ಷಿಸುವುದು ಸ್ವಾಭಾವಿಕ. ಅವರು ಸೋತರೆ ಬೇರೆ ಯಾರೋ ಅವತಾರ ಪುರುಷನು ಬಂದು ಅದನ್ನು ಸರಿಮಾಡಲು ಬರುವುದಿಲ್ಲ. ಆಗ ನಮ್ಮ ಸಂವಿಧಾನದ ಪ್ರವೇಶಿಕೆಯಲ್ಲಿ ಹೇಳಿರುವಂತೆ ''ನಾವು, ಭಾರತದ ಪ್ರಜೆಗಳು'' ಮುಂದಾಗುವುದು ಅನಿವಾರ್ಯ. ಅದೇ ಪ್ರಜಾಪ್ರಭುತ್ವದ ವ್ಯವಸ್ಥೆಯ ಬೆನ್ನೆಲುಬು.

ಇದಕ್ಕೆ ಭಿನ್ನವಾದ ವಾದವೊಂದಿದೆ. ಅದೇನೆಂದರೆ ಕಾರ್ಯಾಂಗ ಮತ್ತು ಶಾಸಕಾಂಗಗಳು ಎಡವಿದಾಗ ನ್ಯಾಯಾಂಗವು ಎಲ್ಲ ರಕ್ಷಣೆಯನ್ನೂ ಒದಗಿಸುತ್ತದೆ ಎಂಬುದು. ಅದೂ ವ್ಯವಸ್ಥೆಯ ಒಂದು ಭಾಗವೇ ಆದ್ದರಿಂದ ಅದೊಂದರಿಂದಲೇ ರಕ್ಷಣೆ ಪಡೆಯಬಹುದೆಂಬುದು ಅನೂಹ್ಯ. ಅದರ ವ್ಯಾಪ್ತಿಯನ್ನು ಮೀರದೆ ಅದು ರಕ್ಷಣೆ ಒದಗಿಸಬಲ್ಲುದು, ಅಷ್ಟೇ.

ಎಂತೆಂಥವೋ ದುರ್ನೀತಿ, ದುರಾಡಳಿತ ಮತ್ತು ದೌರ್ಜನ್ಯಗಳನ್ನು ವಿರೋಧಿಸದೆ ಸಹನೆಯಿಂದ ಅವೆಲ್ಲವನ್ನೂ ಲಕ್ಷಿಸುವುದು ಅಥವಾ ಅವೆಲ್ಲಾ ನಡೆದಿಲ್ಲವೇನೋ ಎಂಬಂತೆ ಕಣ್ಣು ಮುಚ್ಚಿಕೊಳ್ಳುವುದು ನಮ್ಮಲ್ಲಿ ರೂಢಿಯಲ್ಲಿದೆ.

ಇಲ್ಲಿ ಒಂದು ಉದಾಹರಣೆಯನ್ನು ನೋಡೋಣ : ಈಚಿನ ತಿಂಗಳುಗಳಲ್ಲಿ ಇನ್ಸುಲಿನ್ ಬೆಲೆ ಗಗನಕ್ಕೇರಿದೆ. ಆ ಬಗ್ಗೆ ಅನೇಕರು ಪತ್ರಿಕೆಗಳಲ್ಲಿ ತಮ್ಮ ಕಷ್ಟ ತೋಡಿಕೊಳ್ಳುತ್ತಿದ್ದಾರೆ. ಸಕ್ಕರೆ ಕಾಯಿಲೆ ಇರುವವರಿಗೆ ಇನ್ಸುಲಿನ್ ಪ್ರಮುಖ ಮದ್ದು. ಅದು ಅವರ ಕೈಗೆ ಎಟುಕದಷ್ಟು ಬೆಲೆಯಾದರೆ ಅವರ ಪ್ರಾಣಕ್ಕೆ ಸಂಚು ಉಂಟಾಗುತ್ತದೆ. ಆದರೆ ಬೆಲೆ ಜಾಸ್ತಿಯಾಗಿದೆ. ಸರ್ಕಾರವೇ ಅದಕ್ಕೆ ಮಾನ್ಯತೆ ನೀಡಿದೆ. ಏಕೆ ನೀಡಿತು? ಅದು ನರಸಿಂಹರಾವ್ - ಮನಮೋಹನ ಸಿಂಗ್ ಕಾಲದಿಂದಲೂ ಶ್ಲಾಘಿಸುತ್ತಾ ಬಂದಿರುವ ಉದಾರೀಕರಣದ ಒಂದು ಚಿಕ್ಕ ಪರಿಣಾಮ, ಅಷ್ಟೆ. ಈಗ ಹೆಚ್ಚಿರುವ ಬೆಲೆಗಿಂತಲೂ ಬಹಳ ಜಾಸ್ತಿ ಆಗುವ ದಿನಗಳು ಮುಂದೆ ಬರಲಿವೆ. ಏಕೆಂದರೆ, ಪೇಟೆಂಟ್ ಕಾಯಿದೆಗೆ ತಿದ್ದುಪಡಿ ಮಾಡಿ ಹೊಸ ಕಾನೂನನ್ನು ಜಾರಿಗೊಳಿಸಲಾಗುತ್ತಿದೆ. ಆಗ ಔಷಧದ ಬೆಲೆಗಳು ಜನಸಾಮಾನ್ಯರನ್ನು ಕಂಗಾಲಾಗಿಸುತ್ತವೆ.

ಅಂತಹ ಸಂದರ್ಭದಲ್ಲಿ ಜನ ಮಧ್ಯಪ್ರವೇಶ ಮಾಡುವುದು ಹೇಗೆ ? ಸರಳವಾದ ಉತ್ತರ : ಚಟುವಟಿಕೆಗಳ ಮೂಲಕ. ಅದು ಪ್ರತಿಭಟನಾ ಸಭೆ, ಮೆರವಣಿಗೆ, ರಸ್ತೆ ತಡೆ, ಕರ್ನಾಟಕ ಬಂದ್, ಹೀಗೆ ಬೇರೆ ಬೇರೆ ಸ್ವರೂಪಗಳನ್ನು ತಾಳಬಹುದು. ಅದು ಕಾನೂನು ಮತ್ತು ಶಿಸ್ತಿನ ಉಲ್ಲಂಘನೆಯಲ್ಲ; ಬದಲಾಗಿ, ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಮಧ್ಯಪ್ರವೇಶ ಮಾಡುವ ಸಂವಿಧಾನದತ್ತವಾದ ವಿಧಾನ.

ನಾವು ಮೆರವಣಿಗೆ ಮಾಡಿದರೆ ಬೇರೆ ನಾಗರಿಕರಿಗೆ

ಜಿ. ಆರ್.

ತೊಂದರೆಯಾಗುವುದಿಲ್ಲವೆ ? ಜನ ಕಛೇರಿಗೆ ಹೋಗಬೇಕು, ಶಾಲೆಗಳಿಗೆ ಹೋಗಬೇಕು, ಊರುಗಳಿಗೆ ಹೋಗಬೇಕು, ಅದಕ್ಕೆಲ್ಲಾ ಅಡ್ಡಿಯುಂಟುಮಾಡುವುದು ನಾಗರಿಕ ಸಮಾಜದಲ್ಲಿ ಹೇಗೆ ತಾನೆ ಮಾನ್ಯವಾದೀತು? ಬೇರೆಯವರ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವತ್ತ ಪ್ರತಿಭಟನೆಯ ಕ್ರಮವು ಕಾನೂನಿನ, ಸಂವಿಧಾನದ ಉಲ್ಲಂಘನೆಯಾಗುತ್ತದೆ!

- ಇದು ಒಂದು ವಾದ. ಪ್ರತಿಭಟನೆ ಮಾಡುವವರೂ ನಾಗರಿಕರೆ, ಅವರಿಗೂ ಸಂವಿಧಾನದ ರಕ್ಷಣೆ ಇದೆ, ಎಂಬುದನ್ನು ಮರೆತಾಗ ಹೂಡುವ ವಾದ. ನಮ್ಮ ಪ್ರಾಥಮಿಕ ಹಕ್ಕುಗಳ ಹರಣವಾದಾಗ ಅವನ್ನು ರಕ್ಷಿಸಿಕೊಳ್ಳುವುದು ಹೇಗೆ? ಇದು ಇಡೀ ನಾಗರಿಕ ಸಮಾಜದ ಹಿತಕ್ಕೆ ಸಂಬಂಧಪಟ್ಟ ಪ್ರಶ್ನೆ. ಕೇವಲ ಕೆಲವು ವ್ಯಕ್ತಿಗಳ ಸಮಸ್ಯೆಯಲ್ಲ. ಆದ್ದರಿಂದ ಪರಿಹಾರ ಕ್ರಮವೂ ಸಾಮುದಾಯಿಕವಾಗೆ ಇರಬೇಕಾಗುತ್ತದೆ.

ಈಚಿನ ಕೆಲವು ವರ್ಷಗಳಲ್ಲಿ ನ್ಯಾಯಾಂಗವು ಚುರುಕುಗೊಂಡಿದೆಯೆಂಬ ಮಾತು ಆಗಾಗ್ಗೆ ಕೇಳಿಬರುತ್ತದೆ. ಈ ಬದಲಾದ ಪರಿಸ್ಥಿತಿಯಲ್ಲಿ ಕೆಲವು ಉಚ್ಚನ್ಯಾಯಾಲಯಗಳು ತೀರ್ಪುಗಳನ್ನು ನೀಡಿ ಸಾರ್ವಜನಿಕ ಪ್ರತಿಭಟನೆಯ ಹಲವು ವಿಧಾನಗಳನ್ನು ಕಾನೂನುಬಾಹಿರವೆಂದು ಘೋಷಿಸಿದ್ದವು. ಉದಾಹರಣೆಗೆ, ಕೇರಳ ನ್ಯಾಯಾಲಯದ ಒಂದು ತೀರ್ಪಿನ



ಪ್ರಕಾರ ಬಂದ್‌ಗೆ ಕರೆನೀಡುವುದು ಸಂವಿಧಾನಕ್ಕೆ ವಿರೋಧವಾದ ಕ್ರಮ. ಗಾಂಧೀಜಿಯವರು ಹರತಾಳವನ್ನು ಒಂದು ಪ್ರಬಲವಾದ ಅಸ್ತ್ರವನ್ನಾಗಿ ಕೊಂಡಿದ್ದರೆಂಬುದು ಈ ತೀರ್ಪಿನ ದೃಷ್ಟಿಯಲ್ಲಿ ತೀರಾ ಗೌಣವಾಗಿ ಬಿಡುತ್ತದೆ. ಹಿಂಸೆಗೆ ಅವಕಾಶ ಇರಬಾರದೆಂಬುದಕ್ಕೂ ಸಾರ್ವತ್ರಿಕ ಬಂದ್ ನಡೆಸಬೇಕೆಂಬುದಕ್ಕೂ ವ್ಯತ್ಯಾಸವಿದೆ. ಒಂದು ಕಾನೂನಿಗೆ ವಿರೋಧವಾದ್ದು, ಇನ್ನೊಂದು ಪ್ರಜಾಪ್ರಭುತ್ವದ ಅಸ್ತಿತ್ವಕ್ಕೆ ಅನಿವಾರ್ಯವಾದ್ದು.

ಈ ಹಿನ್ನೆಲೆಯಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವು ಒಂದು ವಿಭಾಗೀಯ ಪೀಠದಿಂದ ನೀಡಿರುವ ತೀರ್ಪು ಅತ್ಯಂತ ಮಹತ್ವದ್ದಾಗಿದೆ, ಉಪಯುಕ್ತವಾಗಿದೆ, ಪ್ರಗತಿಪರವಾಗಿದೆ ಮತ್ತು ಪ್ರಜಾಪ್ರಭುತ್ವವಾದಿ ವ್ಯವಸ್ಥೆಗೆ ಪೂರಕವಾಗಿದೆ. ಮುಖ್ಯ ನ್ಯಾಯಾಧೀಶ ವೈ. ಭಾಸ್ಕರ್ ರಾವ್ ಮತ್ತು ನ್ಯಾಯಾಧೀಶ ವಿ. ಗೋಪಾಲಗೌಡ ಅವರು ನೀಡಿರುವ ಜೂನ್ 1999ರ ಕಡೆಯ ವಾರದ ಈ ತೀರ್ಪು ಸಾರ್ವಜನಿಕರು ಸ್ವಾಗತಿಸುವಂತಹ ತೀರ್ಪಾಗಿದೆ.

ಸಾರ್ವಜನಿಕರ ಹಿತರಕ್ಷಣೆಗಾಗಿ ಎಂದು ವಕೀಲರಾದ ಕೆ. ಎನ್. ಸುಬ್ಬಾರೆಡ್ಡಿ ಕೋರ್ಟಿಗೆ ಮನವಿ ಸಲ್ಲಿಸಿ ಬೆಂಗಳೂರು ಮಹಾನಗರ ಪಾಲಿಕೆಗೆ ಒಂದು ಆದೇಶ ನೀಡಬೇಕೆಂದು ಕೋರಿದ್ದರು. ಏನದು ಆದೇಶ ? ''ಬೆಂಗಳೂರಿನಲ್ಲಿ ಮೈಸೂರು ಬ್ಯಾಂಕ್ ವೃತ್ತದಿಂದ ಗೋಪಾಲಗೌಡ ವೃತ್ತದವರೆಗೆ ಹಾಗೂ ನೃಪತುಂಗ ರಸ್ತೆಯಿಂದ ಮಹಾರಾಣಿ ಕಾಲೇಜು ವೃತ್ತದವರೆಗೆ ಮೇಲುಹಾದಿ ಮತ್ತು ಭೂಮ್ಯಂತರ ಹಾದಿ ರಚಿಸಬೇಕು. ಎಂದು. ಅವಿಲ್ಲದೆ ಈಗ ವಾಹನಗಳ ಸಂಚಾರಕ್ಕೆ ಸದಾಕಾಲವೂ ನಡೆಯುತ್ತಲೇ ಇರುವ ಪ್ರತಿಭಟನಾ ಮೆರವಣಿಗೆಗಳಿಂದ ಅಡ್ಡಿಯುಂಟಾಗಿದೆ; ಅವನ್ನು ನಡೆಸಲು ಕರೆಕೊಡುವ ರಾಜಕೀಯ ಪಕ್ಷಗಳು ಸಾರ್ವಜನಿಕ ಸೌಕರ್ಯವನ್ನು ಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಇತ್ಯಾದಿಯಾಗಿ ಹಿತಚಿಂತಕ ವಕೀಲರು ವಾದಿಸಿದರು. ನಗರಪಾಲಿಕೆಯು ಮೇಲೆ ಹೇಳಿದ ಸೌಲಭ್ಯ ರಚಿಸುವವರೆಗೆ ಮೆರವಣಿಗೆಗಳಿಗೆ ಪರವಾನಗಿ ಕೊಡಕೂಡದೆಂದು ಪೊಲೀಸ್ ಕಮೀಷನರಿಗೆ ಕೋರ್ಟು ಆದೇಶಿಸಬೇಕೆಂದೂ ಅವರು ಮನವಿ ಮಾಡಿಕೊಂಡಿದ್ದರು. (ಸಾರ್ವಜನಿಕರ ಒಂದು ಭಾಗವೇ ಆದ ಪ್ರತಿಭಟನಕಾರರು ಬೇರೆ ಯಾವ ರೀತಿಯಲ್ಲಿ ಪರಿಹಾರ ದೊರಕಿಸಿಕೊಳ್ಳಬೇಕೆಂಬುದನ್ನು ವಕೀಲರು ತಮ್ಮ ಮನವಿಯಲ್ಲಿ ತಿಳಿಸಿದ್ದಂತೆ ಕಾಣುವುದಿಲ್ಲ.)

ಮಹಾನಗರಪಾಲಿಕೆ ಯಾವ ಸೌಲಭ್ಯ ಕಲ್ಪಿಸಬೇಕೆಂದು ತೀರ್ಮಾನಿಸಲು ಅಲ್ಲಿ ಜನರ ಪ್ರತಿನಿಧಿಗಳಿರುವುದರಿಂದ ಆ ಬಗ್ಗೆ ಕೋರ್ಟು ಯಾವ ಆದೇಶವನ್ನೂ ನೀಡಲಾರದೆಂದು ತೀರ್ಪು ಹೇಳಿದೆ. (ಆದರೆ ಅದೇ ಕೋರ್ಟು ಇನ್ನೊಂದು ತೀರ್ಪಿನಲ್ಲಿ ಕಬ್ಬನ್ ಪಾರ್ಕಿನಲ್ಲಿ ಕಡಲೆಕಾಯಿ ಮಾರುವುದು ಸಂವಿಧಾನಕ್ಕೆ ವಿರೋಧವಾದ ಕ್ರಮವೆಂದು ತಿಳಿಸಿದೆಯೆಂದು ಬೇರೊಂದು ವರದಿ ಇದೆ). ಮುಷ್ಕರ, ಪ್ರತಿಭಟನೆ, ಮೆರವಣಿಗೆ, ಇತ್ಯಾದಿಗಳು ಯಾವುದೇ ಕಾರ್ಮಿಕ ಸಂಘದ ಅಥವಾ ಇತರ ಸಾರ್ವಜನಿಕ ಗುಂಪುಗಳ ಪ್ರಜಾಪ್ರಭುತ್ವವಾದಿ ಹಕ್ಕು, ಅದು ಸಂವಿಧಾನದತ್ತವಾದ್ದು. ಅದನ್ನು ಮೊಟಕುಗೊಳಿಸುವಂತಿಲ್ಲ ಎಂದು ತೀರ್ಪಿನಲ್ಲಿ ಸಮಗ್ರವಾಗಿ ಉಲ್ಲೇಖಿಸಿರುವುದು ಚರಿತ್ರಾರ್ಹವಾಗಿದೆ. ಮುಷ್ಕರ-ಮೆರವಣಿಗೆಗಳು ಕಾನೂನು ಬಾಹಿರವಲ್ಲ. ಸಾರ್ವಜನಿಕರಲ್ಲಿ ಸೂಕ್ತವಾದ [illegible] ಮೂಡಿಸಲು ಅಂತಹ ಕ್ರಮಗಳು ಅಗತ್ಯವಾಗುತ್ತವೆ. [illegible] ಪ್ರಜಾಪ್ರಭುತ್ವ ಪದ್ಧತಿಯಲ್ಲೂ ಅವಕ್ಕೆ ಮಾನ್ಯತೆ ಇದೆ ಮತ್ತು ಇರಬೇಕು ಎಂದು ಸಹ ತೀರ್ಪು ಹೇಳುತ್ತದೆ. [illegible] ಕೂಡ [illegible] ಸಾರ್ವಜನಿಕ [illegible] ಹೆಸರಿನಲ್ಲಿ ನ್ಯಾಯಾಲಯವು [illegible] ಮಧ್ಯಪ್ರವೇಶ ಮಾಡಲಾರದು. ಎಂದು [illegible], ಕೆಲವೇಳೆ [illegible] ತೊಂದರೆ [illegible] ಶಂಕಿಸಿ ತಾನು ಪ್ರಜಾಪ್ರಭುತ್ವದ ಹಕ್ಕನ್ನು [illegible] ಎಂದು ಘೋಷಿಸುತ್ತದೆ. [illegible] ಪ್ರಜಾಪ್ರಭುತ್ವದ [illegible] ಎಂದು ಈ ತೀರ್ಪಿನಲ್ಲಿ [illegible].

[illegible] ದೊರಕಿರುವ [illegible] ದುರುಪಯೋಗ [illegible] ಹೋರಾಟಗಾರರಲ್ಲೂ [illegible].

[illegible]

ಏಕೆ-47 : ವಿಕೃತ ಮನಸ್ಸಿಗೆ ಪರಮಾನ್ನ

ಚಪ್ಪಲ್ಲಿ

ಕಳೆದ ಒಂದೆರಡು ವರ್ಷಗಳಿಗಿಂತಲೂ ಹೆಚ್ಚಿನ ಕಾಲದಿಂದ ರೀಮೇಕ್ ಚಿತ್ರಗಳ ಹಾವಳಿಗೆ ಗುರಿಯಾಗಿ ತತ್ತರಿಸುತ್ತಿದ್ದ ಕನ್ನಡ ಚಿತ್ರರಂಗಕ್ಕೆ ಒಂದು ರೀತಿಯಲ್ಲಿ ಪುನಶ್ಚೇತನ ನೀಡುವಂತೆ ಬಂದದ್ದು ಓಂಪ್ರಕಾಶ್ ನಿರ್ದೇಶನದಲ್ಲಿ ರಾಮು ನಿರ್ಮಿಸಿದ ''ಏಕೆ-47''. ತಾಂತ್ರಿಕ ವೈಭವದಲ್ಲಿ ಇದು ಬಹುಶಃ ಇದುವರೆಗಿನ ಯಾವುದೇ ಕನ್ನಡ ಚಿತ್ರವನ್ನೂ ಮೀರಿಸುವಂತಿದ್ದುದು ಮಾತ್ರವೇ ಅಲ್ಲದೆ ಇವತ್ತಿನ ಮಾಫಿಯಾ ಪ್ರಪಂಚದ ಕ್ರೌರ್ಯದಲ್ಲಿ ಒಮ್ಮೊಮ್ಮೆ ಅಮಾಯಕ ವ್ಯಕ್ತಿಗಳು ಹೇಗೆ ಸಿಕ್ಕಿಕೊಂಡು ನರಳುತ್ತಾರೆ ಎಂಬುದನ್ನು ನಿರೂಪಿಸುವ 'ಕತೆಯ ದೃಷ್ಟಿಯಿಂದಲೂ ಸಮಕಾಲೀನತೆಗೆ ಹತ್ತಿರವಾಗಿತ್ತು. ಅಲಿಬಾಗ್ ಬಳಿಯ ಮುರುಡ್ ಎಂಬ ಸಣ್ಣ ದ್ವೀಪದಲ್ಲಿ ಬಹುಶಃ ಯಾವ ಹಿಂದಿ ಚಿತ್ರದಲ್ಲೂ ಕಾಣದ ರೀತಿಯಲ್ಲಿ ಚಿತ್ರದ ಪರಾಕಾಷ್ಠೆಯ ಸನ್ನಿವೇಶಗಳ ಚಿತ್ರಣ ನಿರ್ಮಾಪಕ ರಾಮು ಅವರ ಸಾಹಸಪ್ರಿಯತೆಗೊಂದು ನಿದರ್ಶನ.

ಇಂತಹ ಚಿತ್ರಗಳು ಬಂದಾಗ ಸಾಮಾನ್ಯವಾಗಿ ಎರಡು ರೀತಿಯ ಪ್ರತಿಕ್ರಿಯೆಗಳಿರುತ್ತವೆ. ಒಂದು, ಚಿತ್ರದ ವೈಭವಕ್ಕೆ ಬೆರಗಾಗಿ ಆ ಬೆರಗಿನಲ್ಲಿಯೇ ಚಿತ್ರವನ್ನು ಇಡಿಯಾಗಿ ಒಪ್ಪಿಕೊಂಡು ಅಬ್ಬಬ್ಬಾ ಎನ್ನುವುದು. ಇಲ್ಲಿ ಚಿತ್ರದ ಬೇರೆಯ ಅಂಶಗಳಿಗೆ ಗಮನವನ್ನೇ ಕೊಟ್ಟಿರುವುದಿಲ್ಲ. ಇನ್ನೊಂದು, ತೀರ ಸಿನಿಕತನದಿಂದ ಚಿತ್ರವನ್ನು ಪರಿಗ್ರಹಿಸಿ ಖಂಡಿಸುವುದು. ಇವೆರಡು ಧೋರಣೆಗಳಲ್ಲೂ ಚಿತ್ರದ ಗುಣಾತ್ಮಕ ಹಾಗೂ ಋಣಾತ್ಮಕ ಅಂಶಗಳೆರಡನ್ನೂ ಏಕಪ್ರಕಾರವಾಗಿ, ವಸ್ತುನಿಷ್ಠವಾಗಿ ಪರಿಗಣನೆಗೆ ತಂದುಕೊಳ್ಳುವ ಮನೋಭಾವವಿರುವುದಿಲ್ಲ. ಹಾಗಾಗಿ ಇದರಿಂದ ಚಿತ್ರಕ್ಕೆ, ಒಟ್ಟಾರೆ ಚಿತ್ರರಂಗಕ್ಕೆ ಒಂದು ರೀತಿಯಲ್ಲಿ ಅನ್ಯಾಯವೇ ಆದಂತಾಗುವುದು. ಜತೆಯಲ್ಲೇ ನಮಗೂ ಅನ್ಯಾಯ ಮಾಡಿಕೊಂಡಂತಾಗುವುದು.

ಕನ್ನಡ ಚಿತ್ರಗಳ ನಿರ್ಮಾಣ ವೆಚ್ಚ ಹೆಚ್ಚುತ್ತಿದ್ದರೂ ಅದಕ್ಕನುಗುಣವಾಗಿ ಮಾರುಕಟ್ಟೆಯೇನೂ ವರ್ಧಿಸುತ್ತಿಲ್ಲ. ಇಂತಹ ಸಂದರ್ಭದಲ್ಲಿ ಕೋಟಿಗಟ್ಟಲೆ ವೆಚ್ಚದ 'ಏಕೆ-47' ನಂತಹ ಚಿತ್ರ ಕೇವಲ ಒಂದು ಅಪರೂಪದ ಪ್ರಯತ್ನವಾಗಿ ಸ್ವಾಗತಾರ್ಹವಾಗುತ್ತದೆಯೇ ವಿನಾ ಒಂದು ಪರಂಪರೆಯಾಗಿ ಅಲ್ಲ. ಇಲ್ಲವಾದಲ್ಲಿ ಹಲವಾರು ಜನ ಕೈಸುಟ್ಟುಕೊಳ್ಳುವಂತಹ ಪರಿಸ್ಥಿತಿಯಾದೀತು.

ಮೊದಲು ''ಏಕೆ-47'' ನ ಕಥೆ. ಸ್ವಭಾವತಃ ಒಳ್ಳೆಯವನಾದರೂ ಓದಿನಲ್ಲಿ ಆಸಕ್ತಿಯಿರದ. ಬೇರೊಬ್ಬರಿಗೆ ಅನ್ಯಾಯವಾದರೂ ಪೂರ್ವಾಪರಗಳನ್ನು ಯೋಚಿಸದೆ ತಕ್ಷಣವೇ ರೊಚ್ಚಿಗೇಳುವ ಯುವಕ ಇದರ ನಾಯಕ. ಬ್ಯಾಂಕ್ ಅಧಿಕಾರಿಯಾದ ಈತನ ತಂದೆಗೆ ಮುಂಬೈಗೆ ವರ್ಗವಾಗುತ್ತದೆ. ಅಲ್ಲಿ ಕಾಲೇಜ್ ಸೇರಿದ ಯುವಕ ತನ್ನ ತಂದೆ ಕೆಲಸದ ಮೇಲೆ ಬೇರೊಂದು ಊರಿಗೆ ಹೋದಾಗ ಹಾಸ್ಟೆಲ್‌ನಲ್ಲಿ ಪ್ರವೇಶ ದೊರೆಯದ ಇಬ್ಬರಿಗೆ ತನ್ನ ಮನೆಯಲ್ಲಿ ತಾತ್ಕಾಲಿಕವಾಗಿ ಇರಲು ಸ್ಥಳಾವಕಾಶ ಮಾಡಿಕೊಡುತ್ತಾನೆ. ದಾವೂದ್ ಗ್ಯಾಂಗಿಗೆ ಸೇರಿದ ಅವರು ವಾಸ್ತವವಾಗಿ ಯುವಕನ ಎದುರು ಮನೆಯ ಪೊಲೀಸ್ ಅಧಿಕಾರಿಯನ್ನು ಬಾಂಬ್ ಹಾಕಿ ಕೊಲ್ಲುವ ಉದ್ದೇಶದಿಂದ ಅಲ್ಲಿಗೆ ಬಂದಿರುತ್ತಾರೆ. ಅದನ್ನು ಮಾಡಿ ಅವರು ತಪ್ಪಿಸಿಕೊಂಡಾಗ ಈತ ಸಿಕ್ಕಿಬಿದ್ದು ಪೊಲೀಸರಿಂದ ಹಿಂಸೆಗೆ ಗುರಿಯಾಗುತ್ತಾನೆ. ಕೊನೆಗೆ ಸೆರೆಮನೆಯಿಂದ ತಪ್ಪಿಸಿ



ಕೊಂಡು ಮುಖ್ಯಮಂತ್ರಿಯನ್ನು ಅಪಹರಿಸಿ ತನ್ಮೂಲಕ ದಾವೂದ್ ತನ್ನ ಬೆನ್ನಟ್ಟುವಂತೆ ಮಾಡಿ ಆತನನ್ನು ಕೊಂದು ತನ್ನ ನಿರಪರಾಧಿತ್ವವನ್ನು ಸಾಬೀತು ಮಾಡುತ್ತಾನೆ.

ಇಲ್ಲಿ ಮೊದಲ ನೋಟಕ್ಕೆ ಆಭಾಸವಾಗಿ ಕಾಣುವುದು. ಸೆರೆಮನೆಯಲ್ಲಿರುವ ಯುವಕ ಯಾವುದೇ ಬಲಿಷ್ಠ ತಂಡದ ನೆರವಿಲ್ಲದೆ ಅಲ್ಲಿಂದ ತಪ್ಪಿಸಿಕೊಳ್ಳುವುದು ಮಾತ್ರವೇ ಅಲ್ಲದೆ, ಏಕಾಂಗಿಯಾಗೇ ಮುಖ್ಯಮಂತ್ರಿಯನ್ನು ಅಪಹರಿಸುವುದು. ಈ ಅಪಹರಣದ ರೀತಿಯೋ ಅಪ್ಪಟ ಜನಪದ ಶೈಲಿಯಲ್ಲಿದೆ. ಮನರಂಜನಾತ್ಮಕ ಚಿತ್ರವೆಂಬ ದೃಷ್ಟಿಯಿಂದ ಇದಕ್ಕೆ ವಿನಾಯಿತಿ ಕೊಟ್ಟರೂ ಇದೆಲ್ಲ ಬೆಳವಣಿಗೆಯ ಹಿಂದಿನ ತಾತ್ವಿಕ ಧೋರಣೆ ಪ್ರಶ್ನಾರ್ಹವಾಗುತ್ತದೆ. ಅದೆಂದರೆ, ನಮ್ಮ ಪೊಲೀಸ್ ಠಾಣೆಗಳಲ್ಲಿ, ನ್ಯಾಯಾಲಯಗಳಲ್ಲಿ ಅಮಾಯಕರಿಗೆ ನೇರರೀತಿಯಲ್ಲಿ ನ್ಯಾಯ ದೊರೆಯುವ ಸಂಭವವಿಲ್ಲ ಎಂಬುದು. ಅದಕ್ಕೆ ಪರಿಹಾರವಾಗಿ ನಾಯಕ ಬಂಧನದಿಂದ ತಪ್ಪಿಸಿಕೊಂಡು ಕಾನೂನು ಬಾಹಿರ ರೀತಿಯಲ್ಲಿ ತನ್ನ ಮೇಲ್ಗೈ ಸಾಧಿಸಿಕೊಂಡು ತನ್ಮೂಲಕ ನ್ಯಾಯ ದೊರಕಿಸಿಕೊಳ್ಳುವುದು. ತನ್ನ ಮೇಲ್ಗೈಗೆ ಒಂದು ಅಧಿಕೃತ ಮುದ್ರೆ ದೊರಕಿಸಿಕೊಳ್ಳಲು ಆತ ಪೊಲೀಸರಿಗೆ ಸಮಾಂತರದಲ್ಲಿ ಮುನ್ನಡೆಯುತ್ತಾ ಅವರಿಂದ ಸಾಧ್ಯವಾಗದ ಕೆಲಸಗಳನ್ನು ಸಾಧಿಸಿ ತೋರುವುದು. ಒಟ್ಟಿನಲ್ಲಿ ಕಾನೂನು ವ್ಯವಸ್ಥೆಗಿಂತ ಕಾನೂನಿಗೆ ಹೊರತಾದ ವ್ಯವಸ್ಥೆಯೇ ಹೆಚ್ಚು ಉತ್ತಮವೆಂಬ ಸೂಕ್ಷ್ಮಸ್ತರದ ಸಿದ್ಧಾಂತ.

ಹಲವಾರು ಅಂಶಗಳಲ್ಲಿ ನಿಜಜೀವನಕ್ಕೆ ತುಂಬ ಹತ್ತಿರದಲ್ಲಿದ್ದು ಅದೇ ಕಾರಣದಿಂದಲೇ ಚಿತ್ರದ ಸತ್ಯದೂರ ಅಂಶಗಳೂ ದಿಟವಾದುದೇನೋ ಎಂಬ ಭ್ರಮೆ ಈ ಚಿತ್ರದಿಂದ ಮೂಡುತ್ತದೆ. ಉದಾಹರಣೆಗೆ, ದಾವೂದ್ ಎಂಬ ಹೆಸರೇ ಸದ್ಯದಲ್ಲಿ ಪೊಲೀಸರಿಗೆ ಬೇಕಾಗಿರುವ ಮಾಫಿಯಾ ದೊರೆಯೊಬ್ಬನದಾಗಿದೆ. ಕತೆ ನಡೆಯುವ ಸ್ಥಳವಾದ ಮುಂಬೈನಲ್ಲಿ ಇಲ್ಲಿನಂತೆಯೇ ಭಾರೀ ಪ್ರಮಾಣದ ಆಸ್ಫೋಟನೆಯೂ ನಡೆದಿದ್ದಿದೆ. ಇನ್ನು ಪೊಲೀಸ್ ಠಾಣೆಯಲ್ಲಿ ನಿರಪರಾಧಿಯೊಬ್ಬನ ಮೇಲೆ ನಡೆಯುವ ಹಿಂಸೆಯೂ ಪತ್ರಿಕೆಗಳಲ್ಲಿ ದಿನನಿತ್ಯ ವರದಿಯಾಗುವಂತಹುದೇ. ಇಲ್ಲಿ ದಾವೂದ್‌ನಂತಹ ದುಷ್ಟಶಕ್ತಿಗಳಿಗೆ ಪೋಷಕವಾದ ಸಾಮಾಜಿಕ-ರಾಜಕೀಯ ಕಾರಣಗಳ ವಿಶ್ಲೇಷಣೆಯಿಲ್ಲ. ಬಾಂಬ್ ಆಸ್ಫೋಟನೆಯಂತಹ ಕರಾಳಕೃತ್ಯ ನಡೆಸುವ ಎಳೆಯ ವಯಸ್ಸಿನವರ ಮನೋವ್ಯಾಪಾರದ ಒಳನೋಟವಿಲ್ಲ. ಪ್ರತಿನಿತ್ಯ ಕಳ್ಳಸುಳ್ಳರೊಂದಿಗೆ ವ್ಯವಹರಿಸಬೇಕಾಗಿರುವ ಪೊಲೀಸರ ಆಂತರಿಕ ಜಗತ್ತಿನ ಪರಿಚಯವಿಲ್ಲ. ಎಲ್ಲವೂ ಹೊರನೋಟಕ್ಕೆ ಕಾಣುವುದೆಷ್ಟೋ ಅಷ್ಟೆಯೇ. ಇವೆಲ್ಲದರ ನಡುವೆ ಅಮಾನುಷ ಶಕ್ತಿಯ ನಾಯಕ ನುಸುಳುತ್ತಾನೆ. ನಿಜಜೀವನದ ಹಿಂಸೆ ಕ್ರೌರ್ಯಗಳಿಗೆ ಕಾಲ್ಪನಿಕ ಲೋಕದ ಪರಿಹಾರ ನೀಡುತ್ತಾನೆ. ಅಂತಿಮವಾಗಿ ನಾಯಕ ನೂರಕ್ಕೆ ನೂರರಷ್ಟು ಒಳ್ಳೆಯವನು, ಆತನ ವಿರುದ್ಧ ನಿಂತವರೆಲ್ಲರೂ ನೂರಕ್ಕೆ ನೂರರಷ್ಟು ಕೆಟ್ಟವರು. ಈ ಲೋಕದಲ್ಲಿರುವುದೆಲ್ಲ ಕಪ್ಪು-ಬಿಳುಪು ಮಾತ್ರವೇ. ನಡುವಣ ಬೂದು ಬಣ್ಣದ ಲಕ್ಷಾಂತರ ಛಾಯೆಗೆ ಎಳ್ಳಷ್ಟೂ ಮಹತ್ವವಿಲ್ಲ ಎಂಬಂತಾಗುತ್ತದೆ.

ಇನ್ನು ಮನರಂಜನೆ. ಚಿತ್ರದಲ್ಲಿ ಕಾಣುವ ಅತಿಯಾದ ಹಿಂಸೆ ಒಂದು ಮನರಂಜನೆಯೆ ! ಇದರಿಂದಲೇ ಗೊತ್ತಾಗುವುದು, ಚಿತ್ರ ಮೂಲತಃ ಎಂತಹ ವಿಕೃತ ಮನಸ್ಸಿನವರನ್ನು ಗುರಿಯಾಗಿಟ್ಟುಕೊಂಡಿರುತ್ತದೆ ಎಂಬುದು. ಈಚಿನ ದಿನಗಳಲ್ಲಿ ನಮ್ಮಲ್ಲಿ ಕಾಣಿಸಿಕೊಳ್ಳುವ ಸುಮಾರು ಚಿತ್ರಗಳೆಲ್ಲ ಇಂತಹ ಧೋರಣೆಯದೇ ಎಂಬುದನ್ನು ಗಮನದಲ್ಲಿಟ್ಟುಕೊಂಡರೆ ಈ ಚಿತ್ರದ ತಾಂತ್ರಿಕ ವೈಭವವೆಲ್ಲ ಹೊಸ ಬಾಟಲಿಯಲ್ಲಿ ಹಳೆಯ ಮದ್ಯವನ್ನು ತುಂಬುವ ಪ್ರಯತ್ನ ಮಾತ್ರವೇ ಎಂಬುದು ಸ್ಪಷ್ಟವಾಗುವುದು. ಸದ್ಯಕ್ಕೆ ಈ ಚಿತ್ರದಲ್ಲಿ ಇತರ ಚಿತ್ರಗಳಲ್ಲಿನಂತೆ ವಿಕೃತ ಲೈಂಗಿಕತೆಯಿಲ್ಲ. ಅದೊಂದು ಸಮಾಧಾನಕರ ಅಂಶ.))

ಪಿ. ಸೀತಾರಾಮ್
'ಶ್ರೀ ಲಕ್ಷ್ಮೀ' 116, 9ನೇ ಕ್ರಾಸ್, 4ನೇ ಮೇನ್
ಮಲ್ಲೇಶ್ವರಂ, ಬೆಂಗಳೂರು - 560 003

ಯೋಗಪ್ರವೇಶ

ಡಾ॥ ಜಿ. ರಾಮಕೃಷ್ಣ

ಯೋಗ ನಮ್ಮ ದೇಶದ ವಿಶಿಷ್ಟ ಕೊಡುಗೆ. ಕೆಲವರಿಗೆ ಅದೀಗ ಭಾರಿ ಸರಕು. ವಿದೇಶದಲ್ಲಿ ಮಾರಾಟಕ್ಕೆ ಯೋಗ್ಯವಾದ್ದು. ಯೋಗವೆಂದರೆ ಭೋಗಕ್ಕೆ ವಿರೋಧವಾದ್ದು ಎಂಬ ರೀತಿಯಲ್ಲಿ ಪ್ರವಚನ ನೀಡಿ ಅದೇ ಭೋಗವನ್ನು ಸವಿಯುವವರಿಗೆ ನಮ್ಮಲ್ಲಿ ಕೊರತೆಯಿಲ್ಲ. ನಿಜವಾಗಿಯೂ ಯೋಗವು ಏನನ್ನೂ ತೊರೆಯಬೇಕೆಂದು ಬೋಧಿಸುವ ತತ್ತ್ವವಲ್ಲ. ಮನಸ್ಸು ಕೋತಿಯಂತೆ ಹಾರಾಡುವುದನ್ನು ತಡೆಯಲು ಸಾಧ್ಯವೆಂದು ಯೋಗವು ತೋರಿಸಿಕೊಡುತ್ತದೆ. ಹತ್ತಾರು ವಿಷಯಗಳತ್ತ ಏಕಕಾಲದಲ್ಲಿ ಮನಸ್ಸು ಹರಿದರೆ ಹೇಗೆ ತಾನೆ ಮನಸ್ಸಿಗೆ ಸ್ಥಿರತೆ ಇರಲು ಸಾಧ್ಯ? ಆದ್ದರಿಂದ ಮನಸ್ಸನ್ನು ಹತೋಟಿಗೆ ತಂದುಕೊಂಡು ಏಕಾಗ್ರತೆ ಸಾಧಿಸುವುದು ಯೋಗ್ಯವಾದ್ದು, ಉಪಯುಕ್ತವಾದ್ದು.

ಹಾಗೆ ಮಾಡಲು ಮನಸ್ಸಿಗೆ ಶಿಕ್ಷೆ ವಿಧಿಸಿದರೆ ಕೆಲಸ ನಡೆಯುವುದಿಲ್ಲ. ಶಿಕ್ಷೆಯಿಂದ ಮಗುವು ಮೊಂಡಾಗುವಂತೆ ಮನಸ್ಸು ಮಿತಿಮೀರಿ ವರ್ತಿಸುವಂತಾಗಬಹುದು. ''ಅಭ್ಯಾಸ, ಪ್ರಯತ್ನಗಳಿಂದ ಮನಸ್ಸೆಂಬ ಮಗುವಿನ ಲಾಲನೆ-ಪಾಲನೆ ಮಾಡಬೇಕು,'' ಎನ್ನುತ್ತದೆ ಯೋಗವಾಸಿಷ್ಠ. ಅದಕ್ಕೆ ಒಂದು ಕ್ರಮವಿದೆ. ಶರೀರವನ್ನು ದಂಡಿಸುವುದರಿಂದ ಆತ್ಮಶುದ್ಧಿ ತಾನಾಗೇ ಆಗುತ್ತದೆಂದು ಯೋಗವು ಭಾವಿಸುವುದಿಲ್ಲ. ದೇಹದ ವ್ಯಾಧಿ ಮತ್ತು ಜಡತೆಗಳನ್ನು ತೊಡೆದುಹಾಕಿದರೆ ಮನಸ್ಸಿನ ಶುದ್ಧಿಗೆ ಅದು ಅನುವು ಮಾಡಿಕೊಡುತ್ತದೆ ; ಆದ್ದರಿಂದ ''ಶರೀರಂ ಆದ್ಯಂ ಖಲು ಧರ್ಮಸಾಧನಮ್'' ಎಂಬುದು ಯೋಗದ ಗ್ರಹಿಕೆ.

ಶ್ರಮದಿಂದ ಶರೀರವು ಬಳಲಿ ಬೆಂಡಾಗುತ್ತದೆ, ಆದ್ದರಿಂದ ಶರೀರವನ್ನು ಸುಖವಾಗಿ ಇಟ್ಟಿರಬೇಕು, ಎಂಬುದು ಯೋಗದ ಪಾಠವಲ್ಲ; ಶ್ರಮದಿಂದ ಶರೀರವು ಹಗುರಾಗುತ್ತದೆ, ಗಟ್ಟಿಗೊಳ್ಳುತ್ತದೆ, ಮೃದುವಾಗುತ್ತದೆ. - ಇದು ಯೋಗದ ಮೂಲಭೂತ ತರ್ಕ. ಹಾಗೆಂದು ಶರೀರವನ್ನು ಬಲವಂತವಾಗಿ ಹಿಗ್ಗಿಸಬೇಕು, ಕುಗ್ಗಿಸಬೇಕು, ಬಗ್ಗಿಸಬೇಕು ಎಂದು ಯೋಗವು ಹೇಳುತ್ತದೆಂದು ಭಾವಿಸಬಾರದು. ಹೇಗೆ ನಿರಾಯಾಸವಾಗಿ, ನಿಧಾನವಾಗಿ, ಶರೀರದ ಬೇರೆ ಬೇರೆ ಅಂಗಗಳಿಗೆ, ಸ್ನಾಯುಗಳಿಗೆ ಮತ್ತು ನರನಾಡಿಗಳಿಗೆ ಸುಖವ್ಯಾಯಾಮದಿಂದ ಹೊಸಚೈತನ್ಯ ನೀಡಬಹುದೆಂಬುದನ್ನು ಯೋಗವು ವೈಜ್ಞಾನಿಕ ವಿಧಾನದಲ್ಲಿ ತಿಳಿಸಿಕೊಡುತ್ತದೆ.

ಈಚಿನ ವರ್ಷಗಳಲ್ಲಿ ಯೋಗಾಸನಗಳನ್ನು ಮಾಡುವುದರಲ್ಲಿ ಕೂಡ ಸ್ಪರ್ಧೆಗಳನ್ನೇರ್ಪಡಿಸುವುದು ರೂಢಿಗೆ ಬಂದಿದೆ. ಅಲ್ಲಿ ಬಹುಮಾನ ಪಡೆಯುವ ಎಷ್ಟೋ ಮಂದಿ ಮುಖವನ್ನು ತಿರುಚಿ, ಮನಸ್ಸಿನ ಮೇಲೆ ಕಲ್ಲುಬಂಡೆಯನ್ನು ಹೇರಿ, ಶರೀರವನ್ನು ಹೇಗೇಗೋ ಬಗ್ಗಿಸಿ ಚಪ್ಪಾಳೆ ಗಿಟ್ಟಿಸುತ್ತಾರೆ. ಹೀಗಾಗಿ ದೇಹವನ್ನು ವಕ್ರವಕ್ರವಾಗಿ ತಿರಿಚಬಲ್ಲ ವ್ಯಾಯಾಮಪಟುವೇ ನಿಜವಾದ ಯೋಗಾಭ್ಯಾಸಿ ಎಂಬ ತಪ್ಪುಕಲ್ಪನೆ ಬರುವುದು ಸಾಧ್ಯ. ಹಾಗೆ ಮಾಡಬಲ್ಲವರ ಕೌಶಲ್ಯವನ್ನು ಅಲ್ಲಗಳೆಯುವುದು ನಮ್ಮ ಉದ್ದೇಶವಲ್ಲ. ಅದರದ್ದೂ ಏನೋ ಪ್ರಯೋಜನವಿರಬಹುದು. ಆದರೆ ಅದು ಯೋಗಪದ್ಧತಿ ಎನಿಸಿಕೊಳ್ಳಲು ಯೋಗ್ಯವಾದದ್ದಲ್ಲ. ಏಕೆಂದರೆ ಶಾಸ್ತ್ರ ಪರಂಪರೆಯಲ್ಲಿ ಯೋಗದ ಮುಖ್ಯ ಲಕ್ಷಣಗಳು ಬೇರೆಯೇ ಇವೆ. ಪತಂಜಲಿ, ಸ್ವಾತ್ಮಾರಾಮ ಸೂರಿ, ಘೇರಂಡ, ಗೋರಕ್ಷ ಮುಂತಾದ ಯೋಗ ವಿಜ್ಞಾನಿಗಳು ತಪ್ಪದೆ ಉಪದೇಶಿಸುವುದು ಏನೆಂದರೆ ಯೋಗಾಸನಗಳಲ್ಲಿ ''ಸ್ಥಿರಸುಖ'' ಇರಬೇಕು ಎಂದು. ಸ್ಥಿರತೆ ಮತ್ತು ಸುಖತ್ವಗಳು ಯೋಗಾಸನದ ಲಕ್ಷಣ ಎಂದಾಯಿತು. ಹಾಗೆಂದರೇನು ? ಅದರಲ್ಲಿ ''ಪ್ರಯತ್ನ ಶೈಥಿಲ್ಯ'' ವಿರಬೇಕು ಮತ್ತು ಅದರಿಂದ ''ಅನಂತ ಸಮಾಪತ್ತಿ'' ಉಂಟಾಗಬೇಕು. ಒರಟೊರಟಾಗಿ ಬಗ್ಗುವುದಲ್ಲ, ನೋವುಂಟು ಮಾಡಿಕೊಳ್ಳುವುದಲ್ಲ, ಉಸಿರು ಬಿಗಿಹಿಡಿದು ಒಂದರೆಕ್ಷಣ ಬಗ್ಗಿದಂತೆ ಮಾಡಿ ಮೊದಲಸ್ಥಿತಿಗೆ ಹಿಂದಿರುಗುವುದಲ್ಲ; ಯಾವುದೇ ಒಂದು ಆಸನದಲ್ಲಿ ಸುಖವಾಗಿ ಬಹುಕಾಲದವರೆಗೆ ಇರುವಂತಾಗಬೇಕು. ಆಗ ಅಂಗಾಂಗಗಳಿಗೆ ದೊರಕುವ ವ್ಯಾಯಾಮವು ಫಲಪ್ರದವಾದದ್ದು. ಆಸನವೊಂದರಲ್ಲಿ ಅಭ್ಯಾಸಿಯು ನಿರತನಾಗಿರುವಾಗ ನಡುಕ ಉಂಟಾಗುವುದು, ಮಾಂಸಖಂಡಗಳಲ್ಲಿ ಬಾಧೆ ಅನುಭವಿಸುವುದು ಇಲ್ಲದಂತಾಗಬೇಕು, ಅದು ಕ್ರಮೇಣ ಸಹಜವಾಗಿಯೇ ಆಗುತ್ತದೆ; ಬಲವಂತದಿಂದ ಶರೀರಕ್ಕೆ ಅದನ್ನು ಕಲಿಸುವ ಅಗತ್ಯವಿಲ್ಲ.

ಯೋಗಾಸನಗಳ ಮೊದಲ ಪಾಠದಲ್ಲಿ ನಾವು ಗಮನಿಸಬೇಕಾದ ಮುಖ್ಯಾಂಶ ಇದು : ನಾವು ಮಾಡಬೇಕೆಂದಿರುವ ಆಸನವನ್ನು ಮೊದಲ ದಿನವೇ ಪೂರ್ಣವಾಗಿ ಮಾಡಬೇಕಾಗಿಲ್ಲ, ಮಾಡಬಾರದು. ಆ ದಿಕ್ಕಿನಲ್ಲಿ ಹೋಗಲು ಯಾವ ಸ್ಥಿತಿಯಲ್ಲಿ ಸ್ಥಿರತ್ವ-ಸುಖತ್ವಗಳನ್ನು ಸಾಧಿಸಬಹುದೋ ಆ ಸ್ಥಿತಿಯಲ್ಲಿ ಕೆಲನಿಮಿಷಗಳ ಕಾಲ ಇದ್ದರೆ ಅದೇ ಸರಿಯಾದ, ಫಲಪ್ರದವಾದ ಆಸನ. ಹೇಗೋ ಕಷ್ಟಪಟ್ಟು ಹತ್ತು ಸೆಕೆಂಡುಗಳ ಕಾಲ ಒಂದು ಆಸನವನ್ನು ಮಾಡಿದರೆ ಅದು ಶರೀರಕ್ಕೆ ದಂಡನೆ, ಆರೋಗ್ಯಕ್ಕೆ ದಂಡ. ಶರೀರದ ಅಂಗಾಂಗಗಳಿಗೆ ತೀವ್ರವಾದ ಚಲನೆಯನ್ನು ತಂದುಕೊಡುವ ವ್ಯಾಯಾಮಗಳೂ ಇವೆ. ಅವು ಪ್ರಯೋಜನವಿಲ್ಲದವು ಎಂದು ಯಾರೂ ಹೇಳುವುದಿಲ್ಲ. ಆದರೆ ಯೋಗಾಸನಗಳಲ್ಲಿ ತೀವ್ರಚಲನೆಗೆ ಸ್ಥಾನವಿಲ್ಲವೆಂಬುದಷ್ಟೇ ಇಲ್ಲಿ ಹೇಳಬೇಕಾದ್ದು.



ಸ್ವಾಮಿ ಕುವಲಯಾನಂದ

ಯೋಗಾಸನವೆಂದರೆ ಏನೋ ಗೂಢವಾದ್ದು, ಅದನ್ನು ವಿಶ್ಲೇಷಿಸಿ ಪ್ರಯೋಗಗಳಿಗೆ ಗುರಿಮಾಡಿದರೆ ಅದರಲ್ಲಿ ಶ್ರದ್ಧೆ, ನಂಬಿಕೆ ಕಡಿಮೆಯಾಗಿಬಿಡಬಹುದು ಎಂಬ ಭಾವನೆ ಕೆಲವರಲ್ಲಿದೆ. ಆದರೆ ಜೆ. ಜಿ. ಗುಣೆ ಎಂಬೊಬ್ಬರು ಸ್ವಾಮಿ ಕುವಲಯಾನಂದ ಎಂಬ ಹೆಸರನ್ನಿಟ್ಟುಕೊಂಡು ಯೋಗಾಭ್ಯಾಸದ ಹತ್ತಾರು ಕ್ರಮಗಳನ್ನು ಪ್ರಯೋಗಶಾಲೆಯಲ್ಲಿ ಆಧುನಿಕ ಮಾಪಕ ಯಂತ್ರಗಳನ್ನು ಬಳಸಿ ವಿಶ್ಲೇಷಣೆ ಮಾಡಿದ್ದುಂಟು. ಪ್ರತಿಯೊಂದು ಅಭ್ಯಾಸದ ಸತ್ಯಾಸತ್ಯತೆಗಳನ್ನು ಕಂಡುಕೊಳ್ಳಲು ಇದರಿಂದ ಸಾಧ್ಯವಾಯಿತು. ಜಗದೀಶ ಚಂದ್ರ ಬೋಸರು ಅವರ ಪ್ರಯೋಗಗಳನ್ನು ಕಂಡು ಒಮ್ಮೆ ಹೇಳಿದ್ದರು: ''ನೀವು ಕೈಗೊಂಡಿರುವ ಪ್ರಯೋಗಗಳನ್ನು ನಾನು ಸ್ವಾಗತಿಸುತ್ತೇನೆ. ನಿಮ್ಮ ತೀರ್ಮಾನಗಳು ಸರಿಯೋ ಎಂಬುದನ್ನು ಈಗಲೇ ಹೇಳಲಾಗದು, ಆದರೆ ನೀವು ಅನುಸರಿಸುತ್ತಿರುವ ಪ್ರಯೋಗ ಪದ್ಧತಿ ವೈಜ್ಞಾನಿಕವಾಗಿದೆ.'' ಹೀಗೆ ಪ್ರಯೋಗಶೀಲರಲ್ಲಿ ಕುವಲಯಾನಂದರು ಆದ್ಯಪ್ರವರ್ತಕರು.

ಒಂದು ಸರಳವಾದ ಪ್ರಯೋಗವನ್ನು ಇಲ್ಲಿ ಉದಾಹರಿಸಬಹುದು: ಭೂಮಿಯಲ್ಲಿ ಗುಂಡಿ ಮಾಡಿಕೊಂಡು ಎರಡು-ಮೂರು ದಿನಗಳ ಕಾಲ ಅಲ್ಲೇ ಉಳಿದುಬಿಡುವ ''ಯೋಗಿ''ಗಳ ಬಗ್ಗೆ ಕೇಳಿದ್ದೀರಲ್ಲಾ. ಗುಂಡಿಯ ಮೇಲೆ ಕಲ್ಲುಚಪ್ಪಡಿ ಎಳೆದು, ಮಣ್ಣುಮುಚ್ಚಿ, ಅದರ ಮೇಲೆ ಬೆಂಕಿ ಕೂಡ ಹಾಕಿಸಿಬಿಡುತ್ತಾರೆ. ಎಂತಹ ಚಮತ್ಕಾರ ! ಮೂರು ದಿನದ ನಂತರ ಯೋಗಿ ಹೊರಗೆ ಬಂದು ಹಾರ ಹಾಕಿಸಿಕೊಂಡು ತನ್ನ ಅಸಾಧಾರಣ ಶಕ್ತಿಯ ಬಗ್ಗೆ ಡಂಗುರ ಸಾರುತ್ತಾನೆ. ದಂಗಾದ ಪ್ರೇಕ್ಷಕರಿಗೆ ಯಾರೂ ಹೇಳುವುದಿಲ್ಲ : ''ಅಯ್ಯಾ, ಅದನ್ನು ನಾನು, ನೀನು ಸಹ ಮಾಡಬಹುದು,'' ಎಂದು. ಗುಂಡಿಯಲ್ಲಿ ಆಮ್ಲಜನಕವಿರುವುದಿಲ್ಲವೆ ? ಮೇಲೆ ಬೆಂಕಿ ಹಾಕಿದರೆ ಒಳಗೇನಾಗುತ್ತದೆ ! ಒಳಗಿನ ಆಮ್ಲಜನಕ ಯಾವುದೋ ಪ್ರಮಾಣಕ್ಕಿಂತಲೂ ಕಡಿಮೆಯಾಗದವರೆಗೆ ಯಾರು ಬೇಕಾದರೂ ಗುಂಡಿಯಲ್ಲಿ ಕುಳಿತಿರಬಹುದು. ಸಾಮಾನ್ಯವಾಗಿ ಎಂಟಡಿ ಉದ್ದ, ಮೂರಡಿ ಅಗಲ, ಮೂರಡಿ ಆಳವಿರುವ ಗುಂಡಿಯಲ್ಲಿ ಯಾರಾದರೂ 20-25 ಗಂಟೆಗಳ ಕಾಲ ನಿರಾಯಾಸವಾಗಿ ಕಳೆಯಬಹುದು. ಅದೇ ಪ್ರಮಾಣದ ಮರದ ಪೆಟ್ಟಿಗೆ ಮಾಡಿಸಿ, ಅದರೊಳಕ್ಕೆ ಗಾಳಿ ತೂರದಂತೆ ಮಾಡಿದರೆ ಬಹುಶಃ 16 ಗಂಟೆ ಸುಲಭವಾಗಿ ಕಳೆಯಬಹುದು. ನಾವು ಉಸಿರಾಡುವಾಗ ಎಷ್ಟು ಆಮ್ಲಜನಕ ಸೇವಿಸುತ್ತೇವೆ, ಇಂಗಾಲಾಮ್ಲವನ್ನು ಎಷ್ಟು ಹೊರಬಿಡುತ್ತೇವೆ ಎಂಬುದಷ್ಟೇ ಮುಖ್ಯ. ಸ್ಥೂಲಕಾಯದವರಿಗೂ ಸೂಕ್ಷ್ಮಕಾಯದವರಿಗೂ ಇರುವ ವ್ಯತ್ಯಾಸವೇ ಅದು. ಯೋಗಾಭ್ಯಾಸ ಮಾಡುವ ವ್ಯಕ್ತಿ ಬೇರೆಯವರಿಗಿಂತ ಕಡಿಮೆ ಪ್ರಮಾಣದ ಆಮ್ಲಜನಕವನ್ನು ಸೇವಿಸುತ್ತಾನೆ. ಅವನು ಯುಕ್ತಾಹಾರ, ಯುಕ್ತವಿಹಾರ, ಯುಕ್ತಕರ್ಮ, ಯುಕ್ತನಿದ್ರೆ, ಇತ್ಯಾದಿಗಳಲ್ಲಿ ಪಳಗಿದವ. ಆದ್ದರಿಂದ ಯೋಗವು ಅವನ ಶರೀರದುಃಖವನ್ನು ಕಡಿಮೆ ಮಾಡುತ್ತದೆ. (ಇದು ಭಗವದ್ಗೀತೆಯ ಒಂದು ಶ್ಲೋಕದ ಸಾರಾಂಶ). ಮಸಾಲೆ ತುಂಬಿದ ಆಹಾರ ತಿಂದಾಗ ಅಥವಾ ಕೊಬ್ಬು ಮಿಶ್ರಿತ ಆಹಾರ ಸೇವಿಸಿದಾಗ ಶರೀರವು ಸ್ವಾಭಾವಿಕವಾಗಿಯೇ ಹೆಚ್ಚು ಆಮ್ಲಜನಕವನ್ನು ಬೇಡುತ್ತದೆ. ಅದನ್ನೇ ಬೇಕಾದರೆ ತಾಮಸಿಕ ಆಹಾರ ಎನ್ನಬಹುದು.

ಶರೀರಧರ್ಮವನ್ನು ಸರಿಯಾಗಿ ತಿಳಿದು ಅದನ್ನು ಪಳಗಿಸುವುದು ಯೋಗಾಭ್ಯಾಸದ ಒಂದು ಉದ್ದೇಶ. ಶರೀರವು ಮಾನಸಿಕ ವ್ಯಾಪಾರಕ್ಕೆ ಅಡಚಣೆ ಉಂಟುಮಾಡದಂತೆ, ಬದಲಾಗಿ ಅದಕ್ಕೆ ಪೂರಕವಾಗುವಂತೆ ಮಾಡಲು ಈ ಅಭ್ಯಾಸವು ಆಯಾಮವನ್ನೊದಗಿಸುತ್ತದೆ. ''ಯೋಗದಿಂದ ಮನಸ್ಸಿನ ಕ್ಲೇಶವನ್ನು ನಿವಾರಿಸಲು ಪತಂಜಲಿ ಹಾದಿಯನ್ನು ತೋರಿಸಿದ್ದಾನೆ'', ಎಂದಾಗ ಇದೇ ಅರ್ಥ ಗಮ್ಯವಾಗುತ್ತದೆ.

○○

ಪ್ರಾರ್ಥನೆ

ಹಕ್ಕೊತ್ತಾಯದ ಮನಸ್ಥಿತಿಯವರಿಗೆ ಪ್ರಾರ್ಥನೆ ಎಂದರೆ ಮೂಗು ಮುರಿಯುವಂತಾಗಬಹುದು. ಆದರೆ ಮನುಷ್ಯನ ಸಾಮಾಜಿಕ, ಆರ್ಥಿಕ ಇತಿಹಾಸದಲ್ಲೂ ಆಧ್ಯಾತ್ಮಿಕ ಚರಿತ್ರೆಯಲ್ಲೂ ಅತಿಪ್ರಾಚೀನ ಕಾಲದಿಂದ ಈಗಿನವರೆಗೆ 'ಪ್ರಾರ್ಥನೆ' ಗೆ ಬಹಳ ಮಹತ್ವವಿದೆ. ಇದು ಏಕಕಾಲಕ್ಕೆ ಜಗತ್ತಿನ ವಾಸ್ತವಗಳನ್ನೂ, ಅದರೊಡನೆ ಸ್ಪಂದಿಸುವ ಮನೋಲೋಕವನ್ನೂ ಬಿಂಬಿಸುತ್ತದೆ.

ಪ್ರಕರ್ಷವಾಗಿ, ಎಂದರೆ ಒತ್ತಾಯಪೂರ್ವಕವಾಗಿ, 'ಅರ್ಥನಾ' ಎಂದರೆ ಕೇಳಿಕೊಳ್ಳುವುದು, ಬೇಡಿಕೊಳ್ಳುವುದು, ಪ್ರಾರ್ಥನೆ. ಇಲ್ಲಿ ಕೇಂದ್ರದಲ್ಲಿ ಇರುವುದು 'ಅರ್ಥ'; ಎಂದರೆ ಹಣ. 'ಯಾರಿಗೆ ಯಾವುದು ಇಷ್ಟವೋ ಅವರಿಗೆ ಅದೇ ಹಣ' ಎಂದು ಅರ್ಥಶಾಸ್ತ್ರ ಹೇಳುತ್ತದೆ. ಕೇಳುವವನ ಸತ್ಯ ಒಂದು ಕಾಣುವ ಕೊನೆಯಾದರೆ, ಯಾರನ್ನು ಕೇಳುವುದು ಎನ್ನುವುದು ಇನ್ನೊಂದು ಕಾಣಬಹುದಾದ ಅಥವಾ ಕಾಣಲಾಗದ ಕೊನೆ. ಎರಡು ಕೊನೆಗಳಲ್ಲಿ ತಾರತಮ್ಯವಿದೆ. ಕೇಳುವವನಿಗಿಂತ ಕೊಡುವವನು ಹೆಚ್ಚು ಶಕ್ತನೆಂಬುದು ಒಪ್ಪಿತ. ಕೇಳುವವನದು ತನ್ನ ಕಷ್ಟಗಳನ್ನು ಹೇಳಿಕೊಳ್ಳುವ, ಆಸೆಗಳನ್ನು ಮುಂದಿಡುವ ಸಣ್ಣತನ; ಯಾರನ್ನು ಕೇಳುತ್ತಾನೋ ಅವನಿಗೆ ಕೊಡುವ ಶಕ್ತಿಯ ಹಿರಿತನ. ಇವುಗಳ ಮಧ್ಯೆ ಮಾನವನ ಮನಸ್ಸು ವಾಸ್ತವ-ಕಲ್ಪನೆಗಳ ನಡುವೆ ಹೇಗೋ ತೂಗುತ್ತದೆ. ಮಾನವ ಇತಿಹಾಸದಲ್ಲಿ ಕ್ರಮಿಸಿದ ವಾಸ್ತವ ಮಜಲುಗಳಿಗೆ ಎಷ್ಟು ಹಿರಿಮೆಯೋ, ಅಷ್ಟೇ ಆಕ್ರಮಣಕ್ಕೆ ಚೋದಿಸಿದ ಆಶೋತ್ತರಗಳಿಗೂ ಇದೆ.

ತನಗಿಂತ ಹಿರಿದಾದ ದೈವವನ್ನು ಬಣ್ಣಿಸುತ್ತಾ, ಹೊಗಳುತ್ತಾ ಓಲೈಸುವುದು ಪ್ರಾರ್ಥನೆಯ ಮುಖ್ಯಭಾಗ. ಇದು ಎಲ್ಲ ಧರ್ಮಗಳಲ್ಲೂ ಸರ್ವೇ ಸಾಮಾನ್ಯವಾಗಿ ಕಾಣುತ್ತೇವೆ. ಇದರಲ್ಲಿನ ದೈವವನ್ನು ಕುರಿತ ದೃಷ್ಟಿಯೇ ಜಗತ್ತನ್ನು ಪರಿಭಾವಿಸುವ ದೃಷ್ಟಿಯೂ ಆಗಿರುತ್ತದೆ. ಇಂತಹದೇ ಸಂಬಂಧ ತಂದೆ, ತಾಯಿ, ಗುರು, ಹಿರಿಯ, ಒಡೆಯರಿಗೂ ವ್ಯಾಪಿಸಿರುತ್ತದೆ. ಈ ಸಂಬಂಧವು ವಸ್ತು, ವ್ಯಕ್ತಿ, ಕಲ್ಪನೆಗಳಿಗೆ ಪಾವಿತ್ರ್ಯವನ್ನು ತಂದುಕೊಡುತ್ತದೆ. ಹೀಗೆ ಓಲೈಸುವ ಸ್ತುತಿ ಒಂದು ಸಮುದಾಯದ ಒಟ್ಟು ಧೋರಣೆಯನ್ನೂ, ಧಾರಣೆಯನ್ನೂ ಸೂಚಿಸುತ್ತಿರುತ್ತದೆ.

ಪ್ರಾಚೀನತಮ ಸಾಹಿತ್ಯವೆನಿಸಿಕೊಂಡ ಋಗ್ವೇದ ಮೂಲತಃ ನೂರಾರು ಸ್ತುತಿಗಳ, ಪ್ರಾರ್ಥನೆಗಳ ಆಗರ. ನೂರಾರು ವರ್ಷಗಳಲ್ಲಿ ಒಟ್ಟಾದ ಋಗ್ವೇದದ ಸೂಕ್ತಗಳು ಪ್ರಾರ್ಥನೆಗಳಾದರೂ ಅವು ಮುಂದೆ ಕ್ರಿಯಾ ವಿಧಿಯ ಮಂತ್ರಗಳಾದಾಗ ಮೂಲಧೋರಣೆಯಲ್ಲಿ ಪಲ್ಲಟವಾಯಿತು. ಓಲೈಸಿ ಬೇಡುವ ಪ್ರಾರ್ಥನೆಗಿಂತ, ಕೊಟ್ಟು-ತೆಗೆದುಕೊಳ್ಳುವ ('ದೇಹಿ ಮೇ ದದಾಮಿ ತೇ' ಎನ್ನುವ) ಕ್ರಿಯಾವಿಧಿಯ ಧೋರಣೆ, ಅದು ಬಿಂಬಿಸುವ ಮನೋಭೂಮಿಕೆ, ಬೇರೆ ರೀತಿಯದು. ಆದರೆ ಋಗ್ವೇದದ ಸ್ತುತಿಗಳಿಗೆ ಕ್ರಿಯಾವಿಧಿಯ ಸಂಬಂಧವಿರಲಿಲ್ಲವೆಂದಲ್ಲ. ಪೂಜಾವಿಧಿಗಳ ಒತ್ತಡ ಹೆಚ್ಚಾದಂತೆ ಪ್ರಾರ್ಥನೆಯಲ್ಲಿನ ವಿಸ್ಮಯ, ಆರ್ದ್ರತೆಗಳು ಕಡಿಮೆಯಾದವು. ಪುರೋಹಿತರು ಯಜಮಾನನ ವಕೀಲಿ ಹಿಡಿದು ಮಾಡುವ 'ಯಜಮಾನಾಯ ದೇಹಿ' ಎಂಬ ಬೇಡಿಕೆ, ನನಗೆ ಇದಿರಲಿ, ಅದಿರಲಿ 'ಚ, ಮೇ' ಎಂಬ ಬೇಡಿಕೆಗಳಿಗಿಂತ ಪ್ರಾಚೀನವಾದ ಸಮೂಹದ ಪ್ರಾರ್ಥನೆಗಳು 'ನಾವು ಹೀಗಿರೋಣ, ನಮಗೆ ಒಳಿತಾಗಲಿ ಎನ್ನುತ್ತಿದ್ದದ್ದು ಗಮನಾರ್ಹ. ಕೊಡುವುದು 'ಏಕೋ ದೇವ'ನಲ್ಲ ದೇವರುಗಳು. ಅಲ್ಲಿನ ಬಹುವಚನ ಗಮನಿಸಿ.

ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ
ಭದ್ರಂ ಪಶ್ಯೇ ಮಾಕ್ಷಭಿರ್ಯಜತ್ರಾಃ
ಸ್ಥಿರೈರಂಗೈಸ್ತುಷ್ಟುವಾಂಸಃ ತನೂಭಿಃ
ವ್ಯಶೇಮ ದೇವಹಿತಂ ಯದಾಯುಃ ॥

-ಕಿವಿಗಳಿಂದ ಒಳಿತಾದದ್ದನ್ನು ಕೇಳೋಣ, ಕಣ್ಣುಗಳಿಂದ ಒಳಿತಾದದ್ದನ್ನು ಕಾಣೋಣ, ದೃಢವಾದ ಕೈಕಾಲುಗಳಿಂದ ಇರುವಷ್ಟು ಆಯಸ್ಸನ್ನು ದೇವಹಿತಕ್ಕಾಗಿ ವ್ಯಯಿಸೋಣ.

ಹೀಗೆ ದೇವರುಗಳನ್ನು ಬೇಡುವ ಸಮುದಾಯ ವರ್ಣವ್ಯವಸ್ಥೆಯ ಗೋಜಲಿನಲ್ಲಿ ವ್ಯಕ್ತಿ ಪ್ರಾಧಾನ್ಯತೆಯ ಕಡೆಗೆ ಹೋಗಿ ಒಬ್ಬೊಬ್ಬನೂ ತನ್ನ ಮೋಕ್ಷ ಕಂಡುಕೊಳ್ಳಬೇಕೆಂದು ಹೇಳುತ್ತಲೇ ಅವಸಾನದ ಅಂಚಿಗೆ ಹೋಗಾಯಿತು. ಭಕ್ತಿಪಂಥವು ಸಾಮೂಹಿಕ ಭಜನೆ, ಗಾನಗಳಲ್ಲಿ ಕ್ರಿಯಾವಿಧಿಗಳನ್ನು ಮೀರುವ ಸಂಘಟನೆಗಳಿಗೆ ಕಾರಣವಾದವು. ಮಧ್ಯಯುಗದ ಭಕ್ತಿಪಂಥಗಳನ್ನು ಕುರಿತಾದ ಹೊಸ ಅಧ್ಯಯನಗಳು ಪ್ರಾಚೀನ ವೈದಿಕ ಕಾಲದ ಕುಲಗಳು ಜಾತಿಗಳಾಗಿ, ಪ್ರಾರ್ಥನೆಗಳು ಮಾಟದ ಮಂತ್ರಗಳಾದದ್ದರ ಬಗ್ಗೆ ಸಹ ಬೆಳಕು ಚೆಲ್ಲಿಯಾವು. ಇದು ಸಹಸ್ರಾರು ವರ್ಷಗಳ ಮಾನವನ ಒಂದು ಪ್ರಮುಖ ರಾಜಕೀಯ-ಸಾಮಾಜಿಕ ಪ್ರವೃತ್ತಿಯನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತದೆ.

ಡಾ॥ ಜಿ. ಶ್ರೀನಿವಾಸಮೂರ್ತಿ
ನಂ. 28, 6ನೇ ಮೇನ್, ಮಲ್ಲೇಶ್ವರಂ, ಬೆಂಗಳೂರು-560003

ಪ್ರಶ್ನೆ

ಪ್ರಶ್ನೆ ಎಂದರೇನು ? ಅದೂ ಒಂದು ಪ್ರಶ್ನೆಯಲ್ಲವೆ ? ಏಕೆ ? ಏನು ? ಹೇಗೆ ? ಇತ್ಯಾದಿ ಪ್ರಶ್ನಾರ್ಥಕ ಪದಗಳನ್ನು ಬಳಸಿ ಉತ್ತರವನ್ನು ಬಯಸುವುದು ಪ್ರಶ್ನೆಯೆನಿಸುತ್ತದೆ. ನಮ್ಮ ನಿತ್ಯದ ಆಗು-ಹೋಗುಗಳಲ್ಲಿ ಪ್ರಶ್ನೆಗೆ ಮಹತ್ವದ ಸ್ಥಾನವಿದೆ. ಮಿದುಳಿನ ಉಪಯೋಗವನ್ನು ಪ್ರಶ್ನೆಗಳಿಂದಲೇ ಹರಿತಗೊಳಿಸಿದ ಮಾನವ, ಜೀವ ವಿಕಾಸದ ಕ್ರಿಯೆಯಲ್ಲಿ ತರ್ಕ-ಸಂದೇಹ-ಪ್ರಶ್ನೆಗಳಿಂದ ಪರಿಪೂರ್ಣತೆಯೆಡೆಗೆ ಸಾಗಿದ. ಪ್ರಶ್ನೆ ಕೇಳಿ ಜೀವ ತೆತ್ತವರೂ ಇದ್ದಾರೆ. ಚುರುಕು ಪ್ರಶ್ನೆಯಿಂದ ಬಹುಮಾನ ಗಿಟ್ಟಿಸಿದವರನ್ನು ನಮ್ಮ ಕಥೆಗಳಲ್ಲಿ ಓದಿದ್ದೇವೆ. ಉತ್ತರಗಳನ್ನು ಸ್ಮರಣೆಯಲ್ಲಿ ಅಡಗಿಸಿಕೊಂಡು ರಸಪ್ರಶ್ನೆಗಳಿಗೆ ಉತ್ತರಿಸುವುದು ವಿದ್ಯಾರ್ಥಿಗಳಲ್ಲಿ ಇದೀಗ ಜನಪ್ರಿಯವಾಗುತ್ತಿರುವ ಕಾರ್ಯಕ್ರಮ. ಧರ್ಮರಾಯನಿಗೆ ಯಕ್ಷರೂಪಿಯಾದ ಯಮ ಎಸೆದ ಪ್ರಶ್ನೆ ಯಕ್ಷ ಪ್ರಶ್ನೆಯೆಂದೇ ಇಂದೂ ನಮ್ಮ ಮಾತಿನಲ್ಲಿ ಜೀವ ಪಡೆದಿದೆ. ಉತ್ತರಿಸದೆ ಹೋದರೆ ತಲೆ ಸಾವಿರ ಹೋಳಾದೀತು ಎಂದು ವಿಕ್ರಮಾದಿತ್ಯನನ್ನು ಹೆದರಿಸಿದ ಬೇತಾಳನ ಕಥೆಯೊಳಗಿನ ಪ್ರಶ್ನೆಗಳು ಇಂದಿಗೂ ಜನಪ್ರಿಯ. ಯಮನೊಂದಿಗೆ ಜೀವನ್ಮರಣಗಳ ರಹಸ್ಯವನ್ನು ಕುರಿತು ಪ್ರಶ್ನಿಸಿದ ನಚಿಕೇತನ ಪ್ರಶ್ನೆ ಇಂದಿಗೂ ಜೀವಂತ ಪ್ರಶ್ನೆಯೆ! 'ಮಿಲಿಯನ್ ಡಾಲರ್ ಕ್ವಶ್ಚನ್' ಎನ್ನುವುದು ಪ್ರಶ್ನೆಯ ಮೌಲ್ಯದ ಕುರಿತು ಹೇಳಿದರೆ, ಪ್ರಶ್ನೆಯಿಂದ ನುಣುಚಿಕೊಳ್ಳಲು 'ಔಟ್ ಆಫ್ ಕ್ವಶ್ಚನ್' ಎಂದು ಪ್ರಶ್ನೆಯ ಎಲ್ಲೆಯಿಂದ ಹೊರಹಾಕಲು ಯತ್ನಿಸುವ ಸಭಾಧ್ಯಕ್ಷರೂ ಇದ್ದಾರೆ.

ಪ್ರಶ್ನೆ ಎಲ್ಲಿ ಯಾತಕ್ಕಾಗಿ ಉದ್ಭವವಾಗುತ್ತದೆ, ಪ್ರಶ್ನೆ ಕೇಳುವುದರ ಪರಿಣಾಮವೇನು ಇತ್ಯಾದಿಗಳನ್ನು ಪರಿಶೀಲಿಸೋಣ. ಸಾಗರ ವಿಜ್ಞಾನಿಗೆ ಮತ್ಸ್ಯಕನ್ಯೆ ಗೋಚರವಾಗದೆ ಇದ್ದಾಗ, ವ್ಯೋಮ ಶಾಸ್ತ್ರಿಗೆ ಆಕಾಶದಲ್ಲಿ ದೇವಕನ್ನಿಕೆ ಕಾಣದೆ ಇದ್ದಾಗ, ಭೂತ-ಪಿಶಾಚಿಗಳು ನಮ್ಮ ಗಮನ ಸೆಳೆಯದೆ ಇದ್ದಾಗ ಇಂಥ ಹಲವು ತಾತ್ವಿಕ ಕಲ್ಪನೆಗಳು ಪ್ರಜ್ಞೆಯಲ್ಲಿ ಉಳಿದಿದ್ದು, ಅವು ನಮ್ಮ ಸಂವೇದನೆಗೆ - ಅರಿವಿಗೆ ಬಾರದೆ ಇದ್ದಾಗ ಪ್ರಶ್ನೆಗಳು ಉದ್ಭವಿಸುತ್ತವೆ. ತಾತ್ವಿಕ ತಿಳುವಳಿಕೆಗೂ - ವೈಜ್ಞಾನಿಕ ತಿಳುವಳಿಕೆಗೂ ಇರುವ ಅಸಮ್ಮತಿಯೇ ಪ್ರಶ್ನೆ. ಭ್ರಾಮಕ ಕಲ್ಪನೆಗೂ- ವಾಸ್ತವ್ಯಕ್ಕೂ ಉಂಟಾಗುವ ಘರ್ಷಣೆ ಪ್ರಶ್ನೆಯಲ್ಲಿ ಪ್ರತಿಫಲನವಾಗುತ್ತದೆ.

ಈ ಜಗತ್ತು ದೇವರ ಸೃಷ್ಟಿ, ಪಂಚೇಂದ್ರಿಯಗಳು ಮಾನವನಿಗೆ ದೇವರಿತ್ತ ಮಹಾನ್ ಕೊಡುಗೆ, ಇತ್ಯಾದಿಗಳನ್ನು ತಲೆಯಲ್ಲಿ ತುಂಬಿಸಿಕೊಂಡ ಮುಗ್ಧ ಮಗು ಶಾಲೆಗೆ ಹೋದಾಗ ಅಲ್ಲಿ ವ್ಯತಿರಿಕ್ತವಾದದ್ದನ್ನು ಗ್ರಹಿಸಲು ತೊಳಲಾಡುತ್ತದೆ. ಮುಂದೆ ಡಾರ್ವಿನ್‌ನ ವಿಕಾಸವಾದ, ಅಂಡಾಣು -ವೀರ್ಯಾಣುಗಳ ಸಂಯೋಜನೆಯಿಂದ ರೂಪುಗೊಳ್ಳುವ ಭ್ರೂಣ, ಮುಂದಿನ ಮಾನವ ಶರೀರದ ರಚನೆ ಇತ್ಯಾದಿ ಜೀವಶಾಸ್ತ್ರದ ಕಲಿಕೆಯಲ್ಲಿ ಗೊಂದಲಕ್ಕೊಳಗಾಗುತ್ತದೆ. ಇಲ್ಲಿ ಸಹಜವಾಗಿ ಯಾವುದು ಸರಿ ಎನ್ನುವ ಪ್ರಶ್ನೆ ದೈತ್ಯರೂಪ ತಾಳುತ್ತದೆ. ತಾನು ಪಾಠವನ್ನು ಮನನ ಮಾಡಿಕೊಳ್ಳಲು ಒಂದೆರಡು ಬಾರಿ ಹೆಚ್ಚಾಗಿ ಓದಿದಾಗ ತಾಯಿ ಹೇಳುತ್ತಾಳೆ: ''ಎಷ್ಟು ಬಾರಿ ಉರು ಹೊಡೆಯುತ್ತಿ; ಓದಿದ್ದನ್ನೇ ಓದುತ್ತಿದ್ದೀಯಾ. ಮುಂದಿನದನ್ನು ಅಭ್ಯಾಸ ಮಾಡು.'' ತನ್ನ ಅಜ್ಜನಿಗೆ ಅಂದರೆ ತಾಯಿ ತನ್ನ ಅಪ್ಪನಿಗೆ ಈ ಮಾತನ್ನು ಯಾಕೆ ಹೇಳುತ್ತಿಲ್ಲ ? ದಿನಂಪ್ರತಿ ಬೆಳಗೆದ್ದು, ರಾಮಾಯಣ ಮಹಾಭಾರತದ ಓದಿದ ಭಾಗಗಳನ್ನೇ ಪುನಃ ಉರು ಹೊಡೆಯುತ್ತಿರುವ, ಶಿವಪುರಾಣದ ಕಥೆ ಹೇಳುವ ಅಜ್ಜನಿಗೆ ಬೇರೆ ಕೆಲಸವಿಲ್ಲವೆ ? ಎಡ್ಮಂಡ್ ಹಿಲಾರಿ ಮತ್ತು ತೇನ್‌ಸಿಂಗ್ ಕೈಲಾಸ (ಎವರೆಸ್ಟ್) ಪರ್ವತವನ್ನೇರಿ ಭಾರತದ ಬಾವುಟವನ್ನು ಹಾರಿಸಿದರು ಎಂದಾಗ ಈಶ್ವರ-ಪಾರ್ವತಿಯರು ಬಂದಿದ್ದರೆ ಎಂದು ಪ್ರಶ್ನಿಸುವ ಮಗುವಿಗೆ ಅಜ್ಜ ಏನೆಂದು ಉತ್ತರಿಸಬೇಕು? ಇಂಥ ಹಲವಾರು ಪ್ರಶ್ನೆಗಳು ಸಹಜವಾಗಿ ಮೂಡುತ್ತವೆ ಮಗುವಿನ ಮನಸ್ಸಿನಲ್ಲಿ. ಪ್ರಜ್ಞೆಯಲ್ಲಿ ಮೂಡಿಸಿಕೊಂಡ ನಿರಾಧಾರ ಕಲ್ಪನೆಗಳನ್ನು ಎಳೆಯರು ಪ್ರಶ್ನಿಸಿದಾಗ, ಪ್ರಕೃತಿಯ ಚಟುವಟಿಕೆಗಳನ್ನು ತಿಳಿಯಲು ತವಕಿಸಿದಾಗ ಮುಗ್ಧ ಮನಸ್ಸನ್ನು ಚಿವುಟುವ ಕಾರ್ಯ ಸಲ್ಲದು. ಪ್ರಶ್ನೆಗಳನ್ನು ಕೇಳುವಂತೆ ಮಕ್ಕಳನ್ನು ಪ್ರೇರೇಪಿಸಬೇಕು. ಪ್ರಶ್ನೆಗಳನ್ನು ಕೇಳುವುದರಿಂದ ಎಳೆಯರು ಧೈರ್ಯವಂತರಾಗುತ್ತಾರೆ. ಪ್ರಶ್ನೆ ಕೇಳಲು ಹಿಂಜರಿಯುವವರು ಜೀವನದಲ್ಲಿ ಸೋಲುತ್ತಾರೆ, ಆತ್ಮಸ್ಥೈರ್ಯವನ್ನು ಕಳೆದುಕೊಳ್ಳುತ್ತಾರೆ. ನಾವು ಎಲ್ಲವನ್ನೂ ಪ್ರಶ್ನಿಸೋಣವಲ್ಲವೆ! ಪ್ರಶ್ನೆ ನಮ್ಮ ತಾರಕ ಮಂತ್ರವಾಗಲಿ.

ಆರ್. ಎಸ್. ರಾಜಾರಾಮ್
(ಕೃಪೆ: ಆಕಾಶವಾಣಿ)

Printed by R. S. Rajaram at Navakarnataka Printers, No. 167 & 168, 10th Main, III Phase, Peenya Industrial Area, Bangalore-560 058 and Published by him for Navakarnataka Publications (P) Ltd., Embassy Centre, Crescent Road, P. B. 5159, Bangalore-560 001. Chief Editor : Dr. G. Ramakrishna